ಎಂ.ಫಿಲ್. ಪದವಿಯ ಸಂಪ್ರಬಂಧ

ವೈದೇಹಿಯವರ ಕಥೆಗಳ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಧ್ಯಯನ

ಸಂಶೋಧನ ವಿದ್ಯಾರ್ಥಿ

ಕೆ. ಆರ್. ಮಂಜುಳ

ಮಾರ್ಗದರ್ಶಕರು

ಡಾ. ಕೆ. ಆರ್. ಗಣೇಶ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು

ಎಂ. ವಿ. ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ

ಮೂಲಕ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಲ್ಲಿಸಿದೆ

2007

503

2007

ಎಂ. ಫಿಲ್. ಪದವಿಯ ಸಂಪ್ರಬಂಧ

ವೈದೇಹಿಯವರ ಕಥೆಗಳ ಸಾಮಾಜಿಕ

ಹಾಗೂ

ಸಾಂಸ್ಕೃತಿಕ ಅಧ್ಯಯನ

ಸಂಶೋಧನ ವಿದ್ಯಾರ್ಥಿ

ಕೆ. ಆರ್. ಮಂಜುಳ

ಮಾರ್ಗದರ್ಶಕರು

ಡಾ. ಕೆ. ಆರ್. ಗಣೇಶ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು

ಎಂ. ವಿ. ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ

ಮೂಲಕ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಲ್ಲಿಸಿದೆ

2007

ಅಭ್ಯರ್ಥಿಯ ಪ್ರಮಾಣ ಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ. ವಿ. ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2006-07ನೇ ಸಾಲಿನ ಎಂ.ಫಿಲ್. ಪದವಿಗಾಗಿ **ವೈದೇಹಿಯವರ ಕಥೆಗಳ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಧ್ಯಯನ** ಸಂಪ್ರಬಂಧವನ್ನು **ಡಾ. ಕೆ. ಆರ್. ಗಣೇಶ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ಸಂಪ್ರಬಂಧ ನನ್ನ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : 10-08-2007

ಸಹಿ [signature]

ಸ್ಥಳ : ಬೆಂಗಳೂರು

(ಹೆಸರು: ಕೆ. ಆರ್. ಮಂಜುಳ)

ಮಾರ್ಗದರ್ಶಕರ ಪ್ರಮಾಣ ಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ. ವಿ. ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2006-07ನೇ ಸಾಲಿನ ಎಂ.ಫಿಲ್. ಪದವಿಗಾಗಿ **ವೈದೇಹಿಯವರ ಕಥೆಗಳ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಧ್ಯಯನ** ಸಂಪ್ರಬಂಧವನ್ನು **ಶ್ರೀಮತಿ ಕೆ. ಆರ್. ಮಂಜುಳ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ಸಂಪ್ರಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 10-08-2007

ಸಹಿ

ಸ್ಥಳ: ಬೆಂಗಳೂರು

(ಹೆಸರು: ಕೆ. ಆರ್. ಗಣೇಶ)

ಪರಿವಿಡಿ

೧.	ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ	1-6
೨.	ಸಣ್ಣ ಕಥೆಗಳ ಹಿನ್ನೆಲೆ, ಕನ್ನಡ ಮಹಿಳಾ ಕಥಾಸಾಹಿತ್ಯ	7-16
೩.	ವೈದೇಹಿಯವರ ಬದುಕು - ಪರಿಸರ - ಉಪಭಾಷೆ	17-23
೪.	ವೈದೇಹಿಯವರ ಸಣ್ಣ ಕಥೆಗಳು	24-25
೫.	ಸಾಮಾಜಿಕ ನೆಲೆಯಲ್ಲಿ ಸ್ತ್ರೀಯ ಚಿತ್ರಣ	26-54
	೧. ಸ್ತ್ರೀ ಸಂವೇದನೆ	
	೨. ಸಮಾಜ	
೬.	ಕೌಟುಂಬಿಕ ನೆಲೆಯಲ್ಲಿ ಸ್ತ್ರೀಯ ಚಿತ್ರಣ	55-76
೭.	ಉಪಸಂಹಾರ	77-80
೮.	ಅನುಬಂಧಗಳು	81-89
	೧. ಆಕರ ಸಣ್ಣ ಕಥೆಗಳು	
	೨. ಆಕರ ಗ್ರಂಥಸೂಚಿ	
	೩. ವೈದೇಹಿಯವರ ಪರಿಚಯ	

ಅಧ್ಯಾಯ - ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ - 1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ :-

ಮಹಿಳೆಯರಿಂದಲೇ ರಚನೆಯಾದ ಸಾಹಿತ್ಯ 'ಮಹಿಳಾ ಸಾಹಿತ್ಯ' ಎಂದು ಇತ್ತು. ಆದರೆ ಇದರಿಂದ ಮಹಿಳಾ ಸಾಹಿತ್ಯವನ್ನು, ಸ್ವರೂಪವನ್ನು ಸಂಪೂರ್ಣವಾಗಿ ಸ್ಪಷ್ಟವಾಗಿ ತಿಳಿದಂತಾಗುವುದಿಲ್ಲ. ಮಹಿಳೆ ಯರಿಂದ, ಮಹಿಳೆಯನ್ನು ಕೇಂದ್ರವಾಗುಳ್ಳ ಮಹಿಳಾವಾದಿಯಾದ ಸಾಹಿತ್ಯ - ಇವುಗಳಿಂದ ಮಹಿಳಾ ಸಾಹಿತ್ಯ ರಚನೆ ಸಾಧ್ಯ.

ಸ್ವಾತಂತ್ರ್ಯಪೂರ್ವದಲ್ಲಿ ಮಹಿಳಾ ಸಾಹಿತ್ಯ ರಚನೆಯನ್ನು ಅವಲೋಕಿಸಿದಾಗ ಬದುಕು - ಬರಹಗಳ ಸಂಬಂಧವಿರುವುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಕನ್ನಡನಾಡಿನಲ್ಲಿ ಸ್ವಾತಂತ್ರ್ಯ ಚಳುವಳಿ, ಸುಧಾರಣಾ ಚಳುವಳಿಗಳು ತುಂಬ ಸಕ್ರಿಯವಾಗಿದ್ದ ಕಾಲ ಅದು. ಮಹಿಳೆಯರು ಉದ್ಧಾರವಾಗಬೇಕು ಎಂದು ಸ್ತ್ರೀ ಶಿಕ್ಷಣಕ್ಕೆ ಪ್ರೋತ್ಸಾಹ ಕೊಡುತ್ತಿದ್ದಂತಹ ಕಾಲ ಅದು. ಶೀಘ್ರ ವಿವಾಹ, ಶೀಘ್ರ ವೈಧವ್ಯಗಳಿಂದ ಅನುಭವಿಸುತ್ತಿದ್ದ ಒಂಟಿತನವನ್ನು ತುಂಬಿಕೊಳ್ಳಲೆಂದೇ ಸ್ತ್ರೀಯರು ಸಾಹಿತ್ಯವನ್ನು ಅಭಿವ್ಯಕ್ತಿ ಮಾಧ್ಯಮವಾಗಿ ಬಳಸಿಕೊಂಡರು. ಮನೆಯ ಸೀಮಿತ ಚೌಕಟ್ಟಿನಲ್ಲಿ ಕೌಟುಂಬಿಕ ಸಮಾರಂಭಗಳಿಗೆ ಸೀಮಿತವಾಗಿ ಸಮಯದೊಡನೆ ಎಲ್ಲ ಹೊಂದಾಣಿಕೆಗಳನ್ನು ಮಾಡಿಕೊಳ್ಳುತ್ತಾ ಪ್ರಧಾನ ಸಂಸ್ಕೃತಿಗೆ ಅಧೀನವಾಗಿಯೇ ಹರಿದ ಸಾಹಿತ್ಯ ಈ ಕಾಲದ್ದು.

ಸ್ವಾತಂತ್ರ್ಯಪೂರ್ವದಲ್ಲಿ ಲೇಖಕಿಯರು ತಮ್ಮ ಸುತ್ತ ಮುತ್ತ ಹೊರ ಸಮಾಜದಲ್ಲಿ ನಡೆಯುತ್ತಿದ್ದ ಸುಧಾರಣಾ ಚಳುವಳಿ, ಸ್ತ್ರೀ ಶಿಕ್ಷಣ, ಸ್ತ್ರೀ ಕಲ್ಯಾಣವನ್ನು ತಮ್ಮ ವಸ್ತುವನ್ನಾಗಿ ಸ್ವೀಕರಿಸಿದರು. ತಮ್ಮ ಬದುಕಿನ ಕಷ್ಟ - ಕಾರ್ಪಣ್ಯ, ದುಃಖ - ದುಮ್ಮಾನ ಗಳನ್ನು ಹೊರಚೆಲ್ಲುವ ಅಭಿವ್ಯಕ್ತಿಗಾಗಿ ಸಾಹಿತ್ಯವನ್ನು ಮಾಧ್ಯಮವನ್ನಾಗಿ ಉಪಯೋಗಿಸಿಕೊಂಡು ಆತ್ಮಕಥೆಗಳನ್ನು ರಚಿಸಿದರು.

ಸ್ತ್ರೀಯರು, ಪುರುಷರು, ಭಿನ್ನ ನೆಲೆಗಳಿಂದ, ಭಿನ್ನ ಅನುಭವಗಳನ್ನು ಪಡೆಯುವುದು ಸಹಜ. ಸ್ತ್ರೀಗೆ ತನ್ನದೇ ಆದ ಲೋಕವಿದೆ. ಅವಳದೇ ಆದ ಸಂವೇದನೆಗಳಿರುತ್ತವೆ. ತನ್ನ ಸಂವೇದನೆಗಳನ್ನು ಅಭಿವ್ಯಕ್ತಿಗೊಳಿಸುವುದಕ್ಕಾಗಿ ಆಕೆ ಕಥೆ, ಕಾದಂಬರಿ, ಕಾವ್ಯ ಹೀಗೆ ಮೊದಲಾದ ಸಾಹಿತ್ಯ ಪ್ರಕಾರಗಳನ್ನು ಮಾಧ್ಯಮವನ್ನಾಗಿ ಆರಿಸಿಕೊಂಡಳು. ಮಹಿಳಾ ಸಾಹಿತ್ಯವನ್ನು ಅವಲೋಕಿಸಿದಾಗ ಈ ಮಾತು ಸ್ಪಷ್ಟವಾಗುತ್ತದೆ. ಡಾ. ಎಚ್. ಎಸ್. ಶ್ರೀಮತಿಯವರು ಮಹಿಳಾ ಸಾಹಿತ್ಯ ಚರಿತ್ರೆಯನ್ನು ಮೂರು ಘಟ್ಟಗಳಲ್ಲಿ ವಿಭಾಗ ಮಾಡಿದ್ದಾರೆ. **(ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ : ಸಂ. ಎಚ್. ಎಸ್. ಶ್ರೀಮತಿ)**

(i) ಸ್ವಾತಂತ್ರ್ಯಪೂರ್ವ, (ii) ಸ್ವಾತಂತ್ರ್ಯೋತ್ತರದಿಂದ 1975 ರವರೆಗೆ ಮತ್ತು (iii) 1975 ರಿಂದ ಅನಂತರ - ಎಂಬ ಮೂರು ಘಟ್ಟಗಳಲ್ಲಿ ವಿಭಾಗ ಮಾಡಲಾಗಿದೆ. ಈ ಎಲ್ಲ ಘಟ್ಟಗಳಲ್ಲಿಯೂ ಪ್ರಧಾನವಾದ ಕಾಳಜಿ ಹೆಣ್ಣು, ಸ್ವಾತಂತ್ರ್ಯಪೂರ್ವದಲ್ಲಿ ಲೇಖಕಿಯರಿಗೆ ಬರವಣಿಗೆ ಹವ್ಯಾಸವಾಗಿದೆ. ಅವರು ಸಾಮಾಜಿಕ ಬದಲಾವಣೆಗೆ ಲೇಖನಗಳನ್ನು ಒಂದು ಅಸ್ತ್ರವನ್ನಾಗಿ ಬಳಸಿದರು.

1) ಸ್ವಾತಂತ್ರ್ಯಪೂರ್ವ ಮಹಿಳಾ ಸಾಹಿತ್ಯ :-

ಪ್ರಾಚೀನ ಕಾಲದಲ್ಲಿ ಇಮ್ಮಡಿ ಪುಲಿಕೇಶಿಯ ಸೊಸೆ ವಿಜ್ಜಿಕಾ ರಚಿಸಿದ 'ಕೌಮುದೀ ಮಹೋತ್ಸವ' ಹಾಗೂ ಮೊದಲನೆಯ ಬುಕ್ಕರಾಯನ ಸೊಸೆ ಗಂಗಾಂಬಿಕೆಯ 'ಮಧುರಾ ವಿಜಯಂ' ಅಥವಾ 'ವೀರ ಕಂಪಣರಾಯ ಚರಿತಂ' ಎಂಬ ಸಂಸ್ಕೃತ ಕಾವ್ಯಗಳನ್ನು ಹೆಸರಿಸಬಹುದು. ವಚನಕಾರ್ತಿ ಅಕ್ಕಮಹಾದೇವಿಯ 'ಯೋಗಾಂಗ ತ್ರಿವಿಧಿ' ಹಾಗೂ ವಚನಗಳು, ನೀಲಲೋಚನೆ, ಆಯ್ದಕ್ಕಿ ಲಕ್ಕಮ್ಮ, ಮುಕ್ತಾಯಕ್ಕ ಮೊದಲಾದವರ ವಚನ ರಚನೆಗಳು, ಸಂಚಿಯ ಹೊನ್ನಮ್ಮನ 'ಹದಿಬದೆಯ ಧರ್ಮ', ಹೆಳವನಕಟ್ಟೆ ಗಿರಿಯಮ್ಮನ ಕೃತಿಗಳು ಇವು ಕನ್ನಡದಲ್ಲಿ ಬಂದ ಗಮನಾರ್ಹ ರಚನೆಗಳು. ಕಂತಿ ಹಂಪನ ಸಮಸ್ಯೆಗಳಲ್ಲಿ ಕಾಣಿಸಿಕೊಳ್ಳುವ ಕವಯಿತ್ರಿ ಕಂತಿಯ ಬಗೆಗೆ ನಮಗೆ ಸ್ಪಷ್ಟವಾಗಿ ತಿಳಿದಿಲ್ಲ. ಈ ರಚನೆಗಳು ಸ್ತ್ರೀಯರು ರಚಿಸಿದವುಗಳು ಎಂಬುದನ್ನು ಬಿಟ್ಟರೆ ಸ್ತ್ರೀ ಕೇಂದ್ರಿತವಾಗಿಲ್ಲ.

ಸ್ವಾತಂತ್ರ್ಯಪೂರ್ವ ಮಹಿಳಾ ಸಾಹಿತ್ಯವನ್ನು ಅವಲೋಕಿಸಬೇಕಾದರೆ ತಿರುಮಲಾಂಬಾ ಅವರಿಂದಲೇ ಪ್ರಾರಂಭ ಮಾಡಬೇಕು. ಅವರು ಕನ್ನಡ ಮಹಿಳಾ ಸಾಹಿತ್ಯದ ಪ್ರಾರಂಭದ ಬಿಂದು. ಸಾಹಿತ್ಯವನ್ನು ತಮ್ಮ ಪ್ರಮುಖ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಸ್ವೀಕರಿಸಿ ಹಲವು ದೇಶಗಳ ಕಾಲಗಳ ಸಾಹಿತ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. "ಮಹಿಳಾ ಸಾಹಿತ್ಯದ ನವೋದಯ ಎನ್ನಬಹುದಾದ ಅವಧಿಗೆ ತಲೆಮಣೆಯಂತಿದ್ದಾರೆ".

(ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ - ಸಂ : ಡಾ|| ಎಚ್. ಎಸ್. ಶ್ರೀಮತಿ ತಿರುಮಲಾಂಬಾ ಅವರಿಂದ 1950 ರ ವರೆಗಿನ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ ಪು ಸಂ. - 249)

ತಿರುಮಲಾಂಬಾ ಅವರು ಕಾವ್ಯ, ನಾಟಕ, ಯಕ್ಷಗಾನ ಪ್ರಬಂಧ, ಜೀವನ ಚರಿತ್ರೆ, ಸಣ್ಣಕಥೆ, ಹೀಗೆ ಹಲವು ಸಾಹಿತ್ಯ ಪ್ರಕಾರಗಳಲ್ಲಿ ರಚನೆ ಮಾಡಿದ್ದಾರೆ. ಆದರೆ ಅವರಿಗೆ ಕಾದಂಬರಿಯ ಕಡೆಗೆ ಹೆಚ್ಚು ಒಲವು ಇತ್ತು.

ಕಾದಂಬರಿ ಪ್ರಕಾರವು ಸ್ಪಷ್ಟವಾದ ರೂಪುರೇಷೆಗಳನ್ನು ಪಡೆಯದಿದ್ದ ಆ ಕಾಲದಲ್ಲಿ ಕಥೆ, ನಾಟಕ ಎರಡೂ ಶೈಲಿಗಳು ಸಮ್ಮಿಲನಗೊಂಡ ರೂಪ ಅವರ ಕಾದಂಬರಿಗಳಲ್ಲಿ ಕಾಣುತ್ತವೆ. ಇವರ ಸಾಹಿತ್ಯವು ನೀತಿಪ್ರಧಾನವಾಗಿದ್ದು, ಆದರ್ಶ ಮಹಿಳೆಯರನ್ನು ಚಿತ್ರಿಸುವ ಆಶಯವನ್ನು ಹೊಂದಿದೆ. ಸ್ತ್ರೀಯ ಶಿಕ್ಷಣದಿಂದ ಅವರ ಉದ್ಧಾರ ಸಾಧ್ಯ ಎಂದು ತಿಳಿಹೇಳುವ ಆಧುನಿಕತೆಯನ್ನು ಅವರು ತೋರಿದ್ದಾರೆ.

ಮುಳಿಯ ಮೂಕಾಂಬಿಕಾಅಮ್ಮ, ಸಾವಿತ್ರಿದೇವಿ ನಾಯ್ಡು ಪಗಡಾಲ, ನೆಲ್ಲಿಕಾರು ಜೈನ ಮಹಿಳೆ ರಾಧಾಮತಿ, ಸೀತಾದೇವಿ ಪಡುಕೋಣೆ, ಹೀಗೆ ಅನೇಕ ಲೇಖಕಿಯರು ಈ ಕಾಲದ ಕನ್ನಡ ಮಹಿಳಾ ಸಾಹಿತ್ಯದಲ್ಲಿ ಕಂಡುಬರುತ್ತಾರೆ. ತಮ್ಮ ಕಾಲದ ಕಟ್ಟುಪಾಡಿನ ಸೀಮಿತ ಬದುಕಿನಲ್ಲಿದ್ದುದರಿಂದ ಇವರ ಸಾಹಿತ್ಯದಲ್ಲಿ ಮುಖ್ಯವಾಗಿ ಪೌರಾಣಿಕ ಪ್ರಜ್ಞೆ ಹಾಗೂ ಭಕ್ತಿಯ ಭರಾಟೆ ಕಂಡುಬರುತ್ತದೆ.

ಸ್ವಾತಂತ್ರ್ಯಪೂರ್ವದ ಮಹಿಳಾ ಕಥೆಗಾರ್ತಿಯರಲ್ಲಿ ಆನಂದಿ ಸದಾಶಿವರಾವ್ ಪ್ರಮುಖ ಕಥೆಗಾರ್ತಿ. ಇವರದು ಸರಳಭಾಷೆ ಮತ್ತು ನಿರಾಡಂಬರ ಶೈಲಿ. ಸಮಾಜ ಹಾಕಿದ ಸಂಪ್ರದಾಯದ ಚೌಕಟ್ಟನ್ನು ಮೀರಿ ಹೊರಬಂದ ಪಾತ್ರಗಳು ಇವರ ಕಥೆಗಳಲ್ಲಿ ಕಾಣುತ್ತದೆ. ಸಂಪ್ರದಾಯ ವಿರೋಧದ ಅಂಶ ಇಲ್ಲ. ಬಹುಶಃ ಆ ಕಾಲದ ಸನ್ನಿವೇಶಕ್ಕೆ ರಚನೆಗಳನ್ನು ಮಾಡಿದರು.

ಬೆಳಗೆರೆ ಜಾನಕಮ್ಮ ಕವಯಿತ್ರಿಯಾಗಿ ಹೆಚ್ಚು ಪ್ರಸಿದ್ಧಿಯನ್ನು ಪಡೆದವರು. ಅವರಿಗೆ ವಿದ್ಯಾಭ್ಯಾಸದ ಕೊರತೆ ಇದ್ದರೂ ತಮ್ಮ ಕವಿತೆಗಳಲ್ಲಿ ಬದುಕಿನ ಎಲ್ಲ ನೋವು, ನಲಿವು, ಬೇಸರ, ಬವಣೆ, ಅಡಚಣೆಗಳನ್ನು ನಿಸ್ಸಂಕೋಚವಾಗಿ ತೆರೆದಿಟ್ಟಿದ್ದಾರೆ. ಇವರ ಕವಿತೆಗಳು ಸ್ತ್ರೀ ಸಂವೇದನೆಯ ಪ್ರತೀಕಗಳಾಗಿವೆ.

ಈ ಯುಗದಲ್ಲಿ ತಿರುಮಲಾಂಬಾ, ಕಲ್ಯಾಣಮ್ಮ ಅವರಂತಹ ಮಹಿಳೆಯರ ಸಾಹಿತ್ಯದ ಮೂಲಕ ಸ್ತ್ರೀಯರು ತಮ್ಮ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಹೊಸ ಎಚ್ಚರವನ್ನು ಕಂಡುಕೊಳ್ಳುವಂತಾಯಿತು.

ಕಲ್ಯಾಣಮ್ಮನವರು ವಿಧವಾ ಸಮಸ್ಯೆಗೆ ಪರಿಹಾರ ಮಾರ್ಗವೇನು ? ಮತ್ತು ಸ್ತ್ರೀಗೆ ವಿದ್ಯಾಭ್ಯಾಸ ಅವಶ್ಯಕ ಎಂಬ ವಿಚಾರಗಳನ್ನು ತಮ್ಮ ಬರವಣಿಗೆಗಳಲ್ಲಿ ತಂದರು. ಇವರ ಬರವಣಿಗೆಯಲ್ಲಿ ಸ್ತ್ರೀಪರ ಕಾಳಜಿ ಎದ್ದು ಕಾಣುತ್ತದೆ. ಇವರು ತಮ್ಮ ಬರಹಗಳಲ್ಲಿ ಹೆಣ್ಣಿನ ಬದುಕಿಗೆ ಬೇಕಾದ ಮುಖ್ಯವಾದ ವಿಚಾರಗಳನ್ನು ಪತ್ರಿಕೆಗಳ ಮೂಲಕ ಪ್ರಸ್ತುತ ಪಡಿಸಿದರು.

ಸಾಮಾನ್ಯವಾಗಿ ಅಂದಿನ ಲೇಖಕಿಯರ ಬರವಣಿಗೆಯಲ್ಲಿ ವಿಧವಾ ಸಮಸ್ಯೆ ಪ್ರಮುಖ ವಸ್ತುವಾಗಿರುತ್ತಿತ್ತು. ಹೆಣ್ಣಿನ ಸಮಸ್ಯೆಯ ಮತ್ತೊಂದು ಮಗ್ಗುಲಾದ ವರದಕ್ಷಿಣೆ, ವಿಷಮ ವಿವಾಹ, ಆಧುನಿಕ ವೈವಾಹಿಕ ಜೀವನದ ಸಮಸ್ಯೆ ಇವುಗಳನ್ನೇ ವಸ್ತುವಾಗಿ ತೆಗೆದುಕೊಂಡು ಬರೆದವರು ಶ್ಯಾಮಲಾದೇವಿ ಬೆಳಗಾಂವಕರ್. ಎಲ್ಲ ವರ್ಗದವರ ನೋವು - ನಲಿವುಗಳನ್ನು ಕಥಾಭಿತ್ತಿಯೊಳಗೆ ತಂದದ್ದು ಶ್ಯಾಮಲಾ ಅವರ ವೈಶಿಷ್ಟ್ಯವಾಗಿದೆ. ಸ್ತ್ರೀಸಂವೇದನೆಯನ್ನೊಳಗೊಂಡು ಬರೆದ ಅಂದಿನ ಕನ್ನಡ ಲೇಖಕಿಯರಲ್ಲಿ ಶ್ಯಾಮಲಾದೇವಿಯರು ವಿಶೇಷವಾಗಿ ಕಾಣುತ್ತಾರೆ.

ತಮಗೆ ಸರಿ ಕಂಡದ್ದನ್ನು ಧೈರ್ಯವಾಗಿ ಹೇಳಿದ ಧೀಮಂತ ಮಹಿಳಾಸಾಹಿತಿ ಕೊಡಗಿನ ಗೌರಮ್ಮ, ಇವರ ಕಥೆಗಳಲ್ಲಿ ನಿರೂಪಿತವಾದ ಹೆಣ್ಣಿನ ಜೀವನ ಮನ ಮಿಡಿಯುವಂತಹದ್ದು.

ಸ್ವಾತಂತ್ರ್ಯಪೂರ್ವ ನವೋದಯ ಹಂತದಲ್ಲಿ ಸ್ತ್ರೀಸಂವೇದನೆ ಮತ್ತು ಸ್ತ್ರೀವಾದಿ ವಿಮರ್ಶೆಗಳ ಬಗೆಗೆ ಸ್ಪಷ್ಟ ಅರಿವು ಇರಲಿಲ್ಲ. ಅಂದಿನ ಕಾಲದಲ್ಲಿದ್ದ ಸ್ತ್ರೀಯರ ಸಮಸ್ಯೆಗಳ ಬಗ್ಗೆ ಮಾತ್ರ ಕೆಲವು ಲೇಖಕಿಯರು ಗಮನ ಹರಿಸಿರುವುದು ಕಂಡುಬರುತ್ತದೆ. ಧಾರ್ಮಿಕ ಕ್ಷೇತ್ರದಲ್ಲಿ ಸ್ತ್ರೀಯರಿಗಾಗಿಯೇ ಸಂಪ್ರದಾಯದ ಹಾಡುಗಳನ್ನು ಬರೆದ ಮಹಿಳೆಯರೂ ಇದ್ದಾರೆ. ಇನ್ನೊಂದು ಕಡೆ ಆಧುನಿಕತೆಗೆ ತೆರೆದುಕೊಳ್ಳುತ್ತಿದ್ದ ಮಹಿಳಾ ಬದುಕನ್ನು ತಮ್ಮ ಸಾಹಿತ್ಯದಲ್ಲಿ ಕಂಡರಿಸಿದ ಮಹಿಳೆಯರೂ ಇದ್ದಾರೆ.

ಈ ಅವಧಿಯಲ್ಲಿ ಪತ್ರಿಕೆಗಳು ಲೇಖಕಿಯರ ಬರಹಗಳನ್ನು ಪ್ರಕಟಿಸಿ ಅವರ ಸಾಹಿತ್ಯ ಬೆಳೆಯಲು ಕಾರಣವಾದವು. ತಿರುಮಲಾಂಬಾ, ಆರ್. ಕಲ್ಯಾಣಮ್ಮ ಮತ್ತು ಸರಸ್ವತೀಬಾಯಿ ರಾಜವಾಡೆಯವರಂತಹ ಲೇಖಕಿಯರು ತಾವೇ ಸ್ವತಃ ಪತ್ರಿಕೋದ್ಯಮಿಗಳಾಗಿದ್ದುದು ಇದಕ್ಕೆ ಸಹಾಯಕವಾಯಿತು. ಈ ಕಾಲದ ಲೇಖಕಿಯರು ಪಾರಂಪರಿಕ ವಿರೋಧವಿದ್ದರೂ ವಿಧವಾ ಸಮಸ್ಯೆಗೆ ಸಂಬಂಧಿಸಿದಂತೆ ಆಗಲಿ, ಅವಳ ಮರುಮದುವೆಗೆ ಸಂಬಂಧಿಸಿದಂತೆ ಆಗಲಿ ತಮ್ಮ ಕೃತಿಗಳಲ್ಲಿ ಯೋಚಿಸಿದರು. ಹೊಸ ಚಿಂತನೆಗಳನ್ನು ತಮ್ಮ ಬರಹಗಳ ಮೂಲಕ ವ್ಯಕ್ತ ಪಡಿಸಿದರು. ಸಮಕಾಲೀನ ಸಾಮಾಜಿಕ ಸಮಸ್ಯೆಗಳ ಬಗ್ಗೆಯೇ ಹೆಚ್ಚು ಒತ್ತುಕೊಟ್ಟರು.

2) ಸ್ವಾತಂತ್ರ್ಯೋತ್ತರ ಮಹಿಳಾ ಸಾಹಿತ್ಯ (1950 - 1975) :-

ಸ್ವಾತಂತ್ರ್ಯೋತ್ತರ ಮಹಿಳಾ ಸಾಹಿತ್ಯದ ಈ ಘಟ್ಟದಲ್ಲಿ (1950 - 1975) ಮುಖ್ಯವಾಗಿ ಲೇಖಕಿಯರು ಕುಟುಂಬವನ್ನು ಪ್ರಧಾನ ಕ್ಷೇತ್ರವಾಗಿ ಆರಿಸಿಕೊಂಡಿದ್ದಾರೆ. ಹೆಣ್ಣು ಎದುರಿಸುವ ವರದಕ್ಷಿಣೆ ಸಮಸ್ಯೆ, ಗಂಡಿನ ದಬ್ಬಾಳಿಕೆ, ಶೋಷಣೆಗೆ ಒಳಗಾದ ಹೆಣ್ಣು, ಅವಳ ಅಸಹಾಯಕತೆ ಇವೆಲ್ಲ ಕಥೆಗಳಲ್ಲಿ ಕಂಡುಬರುವ ಅಂಶಗಳು ಎಂದು ಗುರುತಿಸಬಹುದು.

ಸರಸ್ವತೀಬಾಯಿ ರಾಜವಾಡೆ, ಸುಶೀಲಾ ಕೊಪ್ಪರ್, ಹೆಚ್. ವಿ. ಸಾವಿತ್ರಮ್ಮ, ತ್ರಿವೇಣಿ, ಎಂ. ಕೆ. ಇಂದಿರ, ಡಾ|| ಅನುಪಮಾ ನಿರಂಜನ, ವಾಣಿ, ಮೊದಲಾದ ಲೇಖಕಿಯರು ಈ ಕಾಲದಲ್ಲಿ ಕಂಡುಬರುತ್ತಾರೆ.

ಸ್ವಾತಂತ್ರ್ಯಪೂರ್ವ ಲೇಖಕಿಯರಿಗಿಂತ ಸ್ವಲ್ಪ ಸುಧಾರಣೆ ಇವರ ಬರವಣಿಗೆಯಲ್ಲಿ ಕಂಡುಬಂದರೂ, ಹೆಣ್ಣಿನ ಶೋಷಣೆ, ಪುರುಷನ ದಬ್ಬಾಳಿಕೆ ಸಹಜ ಎಂಬಂತೆ ಸ್ವೀಕರಿಸಿದ್ದು ಕಾಣುತ್ತದೆ. ತ್ರಿವೇಣಿ, ಎಂ. ಕೆ. ಇಂದಿರಾ, ಅನುಪಮ ನಿರಂಜನ, ಇವರ ಕೃತಿಗಳಲ್ಲಿ ಪ್ರಗತಿಪರ, ಕ್ರಾಂತಿಕಾರಿ ಗಾಳಿ ಕಾಣದಿದ್ದರೂ ಹೆಣ್ಣಿನ ಬದುಕಿನ ತಲ್ಲಣಗಳು, ಗೊಂದಲಗಳು, ಅನಿಶ್ಚಿತತೆಗಳು, ಸಮಾಜದ ಪುರುಷ ಪಕ್ಷಪಾತೀ ಮನೋಭಾವಗಳನ್ನು ಅತ್ಯಂತ ಸೂಕ್ಷ್ಮವಾಗಿ ದಾಖಲಿಸಿದುದು ಕಂಡುಬರುತ್ತದೆ. ಇವರ ಕೃತಿಗಳಲ್ಲಿ ಸಂಸಾರವೇ ಕೇಂದ್ರ. ಇವರೆಲ್ಲಾ ಹೆಣ್ಣಿನ ನೋವುಗಳನ್ನು ದಾಖಲಿಸುತ್ತಾರೆ. ಆದರೆ ಪ್ರತಿಭಟನೆಯ ಸ್ವರೂಪ ಎಲ್ಲೂ ಕಾಣುವುದಿಲ್ಲ.

ಮಹಿಳಾ ಕಥಾಸಾಹಿತ್ಯಕ್ಕೆ ಒಂದು ಹೊಸ ತಿರುವು ಬಂದದ್ದು ಈ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಬರೆದ ಲೇಖಕಿಯರಿಂದ ಎಂದು ಅನೇಕರು ಗುರುತಿಸುತ್ತಾರೆ. ಸ್ವಾತಂತ್ರ್ಯೋತ್ತರ ಆರಂಭ ಕಾಲದಲ್ಲಿ ಬರೆದ ಲೇಖಕಿಯರಿಗೆ ಹೆಣ್ಣಿನ ಸಮಸ್ಯೆಗಳ ಬಗ್ಗೆ ಸ್ಪಷ್ಟ ಅರಿವು ಇತ್ತು. ಅದನ್ನು ಮೈಗೂಡಿಸಿಕೊಂಡು ಬರೆದರು. ಕಥೆ ಹೇಳುವ ತುಡಿತಕ್ಕಿಂತ ಅದರ ಮೂಲಕ ಪ್ರತಿಪಾದಿಸಬೇಕೆಂದಿರುವ ಧೋರಣೆಯೇ ಇವರಿಗೆ ಮುಖ್ಯವಾಗಿತ್ತು. ಪ್ರತಿಯೊಂದು ಸಮಸ್ಯೆಗಳಿಗೂ ಸುಲಭ ಪರಿಹಾರವನ್ನು ಸೂಚಿಸುವ ತಪ್ಪನ್ನು ಇವರು ಮಾಡುವುದಿಲ್ಲ. ಸ್ವಾತಂತ್ರ್ಯಪೂರ್ವ ಲೇಖಕಿಯರಲ್ಲಿದ್ದ ರಮ್ಯ ಮನೋಭಾವ ಇವರಲ್ಲಿ ಕಾಣುವುದಿಲ್ಲ. ಆದರೆ ವಸ್ತು ಮತ್ತು ಅಭಿವ್ಯಕ್ತಿಯಲ್ಲಿ ಗಂಭೀರ ದೃಷ್ಟಿಕೋನವಿದೆ.

3) 1975 ರ ಅನಂತರದ ಮಹಿಳಾ ಸಾಹಿತ್ಯ :-

ಈ ಕಾಲದಲ್ಲಿ ಮುಖ್ಯವಾಗಿ ಕಂಡುಬರುವ ಪ್ರಮುಖ ಲೇಖಕಿಯರೆಂದರೆ ರಾಜಲಕ್ಷ್ಮಿ ಎನ್. ರಾವ್, ವೀಣಾ ಶಾಂತೇಶ್ವರ, ವೈದೇಹಿ ಮೊದಲಾದವರು.

ಮಹಿಳಾ ಸಾಹಿತ್ಯದಲ್ಲಿ ಒಂದು ಹೊಸ ಅಲೆ ಈ ಕಾಲದಲ್ಲಿ ಕಂಡುಬರುತ್ತದೆ. ಕಥೆಯ ವಸ್ತು, ಧೋರಣೆ, ನಿರೂಪಣೆಯ ಶೈಲಿ, ಎಲ್ಲದರಲ್ಲೂ ಹೊಸತನ ಕಾಣುತ್ತದೆ. ವ್ಯಕ್ತಿ ಅನುಭವ ಕೇಂದ್ರಿತ ನೆಲೆಯಲ್ಲಿ ಸ್ತ್ರೀಯರ ಸಮಸ್ಯೆಗಳು ಪ್ರತಿಪಾದಿತವಾಗಿರುವುದನ್ನು ಇಲ್ಲಿ ಗುರುತಿಸಬಹುದು.

ನವ್ಯ ಪರಂಪರೆಯೊಂದಿಗೆ ಗುರುತಿಸಲಾಗುವ ರಾಜಲಕ್ಷ್ಮಿ ಎನ್. ರಾವ್ ಅವರ ಕಥೆಗಳ ವಸ್ತು ಗಂಡುಹೆಣ್ಣುಗಳ ಸಂಬಂಧವನ್ನೇ ಕುರಿತದ್ದು. ತ್ರಿವೇಣಿಯವರಂತೆ ಸ್ತ್ರೀವರ್ಗದ ವಕ್ತಾರರಂತೆ ಬರೆಯುತ್ತಿದ್ದಾರೆ ಎನ್ನಿಸುವುದಿಲ್ಲ. ವೀಣಾ ಶಾಂತೇಶ್ವರ ಅವರ ಕಥೆಗಳಲ್ಲಿ ಪುರುಷ ನಯವಂಚಕನಾಗಿ, ದುರ್ಬಲನಾಗಿ ವಾಚ್ಯವಾಗಿ ಕಾಣಿಸಿಕೊಳ್ಳುತ್ತಾನೆ.

ಕಥನ ಸಾಹಿತ್ಯದಲ್ಲಿ ತಮ್ಮನ್ನು ತೀವ್ರವಾಗಿ ತೊಡಗಿಸಿಕೊಂಡವರು ವೈದೇಹಿ ವೈವಿಧ್ಯತೆಯನ್ನು ಸಾಧಿಸಿ ಬಹಳ ಎತ್ತರಕ್ಕೆ ಏರಿದವರು. ಗ್ರಾಮೀಣ ಬದುಕು, ಕೌಟುಂಬಿಕ ಜೀವನ, ಆಧುನಿಕತೆ ತಂದೊಡ್ಡುವ ಸ್ಥಿತ್ಯಂತರಗಳು, ಹೀಗೆ ಯಾವುದೇ ವಿಷಯವನ್ನು ತೆಗೆದುಕೊಂಡರೂ ಸಮರ್ಥವಾಗಿ ನಿರ್ವಹಿಸಿದ್ದಾರೆ. ಹೊಸ ಹೊಸ ಪ್ರಯೋಗಗಳನ್ನು ಮಾಡಿದ್ದಾರೆ.

ಇವರ ಕಥೆಗಳಿಗೆ ಸಂಬಂಧಿಸಿದಂತೆ ಅನೇಕ ಲೇಖನಗಳು, ವಿಮರ್ಶೆಗಳು ಬಂದಿವೆ. ಶಿವಮೊಗ್ಗೆಯ ಗಾಯತ್ರಿ ಸಜ್ಜನ ಎನ್ನುವವರು ವೈದೇಹಿಯವರ ಕಥೆಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಿದ್ದಾರೆ.

ವೈದೇಹಿಯವರ ಸಮಗ್ರ ಕಥೆಗಳ ಬಗ್ಗೆ ಮಹಾಪ್ರಬಂಧಗಳ (Ph.D.) ರಚನೆಯೂ ಆಗಿದೆ. ಡಾ. ಬಿ. ಎನ್. ಸುಮಿತ್ರಾಬಾಯಿ, ಪಿ. ಲಂಕೇಶ್, ಟಿ. ಪಿ. ಅಶೋಕ್ ಮೊದಲಾದವರು ಇವರ ಸಣ್ಣಕಥೆಗಳ ಬಗ್ಗೆ ಲೇಖನಗಳನ್ನು ಬರೆದಿದ್ದಾರೆ.

ವೈದೇಹಿಯವರ ಕಥೆಗಳಲ್ಲಿ ವಸ್ತುವೈವಿಧ್ಯತೆ ಇದೆ. ಭಾಷೆ ಭಿನ್ನವಾಗಿದೆ, ಅಂದರೆ ಕುಂದಾಪುರದ ಕನ್ನಡ ಬಳಕೆ ವಿಶೇಷವಾಗಿ ಗಮನಿಸತಕ್ಕದ್ದು. ಬಹುತೇಕ ಕಥೆಗಳು ಸ್ತ್ರೀಕೇಂದ್ರಿತ ಪಾತ್ರಗಳು. ಪಾತ್ರಗಳನ್ನು ಅರಿಯುವ ಸೂಕ್ಷ್ಮ ಒಳನೋಟ, ಸಂವೇದನಾಶೀಲವಾದ ಭಾಷೆ, ವಿಭಿನ್ನ ಕಥಾವಸ್ತುವಿನಿಂದ ಇವರ ರಚನೆಗಳು ಉತ್ತಮ ಕಥೆಗಳಾಗಿವೆ. ಇವರ ಕಥೆಗಳು ಪ್ರಾದೇಶಿಕ ಸತ್ವವನ್ನು ಮೈಗೂಡಿಸಿಕೊಂಡಿವೆ. ಸ್ತ್ರೀಯನ್ನು ಕೇಂದ್ರವಾಗಿಟ್ಟುಕೊಂಡು ತನ್ನ ಪರಿಸರದ ವಿಭಿನ್ನ ಬದುಕನ್ನು ಗಾಢವಾಗಿ ಸೆರೆಹಿಡಿಯುತ್ತವೆ.

ಒಬ್ಬ ಮಹಿಳೆಯು ಬರೆದಿರುವ ಕಥೆ ಎಂದರೆ ಸಾಮಾನ್ಯವಾಗಿ ಮಹಿಳಾ ಸಂವೇದನೆಯನ್ನೊಳಗೊಂಡಂತಿರುತ್ತದೆ. ಸ್ತ್ರೀ ಸಂವೇದನೆ, ಕೌಟುಂಬಿಕ ಚೌಕಟ್ಟಿನೊಳಗೆ ಇಟ್ಟು ನೋಡುವಂಥದು. ಕೌಟುಂಬಿಕ ಆಯಾಮದಲ್ಲಿ ಸ್ತ್ರೀ ಜಗತ್ತು ತೆರೆದುಕೊಳ್ಳುತ್ತಾ ಹೋಗುತ್ತದೆ. ಅದರಂತೆ ವೈದೇಹಿಯವರ ಕಥೆಗಳಲ್ಲಿನ ಸ್ತ್ರೀ ಪಾತ್ರಗಳಲ್ಲಿ ಕಂಡುಬರುವ ವೈವಿಧ್ಯತೆ, ಆಧುನಿಕ ಕಾಲಕ್ಕೆ ಒಗ್ಗಿಕೊಳ್ಳುತ್ತಿರುವ ಸ್ತ್ರೀ ಸಮುದಾಯ, ಕೌಟುಂಬಿಕ ನೆಲೆಯಲ್ಲಿ ಸ್ತ್ರೀಯ ಚಿತ್ರಣ - ಶೋಷಣೆ, ಸ್ತ್ರೀಯ ಅಂತರಂಗದ ನೋಟ - ಹೀಗೆ ವಿವಿಧ ನೆಲೆಯಲ್ಲಿ ಅಧ್ಯಯನ ಮಾಡಬಹುದು. ಸ್ತ್ರೀಯ ಶೋಷಣೆ ಬಗ್ಗೆ ಸಾಮಾಜಿಕ ನಿಲುವು, ಸಮಾಜದಲ್ಲಿ ಮಹಿಳೆಗಿರುವ ಸ್ಥಾನಮಾನ, ಹೀಗೆ ಸಾಮಾಜಿಕ ನೆಲೆಯಲ್ಲಿಯೂ ವೈದೇಹಿಯವರ ಕಥೆಗಳನ್ನು ಅಧ್ಯಯನ ಮಾಡಬಹುದು. ಈ ನೆಲೆಗಳಲ್ಲಿ ವೈದೇಹಿಯವರ ಕಥೆಗಳನ್ನು ಈ ಪ್ರಬಂಧದಲ್ಲಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ.

ಸ್ತ್ರೀ ಸಮಾಜದ ಸಾಂಸ್ಕೃತಿಕ ವಿವರಗಳನ್ನು ಕುಟುಂಬ ಹಾಗೂ ಸಮಾಜದ ಎರಡು ವಿಭಿನ್ನ ನೆಲೆಗಳಲ್ಲಿ ಗಮನಿಸಬಹುದು. ವೈದೇಹಿಯವರು ತಮ್ಮ ಕಥೆಗಳಲ್ಲಿ, ತಮ್ಮ ಪರಿಸರದಲ್ಲಿ ಕಾಣಬರುವ ಸ್ತ್ರೀಲೋಕವನ್ನು

ಸೆರೆಹಿಡಿದಿದ್ದಾರೆ. ವಿವಿಧ ಸ್ತರದ ಹೆಂಗಸರ ದಿಟ್ಟತನದ ಬದುಕು, ಸಂಘರ್ಷ, ಮಾನಸಿಕ ತೊಳಲಾಟ, ಇವೆಲ್ಲವುದರ ಚಿತ್ರಣ ಇವರ ಕಥೆಗಳಲ್ಲಿದೆ. ಹೆಣ್ಣಿನ ಸಂವೇದನೆಯನ್ನು ಕುರಿತಂತೆ ನೋಡುವುದಾದರೆ, ತಾಯಿ, ಮಗಳು, ಪತ್ನಿ, ಸೊಸೆ, ವಿಧವೆ - ಹೀಗೆ ಮೊದಲಾದ ಬಗೆಯಲ್ಲಿ ಕಂಡುಬರುವ ಸ್ತ್ರೀ ಪಾತ್ರಗಳ ಚಿತ್ರಣವೇ ಆಗಿರುತ್ತದೆ. ಇವರ ಕಥೆಗಳಲ್ಲಿನ ಈ ಅಂಶಗಳನ್ನು ಗುರುತಿಸಲಾಗುವುದು.

ವೈದೇಹಿಯವರ ಎಲ್ಲಾ ಆರು ಕಥಾಸಂಕಲನಗಳನ್ನು ಬಳಸಿಕೊಳ್ಳದೆ, ಕೌಟುಂಬಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಚೌಕಟ್ಟಿನ ಮಿತಿಯಲ್ಲಿ ನಿಲ್ಲಬಹುದಾದ ಕೆಲವು ಕಥೆಗಳನ್ನು ಆರಿಸಿಕೊಂಡು ಇಲ್ಲಿ ವಿಶ್ಲೇಷಿಸಲಾಗಿದೆ. ಆದ್ದರಿಂದ ಸಮಗ್ರ ಕಥೆಗಳ ಬಗ್ಗೆ ವಿಶ್ಲೇಷಣೆ ಮಾಡಲು ಸಾಧ್ಯವಾಗುವುದಿಲ್ಲ. ಕೆಲವು ವಿಶಿಷ್ಟ ಕಥೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಈ ಕೆಲವು ವಿಶಿಷ್ಟ ಕಥೆಗಳು ವೈದೇಹಿಯವರ ಸಮಗ್ರ ಕಥೆಗಳ ಒಳನೋಟವನ್ನು ನೀಡಬಹುದು ಎಂಬ ಅನುಮಾನದಿಂದ ಪ್ರಮುಖವಾದ ಕಥೆಗಳನ್ನು ಈ ಸಂಪ್ರಬಂಧಕ್ಕೆ ಆರಿಸಿಕೊಳ್ಳಲಾಗಿದೆ.

ವೈದೇಹಿಯವರ ಪ್ರಥಮ ಕಥಾಸಂಕಲನ 'ಮರಗಿಡಬಳ್ಳಿ' ಯ 'ಬೆದಕಾಟ ಬದುಕೆಲ್ಲ', 'ಮರಗಿಡಬಳ್ಳಿ', 'ಸಂಸಾರ'; 'ಅಂತರಂಗದ ಪುಟಗಳು' ಕಥಾಸಂಕಲನದಿಂದ 'ಒಂದು ಅಪರಾಧ ತನಿಖೆ', 'ಗುಲಾಬಿ ಮೃದುಪಾದಗಳು', 'ಅಂತರಂಗದ ಪುಟಗಳು'; 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ' ಕಥಾಸಂಕಲನದಿಂದ 'ಒಂದು ಕಳ್ಳ ವೃತ್ತಾಂತ' ಹೀಗೆ ಕೆಲವು ಕಥೆಗಳನ್ನು ಕೌಟುಂಬಿಕ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

'ಅಂತರಂಗದ ಪುಟಗಳು' ಕಥಾಸಂಕಲನದಿಂದ 'ಅಕ್ಕು', 'ಗೂಡಿನೊಳಗೆ ಒಂದು ಹಕ್ಕಿ', 'ಅವಲಂಬಿತರು', 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ' ಕಥಾಸಂಕಲನದಿಂದ 'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು', 'ಶೋಧ', 'ಸೌಗಂಧಿಯ ಸ್ವಗತಗಳು', 'ಅಮ್ಮಚ್ಚಿಯೆಂಬ ನೆನಪು' ಕಥಾಸಂಕಲನದ 'ಅಮ್ಮಚ್ಚಿ ಎಂಬ ನೆನಪು' ಕಥೆ, ಮೊದಲಾದ ಕಥೆಗಳನ್ನು ಸಾಮಾಜಿಕ ನೆಲೆಯಲ್ಲಿಟ್ಟು ನೋಡಲಾಗಿದೆ. ಕೆಲವು ಕಥೆಗಳನ್ನು ಕುಟುಂಬ ಮತ್ತು ಸಮಾಜ ಎರಡೂ ಆಯಾಮದಲ್ಲಿಟ್ಟು ಅಧ್ಯಯನ ಮಾಡಲಾಗಿದೆ.

ಒಟ್ಟಾರೆ ವೈದೇಹಿಯವರ ಕಥೆಗಳಲ್ಲಿ ಮುಖ್ಯವಾಗಿ ಸಾಂಸ್ಕೃತಿಕ ನೆಲೆ, ಕೌಟುಂಬಿಕ ನೆಲೆ, ಸಾಮಾಜಿಕ ನೆಲೆಯಲ್ಲಿ ವ್ಯಕ್ತಗೊಂಡಿರುವ ಸ್ತ್ರೀಸಂವೇದನೆ ಹಾಗೂ ಸ್ತ್ರೀ ಶೋಷಣೆಯ ಚಿತ್ರಣವನ್ನು ಹೆಕ್ಕಿ ನೋಡುವ ಪ್ರಯತ್ನವನ್ನು ಈ ಸಂಪ್ರಬಂಧದಲ್ಲಿ ಮಾಡಲಾಗಿದೆ. ವಿಶೇಷವಾಗಿ ಕುಂದಾಪುರದ ಕನ್ನಡವನ್ನು ಇವರ ಕಥೆಗಳಲ್ಲಿ ಬಳಸಿಕೊಂಡಿರುವ ರೀತಿ, ಅವರ ಶೈಲಿ ಕಂಡುಕೊಳ್ಳುವ ಆಶಯ, ಕಾವ್ಯಾತ್ಮಕವಾದ ಬರವಣಿಗೆ, ಕಲಾತ್ಮಕತೆ, ಸಂಕೇತ, ಧ್ವನಿ ಇವುಗಳ ಹುಡುಕುವಿಕೆ ಈ ಸಪ್ರಬಂಧದ ರಚನೆಯ ಪ್ರಯತ್ನದಲ್ಲಿದೆ.

*****

ಅಧ್ಯಾಯ -೨

ಸಣ್ಣ ಕಥೆಗಳ ಹಿನ್ನೆಲೆ, ಕನ್ನಡ ಮಹಿಳಾ ಕಥಾಸಾಹಿತ್ಯ

ಅಧ್ಯಾಯ - 2

ಸಣ್ಣಕಥೆಗಳ ಹಿನ್ನೆಲೆ, ಕನ್ನಡ ಮಹಿಳಾ ಕಥಾ ಸಾಹಿತ್ಯ

ಸಣ್ಣಕಥೆಗಳ ಹಿನ್ನೆಲೆ

ಪ್ರಾಚೀನ ಕಾಲದಿಂದಲೂ ಕಥೆ ಹೇಳುವ, ಕಥೆ ಕೇಳುವ ಪದ್ಧತಿ ಪ್ರಪಂಚದಲ್ಲಿ ಹಲವಾರು ಭಾಷೆಗಳಲ್ಲಿ ಕಂಡುಬರುತ್ತದೆ. ರಾಮಾಯಣ, ಮಹಾಭಾರತ, ಖುರಾನ್, ಬೈಬಲ್ ಮೊದಲಾದ ಧಾರ್ಮಿಕ ಗ್ರಂಥಗಳಲ್ಲಿ ಕಥನ ಕಲೆಯ ತಂತ್ರ ಕಂಡುಬರುತ್ತದೆ. ಧಾರ್ಮಿಕ ಗ್ರಂಥಗಳು ನೀತಿಬೋಧನೆಗೆ ಕಥಾ ಮಾಧ್ಯಮವನ್ನೇ ಪ್ರಧಾನ ಮಾಧ್ಯಮವನ್ನಾಗಿ ಮಾಡಿಕೊಂಡಿರುವುದನ್ನು ಗಮನಿಸಬಹುದು. ಗದ್ಯ - ಪದ್ಯಗಳೆರಡರ ಸ್ವರೂಪದಲ್ಲಿಯೂ ಕಥೆಗಳು ಇರುತ್ತಿದ್ದವು. ಬರವಣಿಗೆಯೇ ಇಲ್ಲದಿದ್ದ ಸಮಾಜದಲ್ಲಿ ಬಾಯಿಂದ ಬಾಯಿಗೆ ಕಥೆ ಕೇಳಿ, ನೆನಪಿನಲ್ಲಿ ಇಟ್ಟುಕೊಳ್ಳುತ್ತಿದ್ದ 'ತೋಂಡಿ ಸಂಪ್ರದಾಯ' ರೂಢಿಯಲ್ಲಿತ್ತು. ಎಷ್ಟೋ ಅಸಂಖ್ಯಾತ ಜನಪದ ಕಥೆಗಳು ಬೆಳೆದಿರುವುದು ಹೀಗೆಯೇ ಎಂಬುದನ್ನು ಕಾಣಬಹುದಾಗಿದೆ.

ಮಾನವನ ಸ್ವಭಾವ ಸಹಜವಾದ ಕುತೂಹಲ ಮತ್ತು ಕಲ್ಪನೆಗಳ ಫಲವಾಗಿ ಜಗತ್ತಿನ ಎಲ್ಲಾ ಸಾಹಿತ್ಯಗಳಲ್ಲೂ ಆದಿಯಿಂದಲೂ ಕಥೆಗಳು ಮೂಡಿವೆ. ಆಯಾ ದೇಶದ ಭಾವನೆ, ಕಲ್ಪನೆ, ಸಂಸ್ಕೃತಿ, ಪರಿಸರಣ ಮತ್ತು ಪ್ರಭಾವಗಳಿಗನುಗುಣವಾಗಿ ಅವು ಉದ್ಭವಿಸಿ, ಕುತೂಹಲವನ್ನು ತಣಿಸಿ ಮನರಂಜನೆಯನ್ನೊದಗಿಸಿವೆ. ಜಗತ್ತಿನಲ್ಲಿ ಬರಹ ಮೊದಲಾದಾಗಲೇ ಕಥೆಯ ಲೇಖನವೂ ಪ್ರಾರಂಭವಾಯಿತು. ಅಂದಿನ ಜನ ತಮ್ಮ ಮನಸ್ಸಿನ ಭಾವನೆಗಳಿಗೆ ಬಾಯಿಬಿಡಲು ಬಯಸಿದಾಗ ವಾಸ್ತವ ಜೀವನದ ಗೊಂದಲ ಗಡಿಬಿಡಿ ನೀರಸತೆಗಳಿಂದ ಬಿಡುಗಡೆಗೊಂಡು ರಮ್ಯವಾದ, ಆನಂದದಾಯಕವಾದ, ದುಃಖ ದೂರವಾದ ಬೇರೊಂದು ಲೋಕದಲ್ಲಿ ಕೆಲಕಾಲವಾದರೂ ವಿಹರಿಸಲು ಇಚ್ಛಿಸಿದಾಗ ಈ ಕತೆಗಳು ಮೊಳಕೆಯೊಡೆದು ಮೈದೋರಿದವು. ಆದರೆ ಇವು ಬಹುಮಟ್ಟಿಗೆ ಅದ್ಭುತ ರಮ್ಯವೂ, ಸಾಹಸ ಪ್ರಧಾನವೂ, ನೀತಿಬೋಧಕವೂ ಆಗಿದ್ದು, ಜೀವನದ ಸೂಕ್ಷ್ಮಾಂಶವನ್ನು ಬಹುಮುಖತೆಯನ್ನು ಪ್ರತಿಬಿಂಬಿಸುವ ಕಲಾತ್ಮಕತೆಯ ಸೃಷ್ಟಿಯಾಗಿರಲಿಲ್ಲ. ಆದ್ದರಿಂದ ಇಂದಿನ ಸಣ್ಣಕತೆಗಳಿಗೂ ಅಂದಿನ ಮನೋರಂಜಕವಾದ ನೀತಿಪ್ರಧಾನವಾದ ಕಥೆಗಳಿಗೂ ವ್ಯತ್ಯಾಸವಿದೆ.

ಸಣ್ಣಕಥೆ ಎಂದರೇನು ? ಎನ್ನುವುದಕ್ಕೆ ಅನೇಕ ವಿದ್ವಾಂಸರು ಅನೇಕ ರೀತಿಯಲ್ಲಿ ವ್ಯಾಖ್ಯಾನವನ್ನು ನೀಡಿದ್ದಾರೆ.

* 'ಮಾಡರ್ನ್‌ಶಾರ್ಟ್ ಸ್ಟೋರೀಸ್' ಎಂಬ ಇಂಗ್ಲೀಷ್ ಸಣ್ಣಕಥೆಗಳ ಸಂಕಲನ ವೊಂದರ ಸಂಪಾದಕನ ಉದ್ಗಾರವಿದು - "ಸಣ್ಣಕಥೆ ಕಥೆಯಾಗಿರಬೇಕು, ಅದು ಸಣ್ಣದಾಗಿಯೂ ಇರಬೇಕು".

* ಎಚ್. ಜಿ. ವೇಲ್ಸ್ "ಅರ್ಧ ಗಂಟೆಯ ಕಾಲಾವಧಿಯೊಳಗೆ ಓದಬಹುದಾದ ಯಾವುದೇ ಸಂಕ್ಷಿಪ್ತ ಕಥೆ" ಎನ್ನುತ್ತಾನೆ.

* ಎಂ. ಎಚ್. ಅಬ್ರಾಮ್ಸ್, "ಗದ್ಯದಲ್ಲಿರುವ ಕಥನವೇ ಸಣ್ಣಕತೆ" ಎನ್ನುತ್ತಾನೆ.

* ಡಾ|| ಅನುಪಮಾ ನಿರಂಜನರವರು, "ಜೀವನದ ಅನುಭವವನ್ನು ಭಾವನೆಯಿಂದ ಗ್ರಹಿಸಿ, ಭಾಷೆಯ ಮಾಧ್ಯಮವನ್ನು ಬಳಸಿಕೊಂಡು ಬುದ್ಧಿಯ ಮೂಲಕ ಆ ಜಗತ್ತನ್ನು ಪುನಃ ಸೃಷ್ಟಿಸುವುದೇ ಕಥೆ" ಎಂದು ಹೇಳಿದ್ದಾರೆ.

* ತನ್ನ ಪಾತ್ರಗಳ ಕ್ರಿಯೆ - ಪ್ರಕ್ರಿಯೆಗಳನ್ನು, ಆಲೋಚನೆಗಳನ್ನು, ಕಲಾತ್ಮಕವಾದ ವಸ್ತು ವಿರಚನೆಯಲ್ಲಿ ವ್ಯವಸ್ಥಿತಗೊಳಿಸುತ್ತದೆ.

(* ಮಾಸ್ತಿ ಸಣ್ಣಕಥೆಗಳ ಸಮೀಕ್ಷೆ - 3 ದತ್ತಿ ಉಪನ್ಯಾಸಗಳು - ಬಿ.ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ)

"ಸಣ್ಣಕತೆಗೆ ಆರಂಭವಿದೆ; (ಕಥಾವಸ್ತು ಬೆಳೆಯುವ) ಮಧ್ಯಭಾಗವಿದೆ. "ವಸ್ತುವಿನ ಸಿಕ್ಕು ತೊಡಕುಗಳನ್ನು ಬಿಡಿಸುವ ಮುಕ್ತಾಯವಿರುತ್ತದೆ" (ಮಾಸ್ತಿ ಸಣ್ಣಕಥೆಗಳ ಸಮೀಕ್ಷೆ - 3 ದತ್ತಿ ಉಪನ್ಯಾಸಗಳು - ಬಿ.ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ)

ಸಣ್ಣಕತೆ ಸ್ವರೂಪವನ್ನು ವಿವರಿಸಲು 'ಪರಿಣಾಮ ರಮಣೀಯತೆ' ಎಂಬ ಮಾತುಗಳನ್ನು ಬಳಸಬಹುದಾಗಿದೆ. ಸಣ್ಣಕಥೆಗೆ ವಿದ್ವಾಂಸರು ಗುರುತಿಸುವ ಎರಡು ಮುಖ್ಯ ಲಕ್ಷಣ ಭಾವತೀವ್ರತೆ ಮತ್ತು ಸಂಕ್ಷಿಪ್ತತೆ.

"ಕ್ಷಣವೊಂದರ ಸ್ಮಾರಕ" ಎಂದು ಭಾವಗೀತೆಗೆ ಸಂಬಂಧಪಟ್ಟಂತೆ ಹೇಳುವ ಹಾಗೆ ಕಥೆಗೆ ಅನ್ವಯವಾಗುವಂತೆಯೂ ಹೇಳಬಹುದು. "ಸಣ್ಣಕಥೆ ಪರದೇಶದ ಸಸಿ" ಎಂದೂ ಹೇಳುತ್ತಾರೆ. ಆದರೆ ಸಣ್ಣಕಥೆಗಳು ನಮ್ಮಲ್ಲಿಯೇ ಬಹಳ ಹಿಂದಿನಿಂದಲೂ ಇದ್ದವು ಎನ್ನುವುದಕ್ಕೆ ಪುರಾಣ, ಇತಿಹಾಸದ ಕಥೆಗಳನ್ನು ನೋಡಬಹುದು.

ಪ್ರಪಂಚದ ಮೊದಲ ಕಥಾಬರಹ ಕ್ರಿ.ಪೂ. 2000 ದಲ್ಲಿ ಬ್ಯಾಬಿಲೋನಿಯಾದಲ್ಲಿ ಸಿದ್ಧವಾಯಿತು. ಹೆಸರು "ಎಪಿಕ್ ಆಫ್ ಗಿಲ್ಗಮೇಶ್". ಕ್ರಿ. ಪೂ. ದಲ್ಲಿ ಜಾತಕಕಥೆಗಳು, ಪಂಚತಂತ್ರದ ಕಥೆಗಳು, ಆನಂತರ ಸೋಮದೇವನ ಕಥಾಸರಿತ್ಸಾಗರವೂ ಭಾರತದಲ್ಲಿ ಹುಟ್ಟಿದವು. ಈ ಕಥೆಗಳು ಭಾಷಾಂತರಗೊಂಡು ಜಗತ್ತಿನಲ್ಲೆಡೆ ಸಂಚರಿಸಿದವು.

ಕಥಾಪರಂಪರೆ ಬೆಳೆದುಬಂದ ದಾರಿಯನ್ನು ಅವಲೋಕಿಸಿದಾಗ, ನಮ್ಮ ಹಿಂದಿನ ರಾಮಾಯಣ, ಮಹಾಭಾರತಗಳಂಥ ಇತಿಹಾಸ ಕಾವ್ಯಗಳು, ವೇದ ಉಪನಿಷತ್ತುಗಳಲ್ಲಿ ಕಥೆಗಳು, ಪಂಚತಂತ್ರ, ಹಿತೋಪದೇಶಗಳಂಥ ನೀತಿಕಥೆಗಳು, ಕಥಾ ಸರಿತ್ಸಾಗರ, ಶುಕ ಸಪ್ತ ಶತಿಗಳಂಥ ಕಥೆಗಳು ಮೊದಲಿಗೆ ಬರುತ್ತವೆ. ಇವೆಲ್ಲ ಕೇವಲ ಮನೋರಂಜಕ ವಾಗಿರದೆ, ನೀತಿಕಥೆಗಳೂ ಆಗಿವೆ. ಬುದ್ಧಜಾತಕ ಕಥೆಗಳು, ಜೈನಕಥಾ ಸಾಹಿತ್ಯ ಭಾರತದ ಎಲ್ಲ ಭಾಷೆಗಳಲ್ಲೂ ದೊರೆಯುವ ಜಾನಪದ ಕಥೆಗಳು - ಹೀಗೆ ಕಥನ ಪ್ರಪಂಚದ ವಿಸ್ತಾರವಿದೆ.

* ಕಥೆ ಭಾಷೆಯ ಮೂಲಕ ವಿಷಯವನ್ನು ಹಿಡಿದಿಡುವುದು ಕಥೆಯ ಮೂಲ 'ಘಟನೆ' ಯಲ್ಲಿದೆ. ಮೀಕ್‌ಬಾಲ್‌ಳ ಪ್ರಕಾರ 'ಘಟನೆ' ಎಂದರೆ "ವ್ಯಕ್ತಿಗಳಿಂದ ಘಟಿಸಿದ ಅಥವಾ ಅವನು ಅನುಭವಿಸಿದ ಒಂದು ಅವಸ್ಥೆಯಿಂದ ಇನ್ನೊಂದು ಅವಸ್ಥೆಗೆ ಸ್ಥಿತ್ಯಂತರ". ರಿಫ್ಯಾಟರ್ ಎಂಬ ವಿದ್ವಾಂಸ ಕಥೆಯ ಬಗ್ಗೆ

ಕೊಡುವ ವ್ಯಾಖ್ಯೆ ಹೀಗಿದೆ ; "ಕಥೆ ಎಂದರೆ ಕಥನ ಸಂದರ್ಭಿಸುವ ದೇಶ ಕಾಲಗಳ ಪ್ರತಿರೂಪಣ ಹಾಗೂ ಘಟನೆ ಹಾಗೂ ಪಾತ್ರಗಳ ಭಾಷಿಕ ಪ್ರತಿರೂಪ". (* ಜಿ. ಎಸ್. ಆಮೂರ - ಕನ್ನಡ ಕಥನ ಸಾಹಿತ್ಯ; ಸಣ್ಣಕಥೆ - ಕಥನ ಸಾಹಿತ್ಯ, ಕಥನ, ಕಥೆ, ಕಥಾಪ್ರಬಂಧ - ಪು ಸಂ. 13.)

ಸಣ್ಣಕಥೆ ದೀರ್ಘವಲ್ಲ; ಅಲ್ಪದ್ದು. ಕಥೆಗೆ ಮಿತಿ ಇರುತ್ತದೆ. ಒಂದು 'ಕಾಲ' 'ಸಂದರ್ಭ' ವನ್ನು ಅವಲಂಬಿಸುತ್ತದೆ. ಗಾತ್ರದಲ್ಲಿ ಚಿಕ್ಕದು. ಕಥೆಗಾರರು ಹೇಳುವ ವಿಚಾರವನ್ನು ಚಿಕ್ಕದಾಗಿಯೇ ಹೇಳಿ ಮುಗಿಸಿಬಿಡಬೇಕಾಗುತ್ತದೆ. ಹಾಗಾಗಿ ಕಥನ ಕೌಶಲ, ಚಾತುರ್ಯ ಕಥೆಗಾರರಿಗೆ ಇರಬೇಕು. ಕಾದಂಬರಿಗೆ ಹೋಲಿಸಿದರೆ ಸಣ್ಣಕಥೆಯಲ್ಲಿ ಕ್ರಿಯೆ ಸೀಮಿತವಾಗಿರುತ್ತದೆ. ಸಣ್ಣಕಥೆ ಸೀಮಿತವಾಗಿರುವುದರಿಂದ ಕಥೆಗಾರ ಅದರ ಆಳಕ್ಕಿಳಿಯುವುದು ಅವಶ್ಯವಾಗಿರುತ್ತದೆ.

ಕನ್ನಡದಲ್ಲಿ 'ವಡ್ಡಾರಾಧನೆ' ಯಿಂದ ಮೊದಲಾಗಿ ಚಾಮುಂಡರಾಯನ "ಚಾವುಂಡರಾಯ ಪುರಾಣಂ" ಎಂದು ಹೆಸರಾದ 'ತ್ರಿಷಷ್ಠಿ ಶಲಾಕ ಪ್ರತಿಬದ್ಧ ಪುರಾಣಂ', ದುರ್ಗಸಿಂಹನ "ಪಂಚತಂತ್ರ", "ನಯಸೇನನ ಧರ್ಮಾಮೃತ", ಶಾಂತಲಿಂಗ ದೇಶಿಕನ "ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ" ಮೊದಲಾದ ಕೃತಿಗಳು ಬೆಳೆದು ಬಂದಿರುವ ಶಿಷ್ಟ ಕಥಾ ಪರಂಪರೆಯಿದೆ. ಕನ್ನಡದಲ್ಲಿ ಜಾನಪದ ಕಥೆಗಳ ಶ್ರೀಮಂತ ಭಂಡಾರವೂ ಇದೆ.

ಸಣ್ಣಕಥೆಗೆ ಒಂದು ಸ್ಪಷ್ಟರೂಪವನ್ನು ಆಧುನಿಕ ಸಣ್ಣಕಥೆಗಳಲ್ಲಿ ಕಾಣಬಹುದು. ಕನ್ನಡದಲ್ಲಿ ಕಾದಂಬರಿ ತರುವಾಯ ಸಣ್ಣಕಥೆಯೇ ಅತ್ಯಂತ ಜನಪ್ರಿಯವಾದ ರೂಪವಾಗಿದೆ. ಆಧುನಿಕ ಸಣ್ಣಕಥೆಯು ವಿಶಿಷ್ಟವಾದ ಸಾಹಿತ್ಯ ಪ್ರಕಾರವಾಗಿ ಕನ್ನಡದಲ್ಲಿ ಮೂಡಿಬಂದಿದ್ದು, ಪಾಶ್ಚಿಮಾತ್ಯ ಸಾಹಿತ್ಯದ ಪ್ರಭಾವ ಮತ್ತು ಪ್ರೇರಣೆಯಿಂದ ಎಂದು ಹೇಳಬಹುದು. ಆದರೆ ಇಲ್ಲಿಯ ಮಣ್ಣಿನ ಸತ್ವ, ಸಂಸ್ಕೃತಿ, ತನ್ನತನವನ್ನು ಮೈಗೂಡಿಸಿಕೊಂಡು ಅದು ಸಮೃದ್ಧಿಯಾಗಿ ಬೆಳೆಯಿತು.

ಸಾಮಾನ್ಯವಾಗಿ ಕಥೆಗಾರರೆಲ್ಲ ಮನುಷ್ಯನ ಹಿರಿಮೆಯನ್ನು ಬಾಳಿನ ಮೌಲ್ಯಗಳನ್ನು ನಿರೂಪಿಸಲು ಈ ಮಾಧ್ಯಮವನ್ನು ಬಳಸಿದರು.

ಕಥಾಸಾಹಿತ್ಯ ಪರಂಪರೆ :

ಕಥಾಸಾಹಿತ್ಯದ ಅಧ್ಯಯನವನ್ನು ಡಾ. ಕರೀಗೌಡ ಬೀಚನಹಳ್ಳಿಯವರು ತಮ್ಮ "ಶತಮಾನದ ಸಣ್ಣಕಥೆಗಳ ಸಮೀಕ್ಷೆ" ಕೃತಿಯಲ್ಲಿ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಎಂದು ವಿಭಾಗಿಸಿಕೊಂಡಿದ್ದಾರೆ. ಅದರಂತೆ ಕಥಾಸಾಹಿತ್ಯದ ಅಧ್ಯಯನವನ್ನು ಮೇಲೆ ಹೇಳಿದ ಎರಡು ಘಟ್ಟಗಳಲ್ಲಿ ಅವಲೋಕಿಸಲಾಗಿದೆ. ಇವುಗಳನ್ನು ಗಮನಿಸಿದಾಗ ಕಥೆಗಳು, ಆಯಾ ಕಾಲಘಟ್ಟದಲ್ಲಿನ ಪರಿಸರ, ಸನ್ನಿವೇಶ, ಸಂದರ್ಭ ಇವುಗಳ ಪ್ರೇರಣೆಯಿಂದ ಮೂಡಿಬಂದವು ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಸ್ವಾತಂತ್ರ್ಯಪೂರ್ವ ಕಥಾಸಾಹಿತ್ಯ

ಕನ್ನಡ ಕಥಾಲೋಕ ಮಾಸ್ತಿಯವರಿಂದಲೇ ಪ್ರಾರಂಭವಾದರೂ ಪಂಜೆಮಂಗೇಶ ರಾಯರು, ಕೆರೂರು

ವಾಸುದೇವಾಚಾರ್ಯ, ಎಂ. ಎನ್. ಕಾಮತ್‌ರು ಕಥಾಸಾಹಿತ್ಯಕ್ಕೆ ಪ್ರಥಮವಾಗಿ ಕಾಣಿಕೆಯನ್ನು ನೀಡಿದ್ದಾರೆ. ಪಂಜೆಮಂಗೇಶರಾಯರು ಆರಂಭ ಲೇಖಕರಲ್ಲಿ ಒಬ್ಬರು. ಪಂಜೆಮಂಗೇಶರಾಯರು 1900 ರಲ್ಲಿ 'ನನ್ನ ಚಿಕ್ಕ ತಾಯಿ', 'ನನ್ನ ಚಿಕ್ಕ ತಂದೆ' ಎಂಬ ಎರಡು ಕಥೆಗಳನ್ನೂ 'ಸುವಾಸಿನಿ' ಎಂಬ ಮಾಸಪತ್ರಿಕೆಯಲ್ಲಿ ಪ್ರಕಟಿಸಿದರು. ಪಂಜೆಮಂಗೇಶರಾಯರ ಒಟ್ಟು ಕಥೆಗಳಲ್ಲಿ ಒಂಭತ್ತು ಸಾಮಾಜಿಕ, ನಾಲ್ಕು ಚಾರಿತ್ರಿಕ ಕಥೆಗಳಿವೆ. ಪಂಜೆಯವರ ಬಹುತೇಕ ಕಥೆಗಳಲ್ಲಿ ವ್ಯಕ್ತಿಚಿತ್ರದ ಮಾದರಿಗಳು ಕಂಡುಬರುತ್ತವೆ.

ಆಧುನಿಕ ಕನ್ನಡ ಸಣ್ಣಕಥಾ ಜಗತ್ತಿನ ನಿರ್ಮಾಣಕ್ಕಾಗಿ ಉತ್ತರಕರ್ನಾಟಕದ ದೇಸೀ ಶೈಲಿಯಲ್ಲಿ ಕೆರೂರು ವಾಸುದೇವಾಚಾರ್ಯರು ಕಥೆಗಳನ್ನು ಬರೆದಿದ್ದಾರೆ. ಅವರ ಕಥೆಗಳನ್ನು "ಸಂಪೂರ್ಣ ಕಥೆಗಳು" ಎಂದು ಅವರೇ ಕರೆದುಕೊಂಡಿದ್ದಾರೆ. "ಇದಕ್ಕೆ ಇದೇ ಹೆಸರಿನ ಮರಾಠೀ ಕಥೆಗಳ ಪ್ರಭಾವವೂ ಕಾರಣವೆಂದು ಒಂದು ಅಭಿಪ್ರಾಯವೂ ಇದೆ". (ಡಾ|| ಕರೀಗೌಡ ಬೀಚನಹಳ್ಳಿ, ಶತಮಾನದ ಸಣ್ಣಕಥೆಗಳ ಸಮೀಕ್ಷೆ - ಪು ಸಂ. - 45), ಅವರು ಪಾಶ್ಚಾತ್ಯ ಪತ್ತೇಧಾರಿ ಕಾನನಡಯಾಲ್ ಮತ್ತು ಷರ್ಲಾಕ್ ಹೋಮ್ಸ್‌ನ ಕೆಲವು ಕಥೆಗಳನ್ನು ರೂಪಾಂತರಿಸಿದ್ದಾರೆ. ಅವರ ಕಥೆಗಳಲ್ಲಿ ಆಧುನಿಕ ಒಳನೋಟಗಳಿವೆ. "ತೊಳೆದ ಮುತ್ತು", "ಮಲ್ಲೇಶಿಯ ನಲ್ಲೆಯರು" - ಗಮನಾರ್ಹವಾದ ಕಥೆಗಳಾಗಿವೆ. ಅವರ ಕಥೆಗಳಲ್ಲಿ ಕಥನಗುಣ ಎದ್ದು ಕಾಣುತ್ತದೆ. ಅವರ ಕಥೆಗಳಿಂದ ಒಂದು ಅಗಾಧವಾದ ಅನುಭವವನ್ನು ಪಡೆಯಬಹುದಾಗಿದೆ.

ಆಧುನಿಕ ಕನ್ನಡ ಕಥಾಸಾಹಿತ್ಯದಲ್ಲಿ ಕೆರೂರರಷ್ಟೇ ಸಮರ್ಥವಾಗಿ ಸಣ್ಣಕಥೆಗಳನ್ನು ಬರೆದವರು ದಕ್ಷಿಣ ಕನ್ನಡ ಜಿಲ್ಲೆಯ ಎಂ. ಎನ್. ಕಾಮತ್. ಅವರ ಮಾತೃಭಾಷೆ ಕೊಂಕಣಿಯಾದರೂ ಕನ್ನಡದ ಬೆಳವಣಿಗೆಗೆ ಶ್ರಮಿಸಿದರು. ಷರ್ಲಾಕ್‌ಹೋಮ್ಸ್‌ನ ನಾಯಕ ಪ್ರಧಾನವಾದ ಕೆಲವು ಕಥೆಗಳನ್ನು, ಬಂಗಾಲಿ ಕಥೆಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. "ಕದ್ದವರು ಯಾರು ?", "ಆ ಮಗು", "ಬೊಗ್ಗು ಮಹಾಶಯನು", "ಆವೂರು ಮಠ", "ಅಂದಿನ ಆವೂರು", "ವೈದ್ಯರಾಜ ಧನ್ವಂತರಿ" ಇವು ಅವರ ಕೆಲವು ಪ್ರಮುಖ ಕಥೆಗಳು.

ಆಧುನಿಕ ಕಥಾಸಾಹಿತ್ಯಕ್ಕೆ ಈ ಮೊದಲಿನ ಕಥೆಗಾರರು ಒಂದು ಮಾರ್ಗವನ್ನು ಹಾಕಿಕೊಟ್ಟರು.

ಪಂಜೆಯವರು ಸಣ್ಣ ಕಥಾಸಾಹಿತ್ಯದಲ್ಲಿ ಮೊದಲಿಗರಾಗಿ ಕಂಡುಬಂದರೂ, ನವೋದಯ ಸಾಹಿತ್ಯದಲ್ಲಿ ಕಾಣಿಸುವ ಮಾಸ್ತಿವೆಂಕಟೇಶ ಅಯ್ಯಂಗಾರ್‌ರವರು ಕಥಾಸಾಹಿತ್ಯಕ್ಕೆ ವಿಶೇಷವಾದ ಮನ್ನಣೆಯನ್ನು ತಂದುಕೊಟ್ಟರು. ಸಣ್ಣಕಥೆಗೆ ಸಾಹಿತ್ಯದ ಸ್ವರೂಪ ಬಂದದ್ದು ಮಾಸ್ತಿಯವರಿಂದಲೇ. ಮಾಸ್ತಿಯವರು ಸಣ್ಣಕಥೆಯನ್ನು ತಮ್ಮ ಅಭಿವ್ಯಕ್ತಿಯ ಪ್ರಮುಖ ಮಾಧ್ಯಮವನ್ನಾಗಿ ಮಾಡಿಕೊಂಡರು, ಮಾಸ್ತಿಯವರ ಕಥೆಗಳನ್ನು ಒಂದು ಕೃತಿಯೆಂದೇ ಸಮಗ್ರವಾಗಿ ನೋಡಬೇಕು. ಅವರ ಹಿರಿದಾದ ಜೀವನದೃಷ್ಟಿ ಅವರ ಎಲ್ಲ ಕಥೆಗಳಿಗೂ ಅರ್ಥಪೂರ್ಣತೆಯನ್ನು ತಂದುಕೊಟ್ಟಿದೆ. ಅವರ ಕಥೆಗಳಲ್ಲಿ ಒಂದೇ ಅಖಂಡ ಜೀವನದೃಷ್ಟಿ ವಿವಿಧ ನೆಲೆಗಳಲ್ಲಿ ಮೂಡಿಬಂದಿದೆ.

"ಇದು ಒಳ್ಳೆಯದು, ಇದು ಕೆಟ್ಟದ್ದು ಅಂತ ಹೇಳೋದಿಲ್ಲ. ನನ್ನ ಮುಖ್ಯ ಉದ್ದೇಶ, ಜೀವನದ ಚಿತ್ರ ಕೊಡೋದು. ಕಂಡ ಜೀವನ ಹೇಳೋದು" ಎಂದು ತಮ್ಮ ಆಶಯವನ್ನು ಮಾಸ್ತಿಯವರು ಹೇಳಿಕೊಳ್ಳುತ್ತಾರೆ. (ಡಾ. ಕರೀಗೌಡ ಬೀಚನಹಳ್ಳಿ - ಶತಮಾನದ ಸಣ್ಣಕಥೆಗಳ ಸಮೀಕ್ಷೆ - ಪು ಸಂ. 15) "ನಮ್ಮ ಮೇಷ್ಟರು", "ವೆಂಕಟಶಾಮಿಯ

ಪ್ರಣಯ", "ಮೊಸರಿನ ಮಂಗಮ್ಮ", "ರಂಗಪ್ಪನ ಕತೆಗಳು", "ಗೌತಮಿ ಹೇಳಿದ ಕಥೆ" ಈ ಕಥೆಗಳಲ್ಲಿ ಬದುಕಿನ ರೇಖೆಗಳನ್ನು ಚಿತ್ರಿಸಿದ್ದಾರೆ. ಜೀವನದಲ್ಲಿನ ಸುಖ, ದುಃಖ, ನೋವು ಎಲ್ಲ ತರಹದ ಚಿತ್ರಣ ಕಥೆಗಳಲ್ಲಿ ಮೂಡಿಬಂದಿದೆ. ನೈತಿಕತೆ, ಧಾರ್ಮಿಕತೆ, ಸಾಮಾಜಿಕತೆ ಮಾಸ್ತಿಯವರ ಕಥೆಗಳಲ್ಲಿ, ಕಲೆಯ ದೃಷ್ಟಿಯಿಂದ ಮಾಸ್ತಿಯವರ ಎಲ್ಲ ಕಥೆಗಳೂ ಪರಿಪೂರ್ಣವಾಗಿವೆ. ಸರಳವಾದ ಗದ್ಯಶೈಲಿಯಲ್ಲಿ ರಚಿತವಾದ ಅವರ ಕಥೆಗಳಿಂದ ಗದ್ಯ ರಚನೆಯ ಶ್ರೇಯಸ್ಸಿನಲ್ಲಿ ಅವರ ಪಾಲು ಬಹಳ ದೊಡ್ಡದಾಗಿದೆ.

ಮಾಸ್ತಿಯವರ ಕಥೆಗಳ ಬಗ್ಗೆ ಕೀರ್ತಿನಾಥ ಕುರ್ತುಕೋಟಿಯವರು ಈ ರೀತಿ ಅಭಿಪ್ರಾಯಿಸುತ್ತಾರೆ. "ಶ್ರೀನಿವಾಸರ ಶೈಲಿ ಸ್ಫಟಿಕದಂತೆ ಪಾರದರ್ಶಕವಾದದ್ದು. ಆದ್ದರಿಂದ ಯಾವ ವಸ್ತುವೂ ಬಣ್ಣಗೆಡದೆ ತನಗೆ ಸಹಜವಾದ ಆಕೃತಿ ವಿಶೇಷದಿಂದ ಪ್ರಕಟವಾಗಿ ಬಿಡುತ್ತದೆ". **(ಕೀರ್ತಿನಾಥ ಕುರ್ತುಕೋಟಿ, ಯುಗಧರ್ಮ ಮತ್ತು ಸಾಹಿತ್ಯದರ್ಶನ)**

ನವೋದಯ ಕಥೆಗಾರರಲ್ಲಿ ಮತ್ತೊಬ್ಬ ಪ್ರಮುಖರು ಕುವೆಂಪು. ಅವರ ಕಥೆ, ಕಾದಂಬರಿಗಳು ವಾಸ್ತವವಾದಿ ನೆಲೆಯಲ್ಲಿ ರೂಪುಗೊಂಡಂತಹವು. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಶಿವರಾಮ ಕಾರಂತ ಹೀಗೆ ಅನೇಕರು ಆಧುನಿಕ ಕಥಾಸಾಹಿತ್ಯದಲ್ಲಿ ಹೆಸರು ಮಾಡಿದವರಾಗಿದ್ದಾರೆ. ತಿಳಿಯಾದ ಹಾಸ್ಯ, ವಿಡಂಬನೆ, ನವೋದಯ ಕಥೆಗಳಲ್ಲಿ ವ್ಯಕ್ತವಾದ ಅಂಶವಾಗಿದೆ.

ಇದೇ ಸಂದರ್ಭದಲ್ಲಿ ಮಹಿಳೆಯರೂ ಕಥೆಗಳನ್ನು ರಚನೆ ಮಾಡುತ್ತಿದ್ದುದು ಗಮನಿಸಬೇಕಾದ ಅಂಶವಾಗಿದೆ. ನಮ್ಮ ಕನ್ನಡ ಸಾಹಿತ್ಯದಲ್ಲಿ ಮೊದಲ ಕವಯಿತ್ರಿಯಾಗಿ ಗುರ್ತುತಿಸುವುದು ವಚನಕಾರ್ತಿ ಅಕ್ಕಮಹಾದೇವಿಯನ್ನು. ನಂತರ ಹೆಳವನಕಟ್ಟೆ ಗಿರಿಯಮ್ಮ ಮತ್ತು ಸಂಚಿ ಹೊನ್ನಮ್ಮ ಕಾಣುತ್ತಾರೆ.

ಆನಂತರ 19ನೇ ಶತಮಾನದ ಆರಂಭದಲ್ಲಿ ಮಹಿಳಾ ಲೇಖಕಿಯರನ್ನು ಕಾಣುತ್ತೇವೆ. ನಂಜನಗೂಡು ತಿರುಮಲಾಂಬಾ, ಸರಸ್ವತಿಬಾಯಿ ರಾಜವಾಡೆ, ಬೆಳಗೆರೆ ಜಾನಕಮ್ಮ, ಕೊಡಗಿನ ಗೌರಮ್ಮ, ಶ್ಯಾಮಲಾದೇವಿ ಬೆಳಗಾಂವಕರ್, ಮೊದಲಾದವರು ತಮ್ಮ ಕಥಾಸಾಹಿತ್ಯದಲ್ಲಿ ತಮ್ಮ ಛಾಪನ್ನು ಒತ್ತಿದ್ದಾರೆ. ತಮ್ಮ ಬದುಕಿನಲ್ಲಿ ಪಟ್ಟ ಪಾಡನ್ನು ಕಥೆಯಾಗಿಸಿದ್ದಾರೆ. ಸಮಾಜದಲ್ಲಿ ಮಹಿಳೆ ಸುಧಾರಣೆ ಕಾಣಬೇಕು ಎಂಬುದು ಇವರ ಕಥೆಗಳಲ್ಲಿನ ಮುಖ್ಯ ಆಶಯ. ಈ ಕಥೆಗಾರ್ತಿಯರು ಸ್ತ್ರೀಶಿಕ್ಷಣ, ಸ್ತ್ರೀಕಲ್ಯಾಣವನ್ನು ವಸ್ತುವನ್ನಾಗಿ ಸ್ವೀಕರಿಸಿದರು.

ಕೊಡಗಿನ ಗೌರಮ್ಮ, ಶ್ಯಾಮಲಾದೇವಿ ಬೆಳಗಾಂವಕರ್‌ರವರು ಅಸ್ಪೃಶ್ಯತೆ, ವಿಧವಾ ಸಮಸ್ಯೆ, ವೇಶ್ಯಾ ಸಮಸ್ಯೆ, ವರದಕ್ಷಿಣೆ ಮುಂತಾದ ಸಾಮಾಜಿಕ ಸಮಸ್ಯೆಗಳ ಬಗ್ಗೆ ತುಂಬಾ ಗಂಭೀರವಾಗಿ ಬರೆದಿದ್ದಾರೆ.

ನಂತರ ಕನ್ನಡದಲ್ಲಿ ಕಾಣಿಸಿಕೊಂಡ ಪ್ರಗತಿಶೀಲ ಸಾಹಿತ್ಯದಲ್ಲಿ ಸಾಮಾಜಿಕ ಅನ್ಯಾಯದ ವಿರುದ್ಧ ಸಿಟ್ಟು, ಆಕ್ರೋಶ, ಅಬ್ಬರ ಇವುಗಳನ್ನು ಗಮನಿಸಬಹುದು. ಪ್ರಗತಿಶೀಲ ಕೃತಿಕಾರರಲ್ಲಿ ಅ. ನ. ಕೃಷ್ಣರಾಯರು, ಬಸವರಾಜ ಕಟ್ಟೀಮನಿ, ತ.ರಾ.ಸು., ಚದುರಂಗ, ನಿರಂಜನ ಮೊದಲಾದವರು ಪ್ರಮುಖ ಕಥೆಗಾರರು.

"ನವೋದಯ ಹಂತದ ಕಥಾ ಸಾಹಿತ್ಯದಲ್ಲಿ ಆದರ್ಶ ವ್ಯಕ್ತಿತ್ವದ ನಿರ್ಮಾಣ ನಡೆದಿದ್ದರೆ, ಪ್ರಗತಿಶೀಲ ಸಾಹಿತ್ಯದಲ್ಲಿ ಸಾಮಾಜಿಕ ಪ್ರತಿಪಾದನೆ ಪ್ರಕಟವಾಗಿದೆ". (ಡಾ|| ಕರೀಗೌಡ ಬೀಚನಹಳ್ಳಿ, ಶತಮಾನದ ಸಣ್ಣಕಥೆಗಳ ಸಮೀಕ್ಷೆ - ಪು 19) ಪ್ರಗತಿಶೀಲ ಸಾಹಿತ್ಯ ಮುಖ್ಯವಾಗಿ ಲೇಖಕ ಮತ್ತು ಓದುಗರ ನಡುವೆ ಸಾಮಾಜಿಕ ಪ್ರಜ್ಞೆಯನ್ನು ತೀಕ್ಷ್ಣಗೊಳಿಸಿತು.

ಪ್ರಗತಿಶೀಲ ಕಥೆಗಾರರು ಸಾಮಾಜಿಕ ಅಸಮಾನತೆ, ಶೋಷಣೆಗಳ ವಿರುದ್ಧ ದನಿ ಎತ್ತಿದರು. ಇವರಿಗೆ ರಷ್ಯನ್ ಕ್ರಾಂತಿ, ಕಮ್ಯೂನಿಸ್ಟ್ ಧೋರಣೆಯ ಸಾಹಿತ್ಯವೂ ಪ್ರೇರಣೆ ನೀಡಿತ್ತು ಎನ್ನಬಹುದು.

ಅ.ನ.ಕೃ. ರವರು ತಮ್ಮ ಸಣ್ಣಕಥೆಗಳ ಮೂಲಕ ಹೊಸ ವಿಚಾರಗಳನ್ನು ರೂಪಿಸತೊಡಗಿದರು. ನಿರಂಜನರು ವೈಚಾರಿಕವಾಗಿ ಕಥಾಸಾಹಿತ್ಯವನ್ನು ರೂಪಿಸತೊಡಗಿದರು.

"ಅ.ನ.ಕೃ. ಅವರು ವೇಶ್ಯಾ ಸಮಸ್ಯೆ, ಕೋಮು ಘರ್ಷಣೆ, ಹಸಿವು ಮತ್ತು ಶೋಷಣೆಗಳಂತಹ ವಸ್ತುಗಳನ್ನು ತಮ್ಮ ಕಥೆಗಳ ವಸ್ತುವಾಗಿ ಸ್ವೀಕರಿಸಿದರು. "ಹಸಿವಿನ ಕೂಗು", ಹಸಿವಿನ ಉತ್ಕಟ ಸ್ಥಿತಿಯನ್ನು ಚಿತ್ರಿಸಿದರೆ, ಅವರ "ಮಣ್ಣಿನ ಮಗ" ಜಮೀನ್ದಾರಿ ವ್ಯವಸ್ಥೆಯಲ್ಲಿ ನಡೆಯುವ ಶೋಷಣೆಯ ಮುಖವನ್ನು ಚಿತ್ರಿಸುತ್ತದೆ. ಬಸವರಾಜ ಕಟ್ಟೀಮನಿಯವರು "ಬೂಟ್ ಪಾಲಿಶ್", "ಗಿರಜಾ ಕಂಡ ಸಿನಿಮಾ", "ಅಜ್ಞಾತವಾಸ" ಈ ಕಥೆಗಳಲ್ಲಿ ಶೋಷಣೆಯ, ಅನೈತಿಕತೆಯ ಎಳೆಗಳು ಬಿಚ್ಚಿಕೊಳ್ಳುತ್ತವೆ". (ಡಾ|| ಕರೀಗೌಡ ಬೀಚನಹಳ್ಳಿ, ಶತಮಾನದ ಸಣ್ಣಕಥೆಗಳ ಸಮೀಕ್ಷೆ - ಪು 61) ಆದರೆ ಈ ಲೇಖಕರು ಕಥೆಗಳಿಗಿಂತ ಹೆಚ್ಚಾಗಿ ಕಾದಂಬರಿ ಕ್ಷೇತ್ರಕ್ಕೆ ಒಲಿದರು. ಆದರೆ ಪ್ರಗತಿಶೀಲರಲ್ಲಿ ಮುಖ್ಯವಾಗಿ ಚದುರಂಗರು ಪ್ರಧಾನವಾಗಿ ಕಥೆಗಾರರಾಗಿಯೇ ಗುರುತಿಸಿಕೊಳ್ಳುತ್ತಾರೆ. ಚದುರಂಗರ ಕಥೆಗಳಲ್ಲಿ ಅನ್ಯಾಯಕ್ಕೆ ಒಳಗಾದವರ ಬಗ್ಗೆ ಮರುಕ ಪಡುವ ಮನಸ್ಸು ಕಂಡುಬರುತ್ತದೆ.

ಪ್ರಗತಿಶೀಲ ಸಾಹಿತ್ಯದಲ್ಲಿ ಬರುವ ಮತ್ತೊಬ್ಬ ಪ್ರಮುಖ ಕಥೆಗಾರರು ವ್ಯಾಸರಾಯ ಬಲ್ಲಾಳರು. ಅವರ "ಕಾಡು ಮಲ್ಲಿಗೆ", "ನಿವೃತ್ತಿ" ಮತ್ತು "ಮಣ್ಣು ದಿಬ್ಬದ ಮೇಲೆ", "ಒಂದು ಘಟನೆ ಮತ್ತು ಅನಂತರ" ಕಥೆಗಳು ಗಮನಾರ್ಹವಾದುವು.

ಪ್ರಗತಿಶೀಲರಲ್ಲಿ ತುಂಬಾ ವೈಚಾರಿಕವಾಗಿ ಬರೆದವರೆಂದರೆ, ನಿರಂಜನರು. ಸಾಮಾಜಿಕ ಸಂಗತಿಗಳನ್ನು ಸಾಂಕೇತಿಕವಾಗಿ ನಿರೂಪಿಸುವ ಇವರ ಕಥೆಗಳಲ್ಲಿ ಎಡಪಂಥೀಯ ಧೋರಣೆಗಳು ಎದ್ದು ಕಾಣುತ್ತವೆ.

ಪ್ರಗತಿಶೀಲ ಹಂತದಲ್ಲಿ ಕಂಡುಬರುವ ಮಹಿಳಾ ಕಥೆಗಾರ್ತಿಯರಲ್ಲಿ ಸುಶೀಲ ಕೊಪ್ಪರ, ತ್ರಿವೇಣಿ, ಎಂ. ಕೆ. ಇಂದಿರಾ, ಶಾಂತಾದೇವಿ ಕಣವಿ, ಎಚ್. ಎಸ್. ಪಾರ್ವತಿ, ವಾಣಿ, ಡಾ. ಅನುಪಮಾ ನಿರಂಜನ ಮೊದಲಾದವರನ್ನು ಗುರುತಿಸಬಹುದಾಗಿದೆ.

ಸುಶೀಲಕೊಪ್ಪರ ಅವರು ತಮ್ಮ ಅನುಭವ ಸ್ತ್ರೀ ಪ್ರಪಂಚಕ್ಕೆ ದಕ್ಕುವ ಸ್ತ್ರೀ ಬದುಕಿನ ಹಲವು ಆಯಾಮಗಳನ್ನು ಇವರು ತಮ್ಮ ಕಥೆಗಳಲ್ಲಿ ತೆರೆದು ತೋರಿಸಿದ್ದಾರೆ. ಉತ್ತರ ಕರ್ನಾಟಕದ ಭಾಷೆಯ ಸೊಗಡು ಇವರ ಕಥೆಗಳಲ್ಲಿ ಅತ್ಯಂತ ಸಮರ್ಥವಾಗಿ ಅಭಿವ್ಯಕ್ತಿಗೊಂಡಿದೆ.

ವಾಣಿಯವರು ಕಾದಂಬರಿಗಾರ್ತಿಯಾಗಿ ಪ್ರಸಿದ್ಧರಾಗಿದ್ದರೂ ಕನ್ನಡ ಕಥಾಜಗತ್ತಿಗೆ ಕೆಲವು ಉತ್ತಮ ಕಥೆಗಳನ್ನು ನೀಡಿದ್ದಾರೆ. ಇವರ ಕಥೆಗಳು ಹೆಚ್ಚಾಗಿ ಸಾಂಸಾರಿಕ ಜಗತ್ತನ್ನು ಚಿತ್ರಿಸುತ್ತವೆ.

ತ್ರಿವೇಣಿಯವರು ತಮ್ಮ ಮನೋವೈಜ್ಞಾನಿಕ ಒಳನೋಟಗಳನ್ನು ತಮ್ಮ ಕೃತಿಗಳಲ್ಲಿ ನೀಡಿದ್ದಾರೆ. ಅನುಪಮಾ ನಿರಂಜನರವರು ಕಥೆಗಳ ಮೂಲಕ ತಮ್ಮ ವೈಜ್ಞಾನಿಕ ತಿಳುವಳಿಕೆಯನ್ನು ಪ್ರಕಟಿಸಿದರು. ಆದರೆ ಇವರೆಲ್ಲರೂ ಹೆಚ್ಚಾಗಿ ಕಾದಂಬರಿ ಕ್ಷೇತ್ರಕ್ಕೆ ಒಲಿದರು.

ವಿ. ಕೃ. ಗೋಕಾಕರು, ಗೋಪಾಲಕೃಷ್ಣ ಅಡಿಗರು, ಸಾಮಾಜಿಕ ಅಂಶಗಳನ್ನೊಳ ಗೊಂಡಂತೆ ವಿನೂತನವಾದ ರೀತಿಯಲ್ಲಿ ಬರವಣಿಗೆಯನ್ನು ಪ್ರಾರಂಭಿಸಿದಾಗ ನವ್ಯ ಸಾಹಿತ್ಯದ ಕಾಲ ಪ್ರಾರಂಭವಾಯಿತು. ಪರಿಸರ, ಜನಜೀವನದ ರೀತಿ-ನೀತಿಗಳು, ನಗರ ಜೀವನದ ಸಂಕೀರ್ಣತೆಗಳು, ಕೌಟುಂಬಿಕ ತುಮುಲಗಳು, ಇತ್ಯಾದಿಗಳ ಬಗ್ಗೆ ನವ್ಯ ಕಥೆಗಾರರು ಕಥಾ ಸಾಹಿತ್ಯದಲ್ಲಿ ಅಭಿವ್ಯಕ್ತಿಸಿದ್ದಾರೆ. ಧ್ವನಿ, ಪ್ರತಿಮೆ, ಸಂಕೇತಗಳನ್ನು ಬಳಸಿಕೊಂಡು ನವ್ಯ ಕಥೆಗಳು ರಚನೆಯಾಗಿರುವುದರಿಂದ ಗಮನ ಸೆಳೆಯುತ್ತದೆ.

ಯು. ಆರ್. ಅನಂತಮೂರ್ತಿ, ಪಿ. ಲಂಕೇಶ್, ಶಾಂತಿನಾಥ ದೇಸಾಯಿ, ಕೆ. ಸದಾಶಿವ, ಗಿರಡ್ಡಿ ಗೋವಿಂದರಾಜ, ಯಶವಂತ ಚಿತ್ತಾಲ ಪ್ರಮುಖ ನವ್ಯ ಕಥೆಗಾರರು.

ಯು. ಆರ್. ಅನಂತಮೂರ್ತಿ ಅವರ ಕಥೆಗಳಲ್ಲಿ ಪ್ರಧಾನವಾಗಿ ಕಂಡುಬರುವುದು ಬ್ರಾಹ್ಮಣ - ಶೂದ್ರ ಪಾತ್ರಗಳ ಶೋಧನೆ. ಬ್ರಾಹ್ಮಣ ಸಮುದಾಯ ಪ್ರಜ್ಞೆ, ಬದುಕನ್ನು ವೈಚಾರಿಕ ನೆಲೆಯಲ್ಲಿ ನೋಡುವುದು, ಸಾರ್ವತ್ರಿಕ ಸತ್ಯಗಳನ್ನು ಹುಡುಕುವುದು, ಅವರ ಕಥೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. "ಸೂರ್ಯ ಕುದುರೆ", "ತಾಯಿ", "ಹುಲಿಯ ಹೆಂಗರುಳು", "ನವಿಲುಗಳು" ಮೊದಲಾದ ಕಥೆಗಳನ್ನು ಬರೆದಿದ್ದಾರೆ.

"ಅನಂತಮೂರ್ತಿಯ ಕಥೆಗಳು ಪ್ರಜ್ಞೆ ಮತ್ತು ಪರಿಸರದ ನಡುವಿನ ವಿನ್ಯಾಸವನ್ನು ಸೃಜನಾತ್ಮಕವಾಗಿ ಶೋಧಿಸುತ್ತವೆ. ಹಳ್ಳಿಗಾಡಿನ ಬ್ರಾಹ್ಮಣ ಕುಟುಂಬಗಳ ಪರಿಸರವನ್ನು ಅನಾವರಣ ಮಾಡುತ್ತವೆ" (ಡಾ|| ಕರೀಗೌಡ ಬೀಚನಹಳ್ಳಿ, ಶತಮಾನದ ಸಣ್ಣಕಥೆಗಳ ಸಮೀಕ್ಷೆ - ಪು 91)

ಕೆ. ಸದಾಶಿವರ ಪ್ರಸಿದ್ಧ ಕಥೆ "ನಲ್ಲಿಯಲ್ಲಿ ನೀರು ಬಂದಿತು", "ಅಪರಿಚಿತರು", "ಸೂತಕ", "ಪೆಂಡ್ಯುಲಮ್", "ಪೋಶ್ಟ್‌ಮಾರ್ಟ್" ಮೊದಲಾದ ಕಥೆಗಳನ್ನು ಬರೆದಿದ್ದಾರೆ. ದಾಂಪತ್ಯ ಹಾಗೂ ವಿವಾಹಪೂರ್ವದ ಪ್ರೀತಿಯಲ್ಲಿ ತೊಡಗಿ, ಮಾನಸಿಕ ತೊಳಲಾಟಕ್ಕೆ ಒಳಗಾಗುವ ವ್ಯಕ್ತಿಗಳ ಚಿತ್ರಣವನ್ನು ಇವರ ಕಥೆಗಳಲ್ಲಿ ಪ್ರಧಾನವಾಗಿ ಕಾಣಬಹುದು.

ನವ್ಯ ಕಥೆಗಾರರಲ್ಲಿ, ತಮ್ಮದೇ ಆದ ವಿಶಿಷ್ಟ ಸೃಜನಶೀಲ ಪ್ರತಿಭೆಯಿಂದ ತಮ್ಮ ಛಾಪನ್ನು ಸ್ಥಾಪಿಸಿದವರು ಪಿ. ಲಂಕೇಶ್. "ಕಲ್ಲು ಕರಗುವ ಸಮಯ", "ಮುಟ್ಟಿಸಿಕೊಂಡವನು", "ಸಹಪಾಠಿ", "ನಾನಲ್ಲಿ", "ನಿವೃತ್ತರು" ಮೊದಲಾದ ಕಥೆಗಳು ಜಾತಿ, ಅಸ್ಪೃಶ್ಯತೆ, ಹೆಣ್ಣು - ಗಂಡಿನ ಸಂಬಂಧಗಳ ಶೋಧನೆಯನ್ನು ಕುರಿತಂತೆ ಹೇಳುತ್ತವೆ.

ಲಂಕೇಶ್ ತಮ್ಮ ಕಥಾಸಾಹಿತ್ಯದಲ್ಲಿ ಸಿದ್ಧಾಂತಗಳನ್ನು ಮೀರಿ ಬದುಕನ್ನು ಎತ್ತಿ ಹಿಡಿಯುವ,

ಕೆಲಸವನ್ನು ಸೃಜನಾತ್ಮಕವಾಗಿ ಮಾಡಿತೋರಿದ್ದಾರೆ. ವ್ಯವಹಾರದಲ್ಲಿ ಬಳಸುವ ಭಾಷೆಗಿಂತ ಹೆಚ್ಚು ಭಿನ್ನವಾಗಿ, ತಮ್ಮ ಕಥೆಗಳಲ್ಲಿ ಭಾಷೆಯನ್ನು ಬಳಸಿದ್ದಾರೆ.

ನವ್ಯ ಕಥೆಗಾರರಿಗಿಂತ ಭಿನ್ನವಾದ ನೆಲೆಯಲ್ಲಿ ನವ್ಯ ಕಥೆಗಾರ್ತಿಯರು ಬರೆದಿದ್ದಾರೆ. ಮಧ್ಯಮ ವರ್ಗದ ಸ್ತ್ರೀಸಂವೇದನೆಯನ್ನು ಇವರ ಕಥೆಗಳು ಯಶಸ್ವಿಯಾಗಿ ಹಿಡಿದಿಡುತ್ತವೆ. ನವ್ಯ ಮಹಿಳಾ ಕಥೆಗಾರ್ತಿಯರಲ್ಲಿ ರಾಜಲಕ್ಷ್ಮಿ ಎನ್. ರಾವ್, ವೀಣಾಶಾಂತೇಶ್ವರ ವೈದೇಹಿ ಮೊದಲಾದವರು ಪ್ರಮುಖರಾದವರು.

ರಾಜಲಕ್ಷ್ಮಿ ಎನ್. ರಾವ್‌ರವರ 'ಆವೇ ಮರಿಯಾ' ವಿಮರ್ಶಕರ ಗಮನ ಸೆಳೆದಂಥದು. 'ಫ್ರೀಡಾ' ವಿವಾಹೇತರ ಸಂಬಂಧವನ್ನು ಕುರಿತು ಹೇಳುವಂಥದು. ನವ್ಯ ಪಂಥದ ಪ್ರಮುಖ ಲಕ್ಷಣ 'ಕಾಮ' ವನ್ನು ಸಂಕೇತವಾಗಿ ಬಳಸುವುದು. ರಾಜಲಕ್ಷ್ಮಿ ಅವರ ಕಥೆಗಳಲ್ಲಿ ಇಂಥ 'ಕಾಮ' ಸಾಂಕೇತಿಕವಾಗಿ ಬರುವುದನ್ನು ಕಾಣಬಹುದು. "ಒಟ್ಟು ಕಥೆಯಲ್ಲಿ ರಾಜಲಕ್ಷ್ಮಿ ಸ್ವಾಂತತ್ರ್ಯಾನಂತರದ ಭಾರತದ ಪರಿಸ್ಥಿತಿಯ ವಾಸ್ತವ ಚಿತ್ರಣ ನೀಡುತ್ತಲೇ ಒಂದು ರೀತಿಯ ಪಾರತಂತ್ರ್ಯದಿಂದ ಮತ್ತೊಂದು ರೀತಿಯ ಪಾರತಂತ್ರ್ಯಕ್ಕೆ ಬಂದು ಬಿದ್ದ ವಿಷಾದತೆಯನ್ನು ಸೂಕ್ಷ್ಮವಾಗಿ ಹಿಡಿದಿಟ್ಟಿರುವುದು ಮೆಚ್ಚಬೇಕಾದ ವಿಚಾರ" **(ಸಂ. ಡಾ|| ಎಚ್. ಎಸ್. ಶ್ರೀಮತಿ - ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ - ಡಾ|| ಡಿ. ಮಂಗಳಾ ಪ್ರಿಯದರ್ಶಿನಿ 1950 - 75 ರ ವರೆಗಿನ ಕನ್ನಡ ಮಹಿಳಾ ಸಾಹಿತ್ಯ - ಪು ಸಂ. 358)**

ವೀಣಾ ಶಾಂತೇಶ್ವರರವರು ನವ್ಯ ಚಳುವಳಿಯಿಂದ ಪ್ರಭಾವಿತರಾದವರು. ವೀಣಾ ಅವರು ಪುರುಷ ಲೇಖಕರು, ನಮ್ಮ ಕನ್ನಡ ನವ್ಯ ಸಾಹಿತ್ಯ ಚಳುವಳಿಯ ಸಂದರ್ಭದಲ್ಲಿ ಚಿತ್ರಿಸುತ್ತಿದ್ದ ಹೆಣ್ಣಿನ ಪಾತ್ರಗಳಿಗೆ, ಪ್ರತಿಕ್ರಿಯಾತ್ಮಕ ಹೆಣ್ಣುಗಳನ್ನು ಚಿತ್ರಿಸುತ್ತಾರೆ. ಪರಂಪರಾಗತವಾಗಿ ಹೆಣ್ಣಿನ ಮೇಲೆ ಹೇರಿದ್ದ ನಿಯಮಗಳನ್ನು ವಿರೋಧಿಸುವ ಮನೋಭಾವದ ಪಾತ್ರಗಳನ್ನು ಅವರು ರೂಪಿಸಿದ್ದಾರೆ.

ನವ್ಯ ಕಥೆಗಾರ್ತಿಯರಲ್ಲಿ ಮತ್ತೊಬ್ಬ ಪ್ರಮುಖರು ವೈದೇಹಿಯವರು. ವೈದೇಹಿಯವರ ಕಥೆಗಳು ವಿಶಿಷ್ಟವಾದ ರೀತಿಯಲ್ಲಿ ಅಭಿವ್ಯಕ್ತಿಯನ್ನು ಪಡೆದಿವೆ.

"ನವ್ಯಕಥಾ ಸಾಹಿತ್ಯ ಬೆಳವಣಿಗೆಯನ್ನು ಕಂಡಿತು. ಸಣ್ಣಕತೆ ಹೊಸ ಸ್ವರೂಪದಲ್ಲಿ ವಿಸ್ತಾರವನ್ನು ಅರ್ಥವಂತಿಕೆಯನ್ನು ಪಡೆದುಕೊಂಡು ಪರಂಪರೆಯನ್ನು ಸಾರ್ಥಕವಾಗಿ ಮುಂದುವರೆಸಿತು. ಗ್ರಾಮೀಣ ಪ್ರದೇಶದ ಜಮೀನ್ದಾರಿ ಸಂದರ್ಭದಲ್ಲಿ ಜಡಗಟ್ಟಿ ಹೋದ ಅನೇಕ ಸಂಕೋಚ, ಮೌಢ್ಯ, ಸಮಾಜ ಸಂಬಂಧಗಳನ್ನು ವ್ಯವಹಾರದಲ್ಲಿ ಬೆಸೆದುಕೊಂಡ ಒಂದು ವರ್ಗ ನಗರ ನಾಗರೀಕತೆಗೆ, ಆಧುನಿಕತೆಗೆ ಮುಖಾಮುಖಿ ಯಾದಾಗ ಹಳೆಯದರಿಂದ ಬಿಡಿಸಿಕೊಳ್ಳುವ, ಹೊಸದನ್ನು ಸಂಶಯಿಸುವ ಪ್ರಕ್ರಿಯೆಯಲ್ಲಿ ನವ್ಯ ಕಥಾ ಸಾಹಿತ್ಯ ತನ್ನ ರೂಪವನ್ನು ಪಡೆದುಕೊಂಡಿತು. ನವ್ಯ ಕಥಾಲೋಕ ಕನ್ನಡ 'ಸಣ್ಣಕಥೆ' ಗೆ ಹೊಸ ಆಯಾಮವನ್ನುಂಟು ಮಾಡಿತು. ಕಥೆಯೂ ಕಾವ್ಯವಾಯಿತು. ಅಂತರಂಗ ಬಹಿರಂಗ ತಾಕಲಾಟವನ್ನು ವಾಗ್ರೂಪದಲ್ಲಿ ಮೂರ್ತಗೊಳಿಸುವಾಗ ನವ್ಯ ತೋರಿದ ಸೂಕ್ಷ್ಮ ಸಾಂಕೇತಿಕ ಭಾಷಾರೂಪ ಮತ್ತು ಕಲಾತ್ಮಕ ರೂಪ - ವಿನ್ಯಾಸ ಕನ್ನಡ ಕಥಾ ಪರಂಪರೆಗೆ ದೊರಕಿಸಿಕೊಟ್ಟ ಹೆಚ್ಚುಗಾರಿಕೆಯಾಗಿದೆ". **(ಡಾ|| ಗಿರಡ್ಡಿ ಗೋವಿಂದರಾಜ, ಸಣ್ಣಕಥೆಗಳ ಹೊಸ ಒಲವು)**

ದಲಿತ - ಬಂಡಾಯ

ಎಪ್ಪತರ ದಶಕದ ವೇಳೆಗೆ ದಲಿತ - ಬಂಡಾಯ ಸಾಹಿತ್ಯ ಚಳುವಳಿ ಪ್ರಾರಂಭ ವಾಯಿತು. "ನಲವತ್ತರ ದಶಕದ ಪ್ರಗತಿಶೀಲ ಚಳುವಳಿಯ ಸಂದರ್ಭದಲ್ಲಿ ಎಡಪಂಥೀಯ ಕಾಳಜಿಗಳಿಂದ ಗಟ್ಟಿಗೊಂಡ ಜನಪರ ನಿಲುವುಗಳು, ಮತ್ತು ನವ್ಯ ಕಾವ್ಯದ ಅತಿ ಬೌದ್ಧಿಕ ನಿಲುವುಗಳಿಗೆ, ಎಚ್ಚೆತ್ತ ಹೊಸ ಜನಾಂಗದ ಪ್ರಜ್ಞೆ ಅತ್ಯಂತ ಗಾಢವಾಗಿ ತೋರಿದ ಪ್ರತಿಕ್ರಿಯೆಗಳೂ ಈ ಚಳುವಳಿಯ ಮೂಲ ಧೋರಣೆಗಳಾಗಿವೆ". **(ಡಾ|| ಜಿ. ಎಸ್. ಎಸ್. - ಸಮಗ್ರ ಗದ್ಯ - ಕನ್ನಡ ಸಾಹಿತ್ಯ ಚಳುವಳಿಗಳು ಮತ್ತು ಸಾಹಿತ್ಯ ಪರಂಪರೆ - ಪು ಸಂ. 559)**

ದಲಿತ - ಬಂಡಾಯ ಸಾಹಿತ್ಯ ಎಂಬುದು ಶತಮಾನಗಳ ಕಾಲ. ಎಲ್ಲಾ ವರ್ಗದವರುಗಳಿಂದ ಶೋಷಣೆ ಮತ್ತು ಅವಮಾನಗಳಿಗೆ ಒಳಗಾದ, ಸಾಮಾಜಿಕ ವರ್ಗವೊಂದು ಮೊಟ್ಟ ಮೊದಲಿಗೆ, ತನ್ನ ನೋವುಗಳಿಗೆ ಸಿಟ್ಟುಗಳಿಗೆ ಅಕ್ಷರ ರೂಪದ ಅಭಿವ್ಯಕ್ತಿಯನ್ನು ನೀಡಲು ಪ್ರಾರಂಭವಾದುದರ ಪರಿಣಾಮವಾಗಿದೆ. ಈ ಸಾಹಿತ್ಯದ ಮುಖ್ಯ ಲಕ್ಷಣ ಬಂಡಾಯ ಅಥವಾ ಪ್ರತಿಭಟನೆ. ಬಂಡಾಯ ಅಥವಾ ಪ್ರತಿಭಟನೆ ಎಂಬುದು ಮೊದಲಿನಿಂದಲೂ, ಇರುವ ಗುರುತಿಸಬಹುದಾದ ಮನೋಧರ್ಮ. ಆದರೂ ಅದು ಮೊಟ್ಟಮೊದಲ ಬಾರಿಗೆ ಒಂದು ಕ್ರಿಯಾಶೀಲವಾದದ್ದು ಇವತ್ತಿನ ದಲಿತ - ಬಂಡಾಯ ಸಾಹಿತ್ಯದಲ್ಲಿಯೇ. ಹೀಗಾಗಿ ಇದು ನಿಜವಾದ ಅರ್ಥದಲ್ಲಿ ಪ್ರತಿಭಟನಾ ಸಾಹಿತ್ಯ. ಹೀಗೆ ಬಂಡಾಯ ಏಳುವವರಿಗೆ, ಶೋಷಕ ಶಕ್ತಿಗಳ ಬಗ್ಗೆ ಸ್ಪಷ್ಟವಾದ ಅರಿವು ಹಾಗೂ ಅದನ್ನು ಕುರಿತು ಪ್ರತಿಭಟಿಸುವ ಧೈರ್ಯ ಲಭಿಸಿರುವುದು ಮಹತ್ವದ ಸಂಗತಿಯಾಗಿದೆ. ಈ ದೃಷ್ಟಿಯಿಂದ ಬಂಡಾಯ ಸಾಹಿತ್ಯ ಚಳುವಳಿ, ಒಂದು ಚಾರಿತ್ರಿಕ ಅನಿವಾರ್ಯತೆಯಾಗಿದೆ. ಈ ಚಾರಿತ್ರಿಕ ಅನಿವಾರ್ಯತೆ ರೂಪುಗೊಂಡಿದ್ದರ ಹಿಂದೆ ಹಲವಾರು ಸಾಂಸ್ಕೃತಿಕ ಒತ್ತಡಗಳಿವೆ. ಅವುಗಳಲ್ಲಿ ಮುಖ್ಯವಾದದ್ದು ಗಾಂಧೀಜಿಯವರ ದಲಿತೋದ್ಧಾರದ ನಿಲುವುಗಳು, ಅದಕ್ಕಿಂತಲೂ ಮುಖ್ಯವಾಗಿ ದಲಿತರಲ್ಲಿ ಆತ್ಮಗೌರವವನ್ನು, ಹೋರಾಟದ ಕೆಚ್ಚನ್ನೂ ಪ್ರಚೋದಿಸಿದ ಅಂಬೇಡ್ಕರ್ ಅವರ ವಿಚಾರಧಾರೆಗಳು, ಶತಮಾನಗಳ ಕಾಲ ನಿರ್ಲಕ್ಷ್ಯಕ್ಕೆ ಹಾಗೂ ತುಳಿತಕ್ಕೆ ಒಳಗಾದ ಸಾಮಾಜಿಕ ವರ್ಗವೊಂದು ತನ್ನ ಅನುಭವಗಳನ್ನು ತನ್ನದೇ ಆದ ಭಾಷೆಯಲ್ಲಿ ತೋಡಿಕೊಳ್ಳಲು ಸಾಧ್ಯವಾಯಿತು.

ದಲಿತ ಚಳುವಳಿ ಮತ್ತು ಬಂಡಾಯ ಚಳುವಳಿ ಎಂಬ ಎರಡೂ ಚಳುವಳಿಗೆ ಸಮಾನವಾದ ಲಕ್ಷಣವೆಂದರೆ ಬಂಡಾಯ ಅಥವಾ ಪ್ರತಿಭಟನೆ. ಆದರೆ ಹಾಗೆ ಬಂಡಾಯವೇಳುವ ದಲಿತರು ಬರೆದ ಸಾಹಿತ್ಯವನ್ನು ದಲಿತ ಸಾಹಿತ್ಯ ಎಂದೂ, ಒಟ್ಟಾರೆಯಾಗಿ ಪ್ರತಿಭಟನೆಯ ಅಥವಾ ಬಂಡಾಯದ ಮನೋಧರ್ಮವನ್ನೇ ವಿಶಿಷ್ಟ ರೀತಿಯಲ್ಲಿ ಅಭಿವ್ಯಕ್ತ ಪಡಿಸುವ ದಲಿತೇತರ ವರ್ಗದವರು ಬರೆದ ಸಾಹಿತ್ಯವನ್ನು ಬಂಡಾಯ ಸಾಹಿತ್ಯವೆಂದು ಕರೆಯುವುದು ಅಗತ್ಯವೆಂದು ಕೆಲವು ವಿಮರ್ಶಕರು ಗುರುತಿಸುತ್ತಾರೆ. ಬಂಡಾಯವನ್ನೇ ಒಂದು ಕೇಂದ್ರ ಕಾಳಜಿಯನ್ನಾಗಿ ಮಾಡಿಕೊಂಡು ಬರೆಯುವ ಸಾಹಿತ್ಯವನ್ನು ಬಂಡಾಯ ಸಾಹಿತ್ಯ ಎಂಬ ವಿಶಾಲಾರ್ಥದಲ್ಲಿ ಕರೆಯಬಹುದೆನ್ನುವ ಬಗ್ಗೆ ಯಾವುದೇ ಭಿನ್ನಾಭಿಪ್ರಾಯವಿಲ್ಲ.

ದಲಿತ - ಬಂಡಾಯ ಕಥಾಸಾಹಿತ್ಯ :

ಬೆಸಗರಹಳ್ಳಿ ರಾಮಣ್ಣ, ಬೊಳುವಾರು ಮಹಮದ್ ಕುಂಞ, ಬರಗೂರು ರಾಮಚಂದ್ರಪ್ಪ, ಕಾಳೇಗೌಡ ನಾಗವಾರ, ಕುಂ. ವೀರಭದ್ರಪ್ಪ, ಚನ್ನಣ್ಣ ವಾಲೀಕಾರ, ಮೊಗಳ್ಳಿ ಗಣೇಶ್, ಸಾರಾ ಅಬೂಬ್ಕರ್.

ಭಾನುಮಸ್ತಾಕ್, ಬಿ. ಟಿ. ಲಲಿತಾನಾಯಕ್, ಬಿ. ಟಿ. ಜಾಹ್ನವಿ, ಗೀತಾನಾಗಭೂಷಣ್, ಹೀಗೆ ಅನೇಕರು ದಲಿತರ ಬದುಕಿನ ಸಂಸ್ಕೃತಿಯ ವಿವರಗಳು, ಮಾನವೀಯತೆಯನ್ನು ತಮ್ಮ ಕಥೆಗಳಲ್ಲಿ ಪ್ರಕಟಿಸಿದ್ದಾರೆ.

ದಲಿತ ಮತ್ತು ಬಂಡಾಯ ಕಥಾಸಾಹಿತ್ಯ ವೈವಿಧ್ಯಮಯ ಸಂಸ್ಕೃತಿಯನ್ನು ವಿರೋಧಿಸುವ ಅಂಶವನ್ನು ಬಿಂಬಿಸಿವೆ. ಕಥೆಗಾರರು ತಮ್ಮ ಉಪಭಾಷೆಯನ್ನೇ ಬಳಸಿದ್ದಾರೆ. ಹೀಗಾಗಿ ಕಥೆಗಳು ಸಹಜವಾಗಿ ಮೂಡಿಬಂದಂತೆನಿಸುತ್ತದೆ. "ಬಾಯಿಮಾತು ಲಿಖಿತ ರೂಪದಲ್ಲಿ ತನ್ನ ಪ್ರಜ್ಞೆಯನ್ನು ಹೆಚ್ಚಾಗಿ ವಿಸ್ತರಿಸಿಕೊಂಡಿದ್ದು ಈ ಘಟ್ಟದ ಕಥೆಗಳಲ್ಲಿಯೇ" (ಡಾ|| ಕರೀಗೌಡ ಬೀಚನಹಳ್ಳಿ - ಶತಮಾನದ ಸಣ್ಣಕಥೆಗಳ ಸಮೀಕ್ಷೆ - ಪು : 142)

ಒಟ್ಟಾರೆ ಸಣ್ಣಕಥಾ ಜಗತ್ತಿನಲ್ಲಿ ಅನೇಕ ಮಜಲುಗಳನ್ನು ಗುರುತಿಸುತ್ತೇವೆ. ಅನೇಕ ಹಂತಗಳನ್ನು ದಾಟಿ, ಇಂದಿನ ಕಥಾ ಜಗತ್ತನ್ನು ನಾವು ನೋಡುತ್ತಿದ್ದೇವೆ. ಕಥೆಗಳಲ್ಲಿ ಪುರುಷರು ಚಿತ್ರಿಸಿರುವ ರೀತಿ, ಮಹಿಳೆಯರು ಚಿತ್ರಿಸಿರುವ ರೀತಿ, ವಿಭಿನ್ನವಾದ ಸ್ವರೂಪ ಕಥಾಹಂದರದಲ್ಲಿದೆ. ವಿವಿಧ ರೂಪಗಳನ್ನು ಪಡೆಯುತ್ತಾ ಇಂದಿನ ಕಥೆ, ಒಂದು ಘಟ್ಟಕ್ಕೆ ಬಂದು ನಿಂತಿದೆ.

ನವ್ಯಕಥೆಗಾರ್ತಿಯಾದ ವೈದೇಹಿಯವರ ಕಥೆಗಳು ವಿವಿಧ ನೆಲೆಯಲ್ಲಿ ಚಿತ್ರಿತಗೊಂಡಿದ್ದು, ವಿಭಿನ್ನತೆಯನ್ನು ಹೊಂದಿವೆ. ನವ್ಯಕಾಲದಲ್ಲಿ ಸಂಕೇತಗಳು, ಧ್ವನಿ, ಇವುಗಳನ್ನು ಹೆಚ್ಚು ಕಥೆಗಳಲ್ಲಿ ಬಳಸಿಕೊಂಡು ಕಥೆಯನ್ನು ಮತ್ತಷ್ಟು ಬಿಗಿಗೊಳಿಸುವ ಪ್ರಯತ್ನ ಮತ್ತು ಆಕರ್ಷಣೆಗೊಳಿಸುವಂಥ ಭಾಷೆಯಾಗಿ ರಚನೆ ಮಾಡುವುದರ ಮೂಲಕ ಕಥೆಯನ್ನು ಹೆಣೆಯುವುದನ್ನು ಗಮನಿಸಬಹುದು. ವೈದೇಹಿಯವರು ನವ್ಯಶೈಲಿಯ ಪ್ರಭಾವಕ್ಕೆ ಒಳಗಾಗಿ ಕಥೆಗಳನ್ನು ಬರೆದಿರುವುದನ್ನು ಗುರುತಿಸಬಹುದು. ಗದ್ಯವನ್ನು ಸತ್ವಯುತವಾಗಿ ಅಭಿವ್ಯಕ್ತಿಸುವ ಮನೋಧರ್ಮ ಇವರ ಕಥೆಗಳಲ್ಲಿದೆ. ಇವರ ಕಥೆಗಳಲ್ಲಿ ಸಂಕೇತ -ಧ್ವನಿ ಒಂದು ರೀತಿ ಕಾವ್ಯಾತ್ಮಕ ಮನೋಧರ್ಮ ವ್ಯಕ್ತವಾಗಿದೆ.

ಒಟ್ಟಾರೆ ಸಣ್ಣ ಕಥಾ ಜಗತ್ತಿನ ವಿವಿಧ ಮಾದರಿಗಳನ್ನು ಇಂದಿನ ಕಥೆಗಾರರು ಬಳಸಿ ಕಥಾ ಸಾಹಿತ್ಯವನ್ನು ಬೆಳೆಸುವ ಪ್ರಯತ್ನ ನಡೆಯುತ್ತಿದೆ.

*****

ಅಧ್ಯಾಯ - ೩

ವೈದೇಹಿಯವರ ಬದುಕು - ಪರಿಸರ - ಉಪಭಾಷೆ

ಅಧ್ಯಾಯ - 3

ವೈದೇಹಿಯವರ ಬದುಕು - ಪರಿಸರ - ಉಪಭಾಷೆ

(ವೈದೇಹಿಯವರ ಆತ್ಮಕಥನದಿಂದ)

ವೈದೇಹಿಯವರ ಊರು ಕುಂದಾಪುರ. ಕುಂದಾಪುರ ಇತ್ತ ಹಳ್ಳಿಯೂ ಅಲ್ಲದ, ನಗರವೂ ಅಲ್ಲದ ಒಂದು ಪ್ರದೇಶ. ಇಂತಹ ಒಂದು ಪ್ರದೇಶದಲ್ಲಿ ಹುಟ್ಟಿ ಬೆಳೆದವರು. ಶಿಕ್ಷಣವನ್ನು ಅಲ್ಲಿಯೇ ಪಡೆದದ್ದು. ಹುಟ್ಟಿ ಬೆಳೆದದ್ದು ದೊಡ್ಡ ಸಂಪ್ರದಾಯಸ್ಥರ ಮನೆಯಲ್ಲಿ. ತುಂಬ ಮಕ್ಕಳಿರುವ, ಪ್ರತಿನಿತ್ಯ ಮನೆಗೆ ಬಂದುಹೋಗುವ ಮತ್ತು ಉಳಿದುಕೊಳ್ಳುವವರು ಇರುತ್ತಿದ್ದ ಕುಟುಂಬ.

ವೈದೇಹಿಯವರಿಗೆ ಚಿಕ್ಕಂದಿನಿಂದಲೇ ವಾಲ್ಮೀಕಿ ರಾಮಾಯಣ, ತುಲಸೀ ರಾಮಾಯಣ ಗ್ರಂಥಗಳನ್ನು ಓದುವ ಅವಕಾಶ ದೊರಕಿತ್ತು. ಅವರ ತಂದೆ ವಕೀಲರಾಗಿದ್ದರೂ ಇಂಥ ದೊಡ್ಡ ದೊಡ್ಡ ಪುಸ್ತಕಗಳನ್ನು ಓದುವ ಪರಿಪಾಠವಿತ್ತು. ಹೀಗಾಗಿ ಚಿಕ್ಕವಯಸ್ಸಿನಲ್ಲಿಯೇ ದೋಹೆಗಳು, ಶ್ಲೋಕಗಳು ವೈದೇಹಿಯವರ ಕಿವಿಗೆ ಬೀಳುತ್ತಿದ್ದವು.

ತಾಯಿಯ ವ್ಯಕ್ತಿತ್ವದ ಪ್ರಭಾವ ವೈದೇಹಿಯವರ ಮೇಲೆ ಉಂಟಾಗಿದೆ. "ತಾಯಿಯು ಎಂದಿಗೂ ತಲೆಬಾಗದವಳಾಗಿ, ಅಹಂಕಾರವೆಂಬುದನ್ನು ತನ್ನ ರಕ್ಷಣೆಗಾಗಿ ಬಳಸಿಕೊಂಡವಳು, ಸ್ವತಂತ್ರ ಮನಸ್ಸನ್ನು ಜೀವನದುದ್ದಕ್ಕೂ ಸಾಧಿಸಿ, ಕಾಪಾಡಿಕೊಂಡು ಬಂದ ಅಪ್ಪಟ ವ್ಯಕ್ತಿತ್ವದವಳು" ಎಂದು ವೈದೇಹಿಯವರು ತಾಯಿಯ ಬಗ್ಗೆ ಹೇಳಿಕೊಳ್ಳುತ್ತಾರೆ. "ನಾನಾದರೂ ಇವತ್ತು ಏನು ಬರೆದೆನೋ ಅದೆಲ್ಲವೂ ಅವಳೇ ಬರೆಯಬಹುದಾದ ನೂರರಲ್ಲಿ ಎರಡಂಶ ಅಷ್ಟೇ" ಎಂದು ವೈದೇಹಿಯವರು ಅಭಿಪ್ರಾಯ ಪಡುತ್ತಾರೆ. **(ಸಂ. ನಾಗಮಣಿ ಎಸ್. ರಾವ್ - ಲೇಖ - ಲೋಕ 2 (ಮಹಿಳಾ ಸಾಹಿತ್ಯ : ಒಂದು ಆತ್ಮ ಕಥಾನಕ) - ಪು ಸಂ. - 91)**

ವೈದೇಹಿಯವರ ದೊಡ್ಡ ಅಣ್ಣ ಸಾಹಿತ್ಯ ಓದಿದವರು. ಮುಂದೆ ಸ್ವಲ್ಪ ಕಾಲ ಉಪನ್ಯಾಸಕರೂ ಆಗಿದ್ದರು. ಇಂಗ್ಲೀಷ್ ನಾಟಕದ ಸಾಲುಗಳನ್ನು ಮನೆಯಲ್ಲಿ ಊಟಕ್ಕೆ ಕುಳಿತಾಗ ಸ್ವರದ ಏರಿಳಿತ ಚಲನೆಗಳ ಸಮೇತ ಹೇಳುತ್ತಿದ್ದರು. ಮೂರನೆಯ ಅಣ್ಣ ಬರಹಗಾರ. ಬರವಣಿಗೆಯ ಬಗ್ಗೆ ಸೆಳೆತ ಮೂಡಿದ್ದು ಅಣ್ಣನ ಬರಹಗಳು. ಬರವಣಿಗೆ ದೂರದ ಸ್ವತ್ತು ಎಂದು ಭಾವಿಸಿದ ವೈದೇಹಿಯವರಿಗೆ 'ನಾನೂ ಬರೆದು ನೋಡಬೇಕು' ಎಂದೆನ್ನಿಸಿ, ಅದರಂತೆ ಬರೆದರೂ ಕೂಡ. ವೈದೇಹಿಯವರು ತಮ್ಮ ಬರವಣಿಗೆಯ ಶ್ರೀಕಾರಕ್ಕೆ ಒಂದು ಘಟನೆ ಕಾರಣ ಎಂಬುದನ್ನು ವಿವರಿಸುತ್ತಾರೆ.

"ಒಂದು ದಿನ ನನ್ನ ಎರಡನೆಯ ಅಣ್ಣ ಯಾತಕ್ಕೋ ಗದರಿದ. ಅಷ್ಟಕ್ಕೇ ನನಗೆ ಮರ್ಯಾದೆ ಹೋಯಿತು. ದುಃಖ ಉಮ್ಮಳಿಸಿ ಬಂತು. ಅಪ್ಪಯ್ಯನೊಡನೆ ಹೇಳುವಷ್ಟು ದೊಡ್ಡ ವಿಷಯವಲ್ಲ. ಅಮ್ಮನೊಡನೆ ಹೇಳಿದರೆ ಅವಳಿಗೆ ಕೇಳಲು ಪುರುಸೊತ್ತೇ ಇರುವುದಿಲ್ಲ. ಇದ್ದರೂ ಅವಳು ಅಣ್ಣನ ಪಾರ್ಟಿಯನ್ನೇ ವಹಿಸಿಯಾಳು. ದುಃಖ ಎಲ್ಲಿಡಲಿ, ಹಾಗಾದರೆ ? ಹುಡುಗಿ ಸೀದಾ ಉಪ್ಪರಿಗೆಗೆ ನಡೆದಳು. ಅಳುತ್ತ ಅಳುತ್ತ ಬರೆದೇ ಬರೆದಳು. ಏನು ಬರೆದಳು ಎಂದರೆ ನ್ಯಾಯವೆಂಬುದು ಯಾವುದು, ಹಾಗಾದರೆ

ಎಂದು ಕೇಳುವಂತೆ ತನ್ನದೇ ಕನ್ನಡದಲ್ಲಿ ಬರೆದಳೆಂದು ನೆನಪು"- ಈ ರೀತಿ ತಮ್ಮ ಬರವಣಿಗೆ ಲೋಕದೊಳಗೆ ಬರಲು ಕಾರಣವಾದ ಘಟನೆಯನ್ನು ನೆನಪಿಸಿಕೊಳ್ಳುತ್ತಾರೆ.

ಮದುವೆಯಾಗಿ, ಎರಡು ಮಕ್ಕಳ ತಾಯಿಯಾದ ಮೇಲೆ ಅವರ ಬರವಣಿಗೆ ಗಂಭೀರವಾಯಿತು. ವೈದೇಹಿಯವರ ಪತಿ ಸಾಹಿತ್ಯ, ಸಂಗೀತ, ನಾಟಕ, ಸಭೆ, ಸಮಾರಂಭಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ಇದರಿಂದ ವೈದೇಹಿಯವರ ಲೇಖನ ಕಲೆಗೆ ಒಂದು ಹೊಸಲೋಕದ ಅನುಭವ ದೊರೆಯಿತು.

ವೈದೇಹಿಯವರು ಶಿವಮೊಗ್ಗದಲ್ಲಿ ಸ್ವಲ್ಪ ಕಾಲ ನೆಲೆಸಿ, ಬರವಣಿಗೆಯನ್ನು ಮಾಡಿದ್ದಾರೆ. ಅವರ ಮಾತಿನಲ್ಲಿಯೇ ಹೇಳುವುದಾದರೆ, "ನನ್ನನ್ನು ಸಂಪೂರ್ಣವಾಗಿ ಲೌಕಿಕ ಬದುಕಿನಾಚೆಯದಕ್ಕೆ ಪರಿಚಯಿಸಿದ ಊರಲ್ಲವೇ ಅದು" **(ಸಂ. ನಾಗಮಣಿ ಎಸ್. ರಾವ್, ಲೇಖ - ಲೋಕ - 2 ಮಹಿಳಾ ಸಾಹಿತ್ಯ; ಒಂದು ಆತ್ಮಕಥಾನಕ, ಪು ಸಂ. 103)**

ಯಾವುದೇ ಒಬ್ಬ ಲೇಖಕಿ ಅಥವಾ ಲೇಖಕ ಒಂದಲ್ಲ ಒಂದು ರೀತಿ ಅನೇಕ ರೀತಿಯ ಪ್ರಭಾವಗಳಿಗೆ ಒಳಗಾಗಿರುತ್ತಾರೆ. ಪರಿಸರ, ಆ ಕಾಲದ ತತ್ವಗಳು, ಭಾಷಣಗಳು, ನಾಟಕಗಳು, ಸಿನಿಮಾಗಳು, ಹೀಗೆ ಅನೇಕ ರೀತಿಯಲ್ಲಿ ಒಬ್ಬ ಸಾಹಿತಿ ಪ್ರಭಾವಕ್ಕೊಳಗಾಗಬಹುದು.

ಆ ಕಾಲದಲ್ಲಿ ಸಣ್ಣಕಥೆಗೆ ಹೆಸರುವಾಸಿಯಾದ ಅನಂತಮೂರ್ತಿ, ಲಂಕೇಶ್‌ರವರ ಕಥೆಗಳು ಸಾಕಷ್ಟು ವೈದೇಹಿ ಅವರ ಮೇಲೆ ಪ್ರಭಾವ ಬೀರಿತು. ನವ್ಯ ಶೈಲಿಯ ಕಥೆಗಳು ಅವರ ಮೇಲೆ ಪ್ರಭಾವ ಬೀರಿ, ಕಥೆಗಳ ರಚನೆಗೆ ಉತ್ತೇಜನ ಕೊಟ್ಟಿತು. ಬರವಣಿಗೆ, ಓದು ಇವು ಒಂದು ರೀತಿ ಅವರ ಕಥೆಗಳ ರಚನೆಗೆ ಇಂಬು ನೀಡಿದರೆ, ಮತ್ತೊಂದು ಅವರ ಸುತ್ತಮುತ್ತಲಿನ ಪರಿಸರ ಅವರ ಬರವಣಿಗೆಗೆ ಸ್ಫೂರ್ತಿ ನೀಡಿತು. ಮನೆಯೊಳಗಿನ ಘಟನೆಗಳು, ಕುಟುಂಬದ ಇತರ ಹೆಂಗಸರೊಂದಿಗಿನ ನಿಕಟ ಸಂಪರ್ಕ ಅವರ ದುಃಖ, ಕಷ್ಟ, ಕ್ರೌರ್ಯ ಪರಸ್ಪರ ಹಿಂಸೆಗಳ ನೇರ ಹಾಗೂ ಮರೆಯ ಅನುಭವ ಅವರ ಬರವಣಿಗೆಯಲ್ಲಿ ತಂದರು. "ನಮ್ಮ ಮನೆಯ ಒಳ ಅಂಗಳ ಎಂದರೆ ಅಮ್ಮನ ಸಾಮ್ರಾಜ್ಯ, ಕಥಾನಕಗಳ ಆಗರವದು, ಎಷ್ಟು ಜನ ಬರುತ್ತಿದ್ದರು, ಸುಖ ದುಃಖ ಕಥನ, ಹಾಡು, ಹಸೆ ಅದೊಂದು ಮನುಷ್ಯ ಲೋಕದ ದೊಡ್ಡ ದರ್ಶನ ಎಂತಲೇ ಬರೆಯುವ ಹೊರಟ ನನಗೆ ಸಣ್ಣಕಥೆಯೇ ಒಂದು ಸಾಧನವಾಗಿ ಸಿಕ್ಕಿತೇನೋ ಎಂದು ವೈದೇಹಿ ಯವರು ತಮ್ಮ ಕಥೆಗಳಿಗೆ ವಸ್ತು ದೊರಕಿದ ಬಗ್ಗೆ ಹೇಳಿಕೊಳ್ಳುತ್ತಾರೆ **(ವಿಜಯ ಕರ್ನಾಟಕ, 10-3-2003, ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ - ಸಂ. ಡಾ|| ಎಚ್. ಎಸ್. ಶ್ರೀಮತಿ - 1975 ರ ನಂತರದ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ - ಕಥಾ ಸಾಹಿತ್ಯ ಲೇ. : ಕೆ. ಆರ್. ಸಂಧ್ಯಾರೆಡ್ಡಿ)**

ನೀನಾಸಂ ಪರಿಸರದ ಪ್ರಭಾವ ವೈದೇಹಿಯವರ ಬರವಣಿಗೆಯಲ್ಲಿ ಉಂಟಾದರೂ ತಮ್ಮ ಕುಂದಾಪುರದ ಕನ್ನಡ, ಊರು, ಸ್ಫೂರ್ತಿ, ಪ್ರೇರಣೆ ಎಂಬುದಾಗಿ ತಿಳಿಸುತ್ತಾರೆ. ಅದರ ಪರಿಸರದಲ್ಲಿ ಕಂಡುಬಂದಂತಹ ಘಟನೆಗಳನ್ನು ತಮ್ಮ ಕಥೆಗಳಿಗೆ ವಸ್ತುವನ್ನಾಗಿ ಬಳಸಿಕೊಂಡು ತಮ್ಮದೇ ಆದ ವಿಭಿನ್ನ ಶೈಲಿಯಲ್ಲಿ ಕುಂದಾಪುರದ ಕನ್ನಡದ ಉಪಭಾಷೆಯಲ್ಲಿ ಅಭಿವ್ಯಕ್ತಿ ನಡೆಸಿದ್ದಾರೆ.

ಉಪಭಾಷೆ :

ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಮನುಷ್ಯ ಭಾಷೆಯನ್ನು ಬಳಸಿಕೊಂಡಿದ್ದಾನೆ. ಭಾಷೆಗೂ

ಮೊದಲು ಸಂಕೇತಗಳ ಮೂಲಕ ತನ್ನ ಭಾವನೆಗಳನ್ನು ಅಭಿವ್ಯಕ್ತಿ ಪಡಿಸುತ್ತಿದ್ದ ಕ್ರಮೇಣ ಲಿಪಿಯನ್ನು ಕಂಡುಕೊಂಡ.

ಭಾಷೆ ಎಂದರೇನು ? ಎಂಬುದನ್ನು ಸೂತ್ರಬದ್ಧವಾಗಿ ಹೇಳುವುದು, ಕಷ್ಟವಾದರೂ ಅಂತಹ ಕೆಲವು ಪ್ರಯತ್ನಗಳು ನಡೆದಿವೆ. ಭಾಷಾ ವಿಜ್ಞಾನಿಗಳ ಪ್ರಕಾರ ಭಾಷೆ ಎಂದರೆ ಆಡುವ ಮಾತು. ಮನುಷ್ಯ ತನ್ನ ಮನೋಗತವಾದ ಭಾವಗಳನ್ನೂ, ಅಭಿಪ್ರಾಯಗಳನ್ನೂ ಅನ್ಯರಿಗೆ ತಿಳಿಸಲು ಮಾಡಿಕೊಂಡಿರುವ ಸಂಕೇತಗಳ ಒಂದು ವ್ಯವಸ್ಥೆಯೇ ಭಾಷೆ.

ಯಾವುದೇ ಬಗೆಯ ಪ್ರಾದೇಶಿಕ ಸೊಗಡು ತುಂಬಿದ ಭಾಷೆ ಕಿವಿಗೆ ಬಿದ್ದರೆ ಸಾಕು, ಇವನು ಎಲ್ಲಿಯವನು, ಕನ್ನಡನಾಡಿನ ಯಾವ ಭಾಗದವನು ಎಂಬುದು ನಾವು ಗ್ರಹಿಸಬಹುದು. ಇದರಿಂದಾಗಿ ಒಬ್ಬ ವ್ಯಕ್ತಿ ತಾನಿರುವ ಪ್ರದೇಶದ ಹಾಗೂ ಸಾಮಾಜಿಕ ಪರಿಸರದ ಪ್ರತಿನಿಧಿಯಾಗಿರುತ್ತಾನೆ. ಇವುಗಳಲ್ಲದೇ ವ್ಯಕ್ತಿಯ ಮಾತು, ತಾನು ಪಡೆದ ಜ್ಞಾನ, ನಡಾವಳಿ ಹಾಗೂ ಸಂಸ್ಕೃತಿಯನ್ನು ಆಧರಿಸಿಯೂ ರೂಪುಗೊಂಡಿರುತ್ತದೆ. ಹೀಗೆ ವ್ಯಕ್ತಿಯು ಗಳಿಸಿದಂಥ ಭಾಷೆಯನ್ನು 'ವ್ಯಕ್ತಿಭಾಷೆ' (Idiolect) ಎನ್ನುವರು. ಸಾಮಾನ್ಯ ಲಕ್ಷಣವನ್ನು ಹೊಂದಿರುವ ಇಂತಹ ವೃತ್ತಿ ಭಾಷೆಗಳ ಮೊತ್ತವನ್ನು 'ಉಪಭಾಷೆ' (dialect) ಎನ್ನುವರು. ಆದ್ದರಿಂದಲೇ ಈ 'ವ್ಯಕ್ತಿಭಾಷೆ' ಯಲ್ಲಿ ಪರಿಸರದ ಏಕರೂಪತೆಯಷ್ಟೇ ಅಲ್ಲದೆ, ಅಲ್ಲಿನ ಜನತೆಯ ಪರಸ್ಪರ ಅರಿವೂ (Mutual Intelligibility) ಇರುತ್ತದೆ. ಈ ಅರಿವಿರುವ ಒಂದೇ ಭಾಷೆಯನ್ನಾಡುವ ವ್ಯಕ್ತಿಗಳ ಸಂಪರ್ಕ ಅಥವಾ ಸಂಸರ್ಗ ಸದಾ ಇರಬೇಕು. ಅದು ವಿರಳವಾದಲ್ಲಿ ಭಾಷೆಯಲ್ಲಿ ಭಿನ್ನತೆ ಅಥವಾ ಸಂಸರ್ಗ ಸದಾ ಇರಬೇಕು. ಅದು ವಿರಳವಾದಲ್ಲಿ ಭಾಷೆಯಲ್ಲಿ ಭಿನ್ನತೆ ಅಥವಾ ಗುರುತಿಸಬಹುದಾದಷ್ಟು ಮಟ್ಟಿನ ಬದಲಾವಣೆ ಕಂಡುಬರುತ್ತದೆ. ಈ ಬಗೆಯ ಭಾಷಾ ಬದಲಾವಣೆಗಳನ್ನೂ 'ಉಪಭಾಷೆ' ಗಳು ಎಂದು ಕರೆಯುತ್ತಾರೆ.

ಒಂದು ಭಾಷಾ ಪ್ರದೇಶದಲ್ಲಿ ಆ ಭಾಷೆಯ ಅನೇಕ ಪ್ರಭೇದಗಳಿರುವುದನ್ನು ಗಮನಿಸಬಹುದು. ಒಂದು ಭಾಷಾ ಜನಾಂಗದಲ್ಲಿನ ಭಾಷೆಗೂ ಮತ್ತೊಂದು ಪ್ರದೇಶದಲ್ಲಿನ ಭಾಷೆಗೂ ವ್ಯತ್ಯಾಸವಿರುತ್ತದೆ.

* ಮೂಲತಃ ಭಾಷೆ ಎನ್ನುವುದು ಸಂಪರ್ಕದಿಂದ, ಸಂಸರ್ಗದಿಂದ ಹುಟ್ಟುತ್ತದೆ ಮತ್ತು ಬೆಳೆಯುತ್ತದಷ್ಟೆ. ಆದರೆ ಪರಸ್ಪರ ಸಂಪರ್ಕ ಕಡಿಮೆಯಾದಂತೆಲ್ಲಾ ಭಾಷಾ ವೈಶಿಷ್ಟ್ಯ ಹೆಚ್ಚುತ್ತಾ ಹೋಗುತ್ತದೆ. ಇದು ಪ್ರಾದೇಶಿಕ ಉಪಭಾಷೆಗಳೇರ್ಪಡಲು ಮುಖ್ಯ ಕಾರಣ. ಒಂದು ಭಾಷೆಯನ್ನಾಡುವ ಜನರಿರುವ ದೇಶ ವಿಶಾಲವಾಗಿದ್ದರೆ, ಒಂದು ಮೂಲೆಯವರು ಮತ್ತೊಂದು ಮೂಲೆಯವರನ್ನು ಭೇಟಿಯಾಗುವುದು ವಿರಳ. ಹಿಂದಿನ ಕಾಲದಲ್ಲಿ ರಸ್ತೆ ವ್ಯವಸ್ಥೆ ಮತ್ತು ಸಂಪರ್ಕ ಸಾಧನಗಳು ಅಷ್ಟಕ್ಕಷ್ಟೇ ಇದ್ದವು. ಹೆಣ್ಣು ಕೊಟ್ಟು ತರುವ ಮೂಲಕ ಸಂಬಂಧ ಬೆಳೆಸುವುದು ಆ ಊರಿಗೇ ಸೀಮಿತವಾಗಿರುತ್ತಿತ್ತು. ಕಾರಣ ಸರಿಯಾದ ಪ್ರಯಾಣ ಸೌಕರ್ಯಗಳಿರಲಿಲ್ಲವಾದ್ದರಿಂದ. ಹೀಗಿದ್ದುದರಿಂದ ಸಂಸರ್ಗ ವಿರಳಗೊಂಡು ದೇಶ ಭಾಷೆ ಒಂದೇ ಇದ್ದರೂ ಪ್ರಾದೇಶಿಕ ವೈಶಿಷ್ಟ್ಯಗಳನ್ನು ರೂಢಿಸಿಕೊಂಡ ಪ್ರಾದೇಶಿಕ ಉಪಭಾಷೆಗಳು ರೂಪುಗೊಳ್ಳುತ್ತಿದ್ದವು.

ಉಪಭಾಷೆಗೆ ಭೌಗೋಳಿಕ ಪರಿಸರವೂ ಕಾರಣವಾಗುತ್ತದೆ. ಒಂದು ಭಾಷೆಯನ್ನಾಡುವ ನಾಡಿ

ಒಳಪ್ರದೇಶದಲ್ಲಿ ನದಿ ಅಥವಾ ಬೆಟ್ಟ ಅಡ್ಡವಿದ್ದರೆ, ಸೇತುವೆಗಳಾಗಲಿ ಅಥವಾ ಇತರ ಯಾವ ಸಂಪರ್ಕ ಸೌಲಭ್ಯಗಳಾಗಲಿ ಅಷ್ಟಾಗಿ ಇಲ್ಲದಿದ್ದರೆ ಸಂಪರ್ಕ ಕಡಿಮೆಯಾಗಿ ಆ ಎರಡೂ ಕಡೆಯ ಜನರು ಭಾಷಿಕ ವೈಶಿಷ್ಟ್ಯಗಳನ್ನು ಮೆರೆಯುವುದುಂಟು. ಅವುಗಳೇ ಉಪಭಾಷೆಗೆ ಕಾರಣವಾಗುತ್ತವೆ.

ರಾಜ್ಯವನ್ನು ವಿಭಜಿಸುವ ಮೂಲಕ ಉಪಭಾಷಾ ನಿರ್ಮಿತಿಗೆ ರಾಜಕೀಯವೂ ಕಾರಣವಾಗುತ್ತದೆ. ಒಂದು ಭಾಷೆಯನ್ನಾಡುವ ಜನರನ್ನು ರಾಜಕೀಯ ಕಾರಣಗಳಿಂದಾಗಿ ಬೇರ್ಪಡಿಸಿ, ಬೇರೆ ಭಾಷೆ, ಬೇರೆ ಸಂಸ್ಕೃತಿಯ ಜನರಿರುವ ಪ್ರದೇಶಗಳಿಗೆ ಸೇರಿಸಿದರೆ, ಹಾಗೆ ಸೇರ್ಪಡೆಯಾದ ತಮ್ಮ ಕೋರ್ಟು, ಕಛೇರಿ, ವ್ಯಾಪಾರ, ವ್ಯವಹಾರಗಳಲ್ಲಿ ಅಲ್ಲಿನ ವ್ಯಾವಹಾರಿಕ ಭಾಷೆಯ ಪ್ರಭಾವಕ್ಕೆ ಒಳಗಾಗಿ ಕೆಲವು ವೈಶಿಷ್ಟ್ಯಗಳನ್ನು ಬೆಳೆಸಿಕೊಳ್ಳುವುದುಂಟು. ಆ ವೈಶಿಷ್ಟ್ಯಗಳೇ ಕಾಲಗತಿಯಲ್ಲಿ ಉಪಭಾಷೆಗಳಾಗಿ ಪರಿಣಮಿಸುತ್ತವೆ.

ಒಂದು ರಾಜ್ಯಭಾಷಾ ಪ್ರದೇಶದ ಗಡಿಪ್ರದೇಶಗಳಲ್ಲಿ ಜನರಾಡುವ ಭಾಷೆಯ ಮೇಲೆ, ಅವರ ಸಮೀಪಗತ, ಅನ್ಯ ಪ್ರಾಂತ್ಯದ ಅನ್ಯಭಾಷಿಗರ ಪ್ರಭಾವ ಆಗುವುದುಂಟು. ಅವರ ಹಲವಾರು ಪದಗಳು, ಪದಪುಂಜಗಳು, ನುಡಿಗಟ್ಟುಗಳು, ಗಾದೆ, ಒಗಟುಗಳು, ಇವರ ಆಡುನುಡಿಯಲ್ಲಿ ಹಾಸುಹೊಕ್ಕಾಗಿ ಬೆರೆತು ಉಪಭಾಷೆಗೆ ಕಾರಣವಾಗಬಹುದು. ಉದಾ :- ಕೋಲಾರ ಜಿಲ್ಲೆ ಹಾಗೂ ಬಳ್ಳಾರಿ ಜಿಲ್ಲೆಯ ಗಡಿಭಾಗದವರು ಆಂಧ್ರದ ತೆಲುಗು ಪ್ರಭಾವಕ್ಕೂ ಒಳಗಾಗಿ ತಾವಾಡುವ ಕನ್ನಡದಲ್ಲಿ ಹೊಸತನ ತಂದರು. ಇದು ಸಹಜವಾಗಿ ಉಪಭಾಷೆಯಾಗಿ ರೂಪುಗೊಳ್ಳಲು ಕಾರಣವಾಯಿತು.

ಸೂಕ್ಷ್ಮವಾಗಿ ಗಮನಿಸಿದರೆ, ಒಂದೇ ಊರಿನ ಬೀದಿಬೀದಿಗೆ, ಕೇರಿಕೇರಿಗೆ ಅಷ್ಟಲ್ಲದೆ, ಒಂದೇ ಮನೆಯಲ್ಲಿರುವ ಕೆಲಸದವರು ಆಡುವ ಭಾಷೆಗೂ ವ್ಯತ್ಯಾಸ ಕಾಣಬಹುದು. ಇವೂ ಕೂಡ ಉಪಭಾಷೆಗಳೆನಿಸಬಹುದು.

ಉಪಭಾಷೆಯ ಆಡುನುಡಿಯ ಆಧಾರದ ಮೇಲೆ ಗುರುತಿಸಿಕೊಳ್ಳುವಂಥವುಗಳು. ಆದ್ದರಿಂದ ಗ್ರಂಥಸ್ಥ ಭಾಷೆಗಳಂತೆ, ಇವುಗಳಲ್ಲಿ ಏಕರೂಪತೆ ಕಾಣಲು ಸಾಧ್ಯವಾಗುವುದಿಲ್ಲ. ಉಪಭಾಷೆಗಳಲ್ಲಿ 2 ಬಗೆಗಳಿವೆ.

1) **ಪ್ರಾದೇಶಿಕ ಉಪಭಾಷೆಗಳು (Regional Dialects)**

2) **ಸಾಮಾಜಿಕ ಉಪಭಾಷೆಗಳು (Social Dialects)**

ಒಂದು ನಾಡಿನ ಬೇರೆ ಬೇರೆ ಪ್ರದೇಶದಲ್ಲಿನ ಜನ ತಮ್ಮ ತಮ್ಮ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಸಹಜವಾಗಿ ರೂಪಿಸಿಕೊಂಡು ನುಡಿಯುತ್ತಿರುತ್ತಾರೆ. ಕನ್ನಡ ಭಾಷೆಯ ಸಂದರ್ಭ ಕುರಿತು ಹೇಳುವುದಾದರೆ ಕನ್ನಡಿಗರು ಆಡುವುದು ಕನ್ನಡವೇ ಆಗಿದ್ದರೂ, ಧಾಟಿ ಧೋರಣೆಗಳಲ್ಲಿ ನುಡಿಭೇದ ಇದ್ದೇ ಇರುತ್ತದೆ. ಇಂತಹ ವಿಶಿಷ್ಟಾಭಿವ್ಯಕ್ತಿಯನ್ನು 'ಪ್ರಾದೇಶಿಕ ಉಪಭಾಷೆ' ಎಂದು ಕರೆಯುತ್ತಾರೆ.

ಸಾಮಾಜಿಕ ಭಾಷಾ ಪ್ರಭೇದಕ್ಕೆ ಜನಾಂಗ ಕಾರಣವಾಗುತ್ತದೆ. ಒಂದೊಂದು ಜಾತಿ ಮತ ಪಂಥದವರಿಗೂ ಆಚಾರ ವಿಚಾರ, ಮಡಿ ಮೈಲಿಗೆ, ಪೂಜೆ, ಬಲಿ ಮೊದಲಾದ ಧಾರ್ಮಿಕ ಪ್ರಕ್ರಿಯೆಗಳಿದ್ದಂತೆ, ಸಾಮಾಜಿಕವಾಗಿ ರಾಜ್ಯಭಾಷೆಯಾದ ಕನ್ನಡದಲ್ಲೂ ಅನೇಕ ವೈವಿಧ್ಯತೆ ಇದೆ. ಇದರಿಂದಾಗಿ ವ್ಯಾವಹಾರಿಕ

ಭಾಷೆಯಾಗಿ ಬಳಸಿಕೊಂಡ ಅವರಾಡುವ ಕನ್ನಡದಲ್ಲಿ ಏಕರೂಪತೆ ಇರುವುದು ಸಾಧ್ಯವಿಲ್ಲ. ಹಲವು ರೀತಿಯಲ್ಲಿ ತಮ್ಮ ವೈಶಿಷ್ಟ್ಯವನ್ನು ಮೆರೆದು ಸಮಗ್ರ ಕನ್ನಡ ನುಡಿಗೆ ಆಯಾಮವನ್ನು ಒದಗಿಸಿರುವುದು ಉಂಟು. ಅಂತಹವುಗಳಲ್ಲಿ ಬಿಳಿಗಿರಿ ರಂಗನಬೆಟ್ಟದ ಸೋಲಿಗರ ಕನ್ನಡ, ಹೆಗ್ಗಡದೇವನಕೋಟೆಯ ಜೇನುಕುರುಬರ ಕನ್ನಡ, ಉತ್ತರಕನ್ನಡ ಜಿಲ್ಲೆಯ ಹವ್ಯಕರ ಕನ್ನಡ ಮೊದಲಾದವು ಕನ್ನಡದ ಹಲವು ಬಗೆಯ ಸಾಮಾಜಿಕ ಉಪಭಾಷೆಗಳು.

ಪ್ರಾದೇಶಿಕ ಉಪಭಾಷೆಗಳನ್ನು, ಭಾಷಾ ವಿಜ್ಞಾನಿಗಳು ಪ್ರಧಾನವಾಗಿ ನಾಲ್ಕು ಉಪಭಾಷೆಗಳನ್ನು ಗುರುತಿಸಿದ್ದಾರೆ.

1) **ಗುಲ್ಬರ್ಗಾ ಕನ್ನಡ / ಕಲ್ಯಾಣ ಕನ್ನಡ**

2) **ಧಾರವಾಡ / ಕಿತ್ತೂರು ಕನ್ನಡ**

3) **ಮಂಗಳೂರು / ಕರಾವಳಿ ಕನ್ನಡ**

4) **ಮೈಸೂರು ಕನ್ನಡ**

ಮಂಗಳೂರು / ಕರಾವಳಿ ಕನ್ನಡ, ತುಳು, ಕೊಂಕಣಿ, ಹವ್ಯಕ ಹಾಗೂ ಮಲಯಾಳಂ ಭಾಷೆಗಳ ಪರಿಸರದಲ್ಲಿರುವ ಕನ್ನಡ. ಇಲ್ಲಿನ ಬಹುತೇಕ ಜನರ ಮಾತೃಭಾಷೆ ಕನ್ನಡವಲ್ಲ. ಆದರೂ ಎಲ್ಲರಿಗೂ ಕನ್ನಡ ಬರುತ್ತದೆ. ತುಳು ಕೊಂಕಣಿ ಅಲ್ಲಿನ ಪ್ರಾದೇಶಿಕ ಭಾಷೆಗಳಾದ್ದರಿಂದ ಅಲ್ಲಿನ ಕನ್ನಡದ ಮೇಲೆ ಅವುಗಳ ಪ್ರಭಾವ ವಿಪುಲ.

1) **ಉದಾ. : "ಎಂಥದು ಮಾರಾಯ್ರೇ ನಿನ್ನೆಯಿಂದ ಪಿರಿಪಿರಿ ಮಳೆ ?"**

2) **'ಇ' ಕಾರ 'ಉ' ಕಾರ ಸ್ವರಗಳು, 'ಎ' ಕಾರ ಹಾಗೂ 'ಒ' ಕಾರಗಳಾಗಿ ಬಳಕೆಗೊಳ್ಳುತ್ತದೆ.**

ಇಲಿ - ಎಲಿ

ಬಿಳಿ - ಬೆಳಿ

ತುಳಿ - ತೊಳಿ

ಸುರಿ - ಸೊರಿ

ಕುದಿ - ಕೊದಿ

ಕುಣಿ - ಕೊಣಿ

ಇತ್ಯಾದಿ.

ಮಂಗಳೂರು ಕನ್ನಡದಲ್ಲಿ ಅನುನಾಸಿಕೀಕರಣ ಹೆಚ್ಚು ಕಂಡುಬರುತ್ತದೆ. ಸಾಮಾನ್ಯವಾಗಿ ಅನೇಕ ಶಬ್ದಗಳನ್ನು ಅನುನಾಸಿಕ ರೂಪದಲ್ಲಿ ಉಚ್ಚರಿಸುತ್ತಾರೆ.

1) ಉದಾ :

ಅಕ್ಕ - ಅಕ್ಕ̃

ಅಜ್ಜ - ಅಜ್ಜ̃ ~ ~

ನಾಯಿ - ನಾಯೆನ್

ಇತ್ಯಾದಿ

2) 'ಅ' ಕಾರ > 'ಎ' ಕಾರವಾಗುತ್ತದೆ.

ಉದಾ :

ನಗು - ನೆಗು

ಗಂಟಲು - ಗೆಂಟಲು

3) 'ಆ' ಕಾರ > 'ಏ' ಕಾರವಾಗುತ್ತದೆ.

ಉದಾ :

ಆಡು - ಏಡು

ಆಮೆ - ಏಮೆ

4) ಬಹುವಚನ ಸಂದರ್ಭದಲ್ಲಿ 'ಹವ್ಯಕ ಕನ್ನಡ' ದ 'ಅಕ್ಕೊ' 'ಅಗೊ' ಪ್ರತ್ಯಯಗಳು ಸೇರುತ್ತದೆ.

ಅಬ್ಬೆಕ್ಕೊ (ತಾಯಂದಿರು), ತಂಗೆಕ್ಕೊ (ತಂಗಿಯರು), ಬಟ್ಟಕ್ಕೊ (ಭಟ್ಟರು), ಮರಂಗೊ (ಮರಗಳು), ಕಣ್ಣಿಗೊ (ಕಣ್ಣುಗಳು) ಇತ್ಯಾದಿ.

ಮಂಗಳೂರಿನ ವ್ಯವಹಾರದ ಕನ್ನಡದಲ್ಲಿ ಕೆಲವು ವಿಶಿಷ್ಟ ಪ್ರಯೋಗಗಳು ಉಂಟು :

ಕೊಡದುಲೆ (ಕೊಡುವುದಿಲ್ಲ), ಕೊಡಕುಲೆ (ಕೊಡಲಿಕ್ಕಿಲ್ಲ), ತಿನ್ನಡ (ತಿನ್ನಬೇಡಿ), ಮಾಡ್ಕು (ಮಾಡಬೇಕು), ಹೋಕು (ಹೋಗಬೇಕು), ಕೂಡಿನಿ (ಕುಡಿಯಿರಿ)

ಈ ಭಾಷೆಯನ್ನು ಆಡುಮಾತುಗಳಲ್ಲಿ ಕರ್ತೃ, ಕರ್ಮ, ಕ್ರಿಯೆಗಳನ್ನುಳ್ಳ ವ್ಯಾಕರಣಬದ್ಧ, ಗ್ರಂಥಸ್ಥ ಭಾಷಾಸ್ವರೂಪ ಇದೆ. ಒಂದೊಂದು ವೇಳೆ ಇದು ಕೃತಕವೊ ಎನ್ನುವಂತೆ ಭಾಸವಾಗುವುದುಂಟು. ಹೊಸದಾಗಿ ಕಲಿತವರು ಮಾತನಾಡುವ ರೀತಿಯಲ್ಲಿರುತ್ತದೆ. ಅಲ್ಲಿನ ಸಾಮಾಜಿಕ ಪ್ರಭೇದಗಳು ಆದರಿಂದಾಗಿ ಹವ್ಯಕ ಕನ್ನಡ, ಬಂಟ್ ಕನ್ನಡ, ಗೌಡ ಕನ್ನಡ, ಕೊಂಕಣಿ ಕನ್ನಡ, ಶಿವಳ್ಳಿ ಕನ್ನಡ, ಲಬ್ಬೆ ಮುಸ್ಲಿಂ ಕನ್ನಡ ಮೊದಲಾಗಿ ರೂಪುಗೊಂಡಿವೆ. ಹೀಗೆ ಮಂಗಳೂರು ಕನ್ನಡ ಹಲವು ಪ್ರಭೇದಗಳ ಮಿಶ್ರಣ.

(* ಡಾ|| ಸಾ. ಶಿ. ಮರುಳಯ್ಯ, ಡಾ|| ರಾಜೇಶ್ವರಿ ಮಹೇಶ್ವರಯ್ಯ, ಡಾ|| ಸಬಿಹಾ ಭೂಮಿಗೌಡ - ಕನ್ನಡ ಭಾಷಾ ಪ್ರವೇಶ)

ಮಂಗಳೂರಿನ ಉಪಭಾಷೆಯಾದ ಕುಂದಾಪುರದ ಕನ್ನಡ, ಮಲಯಾಳಂ, ಕೊಂಕಣಿ, ಮರಾಠಿ ಭಾಷೆಗಳಿಂದ ವಿಶೇಷವಾಗಿ ಪ್ರಭಾವಿತಗೊಂಡಿದೆ. ಈ ಎಲ್ಲ ಭಾಷೆಗಳ ಪ್ರಭಾವವಿದ್ದಾಗ್ಯೂ ತನ್ನ ಅಸ್ತಿತ್ವವನ್ನು ಕುಂದಾಪುರದ ಕನ್ನಡ ಉಳಿಸಿಕೊಂಡಿದೆ. ವೈದೇಹಿಯವರು ತಮ್ಮ ಕಥೆಗಳಿಗೆ ಕುಂದಾಪುರದ ಕನ್ನಡವನ್ನು ಬಳಸಿ ವೈಶಿಷ್ಟ್ಯತೆಯನ್ನು ಮೆರೆದಿದ್ದಾರೆ.

ಆಧುನಿಕ ಕನ್ನಡ ಕಥಾ ಸಾಹಿತ್ಯದಲ್ಲಿ ಕೆಲವು ಕಥೆಗಾರರು ತಮ್ಮ ಉಪಭಾಷೆಗಳನ್ನು ಬಳಸಿದ್ದಾರೆ.

ಶ್ಯಾಮಲಾದೇವಿ ಬೆಳಗಾಂವಕರ್, ಚಂದ್ರಶೇಖರ ಕಂಬಾರ, ದೇವನೂರು ಮಹಾದೇವ, ಸುಶೀಲಾ ಕೊಪ್ಪರ್ ಹೀಗೆ ಮೊದಲಾದವರು ತಮ್ಮ ಬರವಣಿಗೆಯಲ್ಲಿ ತಮ್ಮ ಪ್ರದೇಶದ ಉಪಭಾಷೆಗಳನ್ನು ಬಳಸಿದ್ದಾರೆ. ಆದರೆ ಉಪಭಾಷೆಯನ್ನು ಕಥೆಯಲ್ಲಿ ಬಳಸಿ ಬರೆದ ಲೇಖಕಿಯರಲ್ಲಿ ವೈದೇಹಿಯವರು ಅಗ್ರಪಂಕ್ತಿಯಲ್ಲಿ ನಿಲ್ಲುತ್ತಾರೆ. 'ಕಾದಂಬರಿ' ರಚನೆಯಲ್ಲಿ ಪ್ರಾದೇಶಿಕ ಉಪಭಾಷೆಯನ್ನು ಸಮರ್ಥವಾಗಿ ಬಳಸಿದವರಲ್ಲಿ ಅತ್ಯಂತ ಪ್ರಮುಖರು 'ನಿಸರ್ಗ' ಕಾದಂಬರಿಕಾರ ಮಿರ್ಜಿ ಅಣ್ಣಾರಾಯರು.

ವೈದೇಹಿಯವರು ತಮ್ಮ ಕಥೆಗಳ ಅಭಿವ್ಯಕ್ತಿಗೆ ಬಳಸಿರುವ ಭಾಷೆ ಉಪಭಾಷೆ; ಕುಂದಾಪುರದ ಕನ್ನಡ. ಈ ಉಪಭಾಷೆಯಲ್ಲಿಯೇ ಬರುವ ವ್ಯಂಗ್ಯ, ಹಾಸ್ಯ, ಬೈಗುಳ, ದ್ವಂದ್ವ ವಿಶಿಷ್ಟವಾದ ರೀತಿಯಲ್ಲಿ ಬೆರೆತುಹೋಗಿರುತ್ತದೆ.

ವೈದೇಹಿಯವರು ಬಳಸಿರುವ ಉಪಭಾಷೆಯ ವಿಶೇಷಕ್ಕಾಗಿ ಕೆಲವನ್ನು ಸಂಗ್ರಹ ಮಾಡಿ ಕೊಡಲಾಗಿದೆ.

ತಳಿಕಂಡಿ, ಪಾಸಾಣ, ಗೊರಜು, ಚಣಿಲು, ಲಾಗಾಯ್ತು, ನಾರಟೆ, ಕವುಳುತಿಪ್ಪಿ, ಬಡ್ಡು, ನಬಿ, ಬಿಕುಷ, ಚಿಣಿಲಿ, ಪಡ್ಚ, ಲಾಗಾಯ್ತು, ಸೋಂಟೆ, ಪಡಾವ್, ಬರ್ಕತ್ತು, ಪುಕಳಿ, ಹಡಬೆಟ್ಟಿ.

"ಆ ತಮ್ಮಣ್ಣಯ್ಯನ್ ಹೆಂಡ್ತಿ ಕಾಯ್ಸ್ಲ್ ಕಾಣ್, ಓಡು, ಓಡ್ ಬೇಗ. ಮರ್ಯಾದೆ ಸತ್ತವ್ನೇ, ಈಗ ಹೊಡೀ ಬಾ..... ಕಾಂಬ".

"..... ಈ ಪಿರ್ಕಿ ಮಾತ್ ಕೇಂಡ್ಕಂಡ್ ಅವನ್ನ ಕೊಚ್ಚುಕ್ ಹೋದ್ರೆ ನಾವೇ ಕೆಪ್ಪೆಗ್ ತಿಂದ್ ಬರ್‍ಲಕ್".

"ಕೇಳು ಬಚ್ಚ್ಯಾ, ಇತ್ತಾ ? ಉಂಡ ಇಲ್ಯಾ ? ಉಪಾಸ ಮನ್ಕಂಡ. ಉಂಡ್ಯಾ ಇಲ್ಯಾ ಅಂತಳಿ ಪ್ರಪಂಚ ಹೊಟ್ಟೆಯೊಳ್ಗೆ ಕೈಹಾಕಿ ಕಾಂತಾ ?"

"ಹೆಂಗ್ಸೇ, ಇಲ್ಯಾ ಕೇಣ್, ಕೊಡ್ತೋ ನೀ ಕದೀಬೇಡ ಕಾಣ್"

"ಇನ್ನು ಬೇಯಗು, ಕುದಿಯಗು ಏನಾದರೂ ವಿಶೇಷ ಮಾಡಗಾ ?"

"ಕಾಣ್‌ತೆ ಮಾರಾಯ್ತೀ ಕಾಣ್ತೆ. ಉಂಚ ಬಾಯಿ ಮುಚ್ಚು, ಕರಕರ ಕೇಂಡ್‌ದ್ ಕೇಂಡ್‌ದ್ ನನ್ನ ಕೆಮಿ ಎಲ್ಲ ಒಟ್ಟೆ ಬಿತ್ತ್"

"ಅಲ್ದನ ಮತ್ತೆ, ಬೇಕೆಂದ್ ಕೂಡ್ಲೆ ನನ್ ನೆನ್ಸ್, ಮಳಿಗಾಲಕ್ ಹೋಯಕಾಂತ್ಯಾ ?"

"ಬಿಡ್ಬೇಡ, ನಂಬ್ರಮಾಡ್, ನಿಂಗೇ ಗುಣ ಆತ್ತ್ ಕಾಣ್"

"ಪೆಟ್ಟಿಗೆ ಕಟ್ಟುಗೆ ಉಂಚ ತಡ ಉಂಟೆಯ, ಅಲ್ಲಿ ಭಾರೀ ರಸ್ ಅಂಬ್ರಲ್ದ ?".

* * * * *

ಅಧ್ಯಾಯ - ೪

ವೈದೇಹಿಯವರ ಸಣ್ಣ ಕಥೆಗಳು

ಅಧ್ಯಾಯ - 4

ವೈದೇಹಿಯವರ ಸಣ್ಣಕಥೆಗಳು

ನವ್ಯಕಾಲದಲ್ಲಿ ಕಂಡುಬರುವ ಪ್ರಮುಖ ಲೇಖಕಿಯರಲ್ಲಿ ವೈದೇಹಿಯವರು ಒಬ್ಬರು. ನವ್ಯಶೈಲಿಯಲ್ಲಿ ಕಥೆಗಳನ್ನು ಬರೆದು ನವ್ಯತೆಯನ್ನು ತಮ್ಮ ಕಥೆಗಳಲ್ಲಿ ತಂದವರು ವೈದೇಹಿಯವರು. ತಂತ್ರ, ಕಥನ ಕ್ರಮ, ಬಳಸುವ ಭಾಷೆ, ಅಭಿವ್ಯಕ್ತಿಯ ರೀತಿ ಎಲ್ಲವೂ ನವ್ಯವೇ. ಅವರೇ ಹೇಳಿರುವಂತೆ ನವ್ಯ ಲೇಖಕರ ಪ್ರಭಾವವು ಅವರ ಕಥೆಗಳ ಮೇಲಾಗಿದೆ.

ವೀಣಾ ಶಾಂತೇಶ್ವರರವರ ನಂತರ ಮಹಿಳಾ ಸಣ್ಣಕತೆಗೆ ತಿರುವು ದೊರೆತದ್ದು ವೈದೇಹಿಯವರಿಂದ. "ಇವರ ನಿಲುವನ್ನು 'ದೇಶೀ' ನಿಲುವು ಎನ್ನಬಹುದು. **(ಜಿ. ಎಸ್. ಆಮೂರ, ಕನ್ನಡ ಕಥನ ಸಾಹಿತ್ಯ : ಸಣ್ಣಕಥೆ - ಮಹಿಳೆ ಮತ್ತು ಸಣ್ಣಕಥೆ - ಪು ಸಂ. 347)** ಕುಟುಂಬದ ಸಂಬಂಧಗಳು ಮತ್ತು ಮಾನವೀಯ ಸ್ವಭಾವಗಳನ್ನು ವೈದೇಹಿಯವರ ಕಥೆಗಳು ಅತ್ಯಂತ ಸಹಜವಾದ ಸ್ಥಿತಿಯಲ್ಲಿ, ದೇಸೀಯ ನೆಲೆಯಲ್ಲಿ ಹಿಡಿದಿಡುತ್ತವೆ".

ನವ್ಯಕಾಲದ ತಾತ್ವಿಕತೆಯು ವ್ಯಕ್ತಿ ಕೇಂದ್ರಿತವಾದ ಹಾಗೆ ವೈದೇಹಿಯವರ ಕಥೆಗಳ ಪ್ರಮುಖ ಕಾಳಜಿಗಳು ವ್ಯಕ್ತಿ ಕೇಂದ್ರಿತವೇ. ಕೆಳವರ್ಗದ ಮತ್ತು ಮಧ್ಯಮವರ್ಗದ ಸ್ತ್ರೀಯರು ಇವರ ಕಥೆಗಳಲ್ಲಿ ಬರುವ ನಾಯಕಿಯರು ಅಥವಾ ಪ್ರಧಾನ ಪಾತ್ರಗಳು. ಇವರ ಕಥಾಪ್ರಪಂಚದಲ್ಲಿ ಬದುಕನ್ನು ಎದುರಿಸುವ ದಿಟ್ಟ ಹೆಂಗಸರು, ಶೋಷಣೆಗೊಳಗಾದ ಹೆಂಗಸರು, ಕಷ್ಟವನ್ನು ನುಂಗಿಕೊಂಡವರು ಹೀಗೆ ವೈವಿಧ್ಯಮಯವಾದ ಸ್ತ್ರೀ ಜಗತ್ತನ್ನು ತೆರೆದು ತೋರುತ್ತಾರೆ.

"ವಸಾಹತೋತ್ತರ ಕಾಲದ ಬ್ರಾಹ್ಮಣ ಸಮಾಜದ ಬಿಕ್ಕಟ್ಟುಗಳು : ಅವುಗಳ ಸಂಕೀರ್ಣತೆ : ಅವುಗಳ ಕೌಟುಂಬಿಕ ತಲ್ಲಣಗಳ ರೂಪಗಳೇ ವೈದೇಹಿಯವರ ಕಥನದ ಮೂಲ ಜೀವಾಳಗಳಾಗಿವೆ". **(ಸಂ. ಉಷಾ ಪಿ. ರೈ ಲೇಖಕಿ - ಡಾ|| ಕೆ. ಕೇಶವಶರ್ಮ - ಕನ್ನಡ ಮಹಿಳಾ ಸಾಹಿತ್ಯದ ಹೆಜ್ಜೆ ಗುರುತುಗಳು - ಕರ್ನಾಟಕ ಲೇಖಕಿಯರ ಸಂಘ - ಪುಟ - 141)** ವ್ಯಕ್ತಿ ಕೇಂದ್ರಿತ ನೆಲೆಯಲ್ಲಿ ಕಥೆಗಳು ರೂಪಿತಗೊಂಡಿವೆ. ಆದುದರಿಂದ 'ಒಬ್ಬಳು ಹೆಣ್ಣು', 'ಒಂದು ನಿರ್ದಿಷ್ಟ ಕಾಲ', 'ಒಂದು ನಿರ್ದಿಷ್ಟ ಪರಿಸರ' ವು ಮುಖ್ಯವಾಗಿ ಇದರ ಕಥೆಗಳಲ್ಲಿ ಎದ್ದು ಕಾಣುತ್ತದೆ.

ವೈದೇಹಿಯವರ ಕಥೆಗಳಲ್ಲಿ ಒಂದು ವರ್ಗದ ಹೆಣ್ಣಿನ ಚಿತ್ರಣಗಳೇ ಹೆಚ್ಚಾಗಿ ಕಂಡುಬರುತ್ತವೆ. ಪ್ರತಿಯೊಂದು ಹೆಣ್ಣಿನ ಅಂತರಂಗದ ಪುಟಗಳನ್ನು ವೈದೇಹಿಯವರು ತೆರೆದಿಡುತ್ತಾರೆ. ಸ್ತ್ರೀಯ ಬದುಕನ್ನು ಚಿತ್ರಿಸುವಾಗ ಸಾಂಕೇತಿಕ, ಪ್ರತಿಮಾತ್ಮಕ ಹಾಗೂ ಭ್ರಮಾತ್ಮಕ ಮಾರ್ಗಗಳನ್ನು ಅಳವಡಿಸಿಕೊಳ್ಳುತ್ತಾರೆ. ಸ್ತ್ರೀವಾದವನ್ನು ಅವರ ಕಥೆಗಳಲ್ಲಿ ಗುರುತಿಸಿದರೂ, ಕಥೆಯೊಂದಿಗೆ ಮೇಳೈಸಿಕೊಂಡು ಬಂದಿರುತ್ತದೆಯೇ ಹೊರತು ಬುದ್ಧಿಪೂರ್ವಕವಾಗಿ ಅದನ್ನು ವೈದೇಹಿಯವರು ಹೇಳಹೊರಟವರಲ್ಲ.

ವೈದೇಹಿಯವರಲ್ಲಿ ತಮ್ಮ ಪರಿಸರದ ಸಾಂಸ್ಕೃತಿಕ ಹಾಗೂ ಚಾರಿತ್ರಿಕ ಸ್ವರೂಪದ ಅರಿವಿನಿಂದ ಬರೆದ ಕಥೆಗಳಾಗಿವೆ. ಕುಂದಾಪುರದ ಪರಿಸರ; ಉಡುಪಿ ಪರಿಸರದ ಮಾಧ್ಯಮ ಹಾಗೂ ಕೆಳವರ್ಗದ ಬದುಕು, ಸಂಸ್ಕೃತಿಗಳನ್ನು ತನ್ನದೇ ಆದ ರೀತಿಯಲ್ಲಿ ವೈದೇಹಿಯವರ ಕಥೆಗಳು ಪ್ರತಿಬಿಂಬಿಸುತ್ತವೆ. ವೈದೇಹಿಯವರು

ಗೀತಾನಾಗಭೂಷಣ ಮತ್ತು ನಾಗವೇಣಿಯರಂತೆ ಕೆಳವರ್ಗದ ಬದುಕಿನ ಸಾಂಸ್ಕೃತಿಕ ವಿವರಗಳನ್ನು ಪ್ರಜ್ಞಾಪೂರ್ವಕವಾಗಿ ದಾಖಲಿಸ ಹೊರಟವರಲ್ಲ. ಇವರ ಹೆಚ್ಚಿನ ಕಥೆಗಳ ವಸ್ತು ಮತ್ತು ಈ ವರ್ಗಗಳಿಗೆ ಸಂಬಂಧಿಸಿರುವುದರಿಂದ ಸಾಂಸ್ಕೃತಿಕ ವಿವರಗಳು ಪ್ರಾಸಂಗಿಕವಾಗಿ ಇಲ್ಲಿ ದಾಖಲಾಗಿವೆ.

ಇವರ ಕಥೆಗಳಲ್ಲಿ ಸ್ವಾತಂತ್ರ್ಯಾ ಅನಂತರದ ಕಾಲಘಟ್ಟದಲ್ಲಿ ಕುಟುಂಬದ ಛಿದ್ರೀಕರಣ ಮತ್ತು ಅವುಗಳಲ್ಲಿ ಸಿಕ್ಕಿ ನಲುಗುವ ಹೆಂಗಸರು ಎದ್ದು ಕಾಣುವ ಅಂಶಗಳಾಗಿವೆ. ಇವರ ಕಥೆಗಳಲ್ಲಿ ಬರುವ ಪ್ರಮುಖ ಪಾತ್ರಗಳು ಹೆಚ್ಚಾಗಿ ಸ್ತ್ರೀಯರೇ ಆಗಿರುತ್ತಾರೆ. ಸ್ತ್ರೀನೆಲೆಯಲ್ಲಿ ವೈಚಾರಿಕ ಅಂಶಗಳು ಬಿಚ್ಚಿಕೊಳ್ಳುತ್ತಾ ಹೋಗುತ್ತವೆ.

ವೈದೇಹಿಯವರ ಬಹುತೇಕ ಕಥೆಗಳು ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುತ್ತವೆ. ಅಲ್ಲಿನ ಪರಿಸರದಲ್ಲಿ ಬರುವ ಹೆಂಗಸರ ದುಡಿತ, ಅವರ ಶೋಷಣೆ, ಯಾತನಾಮಯವಾದ ಬದುಕು ಹೀಗೆ ಬದುಕಿನ ವಿವಿಧ ಸ್ತರಗಳನ್ನು ತಮ್ಮ ಕಥೆಗಳಲ್ಲಿ ಚಿತ್ರಿಸುತ್ತಾರೆ. ಸ್ತ್ರೀಪರವಾದ ದೃಷ್ಟಿಕೋನವು ಇವರ ಕಥೆಗಳಲ್ಲಿ ಕಂಡುಬರುವ ಧನಾತ್ಮಕ ಅಂಶವಾಗಿದೆ.

ವೈದೇಹಿಯವರ ಕಥೆಗಳಲ್ಲಿ ತಿರುವು, ಕೌತುಕಗಳಲ್ಲಿ ಕಥೆಕಟ್ಟುವ ಕಡೆಗೆ ಆಸಕ್ತಿಯಿಲ್ಲ; ಚಪಲವಿಲ್ಲ. ನಿತ್ಯ ಬದುಕಿನ ಜಂಜಾಟ, ಬದುಕಿನ ತೊಡಕುಗಳ ಅವಸ್ಥೆಗಳನ್ನು ಸೆರೆಹಿಡಿಯುತ್ತಾರೆ. ಸ್ತ್ರೀ ಅನುಭವವನ್ನು ಹಾಗೂ ಸಮಸ್ಯೆಗಳನ್ನು ಅಥವಾ ತೊಡಕುಗಳನ್ನು ಎದುರಿಸುವ ದಿಟ್ಟತನವನ್ನು ವೈದೇಹಿಯವರು ತಮ್ಮ ಬರವಣಿಗೆಯಲ್ಲಿ ಕಾಣಿಸುತ್ತಾರೆ.

ವೈದೇಹಿಯವರ ಕಥೆಗಳಲ್ಲಿ ಗಮನಿಸಬಹುದಾದ ಮುಖ್ಯ ಅಂಶ, ಇವರ ಕಥೆಯ ಅಭಿವ್ಯಕ್ತಿಗೆ ಬಳಸಿರುವ ಉಪಭಾಷೆ. ವೈದೇಹಿಯವರು ಕುಂದಾಪುರದ ಪರಿಸರದಲ್ಲಿ ಕೇಳಿಬರುವ ಕನ್ನಡ ಉಪಭಾಷೆಯನ್ನು ತಮ್ಮ ಕಥೆಗಳ ಅಭಿವ್ಯಕ್ತಿಗೆ ಬಳಸಿಕೊಂಡಿದ್ದಾರೆ. ಇದರಿಂದಾಗಿ ಇವರ ಕಥೆಗಳು ವೈಶಿಷ್ಟ್ಯತೆಯನ್ನು ಪಡೆಯುತ್ತವೆ. ಇಡೀ ಕಥಾಭಾಗ ಕುಂದಾಪುರದ ಕನ್ನಡ ಭಾಷೆಯಲ್ಲಿ ವ್ಯಕ್ತಗೊಳ್ಳದೆ ಹೋದರೂ ಆ ಕಥೆಯಲ್ಲಿ ಬರುವ ಪಾತ್ರಗಳು ಮಾತನಾಡುವಾಗ ಕುಂದಾಪುರ ಕನ್ನಡ ಉಪಭಾಷೆಯಲ್ಲಿ ಸಂಭಾಷಿಸಿರುತ್ತಾರೆ. ಇದರಿಂದಾಗಿ ಕಥೆಗಳಿಗೆ ಪ್ರಾದೇಶಿಕತೆಯ ಆಕರ್ಷಣೀಯತೆ ಒದಗಿದೆ. ಸಂಕೇತ, ಧ್ವನಿ ತಮ್ಮ ಕಥೆಗಳಲ್ಲಿ ತಂದಿದ್ದಾರೆ ವೈದೇಹಿಯವರು. ಇವರ ಕಥೆಗಳಲ್ಲಿ ಕಾವ್ಯಾತ್ಮಕವಾದ ಭಾಷೆಯನ್ನು ಗುರುತಿಸಬಹುದು. ಭಾಷೆಯ ಮೇಲಿನ ಹಿಡಿತ, ತೀಕ್ಷ್ಣ, ಕಲಾಪ್ರಜ್ಞೆ ಕಥೆಗಳಿಗೆ ಹೊಸ ಆಯಾಮವನ್ನು ಕೊಟ್ಟಿದೆ.

ಮುಖ್ಯವಾಗಿ ವೈದೇಹಿಯವರ ಸಣ್ಣಕಥೆಗಳನ್ನು ಸಾಂಸ್ಕೃತಿಕ, ಸಾಮಾಜಿಕ ಹಾಗೂ ಕೌಟುಂಬಿಕ ನೆಲೆಯಲ್ಲಿ ಸ್ತ್ರೀಸಂವೇದನೆ ವ್ಯಕ್ತಗೊಂಡಿರುವ ಬಗೆಯನ್ನು ಅವಲೋಕಿಸ ಬಹುದು. ಸ್ತ್ರೀ ತನ್ನ ಅಸ್ತಿತ್ವನ್ನು ಪಡೆಯಲು ನಡೆಸುವ ಹೋರಾಟ, ಕೌಟುಂಬಿಕ ವಲಯದಲ್ಲಿ ನಡೆಸುವ ಸಂಘರ್ಷ, ಅವಳ ಅಂತರಂಗದ ಪುಟಗಳನ್ನು ತೆರೆದು ನೋಡುವ ಪ್ರಯತ್ನ - ಹೀಗೆ ವಿವಿಧ ದೃಷ್ಟಿಕೋನಗಳಿಂದ ವೈದೇಹಿಯವರ ಕಥೆಗಳನ್ನು ಗಮನಿಸಬಹುದು.

* * * * *

ಅಧ್ಯಾಯ - ೫

ಸಾಮಾಜಿಕ ನೆಲೆಯಲ್ಲಿ ಸ್ತ್ರೀಯ ಚಿತ್ರಣ

ಅಧ್ಯಾಯ - 5

ಸಾಮಾಜಿಕ ನೆಲೆಯಲ್ಲಿ ಸ್ತ್ರೀಯ ಚಿತ್ರಣ

ಸಮಾಜ :

ಮನುಷ್ಯ ಸಮಾಜ ಜೀವಿ. ಸಮಾಜವಿಲ್ಲದೆ ಒಂಟಿಯಾಗಿ ಜೀವಿಸುವುದಿಲ್ಲ. ಮನುಷ್ಯ ಸಮಾಜದ ಭಾಗವಷ್ಟೇ ಅಲ್ಲ, ಸಮಾಜವೂ ಕೂಡ ನಮ್ಮ ಜೀವಿತ ಒಂದು ಭಾಗ. ವ್ಯಕ್ತಿ ಮತ್ತು ಸಮಾಜ ಅವಿಭಾಜನೀಯ. ಪೀಟರ್ ಬರ್ಜರ್ ಹೇಳುವಂತೆ "ಸಮಾಜವು ನಮ್ಮ ಹುಟ್ಟಿಗೂ ಪೂರ್ವದಲ್ಲಿದ್ದು, ನಮ್ಮ ಸಾವಿನ ನಂತರವೂ ಮುಂದುವರೆಯಲಿದೆ....."

'ಸಮಾಜ' ಎಂಬ ಕನ್ನಡ ಪದಕ್ಕೆ ಇಂಗ್ಲಿಷ್ ಸರಿಸಮಾನ ಅರ್ಥದ ಪದವಾದ ಸೊಸೈಟಿ (Society) ಎಂಬುದು 'ಸೋಶಿಯಸ್' (Socius) ಎಂಬ ಲ್ಯಾಟಿನ್ ವ್ಯುತ್ಪತ್ತಿ ಹೊಂದಿದೆ. 'ಸೋಶಿಯಸ್' ಎಂದರೆ ಒಡನಾಡಿತನ ಎಂದರ್ಥ. 'ಸಮಾಜ' ಎಂಬ ಮೂಲ ಕಲ್ಪನೆಯ ಬಗ್ಗೆ ಸಮಾಜಶಾಸ್ತ್ರಜ್ಞರಲ್ಲಿ ಪೂರ್ಣ ಒಮ್ಮತವಿಲ್ಲ. ಅದನ್ನು ಹಲವರು ಹಲವು ಬಗೆಗಳಲ್ಲಿ ವ್ಯಾಖ್ಯಾನಿಸಿದ್ದಾರೆ.

ಮೆಕ್ಕೈವರ್ ಮತ್ತು ಪೇಜ್ - 'ಸಮಾಜವೆಂಬುದು ಸಾಮಾಜಿಕ ಸಂಬಂಧಗಳ ಒಂದು ಬಲೆ'.

ಐಯಾನ್ ರಾಬರ್ಟ್‌ಸನ್ - ಒಂದು ಸಾಮಾನ್ಯ ಸಂಸ್ಕೃತಿಯಲ್ಲಿ ಸಹಭಾಗಿಗಳಾಗಿ ಒಂದು ಭೂಭಾಗವನ್ನು ಹಂಚಿಕೊಂಡು ವಾಸಿಸುತ್ತಾ ಪರಸ್ಪರ ಒಡನಾಟದಲ್ಲಿರುವ ಜನಸಮೂಹವನ್ನು 'ಸಮಾಜ' ಎನ್ನಬಹುದು.

ಸಮಾಜವು ಸಮೂಹಗಳ ಸಮೂಹ. ಅಸಂಖ್ಯಾತ ಸಮೂಹಗಳನ್ನೊಳಗೊಂಡ ಬೃಹತ್ ಸಮೂಹದಂತೆ ಕಾಣುವ ಸಮಾಜವನ್ನು ಎಚ್. ಎಮ್. ಜಾನ್ಸನ್ "ಸಮೂಹಗಳ ಸಮೂಹ" ಎಂದು ಕರೆದಿದ್ದಾರೆ. ಜನರ ಹೊರತಾಗಿ ಸಮಾಜವಿರಲಾರದು. ಸಮಾಜವು ಒಂದು ವ್ಯವಸ್ಥೆ, ಅದರಲ್ಲಿ ಹಲವಾರು ಸಂಘಗಳು ಹಾಗೂ ಸಮೂಹಗಳೂ ಇರುತ್ತವೆ.

ನಮ್ಮ ಜೀವನವನ್ನು ಸಹ್ಯವಾಗುವಂತೆ ಸುಗಮವಾಗಿ ಮಾಡುವುದೇ ಸಮಾಜ. ಒಬ್ಬ ವ್ಯಕ್ತಿಯ ದೃಷ್ಟಿಯಲ್ಲಿ ಹೇಳುವುದಾದರೆ, ಸಮಾಜವು ಅವನ ಹುಟ್ಟುವಿಕೆಗಿಂತಲೂ ಮುಂಚಿನದು. ಸಮಾಜವೆಂಬ ವಿಶಾಲವ್ಯವಸ್ಥೆ ನಮ್ಮ ಜೀವನವನ್ನು ಸಂಪೂರ್ಣವಾಗಿ ಆವರಿಸಿ ನಿಂತಿದೆ. ನಮ್ಮ ಮತ್ತು ಸಮಾಜದ ನಡುವಿನ ಸಂಬಂಧವು ಸರಳವಾದುದಲ್ಲ. ನಮ್ಮ ಸಾಮಾಜಿಕ ಸ್ವರೂಪವು ಒಂದು ದೃಷ್ಟಿಯಲ್ಲಿ ನಮ್ಮನ್ನು ಸಮಾಜದ "ಬಂದಿ" ಗಳನ್ನಾಗಿ ಮಾಡಿದೆ. ಸಮಾಜವು ನಮ್ಮ ಚಲನ-ವಲನಗಳನ್ನು ನಿಯಂತ್ರಿಸುವುದು, ನಮ್ಮ ಅನನ್ಯತೆಯನ್ನು, ಚಿಂತನೆ ಮತ್ತು ಭಾವನೆಗಳನ್ನು ರೂಪಿಸುವುದು. ನಮ್ಮ ಸಾಮಾಜಿಕ ಬದುಕನ್ನು ಸಾಧ್ಯವಾಗಿಸಿರುವುದೇ ಸಮಾಜ.

ಸಮುದಾಯವು ಸಾಮಾಜಿಕ ಜೀವನವನ್ನು ಒಳಗೊಂಡಿರುವ ಒಂದು ವಿಶಾಲ ವ್ಯವಸ್ಥೆ. ಜನಾಂಗೀಯ

ಸಮುದಾಯ, ಧಾರ್ಮಿಕ ಸಮುದಾಯ, ಸ್ತ್ರೀ ಸಮುದಾಯ, ಭಾಷಾ ಸಮುದಾಯ.... ಮುಂತಾದ ಬಗೆಬಗೆಯ ಮಾನವ ಸಮೂಹಗಳು ಸಮಾಜದಲ್ಲಿ ಕಂಡುಬರುತ್ತದೆ.

ವೈದೇಹಿಯವರ ಕಥೆಗಳು ಸ್ತ್ರೀ ಸಮುದಾಯದ ನೆಲೆಯಲ್ಲಿ ವೈವಿಧ್ಯ ಪಾತ್ರಗಳೊಂದಿಗೆ ಚಿತ್ರಿತಗೊಂಡಿವೆ.

ಒಂದು ಕಳ್ಳ ವೃತ್ತಾಂತ :

ಈ ಕಥೆಯನ್ನು "ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ" ಎಂಬ ಕಥಾಸಂಕಲನದಿಂದ ಆರಿಸಿಕೊಳ್ಳಲಾಗಿದೆ.

ತಾಯಿ ಒಂದು ಸಂಸಾರಕ್ಕೆ ಆಧಾರ. ಗಂಡ, ಮನೆ, ಮಕ್ಕಳು ಎಲ್ಲವನ್ನೂ ಸರಿದೂಗಿಸಿಕೊಂಡು ಹೋಗಬೇಕು. ತಾಯಿಯಾಗಿ, ಆ ಸ್ಥಾನದ ಜವಾಬ್ದಾರಿ ಅರಿತುಕೊಂಡು ನಡೆಯುವುದು ಸುಲಭದ ಮಾತಲ್ಲ. ಅದರಲ್ಲೂ ಬಡತನದ ಸಂಸಾರವನ್ನು ತಾಯಿಯಾದವಳು ನಿಭಾಯಿಸಿಕೊಂಡು ಹೋಗುವುದು ಆಕೆಗೆ ಸವಾಲು ಇದ್ದಹಾಗೆ. ಬಡತನದ ಸಂಸಾರ, ಮಕ್ಕಳ ಆಸೆಗಳನ್ನು ಈಡೇರಿಸಲು ಬಚ್ಚಮ್ಮ ಮಾಡುತ್ತಿದ್ದ ಕಳ್ಳತನದ ವೃತ್ತಾಂತವೇ "ಒಂದು ಕಳ್ಳ ವೃತ್ತಾಂತ" ದ ಕಥೆ.

ಪತಿಯನ್ನು ಬಿಟ್ಟುಬಂದ ಕುಸುಮ, ಅಸಹಾಯಕತೆ, ಕಟ್ಟುಪಾಡುಗಳನ್ನು ಮೀರಿದ ಸಂಕೋಚ, ಅಪರಾಧಿ ಪ್ರಜ್ಞೆ ಅವಳಲ್ಲಿ ಕಾಡಿದ್ದು ಉಂಟು. ಕಳ್ಳತನ ಮಾಡಿ, ಸಂಸಾರದ ಹೊಟ್ಟೆ ತುಂಬಿಸುತ್ತಿದ್ದ ಬಚ್ಚಮ್ಮಳಲ್ಲಿ ಯಾವುದೇ ಪಾಪಪ್ರಜ್ಞೆ ಕಾಡುವುದಿಲ್ಲ. ಗಂಡನಾದವನು ತನ್ನ ಸಂಸಾರದ ಬಗ್ಗೆ ಕಾಳಜಿ ವಹಿಸದೆ ಇದ್ದಾಗ, ತಾಯಿಯಾಗಿ ಆಕೆಯೇ ಸಂಸಾರದ ಕಡೆ ಗಮನ ಕೊಡಬೇಕಾಗುತ್ತದೆ. ಮಕ್ಕಳ ಆಸೆಯನ್ನು ಈಡೇರಿಸಬೇಕಾಗುತ್ತದೆ.

ಬಚ್ಚಮ್ಮನೇನೂ ಹುಟ್ಟುತ್ತಾ ಕದಿಯುವ ಅಭ್ಯಾಸ ಹೊಂದಿದವಳಲ್ಲ. ಆದರೆ ಬಹಳ ಕಷ್ಟದಿಂದ ಅವಳ ಅಪ್ಪ ಅಮ್ಮ ಅವನ್ನು ದೊಡ್ಡವಳನ್ನಾಗಿ ಮಾಡಿದರು. ಉಳ್ಳವರ ಮನೆಯಲ್ಲಿ ಊಟ ಮತ್ತು ತಿಂಡಿಗಾಗಿ ಕಾಯುತ್ತಾ ಕುಳಿತುಕೊಳ್ಳಬೇಕಾಗಿತ್ತು. ಬಡತನದಲ್ಲಿ ಬೆಳೆದ ಬಚ್ಚಮ್ಮಳಿಗೆ ತಾನು ಮದುವೆಯಾಗಿ ಹೋಗುವ ಬದುಕಿನಲ್ಲಿ ಬೇಕಾದ ಹಾಗೆ 'ಉಂಡುಟ್ಟು ತಿರುಗುವೆ' ಎಂಬ ಆಸೆ ತೊಟ್ಟಿದ್ದಳು. ಅವಳ ಹೆತ್ತವರಿಗೂ ತಮಗಿಂತ ಮೇಲಿನ ಒಂದು ಮನೆಗೆ ಅವಳನ್ನು ಸೇರಿಸಬೇಕೆಂಬ ಆಸೆಯಿತ್ತು.

ಬಚ್ಚಮ್ಮಳ ಗಂಡ ವಾಚಣ್ಣ, ಒಂದು ದಿನಸಿ ಅಂಗಡಿಯಲ್ಲಿ ಕೆಲಸಕ್ಕೆ ಸೇರಿದ್ದನು. ಆದಾಯಕ್ಕೇನೂ ಕೊರತೆಯಿಲ್ಲ ಎಂದು ತಿಳಿದು, ಬಚ್ಚಮ್ಮನ ಹೆತ್ತವರು ವಾಚಣ್ಣನೊಂದಿಗೆ ಮದುವೆ ಮಾಡಿಸಿದ್ದರು. ಆದರೆ, ಚೆನ್ನಾಗಿ ಬಾಳಬೇಕು ಎಂದು ಆಸೆಪಟ್ಟ ಅವಳಿಗೆ ಅಲ್ಲಿ ಸಿಕ್ಕಿದ್ದೂ ಬಡತನವೇ. "ತಿನ್ನುವ ಪ್ರಾಯದಲ್ಲಿ ತಿನ್ನಬೇಕು. ಹೇರಳವಲ್ಲವಾದರೂ, ಎಲ್ಲಾದರೊಮ್ಮೆ ಒಂದು ಚೂರು ಬಂಗಾರ ಅಂತ ಮಾಡಿಸಬೇಕು" ಎಂಬುದು ಅವಳ ಆದರ್ಶ. ಪ್ರಾಣಿಗಳ ಹಾಗೆ ಬದುಕುವುದನ್ನು ಬಚ್ಚಮ್ಮ ನಿರಾಕರಿಸುತ್ತಾಳೆ.

ಗಂಡ ವಾಚಣ್ಣನನ್ನು ಊರಿನವರು ಸತ್ಯಹರಿಶ್ಚಂದ್ರನೆಂದೇ ಕರೆಯುತ್ತಿದ್ದರು. ವಾಚಣ್ಣ ಕೈ ಶುದ್ಧಿ ಇದ್ದವನು. ಗಂಡನೊಡನೆ "ಬೇಕಾದರೆ ಚಿನ್ನದಲ್ಲಿ ಮಾಡಿದ್ದು ಅಂತ ಇರುವ ಒಂದೇ ಒಂದು ವಸ್ತುವಾದ ಕರಿಮಣಿಯನ್ನು ಕೊಡುತ್ತೇನೆ, ಅದನ್ನು ಮಾರಿ ಸಣ್ಣದೊಂದು ಅಂಗಡಿಯನ್ನು ನೀವೇ ಸ್ವಂತ ಇಡಿ, ಈ

ಊರಲ್ಲಿ ಅಲ್ಲವಾದರೆ, ಅಂಗಡಿಯ ಮಾಹಿತಿ ಹೇಗೂ ನಿಮಗಿದೆ, ನಾನು ನಿಮಗೆ ಸಹಾಯ ಮಾಡುತ್ತೇನೆ. ವ್ಯಾಪಾರ ಕುದುರಿದರೆ ಫಲ ಅನುಭವಿಸುವವರು ನಾವೇ ಅಲ್ಲವೇ ?" ಎಂದು ಹೇಳಿದರೂ ವಾಚಣ್ಣ ಅದರಿಂದ ನಷ್ಟವಾದರೆ ಎಂಬ ಸಂಶಯದ ಮಾತನಾಡಿ ಅವಳ ಉಪದೇಶವನ್ನು ನಿರಾಕರಿಸುತ್ತಾನೆ. ಬಚ್ಚಮ್ಮಳ ಬಡತನವಿದ್ದರೂ ಜಾಣತನ, ವ್ಯವಹಾರದ ಬಗೆಗಿನ ಕುಶಲತೆ ಗಮನಿಸಬೇಕಾದಂಥದು.

ಬಚ್ಚಮ್ಮನಿಗೆ ನಾಲ್ಕು ಮಕ್ಕಳಾದಾಗ ಹೀಗೇ ಕುಳಿತರೆ ಆಗದು ಎಂದು ತಾನು ಬೇರೆಯವರ ಮನೆಗೆ ಹೋಗಿ ಪರಿಚಾರಿಕೆ ಮಾಡಲಾರಂಭಿಸಿದಳು. ಇಂಥ ಸಂದರ್ಭಗಳಲ್ಲಿ ಅಡಿಗೆ ಕಣ್ಣಿಗೆ ಬಿದ್ದರೆ ಮಕ್ಕಳಿನ ಆಸೆ ಚಿತ್ರ ಅವಳ ಕಣ್ಮುಂದೆ ನಿಲ್ಲುತ್ತಿತ್ತು. ಅಲ್ಲಿ ಕದಿಯುವ ಪದಾರ್ಥಗಳನ್ನು ಮನೆಗೆ ತಂದು ಅಡಿಗೆಗೆ ಬಳಸುತ್ತಿದ್ದಳು. ಆದರೆ ಎಲ್ಲಿಂದ ? ಹೇಗೆ ? ಒಂದೂ ಕೇಳದೆ ಅವಳ ಕಂಡ ತಿಂದು ಚೆನ್ನಾಗಿದೆ ಎಂದು ಹೇಳುತ್ತಿದ್ದನು. ಮಲಗುವ ಸಮಯದಲ್ಲಿ ತಾನೇ ಕದ್ದು ತಂದದ್ದು ಎಂದು ಹೇಳಿದಾಗ ಅವಳಿಗೆ ಕದಿಯಬಾರದು ಎಂದು ಬುದ್ಧಿವಾದ ಹೇಳುತ್ತಿದ್ದನು. ವಾಚಣ್ಣ ಪಾತ್ರದಲ್ಲಿ ಒಳ್ಳೆಯ ಬುದ್ಧಿ, ನಡವಳಿಕೆ ಗುರುತಿಸಬಹುದು. ಅಂಗಡಿ ಮಾಲೀಕನು ವಾಚಣ್ಣನ ಪ್ರಾಮಾಣಿಕತೆ, ಕೆಲಸದಲ್ಲಿ ನಿಷ್ಠೆ ಕಂಡು, "ವಾಚಣ್ಣನಂಥವರು ನೂರಕ್ಕೊಬ್ಬರು" ಎಂದು ಹಾಡಿ ಹೊಗಳುತ್ತಾನೆ.

ಬಚ್ಚಮ್ಮ ಧೈರ್ಯದ ಹೆಂಗಸು ಮತ್ತು ಜೋರೂ ಹೌದು. "ನೀವು ಅವರ ಮಗ ಎಂದರೆ ಯಾವ ಬಗೆಯಿಂದ ಅಂತೆ ? ಮೂಟೆ ಹೊರುವ ಮಗನೋ ? ಮೆರೆಯುವ ಮಗ ಬೇರೆಯೋ" ಅಂತೆಲ್ಲ ಕುಹಕ ಪ್ರಶ್ನೆ ಹಾಕುವಳು.

ಬಚ್ಚಮ್ಮ ಒಂದು ಹೆಣ್ಣು, ಎಲ್ಲ ಹೆಂಗಸರಿಗೂ ಇರುವಂತೆ ಬಚ್ಚಮ್ಮನಿಗೂ ಚಿನ್ನದ ಆಸೆ ಇದೆ. ನಾಲ್ಕು ಜನರ ನಡುವೆ ತಾನೂ ಚೆನ್ನಾಗಿ ಬದುಕಬೇಕೆಂಬ ಹಂಬಲವಿದೆ. ಒಳ್ಳೆಯ ರುಚಿ - ರುಚಿಯಾದ ಅಡಿಗೆ ತನ್ನ ಮಕ್ಕಳು ತಿನ್ನಬೇಕು ಎಂಬ ತಾಯಿಯ ವಾತ್ಸಲ್ಯ ಆಕೆಯಲ್ಲಿಯೂ ಇದೆ. ತನಗೆ ರುಚಿಯಾದ ಅಡಿಗೆ ತಿಂಡಿ ಮಕ್ಕಳಿಗೆ ಮಾಡಿಹಾಕಲು ಸಾಮರ್ಥ್ಯವಿಲ್ಲ ಎಂದು ತಿಳಿದು ಬೇರೆಯವರ ಮನೆಗೆ ಕೆಲಸಕ್ಕೆ ಹೋದಾಗ ಅದೂ - ಇದು ಕದ್ದು ತರುತ್ತಿದ್ದಳು. ಈ ರೀತಿ ಕದಿಯಲು ಹೋಗಿ ಸಿಕ್ಕಿಹಾಕಿಕೊಳ್ಳುತ್ತಿದ್ದುದ್ದೂ ಉಂಟು.

ಒಮ್ಮೆ ತಿಮ್ಮರಾಯರ ಮನೆಯಲ್ಲಿ ಅವರ ತಂದೆ ತಿಥಿಯು ಬಂತು. ಬಚ್ಚಮ್ಮ ಅಡುಗೆ ಸಹಾಯಕ್ಕೆ ಅವರ ಮನೆಗೆ ಹೋದಳು. ಬಚ್ಚಮ್ಮ ಕಜ್ಜಾಯ ಕಾಯಿಸುತ್ತಾ ತನ್ನ ಮಕ್ಕಳ ನೆನಪಾಯಿತು. ಮಕ್ಕಳು ಶಾಲೆ ಬಿಟ್ಟ ಮೇಲೆ ಬಕಾಸುರರಾಗಿ ಆಗಿ ಬರುವುದು. ಎದುರು ರಾಶಿ ವಡೆ ಸುಕ್ರುಂಡೆಗಳನ್ನು ಕಂಡು ಅವಳ ಮನಸ್ಸು ಚಂಚಲವಾಯಿತು. ಈ ಸಲ ತಾನು ಖಂಡಿತಾ ಮುಟ್ಟಬಾರದು ಎಂದುಕೊಂಡಳು. ಗಂಗಮ್ಮನೇ 'ಇಗಾ, ಮಕ್ಕಳ ಕೈಮೇಲೆ ಹಾರು' ಎಂದು ಕೊಡುವವಳೂ ಅಲ್ಲ. ಇನ್ನೂ ಹಂಗಿಸಿಯಾರು. "ಹಸಿದವರೆದುರು ಉಂಡವರ ತೇಗಿನಂತಹ ಠೇಂಕಾರವಲ್ಲದೇ ಅದು ?" ಎಂದು ಮನಸ್ಸಿನಲ್ಲೇ ಆಲೋಚಿಸುತ್ತಾಳೆ. ಉಳ್ಳವರು ಮತ್ತು ಉಳ್ಳದಿರುವವರು ಮಧ್ಯೆ ಎಂತಹ ಅಸಮಾನತೆ ಇದೆ ಹಾಗೂ ಉಳ್ಳವರು, ಬಡವರನ್ನು ಯಾವ ರೀತಿ ಶೋಷಿಸುತ್ತಾರೆ ಎಂಬುವುದರ ಸೂಕ್ಷ್ಮವನ್ನು ವೈದೇಹಿಯವರು ಇಲ್ಲಿ ಕಾಣಿಸುತ್ತಾರೆ.

ವಡೆ ಸುಕ್ರುಂಡೆಯನ್ನು ತನ್ನ ಮಕ್ಕಳಿಗಾಗಿ ಬಾಳೆಎಲೆಯಲ್ಲಿ ಸುತ್ತಿಟ್ಟು, ತನ್ನ ಸಡಿ ರವಿಕೆಯೊಳಗೆ ಇಟ್ಟುಕೊಂಡಳು. ಹೇಗೋ ಏನೋ ಅಡಿಗೆಯವ ಗಜಾನನ ಭಟ್ಟರಿಗೆ ತಿಳಿದು ಮನೆಯ ಯಜಮಾನಿ ಗಂಗಮ್ಮನಿಗೆ ತಿಳಿಸಿ, ಆಕೆ ಆಕೆಯ ನಾದಿನಿ, ತಂಗಿ ಎಲ್ಲರೂ ಬಂದು ಆಕೆಯನ್ನು ತಪಾಸಣೆ ಮಾಡಿ ಕದ್ದ ಪದಾರ್ಥವನ್ನು ಬಯಲಿಗೆಳೆದರು. ಬಚ್ಚಮ್ಮನೂ ಒಂದು ಹೆಣ್ಣಾಗಿ ಅವಮಾನ, ಸಿಟ್ಟು, ದುಃಖ ಅವಳಲ್ಲಿ ಉಂಟಾಯಿತು. ಭಯಕ್ಕೆ ಮೂರ್ಛೆ ಹೋಗಿಬಿಟ್ಟಳು.

ಉಳ್ಳವರ ದಬ್ಬಾಳಿಕೆ, ಬಡವರ ಮೇಲೆ ಅಮಾನವೀಯವಾಗಿ ವರ್ತಿಸುವ ಗಂಗಮ್ಮನ ನಡವಳಿಕೆ ಅಸಹ್ಯ ಹುಟ್ಟಿಸುತ್ತದೆ. ಪದಾರ್ಥದ ಕೊರತೆ ಇದ್ದಾಗ ಕದಿಯುವ ತೆರೆ ಕಾರಣವಾಗುತ್ತದೆ. ಬಚ್ಚಮ್ಮನಲ್ಲಿ ಅದು ಕೊರತೆ ಇತ್ತು. ಆದರೆ ಆ ಕೊರತೆಯನ್ನು ನೀಗಿಸಬೇಕಾದ ಉಳ್ಳವರೇ ಅದನ್ನು ತಿರಸ್ಕರಿಸಿದಾಗ ಕದಿಯುವುದು ಅನಿವಾರ್ಯವಾಗುತ್ತದೆ ಎಂಬ ಅಂಶ ಮುಖ್ಯವಾದುದು.

ಬಚ್ಚಮ್ಮನ ಹಿರಿಯ ಮಗ ಮಂಜುನಾಥ ಹೈಸ್ಕೂಲಲ್ಲಿ ಓದುತ್ತಿದ್ದ. ಸ್ವತಂತ್ರ ಮನೋಭಾವದವನು. ತಾನು ಸ್ವತಂತ್ರವಾಗಿ ಒಂದು ಹೋಟೆಲ್ಲಿಡಬೇಕು, ತನ್ನ ಕೈಕೆಳಗೆ ಕೆಲಸ ಮಾಡುವವರಿರಬೇಕು ಎಂದು ಆಶಿಸುತ್ತಾನೆ. ಈ ಕನಸಿನಲ್ಲಿ ಅವನ ಸ್ವತಂತ್ರದ ಬದುಕಿನ ಚಿಂತನೆಯನ್ನು ಕಾಣಬಹುದು. ಅವನಿಗೆ ಈ ಶೋಷಣೆಯ ಬದುಕು ಅಸಹ್ಯ ಎನಿಸಿ, "ಏನೇ ಹೇಳು ಅಮ್ಮ, ನೀನು ಕೆಲಸಕ್ಕಂತೇಳಿ ಎಲ್ಲಿಗೂ ಹೋಪುಕಾಗ" ಎಂದು ತನ್ನ ತಾಯಿಗೆ ಹೇಳಿದನು. ತಂದೆ ಮತ್ತು ಮಗನ ವಿರುದ್ಧ ಸ್ವಭಾವ ಇಲ್ಲಿ ಗಮನಿಸಬಹುದು.

ಮಗಳು ಅಂಬುಜ ತಾನು ಓದು ಮುಗಿಸಿ, ಕೆಲಸಕ್ಕೆ ಸೇರಬೇಕೆಂಬ ಆಸೆ. ತಾಯಿಯ ಕಳ್ಳತನದ ಬದುಕು ಬದುಕೇ ? ಎಂದು ಆಧುನಿಕ ಬದುಕಿನ ಕನಸು ಕಾಣುತ್ತಾಳೆ. ಎಲ್ಲರಂತೆ ತಾನು ಬೇಕಾದ್ದು ತಿನ್ನಬೇಕು, ಬೇಕಾದ್ದು ಉಟ್ಟು ತೊಟ್ಟು ತಿರುಗಬೇಕು. ತಾನು ಸಾಧಿಸಲೇಬೇಕೆಂಬ ಛಲ ಅವಳಲ್ಲಿ. ಬಡತನದ ಬದುಕಿನಿಂದ ಮುಕ್ತವಾಗಬೇಕೆಂಬ ಹಂಬಲ ಇದೆ.

ಜೀವನದಲ್ಲಿ ಆಧುನಿಕ ವಿಚಾರಗಳನ್ನೊಳಗೊಂಡಂತೆ ತಮ್ಮ ಬದುಕಿನ ರೀತಿ, ತಮ್ಮ ಬದುಕಿನ ಉದ್ದೇಶ ಇವುಗಳನ್ನು ಆಲೋಚಿಸುವಂತಾಗುತ್ತಾನೆ ಮನುಷ್ಯ. ಬಚ್ಚಮ್ಮನ ಮಕ್ಕಳು ಅಂಬುಜ ಮತ್ತು ಮಂಜುನಾಥ ತಮ್ಮ ತಂದೆಯ ಬಗ್ಗೆ ಕೀಳಾಗಿ ಮಾತಾಡುತ್ತಾರೆ. ಅಂಗಡಿಯ ಮಾಲೀಕ ಕಾಮತ್ ತಮ್ಮ ತಂದೆಯಿಂದ ದುಡಿಸಿಕೊಂಡು ತಾನು ಶ್ರೀಮಂತನಾಗುತ್ತಿದ್ದಾನೆ. ಆದರೆ ದುಡಿಯುವ ಅಪ್ಪನ ಸಂಸಾರ ಬಡತನದಲ್ಲಿಯೇ ಇದೆ ಎಂದು ಮಂಜುನಾಥನ ಧೋರಣೆ. ಮಗಳು ಅಂಬುಜ "ಅಪ್ಪಯ್ಯನೊಟ್ಟಿಗೆ ಇಷ್ಟು ವರ್ಷ ಹೇಂಗೆ ದಿವ್ಸ ತೆಗ್ದಿಯೋ ! ನಂಗಂತೂ ಧರ್ಮಕ್ ಕೊಟ್ರೂ ಅಂಥ ಗಂಡ ಬೇಡ" ಎಂದಳು. ಬಚ್ಚಮ್ಮ ಅಣ್ಣ - ತಂಗಿಗೆ, ಅಪ್ಪನ ಪಕ್ಷ ವಹಿಸಿ ಬುದ್ಧಿವಾದ ಹೇಳುವಳು. ಬಚ್ಚಮ್ಮ ಕದಿಯುವವಳಾದರೂ ಅವಳ ಒಳ್ಳೆಯ ವ್ಯಕ್ತಿತ್ವಕ್ಕೆ ಇದು ಉದಾಹರಣೆ. ತನ್ನ ಗಂಡ ಸಂಸಾರದ ಬಗ್ಗೆ ನಿರ್ಲಕ್ಷ್ಯ ವಹಿಸಿದ್ದರೂ "ಏನಂದ್ರೂ ಮಕ್ಳೇ, ಇಂಥಾ ಪಾಪದ್ ಅಪ್ಪಯ್ಯ ನಿಮ್ಗ ಎಲ್ಲೂ ಸಿಕ್ಕ. ಯಂತ ಮಾಡುದಾರೂ ಅವ್ರನ್ ಕೂಡ್ಕಂಡೇ ಹೊರ್ತು ಹೀನೈಸಿ ಅಲ್ಲ" ಎಂದು ತನ್ನ ಗಂಡನ ಪರವಾಗಿಯೇ ಮಾತನಾಡುವಳು. ಸ್ತ್ರೀ ತನ್ನ

ಪತಿ ಕ್ರೂರಿಯಾಗಿರಲಿ, ಸೋಮಾರಿಯಾಗಿರಲಿ, ಸಂಸಾರಕ್ಕೆ ನಿರುಪಯುಕ್ತನಾಗಿದ್ದರೂ, ಮಕ್ಕಳಿಗೆ ತನ್ನ ತಂದೆಯ ಬಗ್ಗೆ ಅಸಡ್ಡೆ ಉಂಟಾಗಬಾರದೆಂದು, ಆತನ ಸ್ಥಾನದ ಗೌರವಕ್ಕೆ ಧಕ್ಕೆಯಾಗದಂತೆ ಮಕ್ಕಳನ್ನು ತಿದ್ದುವವಳು. ಜೊತೆಗೆ ತಾನೂ ಪತಿಯ ಸ್ಥಾನಕ್ಕೆ ಬೆಲೆ ನೀಡುತ್ತಾಳೆ. ಸಾಂಪ್ರದಾಯಿಕ ಧೋರಣೆಯ ಸ್ತ್ರೀತನ ಇಲ್ಲಿ ವ್ಯಕ್ತವಾಗುತ್ತದೆ.

ಹುಟ್ಟುತ್ತಾ ಮನುಷ್ಯ ಕಳ್ಳತನವನ್ನು ಮಾಡಲಾರ. ಪರಿಸ್ಥಿತಿ, ಸನ್ನಿವೇಶ ವ್ಯಕ್ತಿಯನ್ನು ಕಳ್ಳನನ್ನಾಗಿ ಮಾಡುತ್ತದೆ ಎಂಬುದನ್ನು ಬಚ್ಚಮ್ಮನ ಕುಟುಂಬದ ಮೂಲಕ ಗಮನಿಸಬೇಕಾಗುತ್ತದೆ. ನಗರದಿಂದ ಬಂದಂತಹ ಮಂಜುನಾಥನ ಧೋರಣೆಯಲ್ಲಾದ ಬದಲಾವಣೆಗಳು, ನಗರೀಕರಣದ ಪ್ರಭಾವವನ್ನು ಸೂಕ್ಷ್ಮವಾಗಿ ವೈದೇಹಿಯವರು ತಿಳಿಸುತ್ತಾರೆ. ಪ್ರಾಮಾಣಿಕತೆಯಿಂದ ಸಂಸಾರ ಉದ್ಧಾರವಾಗಲು ಸಾಧ್ಯವಿಲ್ಲ; ತಪ್ಪು ದಾರಿ ಹಿಡಿದರೆ ಜೀವನದಲ್ಲಿ ಮುಂದೆ ಬರಲು ಸಾಧ್ಯ ಎಂಬ ಸಾಮಾಜಿಕ ವಿಡಂಬನೆ ಇದೆ. ಶ್ರೀಮಂತಿಕೆಯ ದರ್ಪ, ಬಡವರ ಶೋಷಣೆ ಕೌಟುಂಬಿಕ ನೆಲೆಯಲ್ಲಿ ಚಿತ್ರಿತಗೊಂಡಿದೆ.

ಮರೆವು :

ಈ ಕಥೆಯನ್ನು "ಅಮ್ಮಚ್ಚಿಯೆಂಬ ನೆನಪು" ಎಂಬ ಕಥಾಸಂಕಲನದಿಂದ ಆರಿಸಿಕೊಳ್ಳಲಾಗಿದೆ.

ಒಂದು ಹೆಣ್ಣು ತಾಯಿ, ಪತ್ನಿ, ಸೊಸೆ ಹಾಗೆಯೇ ಪತಿಯನ್ನು ಬಿಟ್ಟುಬಂದ ಹೆಣ್ಣಾಗಿ ಹೀಗೆ ವಿವಿಧ ಸ್ತ್ರೀಪಾತ್ರಗಳನ್ನು ವೈದೇಹಿಯವರ ಕಥೆಗಳನ್ನು ಕೌಟುಂಬಿಕ ನೆಲೆಯಲ್ಲಿಟ್ಟು ವಿಚಾರ ಮಾಡಬಹುದು. ಹಾಗೆಯೇ ಒಂದು ಹೆಣ್ಣು ಜೀವನದಲ್ಲಿ ಅಜ್ಜಿಯ ಪಾತ್ರವನ್ನೂ ವಹಿಸಬೇಕಾಗುವುದು. ಅಜ್ಜಿ ಎಂದರೆ, ವೃದ್ಧಾಪ್ಯದ ಬದುಕಿನಲ್ಲಿನ ಜೀವನ ಆಕೆಯದು. ಅಜ್ಜಿಯಾಗಿ ಬದುಕನ್ನು ಸ್ವೀಕರಿಸುವ ಧೋರಣೆ, ಆಕೆಯ ಮನಸ್ಸಿನಲ್ಲುಂಟಾಗುವ ಭಾವನೆಗಳು "ಮರೆವು" ಕಥೆಯಲ್ಲಿ ಅಭಿವ್ಯಕ್ತಗೊಂಡಿವೆ.

ವೃದ್ಧಾಪ್ಯದ ಬದುಕಿನಲ್ಲಿ ಮಕ್ಕಳು ಆಸರೆಯಾಗಿರುತ್ತಾರೆ. ಇದು ಮೊದಲಿನಿಂದಲೂ ನಾವು ಕುಟುಂಬದಲ್ಲಿ ನೋಡುತ್ತಾ ಬಂದಿರುವ ಕ್ರಮ. ಗಂಡು ಹೆತ್ತರೆ ಮನೆ ತುಂಬಿಕೊಂಡಿರುತ್ತದೆ, ಖಾಲಿಯಾಗುವುದಿಲ್ಲ. ಹೆಣ್ಣು ಹೆತ್ತರೆ ಮನೆ ಖಾಲಿಯಾಗುತ್ತದೆ, ತುಂಬಿಕೊಳ್ಳುವುದಿಲ್ಲ. ಆದರೆ ಈ ಕಥೆಯಲ್ಲಿ ವೃದ್ಧಾಪ್ಯದಲ್ಲಿರುವ ಅಜ್ಜ - ಅಜ್ಜಿಯರ ಮನೆಮಕ್ಕಳಿದ್ದರೂ ದೂರದಲ್ಲಿದ್ದು ಖಾಲಿಯಾಗಿತ್ತು. ಅಜ್ಜ - ಅಜ್ಜಿಯರೊಬ್ಬರು ಒಬ್ಬರ ಮುಖವನ್ನು ನೋಡುತ್ತಾ ಕುಳಿತುಕೊಳ್ಳಬೇಕಷ್ಟೆ. ಆದರೆ ಈ ಸಮಯದಲ್ಲಿ ಗಂಡಸು - ಹೆಂಗಸು ಆಕರ್ಷಣೆ ಕಳೆದುಬಿಟ್ಟಿರುತ್ತದೆ.

ಮದುವೆಯಾದ ಸಂದರ್ಭದಲ್ಲಿ ಗಂಡ - ಹೆಂಡತಿ ಪರಸ್ಪರ ಮುಖ ನೋಡಿಕೊಳ್ಳುತ್ತಾ ಕುಳಿತುಕೊಳ್ಳ ಬೇಕೆನಿಸುತ್ತದೆ. ಆದರೆ ಸಮಯವಿರುವುದಿಲ್ಲ. ಆಸೆ ಪಡುವ ಕಾಲದಲ್ಲಿ ಮಕ್ಕಳು ಹುಟ್ಟಿ ವೈರಾಗ್ಯ ಹುಟ್ಟುತ್ತದೆ. ವೃದ್ಧಾಪ್ಯದಲ್ಲಿ ಸಮಯವಿದ್ದರೂ ಆ ರೋಮ್ಯಾಂಟಿಕ್ ಹೊರಟೇ ಹೋಗಿರುತ್ತದೆ ಎಂದು ಅಜ್ಜಿ ತನ್ನ ಮನಸ್ಸಿನಲ್ಲಿಯೇ ಬಾಧಿಸುತ್ತಾ ದಾರಿಯಲ್ಲಿ ನಡೆಯುತ್ತಾ ಹೋಗುತ್ತಾರೆ. ವೈದೇಹಿಯವರು ದಾಂಪತ್ಯದ ಕೊನೆಯ ಘಟ್ಟ ವೃದ್ಧಾಪ್ಯದ ಬದುಕಿನಲ್ಲಿ ಸ್ತ್ರೀಯ ಮನೋಧರ್ಮವನ್ನು ಬಿಡಿಸಿಡಲು ಪ್ರಯತ್ನಿಸಿದ್ದಾರೆ.

ಗಂಡ - ಹೆಂಡತಿ ಸಂಬಂಧದಲ್ಲಿ ಮೊದಮೊದಲಿಗೆ ಇದ್ದಂತಹ ರೋಮಾಂಚನ ಕೊನೆಯವರೆಗೂ ಒಟ್ಟಿಗೆ ಇದ್ದುದ್ದಕ್ಕಾಗಿ ಸ್ನೇಹದ ಸಂಬಂಧವಾಗಿ ಮಾರ್ಪಡುತ್ತದೆ. ವೈದೇಹಿಯವರು ಕಥೆಯ ಪ್ರಾರಂಭದಲ್ಲಿಯೇ ಸಾಂಕೇತಿಕವಾದ ರೀತಿಯಲ್ಲಿ ಗಂಡಸಿನಂತಹ ಹೆಂಗಸು, ಹೆಂಗಸಿನಂತಹ ಗಂಡಸು ಇರುವ ವ್ಯಕ್ತಿತ್ವ ವಯಸ್ಸಾಗುತ್ತ ಕಡೆಗೆ ಹೆಣ್ಣು -ಗಂಡುಗಳ ಬದಲಿಗೆ ಬರೀ ಮನುಷ್ಯನಾಗಿ ಕಾಣುತ್ತಾನೆ ಎಂಬ ಮನೋವಿಚಾರವನ್ನು ಹೇಳುತ್ತಾರೆ. ಗಂಡ - ಹೆಂಡತಿಯ ಸಂಬಂಧ ವೃದ್ಧಾಪ್ಯದಲ್ಲಿ ಪರಸ್ಪರ ಸ್ನೇಹದ ಬಾಂಧವ್ಯದಿಂದ ಕೂಡಿರುತ್ತದೆ. ಸ್ನೇಹದಲ್ಲಿ ಜೀವಿಸುತ್ತಿದ್ದರೂ ಮನೆ ಖಾಲಿ ಎನಿಸುತ್ತಿತ್ತು ಅಜ್ಜಿಗೆ. ಸಂತೋಷ, ಸುಖ ಎಲ್ಲವೂ ಇದ್ದರೂ ಉಲ್ಲಾಸವೇ ಇಲ್ಲದ ಬದುಕು ನೀರಸ.

ಏನೇ ಸುಖವಿದ್ದರೂ ಮನೆಯಲ್ಲಿ ಮಕ್ಕಳಿಲ್ಲವೆಂದರೆ ಬಿಕೋ ಎನಿಸುತ್ತದೆ. ಬದುಕೇ ಬೇಸರವೆನಿಸುತ್ತದೆ. ವೃದ್ಧಾಪ್ಯದ ನೆರಳಲ್ಲಿರುವವರಿಗೆ ಮಕ್ಕಳೇ ಮನೆಗೆ ಗಾಳಿ, ಬೆಳಕು ಇದ್ದ ಹಾಗೆ. ಇವರ ಬದುಕಿನಲ್ಲಿಯೂ ಅಂತಹ ಒಂದು ಸಂದರ್ಭ ಎದುರಾಯಿತು. ಮಗಳು ಭುವನಾಳಿಂದ ಪತ್ರ ಬಂದಿತು. "ಮಕ್ಕಳನ್ನು ನೋಡಿಕೊಳ್ಳುವ ಹೆಂಗಸು ಊರಿಗೆ ಹೋಗಿದೆ. ಈಗ ಯಾರೂ ಇಲ್ಲ, ಆಫೀಸಿಗೆ ಹೋಗಲು ಕಷ್ಟವಾಗುತ್ತಿದೆ...." ಅಜ್ಜಿ, ತಾಯಿಯೂ ಆಗಿದ್ದು ಮಗಳ ಕಷ್ಟಕ್ಕೆ ಮಿಡಿಯಿತು.

ವೃದ್ಧಾಪ್ಯದಲ್ಲಿ, ಸ್ವತಂತ್ರವಾಗಿ ಮಕ್ಕಳೊಂದಿಗೆ ಮಾತಾಡುವುದಾಗಲಿ, ಅವರಿಂದ ನಿರೀಕ್ಷಿಸುವುದಾಗಲಿ ಇಷ್ಟಪಡುವುದಿಲ್ಲ. ಆ ಹಂತದಲ್ಲಿ ಸೂಕ್ಷ್ಮ ಮನಸ್ಸಿನವರಾಗಿರುತ್ತಾರೆ. ಗಂಡ - ಹೆಂಡತಿ ಒಬ್ಬರಿಗೊಬ್ಬರಾಗಿಯೇ ಜೀವಿಸುತ್ತಾರೆ. ಹೆಂಡತಿ 'ಅಮ್ಮ' ನಾಗಿಯೂ ಕಾಣುತ್ತಾಳೆ ಗಂಡನಿಗೆ ವೃದ್ಧಾಪ್ಯದಲ್ಲಿ. ಅಜ್ಜ ಹೇಳುತ್ತಾನೆ "......... ನೀನು ನನಗೆ ಒಮ್ಮೊಮ್ಮೆ ಅಮ್ಮನಾದಂತೆ ಅನಿಸಬಹುದಲ್ಲ..... ಒಮ್ಮೊಮ್ಮೆ ?" ವೈದೇಹಿಯವರು ಹೆಣ್ಣು ಗಂಡಿನ ಸಂಬಂಧವು ವೃದ್ಧಾಪ್ಯದಲ್ಲಿ ಸ್ನೇಹ, ವಾತ್ಸಲ್ಯದಿಂದ ಕೂಡಿರಬೇಕು ಎನ್ನುವಂತೆ ತಿಳಿಹೇಳಿದ್ದಾರೆ. ತಾಯಿಗೆ ಮಗುವಿನ ಬಗೆಗಿನ ವಾತ್ಸಲ್ಯ ಭಾವ ಅತ್ಯವಶ್ಯಕ. ಅದರಂತೆ ವೃದ್ಧಾಪ್ಯದಲ್ಲಿಯೂ, ಗಂಡ-ಹೆಂಡತಿಯಲ್ಲಿ ಈ ರೀತಿ ಸಂಬಂಧವಿರಬೇಕು ಎಂಬ ತಾತ್ವಿಕ ವಿಚಾರವನ್ನು ಪ್ರಕಟಿಸುತ್ತಾರೆ.

ಗಂಡು - ಹೆಣ್ಣು ಎಂಬುದು ದೇಹ ರಚನೆಯ ಆಧಾರದ ಮೇಲೆ ವರ್ಗೀಕರಿಸಲಾಗಿದೆ. ಸಮಾಜದಲ್ಲಿ ವ್ಯಕ್ತಿತ್ವವನ್ನು ಹೆಣ್ಣು ಎಂದರೆ ಹೀಗೇ ನಯ, ನಾಜೂಕು, ನಾಚಿಕೆ, ಉಳ್ಳವಳಾಗಿರಬೇಕೆಂದೂ, ಗಂಡು ಎಂದರೆ, ತಲೆ ತಗ್ಗಿಸದೆ, ಗತ್ತು, ದರ್ಪ, ಹೀಗೆ ವ್ಯಕ್ತಿತ್ವದ ಆಧಾರದ ಮೇಲೆ ಗುರುತಿಸುವುದು ಅಸಮಂಜಸ.

ಈ ಕಥೆಯಲ್ಲಿ ಹೀಗೆ ಯೋಚಿಸಬೇಕಾದ ಒಂದು ಪ್ರಸಂಗ ಬಸ್ಸಿನಲ್ಲಿ ನಡೆಯುತ್ತದೆ. ಅಜ್ಜಿ ಬಸ್ಸಿನಲ್ಲಿ ಹೋಗುತ್ತಿರುವಾಗ ಯಾರೋ ಗಂಡಸಿಗೆ ಹೆಂಗಸು "ಸರಿಯಾಗಿ ನಿಂತುಕೊಳ್ಳಿ" ಎಂದು ಗದರಿದಳು. ಕೆನ್ನೆಗೆ ಕೊಟ್ಟೇಬಿಟ್ಟಿದ್ದಳು. ಗಂಡಸು ತಿರುಗಿಸಿಯೂ ಹೊಡೆಯಲಿಲ್ಲ, ಗಲಾಟೆಯೂ ಮಾಡಲಿಲ್ಲ. "ಹೆಣ್ಣುಮಕ್ಕಳನ್ನು ನೋಡಿಲ್ಲವನ ಇವತ್ತಿನವರೆಗೆ ? ನಿನಗೇನು ಅಕ್ಕತಂಗಿಯರು ಯಾರೂ ಇಲ್ಲ ?" ಮುದುಕರು ಗದರುತ್ತಿದ್ದರು.

"ನಿಂತಿರುವುದು ನೋಡೀಗ ಹೆಂಗಸರಂತೆ !" ಅಂತ ಯಾರೋ ಹೇಳಿ ಹೆಂಗಸು ಹೇಳಿದಳು. ಗಂಡಸಿನಲ್ಲಿ ಹೆಣ್ತನವನ್ನೂ ಗುರುತಿಸಬಹುದು, ಗುಣ, ನಡವಳಿಕೆ, ಹೆಣ್ಣಿನ ಮೇಲೆ ಹೇರಿ ಅವಳದೇ ಆದ ವ್ಯಕ್ತಿತ್ವ ಎಂಬಂತೆ ರೂಪಿಸುತ್ತಾರೆ. ಪರಿಸರ, ಸನ್ನಿವೇಶಗಳಲ್ಲಿ 'ಹೆಣ್ಣು' ಗಂಡೂ ಆಗಬಹುದು. 'ಗಂಡು'

ಹೆಣ್ಣೂ ಆಗಬಹುದು. ದೈಹಿಕ ರಚನೆಯಿಂದ ಲಿಂಗವನ್ನು ಗುರುತಿಸಲಾಗುತ್ತದೆ. ವ್ಯಂಗ್ಯ ಎಂದರೆ ಗುಣ, ನಡವಳಿಕೆಯನ್ನು ಆಧಾರವಾಗಿಟ್ಟುಕೊಂಡು ಗಂಡು, ಹೆಣ್ಣು ಎಂದು ಗುರುತಿಸುವುದು.

ಮದುವೆ ಹೆಣ್ಣು ಸೀರೆ :

ಈ ಕಥೆಯನ್ನು "ಮರಗಿಡ ಬಳ್ಳಿ" ಎಂಬ ಕಥಾಸಂಕಲನದಿಂದ ಆರಿಸಲಾಗಿದೆ.

ಸಮಾಜದಲ್ಲಿ ಹೆಣ್ಣಿರಬಹುದು, ಗಂಡಿರಬಹುದು ಗೌರವ ಸಿಗಬೇಕಾದರೆ, ಶ್ರೀಮಂತಿಕೆ ಇರಬೇಕು. ಒಳ್ಳೆಯ ಸ್ಥಾನ - ಮಾನ ಸಿಗಬೇಕಾದರೆ ಸಾಮಾಜಿಕವಾಗಿ ಜೀವನದಲ್ಲಿ ಮುಂದುವರೆಯಬೇಕು. ಬದುಕು ಮತ್ತು ಸಮಾಜ ಅನ್ಯೋನ್ಯವಾದ ಸಂಬಂಧವಿದೆ. ಮೊದಲು ಉತ್ತಮವಾದ ಬದುಕು ರೂಪಿಸಿಕೊಳ್ಳಬೇಕು. ನಂತರ ಸಮಾಜದಲ್ಲಿ ತನಗೆ ತಾನೇ ಉತ್ತಮ ಸ್ಥಾನ ಸಿಗಲು ಸಾಧ್ಯವಾಗುತ್ತದೆ.

"ಜಗತ್ತಿನಲ್ಲಿ ಮೂರು ಪಂಗಡಗಳಿವೆ. ಗುಣದಿಂದ ವ್ಯಕ್ತಿತ್ವ ಅಳೆಯುವವರು, ವಿದ್ಯೆಯಿಂದ ಅಳೆಯುವವರು, ಹಣದಿಂದ ಅಳೆದು ಮಣೆ ಹಾಕುವವರು" ಎಂಬ ವಿಚಾರವನ್ನು ಈ ಕಥೆ ಸ್ಪಷ್ಟಪಡಿಸುತ್ತದೆ. ಹೆಣ್ಣಾದರೇನು ? ಗಂಡಾದರೇನು ? ಸಮಾಜದಲ್ಲಿ ಗೌರವ ಸಿಗಬೇಕಾದರೆ ಹಣ, ಶ್ರೀಮಂತಿಕೆ ಇರಬೇಕು. ಹೆಣ್ಣು ಶ್ರೀಮಂತಿಕೆಯಿಲ್ಲದೆ, ಒಂದು ಮದುವೆಯ ಸಮಾರಂಭದಲ್ಲಿ ಅವಮಾನಕ್ಕೆ ಗುರಿಯಾಗುವ ಹಾಗೂ ಆ ಸಂದರ್ಭದಲ್ಲಿ ಅವಳು ಅನುಭವಿಸುವ ಯಾತನೆ ಈ ಕಥೆಯಲ್ಲಿ ವ್ಯಕ್ತವಾಗಿದೆ.

ಈ ಕಥೆಯಲ್ಲಿ ಬರುವ ಮುಖ್ಯ ಪಾತ್ರ ಸುಮಾ, ತನ್ನ ದೊಡ್ಡಪ್ಪನ ಮಗ ರಾಮಣ್ಣನ ಮದುವೆಗೆ ಹೋಗಬೇಕೆಂದು ಬಯಸುತ್ತಾಳೆ. ರಾಮಣ್ಣ ಅವಳ ದೊಡ್ಡಪ್ಪನ ಮಗನಾದರೂ ಆತ ಒಡಹುಟ್ಟಿದ ಅಣ್ಣನಿಗಿಂತಲೂ ಹೆಚ್ಚು. ಸುಮಾಳನ್ನು ನೋಡುವುದಕ್ಕೆ ಬಂದ ರಾಮಣ್ಣ "ಯಾವಾಗ ಬರುತ್ತೀಯಾ ?" ಎಂದು ಕೇಳಿದ್ದಕ್ಕಾಗಿ, ಈಕೆ ತನ್ನ ನಾಲಿಗೆಯ ವಾಂಛೆಯಿಂದ "ಮದುವೆಗೆ" ಎಂದು ಹೇಳಿದ್ದಳು. ತನ್ನ ಮಾತನ್ನು ಉಳಿಸಿಕೊಳ್ಳುವುದಕ್ಕಾಗಿ ತನಗೆ ಕಷ್ಟವಾದರೂ ಹೋಗಲೇಬೇಕೆಂದು ನಿರ್ಧರಿಸುತ್ತಾಳೆ. ಒಂದು ಹೆಣ್ಣು ಸಂಬಂಧವನ್ನು ಗಾಢವಾಗಿ ನೋಡುತ್ತಾಳೆ. 'ತನ್ನವರು' ಎಂಬ ಭಾವ ಮದುವೆಯಾದರೂ ಹೋಗುವುದಿಲ್ಲ. ಹೆಣ್ಣಿಗೆ ತೌರುಮನೆಯ ಬಗ್ಗೆ ಪ್ರೀತಿ - ಅಭಿಮಾನ ಇರುವುದು ಸಹಜ. ಈ ಅಂಶ ಸುಮಾಳ ಪಾತ್ರದ ಮೂಲಕ ವ್ಯಕ್ತಗೊಂಡಿದೆ.

ಹೆಣ್ಣಿಗೆ ಒಡವೆ, ಸೀರೆಯ ಬಗ್ಗೆ ಆಸೆ ಸಹಜವಾಗಿರುತ್ತದೆ. ಒಂದು ಮದುವೆಯ ಸಮಾರಂಭವೆಂದರೆ, ಕತ್ತಿಗೆ, ಕಿವಿಗೆ ಫಳಫಳನೆ ಹೊಳೆಯುವ ಬಂಗಾರದ ಒಡವೆಗಳನ್ನು ಹಾಕಿಕೊಂಡಿರುತ್ತಾರೆ. ಮಿಂಚುವ ಜರಿ ರೇಷ್ಮೆ ಸೀರೆಯನ್ನು ಉಟ್ಟಿರುತ್ತಾರೆ. ತನ್ನಲ್ಲಿ ಅಂತಹ ಹೇಳಿಕೊಳ್ಳುವ ಒಡವೆ ವಸ್ತುಗಳು, ರೇಷ್ಮೆ ಸೀರೆ ಇಲ್ಲವೆಂದು ಸುಮಾ ಕೊರಗುತ್ತಾಳೆ. ನಾಲ್ಕು ಜನರ ಮುಂದೆ ತನ್ನ ಹಾಗೂ ಗಂಡನ ಮರ್ಯಾದೆ ಕಡಿಮೆಯಾಗಬಾರದೆಂದು ಚೆಂದದ ಸೀರೆಯನ್ನು ಕೊಂಡಳು. ತೌರು ಕುಟುಂಬದಲ್ಲಿ ತನ್ನ ಬಗ್ಗೆ ಯಾವುದೇ ಕೀಳರಿಮೆ ಉಂಟಾಗಬಾರದೆಂಬ ರೀತಿಯಲ್ಲಿ ಯೋಚಿಸುವುದು ಹೆಣ್ಣಿನಲ್ಲಿ ನಾವು ಗಮನಿಸಬಹುದಾದ ವಿಶೇಷ ಗುಣ.

ಸ್ತ್ರೀಯ ಸೂಕ್ಷ್ಮ ಸಂವೇದನೆಯ ಪ್ರತೀಕವಾಗಿ ಸುಮಾ ಕಂಡುಬರುತ್ತಾಳೆ. ತಾನು ಉಡುವ ಸೀರೆ, ಮದುವೆಗೆ ಬಂದ ಜನರನ್ನು ಆಕರ್ಷಿಸುತ್ತದೆ. ಅದರಲ್ಲೂ ದೊಡ್ಡಮ್ಮ ಸೀರೆಯ ಬಗ್ಗೆ ವಿಚಾರಿಸುತ್ತಾಳೆ. ಅಂಥದು ತನಗೂ ಬೇಕೆಂದು ಕೇಳುತ್ತಾಳೆ. ಈ ರೀತಿ ಸುಮಾ ಆಲೋಚಿಸುತ್ತಾಳೆ. ಆದರೆ ಮದುವೆ ಮನೆಗೆ ಹೋದಾಗ ಸುಮಾಳ ಸಂತೋಷ, ಉತ್ಸಾಹವೆಲ್ಲವೂ ಜರ್ರನೆ ಇಳಿದುಹೋಗುತ್ತದೆ. ತಾನು ಊಹಿಸಿದ್ದ ಸ್ವಾಗತವೂ ಇರಲಿಲ್ಲ; ಯಾರೂ ಆಕೆಯನ್ನು ವಿಚಾರಿಸಲಿಲ್ಲ. ಇದರಿಂದ ನೊಂದ ಸುಮಾ ರಾಮಣ್ಣನಾದರೂ ಮಾತಾಡಿಸುವನೆಂದು, ಅವನ ಬಳಿಗೆ ಹೋಗುತ್ತಾಳೆ. ಆದರೆ ಅಲ್ಲಿಯೂ ಸುಮಾಗೆ ನಿರಾಸೆ ಉಂಟಾಗುತ್ತದೆ. ದೊಡ್ಡಮ್ಮಳೂ ಸುಮಾಳನ್ನು ಸರಿಯಾಗಿ ಮಾತನಾಡಿಸಲಿಲ್ಲ. ಬದಲಾಗಿ ಮೂದಲಿಕೆ ಮಾತುಗಳನ್ನಾಡಿದಳು "....ದಿಬ್ಬಣ ಹೊರಡುವ ಹೊತ್ತಾಯಿತು. ಬೇಗ ಹೊರಡಬಾರದೆ ? ಸುಮ್ಮನೆ ಏಕೆ ತಡಮಾಡುವುದು ಹೇಳು".

ಸುಮಾಳ ಪತಿ "ಮದುವೆ ಮನೆ ಏನಾದರೂ ಹೆಚ್ಚೂ ಕಡಿಮೆ ಆಗಬಹುದು, ಹಲ್ಲು ಕಚ್ಚಿ ನುಂಗಿ ಸುಧಾರಿಸಿಕೊ" ಎಂದು ಹೇಳಿದ್ದು ನೆನಪಾಗಿ, ಸಂಕಟವಾಯಿತು ಸುಮಾಳಿಗೆ. ಆರ್ಥಿಕವಾಗಿ ಉತ್ತಮ ಮಟ್ಟದಲ್ಲಿದ್ದರೆ, ಗೌರವ, ಪ್ರೀತಿ, ಆತ್ಮೀಯತೆ ತನಗೆ ತಾನೇ ದೊರೆಯುತ್ತದೆ ಎಂಬುದು ಸುಮಾಳ ಪರಿಸ್ಥಿತಿಯೇ ಹೇಳುತ್ತದೆ. ಸಮಾಜದಲ್ಲಿ ಕಂಡುಬರುವ ಈ ವಿಚಾರ ಕುಟುಂಬದಲ್ಲಿಯೂ ಕಾಣುವುದು ಆಶ್ಚರ್ಯವೇನಲ್ಲ.

ಮದುವೆಯ ಸಮಾರಂಭದಲ್ಲಿ ಕೀಳರಿಮೆಯಿಂದಾಗಿ ಸುಮಾ ಯಾರದೋ ಜೊತೆಯಲ್ಲಿ ಕುಳಿತು ಮದುವೆ ನೋಡುವಂತಾಯಿತು. ರಾಮಣ್ಣನು ಅಕ್ಕಂದಿರೂ ಸಹ ಅವಳಿಗೆ ಯಾವುದೇ ಬೆಲೆ ಕೊಡದೆ, ಹಿಂದಿನ ಆತ್ಮೀಯತೆಯನ್ನು ಮರೆತು ಅವಳನ್ನು ದೂರ ಇಟ್ಟರು. ಸುಮಾಳಲ್ಲಿ ಕೀಳರಿಮೆ ಉಂಟಾಗಿ, ಅಸಾಧ್ಯವಾದ ನೋವು ಉಂಟಾಯಿತು. ರೂಪವಿಲ್ಲದಿದ್ದರೂ ಅಂತಸ್ತಿನಿಂದ, ಅವರಿಗೆ ಎಲ್ಲ ರೀತಿಯ ಮರ್ಯಾದೆ ಸಿಕ್ಕಿತ್ತು. ಸುಮಾಳಲ್ಲಿ ರೂಪವಿದ್ದೂ, ಶ್ರೀಮಂತಿಕೆಯಿಲ್ಲದೆ ಅಗೌರವದಿಂದ ಎಲ್ಲರೂ ವರ್ತಿಸಿದರು.

ಸಮಾಜದಲ್ಲಿ ಹಣಕ್ಕೆ ಬೆಲೆಯಿದೆಯೇ ಹೊರತು ವ್ಯಕ್ತಿ ಅಥವಾ ವ್ಯಕ್ತಿತ್ವಕ್ಕಲ್ಲ. ಸಮಾಜದಲ್ಲಿ ಕಂಡು ಕೇಳುವ, ಅನುಭವಿಸುವ ಸಂದರ್ಭವನ್ನೇ ವೈದೇಹಿಯವರು ಸುಮಾಳ ಪಾತ್ರದ ಮೂಲಕ ಬಹಿ ರಂಗಗೊಳಿಸುತ್ತಾರೆ.

ಉತ್ಸಾಹ, ಸಂತೋಷ, ಸಂಭ್ರಮದಿಂದ ಮದುವೆಗೆ ಹೊರಟಿದ್ದ ಸುಮಾ ಅಲ್ಲಿನ ಅವಮಾನಕಾರೀ ಘಟನೆಯಿಂದ ನಿರಾಶೆಗೊಳ್ಳುತ್ತಾಳೆ. ಪ್ರೀತಿ - ಅಭಿಮಾನಕ್ಕೆ ಬೆಲೆ ಸಿಗದೆ, ಯಾತನೆಯನ್ನು ಅನುಭವಿಸುತ್ತಾಳೆ. ಹೆಣ್ಣಿನ ಸೂಕ್ಷ್ಮ ಮನೋಭಾವ ಈ ಸಿನಿಮೀಯ ಘಟನೆಯ ಮೂಲಕ ವೈದೇಹಿ ಚಿತ್ರಿಸಿರುವುದು ಸ್ವಲ್ಪ ಕೃತಕವಾಗಿ ಕಂಡರೂ ನಿರೂಪಣೆಯ ರೀತಿಯಿಂದ ಗಮನ ಸೆಳೆಯುತ್ತಾರೆ.

ಸ್ತ್ರೀಸಂವೇದನೆ ವಿವಿಧ ಸಂದರ್ಭಗಳಲ್ಲಿ ವಿವಿಧ ರೀತಿಯಲ್ಲಿ ಪ್ರಕಟಗೊಳ್ಳುವುದನ್ನು ಗುರುತಿಸಬಹುದು. ಒಂದು ಮದುವೆಯ ಸಮಾರಂಭದ ಸನ್ನಿವೇಶದಲ್ಲಿ ಸ್ತ್ರೀ ಮನೋಭಾವ ವ್ಯಕ್ತಗೊಳ್ಳುವುದನ್ನು ವೈದೇಹಿ

ಯವರು ಚಿತ್ರಿಸಿದ್ದಾರೆ. ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದ ವ್ಯಕ್ತಿ ಅವಮಾನಕ್ಕೊಳಪಡುವ ಸನ್ನಿವೇಶವನ್ನು ಕಾಣುವುದು ಸಹಜ. ವೈದೇಹಿಯವರು ಅಗೌರವ ಅವಮಾನ, ಇವುಗಳಿಂದ ಹೆಣ್ಣಿನಲ್ಲಿ ಉಂಟಾಗುವ ಕೀಳರಿಮೆಯು ಭಾವ, ಅದರಿಂದ ಮನಸ್ಸಿನಲ್ಲಾಗುವ ಯಾತನೆಯನ್ನು ಪ್ರಕಟಿಸುತ್ತಾರೆ.

ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು

ಈ ಕಥೆಯನ್ನು "ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ" ಎಂಬ ಕಥಾಸಂಕಲನದಿಂದ ಆರಿಸಿಕೊಳ್ಳಲಾಗಿದೆ.

ಸಾಮಾಜಿಕ ನೆಲೆಯಲ್ಲಿ ಸ್ತ್ರೀ ಸಂವೇದನೆ ಕುರಿತಂತೆ ಹೇಳುವ ಮತ್ತೊಂದು ಕಥೆ "ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು" ಒಂದು ಟಾಕೀಸು ಊರಿನ ಸ್ತ್ರೀಲೋಕದಲ್ಲಿ ಉಂಟುಮಾಡಿದ ಕ್ರಾಂತೀಯ ಅಲೆಗಳನ್ನು ಹೇಳುತ್ತದೆ. "ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು" ಸ್ತ್ರೀ ಬದುಕಿನ ಪ್ರಪಂಚದಲ್ಲಿ ಬದಲಾವಣೆ ಆದಂತಹ ಸನ್ನಿವೇಶಗಳನ್ನು ತಿಳಿಸುತ್ತಾ ಹೋಗುತ್ತದೆ, ಸರಳವಾದ ನಿರೂಪಣೆ ಮಾಡುತ್ತಾ, ಸಮಾಜದಲ್ಲಿ ಸ್ತ್ರೀಯ ಬಗೆಗೆ ಇರುವ ನಂಬಿಕೆ, ಪದ್ಧತಿ, ತಾರತಮ್ಯ ಇವುಗಳನ್ನು ನಯವಾಗಿ ವಿಡಂಬಿಸುತ್ತಾರೆ ವೈದೇಹಿಯವರು.

ಬಹಳ ಹಿಂದೆ ಬೊಂಬಾಯಿಗೆ ಓಡಿಹೋಗಿದ್ದ ಗುಲಾಬಿ ಎಂಬುವಳ ದತ್ತು ಮಗ ಚಂದ್ರಪ್ಪ ಮುಂಬಾಯಿಯಿಂದ ಒಂದು ಗುಲಾಬಿ ಹೆಸರಿನಲ್ಲಿ ಟಾಕೀಸನ್ನು ಕಟ್ಟಿಸುತ್ತಾನೆ, ಆ ಊರಿನ ಸೂಲಗಿತ್ತಿ ಲಿಲ್ಲೀಬಾಯಿ ಹೆಂಗಸರ ಲೈನಿಗೆ ಗೇಟ್‌ಕೀಪರ್. ಸೂಲಗಿತ್ತಿಯ ಕೆಲಸದೊಂದಿಗೆ ಟಾಕೀಸಿನ ಕೆಲಸ. ಲಿಲ್ಲೀಬಾಯಿ ಊರಿನ ಹೆಂಗಸರನ್ನು ಸಿನಿಮಾಕ್ಕೆ ಬಿಡುವ ಗೇಟ್‌ಕೀಪರ್ ಆಗಿ ನೇಮಕವಾಗುತ್ತಾಳೆ. ಲಿಲ್ಲಿಬಾಯಿ ಹೆಂಗಸರ ಪರವಾಗಿದ್ದು, ಹೆಚ್ಚು ಜನರನ್ನು ಟಿಕೆಟ್ ಇಲ್ಲದೆ ಬಿಡಲು ಪ್ರಾರಂಭಿಸಿದಳು. ಮ್ಯನೇಜರ್‌ಗೆ ತಿಳಿದು, ಅವಳ ಮೇಲೆ ಜೋರು ಮಾಡಿದ. ಮ್ಯನೇಜರ್‌ನ ನಡತೆ ಸರಿ ಇರದಿದ್ದರಿಂದ ಆ ಕೆಲಸದಿಂದ ವಜಾ ಆಗುತ್ತಾನೆ. ಗುಲಾಬಿ ಟಾಕೀಸು ಬದಲಾಯಿತು ನರ್ಸಿಂಗ್ ಹೋಂ ಊರಿಗೆ ಬಂದಿತು ಲಿಲ್ಲೀಬಾಯಿಯ ಕೆಲ್ಸ ಹೋಯಿತು ಆಸ್ಪತ್ರೆಯಲ್ಲಿಯೇ ಹೆರಿಗೆಯಾದರೂ ಬಾಣಂತಿ - ಮಗುವಿನ ಚಾಕರಿಗೆ ಲಿಲ್ಲಿಯೇ ಬೇಕಾಯಿತು. ಗುಲಾಬಿ ಟಾಕೀಸು, ನರ್ಸಿಂಗ್ ಹೋಂಗಳು ಊರಿನಲ್ಲಿ ಸಣ್ಣ ಅಲೆಗಳನ್ನು ಎಬ್ಬಿಸಿತು. ಲಿಲ್ಲೀ ಇಲ್ಲದಿದ್ದರೂ ಗಂಡಂದಿರುನ್ನು ಎದುರಿಸಿ, ಹೆಂಗಸರು ಸಿನಿಮಾಕ್ಕೆ ಹೋಗುವ ಧೈರ್ಯ ಮೂಡಿತು. ನಾಗರಿಕತೆಯ ಮೆಟ್ಟಿಲುಗಳು ಜನರ ಬದುಕಿನಲ್ಲಿ ಕ್ರಾಂತಿಯನ್ನು ಬಯಸುವಂತೆ ಮಾಡುತ್ತವೆ. ಎಂಬತಹ ವಾತಾವಣ ಕ್ರಾಂತಿಯ ಸೂಚನೆಗಳೊಂದಿಗೆ ಕಥೆ ಮುಕ್ತಾಯವಾಗುತ್ತದೆ.

ಕಥೆಯಲ್ಲಿ ಮೊದಲಿಗೆ ಊರಿನ ವಾತಾವರಣ, ಸನ್ನಿವೇಶ ಇವುಗಳ ಪರಿಚಯ ಮಾಡಿ ಕೊಡುತ್ತಾರೆ. ಹೆಂಗಸರಿಗೆ ಮನೆಯೇ ಪ್ರಪಂಚ, ತಮ್ಮ ನಿತ್ಯ ಕೆಲಸಗಳಲ್ಲಿ ಮಗ್ನರಾಗಿರುತ್ತಿದ್ದರು, ಗಂಡಸರಿಗೆ ಎಲ್ಲ ರೀತಿಯ ಸ್ವಾತಂತ್ರ್ಯ. ಹೆಂಗಸರು ಅತಂತ್ರರು. ಎಲ್ಲದಕ್ಕೂ ಮನೆಯ ಯಜಮಾನನ ಅಪ್ಪಣೆ ಮಾರುವಂತಿಲ್ಲ.

ಹೆಣ್ಣು ಪಾರಂಪರಿಕವಾಗಿ ಪುರುಷ ಪ್ರಧಾನ ಸಮಾಜದಲ್ಲಿ ಶೋಷಣೆಯನ್ನು ಅನುಭವಿಸುತ್ತಲೇ ಬಂದಿದ್ದಾಳೆ. ವೈದೇಹಿಯವರು ಗಂಡಿನ ದರ್ಪ, ಹೆಣ್ಣಿನ ಮೇಲೆ ಚಲಾಯಿಸುವ ಅಧಿಕಾರ ಸ್ತ್ರೀಶೋಷಣೆಯನ್ನು ಈ ಕಥೆಯಲ್ಲಿ ಚಿತ್ರಿಸುತ್ತಾರೆ, ಊರಿನಲ್ಲಿ ಸ್ತ್ರೀಯರು ಇದ್ದಂತ ಪರಿಸ್ಥಿತಿಯ ವಿವರಣೆಯ ಮೂಲಕ ಈ

ಅಂಶವನ್ನು ಗಮನಿಸಬಹುದು. " ಒಮ್ಮೆ ಊರಿಗೆ ಸರ್ಕಸ್ಸು ಬಂದಿತ್ತು ಆದರೆ ಹೆಂಗಸರು ನೋಡಿದ್ದಿಲ್ಲ. ಸರ್ಕಸ್ಸು - ಗಿರ್ಕಸ್ಸು ಹೆಂಗಸರಿಗಲ್ಲ ಎಂದು ಗಂಡಸರು ಗುಡುಗಿದರೆ ಮುದುರಿಕೊಂಡು ಕುಳಿತುಕೊಳ್ಳುವ ಹೆಂಗಸರು."

ಟೆಂಟ್‌ನಲ್ಲಿ ಬರುವ ಸಿನಿಮಾ ನೋಡಲು ಹೋಗಲು ಹೆಂಗಸರಿಗೆ, ಗಂಡಸರ ಅನುಮತಿ ಬೇಕಾಗುತ್ತಿತ್ತು. ಅವರ ಒಪ್ಪಿಗೆ ಇಲ್ಲದೆ ರಸ್ತೆಗಿಳಿಯುವುದನ್ನು ಅವರು ಕಲ್ಪಿಸಲೂ ಸಾಧ್ಯವಿಲ್ಲ ಎನ್ನುವಷ್ಟರ ಮಟ್ಟಿಗೆ ಗಂಡಸರ ಅಧೀನಕ್ಕೊಳಗಾಗಿ ಅತಂತ್ರರಾಗಿದ್ದರು, ಮಹಿಳೆಯ ಸ್ಥಾನ ಸಮಾಜದಲ್ಲಿ ಎಷ್ಟರಮಟ್ಟಿಗೆ ಇದೆ ಎಂಬುದನ್ನು ಸೂಕ್ಷ್ಮವಾಗಿ ಕಾಣಿಸಿದ್ದಾರೆ ಲೇಖಕಿ.

ಇದ್ಯಕ್ಕಿದ್ದಂತೆ ಊರಿನಲ್ಲಿ ಬಹಳ ಹಿಂದಿನಿಂದಲೂ ಹರಡಿಕೊಂಡು ನಿಂತಿದ್ದ ದೊಡ್ಡ ಮರವನ್ನು ಕಡಿಯಲಾರಂಭಿಸಿದರು ಕಾರಣ ಅಲ್ಲೊಂದು ಟಾಕೀಸು ಕಟ್ಟಲು ಬಹಳ ಹಿಂದೆ ಬೊಂಬಾಯಿಗೆ ಓಡಿಹೋದ ಗುಲಾಬಿಯ ದತ್ತು ಮಗ ಚಂದ್ರಪ್ಪ ಟಾಕೀಸು ಕಟ್ಟಿಸಿದನ. ಈ ‘ ಗುಲಾಬಿ ಟಾಕೀಸು ’ ಮುಂದೆ ಊರಿನಲ್ಲಿ ನಾಗರಿಕತೆಯ ಕ್ರಾಂತಿಯ ಅಲೆಗಳನ್ನು ಎಬ್ಬಿಸಿತು.

‘ಗುಲಾಬಿ ಟಾಕೀಸು’ ಕಥೆಯ ಕೇಂದ್ರಬಿಂದು ಊರಿನ ಸ್ತ್ರೀಲೋಕವನ್ನೇ ಬದಲಿಸಿಬಿಡುತ್ತದೆ. ನಾಗರಿಕತೆಯ ಸಂಕೇತವಾಗಿ ‘ಟಾಕೀಸು’ ಕಂಡುಬರುತ್ತದೆ. ಈ ನಾಗರಿಕತೆಯ ಪ್ರವೇಶದಿಂದಾಗಿ ಊರಿಗೆ ಊರೇ ಪರಿವರ್ತನೆಗೊಳ್ಳುವ ಸನ್ನಿವೇಶವನ್ನು ವೈದೇಹಿಯವರು ಚಿತ್ರಿಸುತ್ತಾರೆ. ಟಾಕೀಸು ಬಂದ ಮೇಲೆ ಹೊಸ ಹೊಸ ಸಿನಿಮಾಗಳು ಬರತೊಡಗಿದವು ಉಡುಗೆ - ತೊಡುಗೆಗಳಲ್ಲಿ, ಅಲಂಕಾರಗಳಲ್ಲಿ, ಸ್ಕೂಲ್‌ಡೇಗೆ ಚಲನಚಿತ್ರದ ಹಾಡುಗಳು, ಪ್ರೀತಿಸುವಾಗಲೂ ಸಿನಿಮಾ ಶಬ್ದ, ಸಿನಿಮಾದ ಜೋಗುಳವನ್ನು ಗುನುಗು ತೊಡಗಿದ್ದು, ಇತ್ಯಾದಿ ಎಲ್ಲ ರೀತಿಯಲ್ಲಿಯೂ ‘ ಗುಲಾಬಿ ಟಾಕೀಸು ’ ಊರಿನಲ್ಲಿ ಕ್ರಾಂತಿಯ ಸಣ್ಣ ಅಲೆಗಳನ್ನೆಬ್ಬಿಸಿತು. ಊರು ನಿಧಾನವಾಗಿ ನಗರೀಕರಣದ ಕಡೆಗೆ ವಾಲತೊಡಗಿತು.

ಊರಿನಲ್ಲಿದ್ದ ಹೆಂಗಸರು ತಮ್ಮ ಗಂಡಂದಿರ ಗುಲಾಮರಾಗಿ, ಅವರ ಬಿಗಿ ಮುಷ್ಠಿಯಲ್ಲಿ ಬಂಧಿತರಾಗಿ ಬದುಕುತ್ತಿದ್ದರೆ, ಟಾಕೀಸಿನ ಗೇಟ್‌ಕೀಪರ್ ಆಗಿದ್ದ ಲಿಲ್ಲಿಬಾಯಿ ಮಾತ್ರ ಮುಕ್ತವಾಗಿ ಬದುಕುತ್ತಿದ್ದಳು. ಆಕೆಯ ಗಂಡ ಕಲಾಯಿ ನಾಯಕ, ದುಡಿಯುವುದರಲ್ಲಿ ದಡ್ಡ ಲಿಲ್ಲೀಬಾಯಿ ಬಾಣಂತನ ಮಾಡಿ, ಹಣ ಸಂಪಾದನೆ ಮಾಡುತ್ತಿದ್ದಳು ‘ ಹೆಣ್ಣಿನ ಸಂಪಾದನೆಯ ಮೇಲೆ ತನ್ನ ಸಂಸಾರ ನಿಲ್ಲ ಬೇಕಾಯಿತೆ ?’ ಅವನನ್ನು ಉದ್ದೇಶಿಸಿ, " ಇದು ಕಲಿ ಊರು, ಇಲ್ಲೇ ಇದ್ದರೆ ಬರ್‍ಕಕ್ಕಿಲ್ಲ ಒಂದಷ್ಟು ಸಮಯ ಎಲ್ಲಾದರೂ ಹೋಗಬೇಕು ಬರಬೇಕು ಎಲ್ಲಾ ಒಳ್ಳೆಯದಾಗುತ್ತದೆ " ಎಂದು ಬುದ್ಧಿ ಹೇಳುತ್ತಿದ್ದಳು ಎಲ್ಲದರ ಪರದಾಗಿ ಗಂಡ ಬೊಂಬಾಯಿಗೆ ಓಡಿಹೋದ. ಎಷ್ಟು ದಿನವಾದರೂ ವಾಪಸ್ಸು ಬರಲಿಲ್ಲ ದುಡಿದು ಒಂಟಿಯಾಗಿ ಜೀವನ ನಡೆಸುತ್ತಿದ್ದ ದಿಟ್ಟ ಹೆಣ್ಣು ಲಿಲ್ಲೀಬಾಯಿಯ ಪಾತ್ರ ರಚನೆಯಲ್ಲಿ ಆಧುನಿಕತೆಯನ್ನು ಗುರುತಿಸಬಹುದು ಲಿಲ್ಲೀಬಾಯಿಯ ಪಾತ್ರದ ಅಭಿವ್ಯಕ್ತಿಯ ಮೂಲಕ, ಹೆಣ್ಣು ಅಧೀನತೆಯಿಂದ ಮುಕ್ತಳಾಗಬೇಕೆಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ,

ನಾಗರಿಕತೆ ಕಾಲಿಟ್ಟಾಗ ವ್ಯಕ್ತಿ ಮತ್ತು ಬದುಕಿನ ಮೇಲೆ ಗಾಢ ಪರಿಣಾಮ ಉಂಟಾಗುತ್ತದೆ, ಇದನ್ನು

ಋಣಾತ್ಮಕವಾಗಿಯೂ ಕೆಲವರು ಯೋಚಿಸುತ್ತಾರೆ. ನಾಗರಿಕತೆಯಿಂದ ಜನರ ಬದುಕಿನ ಮುಗ್ಧತೆ ನಾಶವಾಗುತ್ತದೆ. ನಮ್ಮ ಪರಂಪರೆಯ ವಿಚಾರಗಳಿಗೆ ಧಕ್ಕೆ ಒದಗುತ್ತದೆ. ಸಂಸ್ಕೃತಿಯ ಭವ್ಯ ಸ್ವರೂಪ ತನ್ನತನವನ್ನು ಕಳೆದುಕೊಳ್ಳುತ್ತದೆ ಎಂದು ವ್ಯಾಖ್ಯಾನ ಮಾಡುವವರೂ ಇದ್ದಾರೆ. ದೇವನೂರು ಮಹಾದೇವರವರು ತಮ್ಮ "ಡಾಂಬರು ಬಂದುದು" ಕಥೆಯಲ್ಲಿ ನಾಗರಿಕತೆ ಊರನ್ನು ಪ್ರವೇಶಿಸಿದಾಗ, ಆಧುನಿಕತೆಯ ಸಾಮಾಜಿಕ ಸಂದರ್ಭಕ್ಕೆ ಒಗ್ಗಿಕೊಳ್ಳುವ ಸಂದರ್ಭವನ್ನು ಚಿತ್ರಿಸುತ್ತಾರೆ ರಸ್ತೆ ಹಾಕುವ ಸಂದರ್ಭದಲ್ಲಿ ಜನರ ಮಕ್ಕಳ ಪ್ರತಿಕ್ರಿಯೆ ನಾಗರಿಕತೆಯ ಪ್ರಭಾವ ಊರಿನಲ್ಲಿ ಉಂಟಾಗುವುದು, ದೇವನೂರರು ಚಿತ್ರಿಸುತ್ತಾರೆ. ಅದರಂತೆ ಈ ಕಥೆಯಲ್ಲಿ 'ಟಾಕೀಸು' ಎಂಬ ನಾಗರಿಕತೆಯ ಅಂಶ ಊರಿಗೆ ಕಾಲಿಟ್ಟಾಗ, ಊರಿನ ಜನರ ಜೀವನವೇ ಬದಲಾಯಿತು. ಲಿಲ್ಲೀಬಾಯಿ ಪಾತ್ರದ ಮೂಲಕ ವೈದೇಹಿಯವರು ಇದನ್ನು ಸ್ಪಷ್ಟ ಪಡಿಸುತ್ತಾರೆ.

ಬೆಟ್ಟನಗಲದ ಅಂಚಿನ ಮಗ್ಗದ ಸೀರೆ ಉಡುತ್ತಿದ್ದವಳು, ಮೆತ್ತಗಿನ ವಾಯಿಲ್ ಸೀರೆ ಉಡಲಾರಂಭಿಸಿದ್ದು, ಸ್ಟೀಲಿನ ಪಾತ್ರೆಗಳನ್ನು ಕೊಂಡಳು. ಕಿವಿ, ಓಲೆಗಳನ್ನು ಬದಲಿಸಿದಳು, ಹೀಗೆ ಅವಳ ಬದುಕು ಬದಲಾಯಿತು.

ಒಮ್ಮೆ ಸೀರೆ ಕೊಳ್ಳುವಾಗ ವಾಟುಮರೆ, " ಏನು ಲಿಲ್ಲಿ, ದೆಸೆ ಏಕ್ಕಿದ ಹಾಗೆ ಕಾಣುತ್ತದೆ ಹೀಗೆ ನಡೆದರೆ ಮನೆ ಕಟ್ಟುಸುತ್ತೀಯಾ ಏನು ?" ಎಂದು ಕೇಳಿದಾಗ,

"ನೀನು ಹೇಗೆ ದುಡ್ಡು ಮಾಡಿದೆ ಗೊತ್ತಲ್ಲ.........:" ಆದರೂ ಆತನನ್ನು ಪ್ರಶ್ನಿಸುವವರಿಲ್ಲ, ನನ್ನನ್ನು ಕೇಳವವರಿದ್ದಾರೆ " ಎಂದು ಮನಸ್ಸಿನಲ್ಲೇ ಅಂದುಕೊಳ್ಳುವಳು.

ಹೆಣ್ಣು ಸಮಾಜದಲ್ಲಿ ಸ್ವತಂತ್ರಳಾಗಿ ಬದುಕನ್ನು ನಡೆಸಿದರೆ ಪ್ರಶ್ನಿಸುವಂತಾಗುತ್ತದೆ. ಪಾರಂಪರಿಕವಾಗಿ ಬಂದಿರುವ ನೀತಿ - ನಿಯಮಗಳನ್ನು ಮೀರುವಂತಿಲ್ಲ. ಆದರೆ ಗಂಡಸಿಗೆ ಯಾವುದೇ ಶೃಂಖಲೆಗಳಿಲ್ಲ. ಇಲ್ಲಿ ಸಮಾಜದಲ್ಲಿನ ಲಿಂಗತಾರಮ್ಯದ ಬಗ್ಗೆ ಗುರುತಿಸಬಹುದು. ಪ್ರತಿಯೊಂದು ಸನ್ನಿವೇಶವನ್ನು ವೈದೇಹಿ ಯವರು ಚಿತ್ರಿಸುವಾಗ ಒಂದಲ್ಲ ಒಂದು ರೀತಿ ಸಮಾಜದಲ್ಲಿನ ಗಂಡು - ಹೆಣ್ಣಿನ ಅಸಮಾನತೆಯನ್ನು ಸೂಚ್ಯವಾಗಿ ಹೇಳುತ್ತಾರೆ.

ಮಂಜುನಾಥಯ್ಯನ ಹೆಂಡತಿ ತನ್ನ ಮಕ್ಕಳೊಂದಿಗೆ ಸಿನಿಮಾ ನೋಡಲು ಬಂದಾಗ "ಟಿಕೆಟ್ ತೆಗೆದು ಕೊಳ್ಳದೆ ಒಳಗೆ ಬಿಡುವುದಿಲ್ಲ" ಎಂದು ಲಿಲ್ಲೀ ಹೇಳಿದಾಗ,

ಮಂಜುನಾಥಯ್ಯನ ಹೆಂಡತಿ, " ಎಷ್ಟು ನೂರು ಮುಡಿ ಅಕ್ಕಿ ಹುಟ್ಟುವಳಿ ಇದ್ದರೇನಾಯಿತು? ಇರುವಷ್ಟಾನ್ನಾದರೂ ತಾನು ಬೇಡಿ ಪರದೇಶಿಯಂತೆ ಕೇಳಿ ತೆಗೆದುಕೊಳ್ಳದೆ ಬೇಕಾಯಿತಲ್ಲವೆ ?" ಎಂದು ಆಕೆ ಮನಸ್ಸಿನಲ್ಲಿ ಸಂಕಟಪಡುತ್ತಾಳೆ, ಹೆಣ್ಣನ್ನು ದರ್ಪದಿಂದ ಕಾಣುವ ಗಂಡು, ಪುರುಷ ಪ್ರಧಾನ ಸಮಾಜದಲ್ಲಿ ಪರಂಪರಾಗತವಾಗಿ ಬಂದಿದೆ, ಇದನ್ನು ಪ್ರತಿಭಟಿಸುವ ಧೋರಣೆ ಪಾತ್ರಗಳಲ್ಲಿ ಗಮನಿಸಬಹುದು.

"ಒಟ್ಟಾರೆ ಅತಂತ್ರರಾದೆವಲ್ಲ : ಕೈ ತುಂಬಾ ದುಡ್ಡನ್ನು ಗಂಡಸರು ಕೊಟ್ಟಿದ್ದರೆ, ಅವರ ಮರ್ಯಾದೆಯೇ ಉಳಿಯುತ್ತಿತ್ತು" ಮಂಜುನಾಥಯ್ಯನ ಮನೆಯವರು" ಎಂದು ಗುರುತಿಸುವುದು - ಇವೆಲ್ಲಾ ಸಮಾಜದಲ್ಲಿ

ಸ್ತ್ರೀ ಏನಿದ್ದರೂ ಪುರುಷನಿಂದ ಗುರುತಿಸಲ್ಪಡುವವಳು ಅಂದರೆ, ಸಮಾಜದಲ್ಲಿನ ಅವಳ ಸ್ಥಾನವೇನು ? ತನ್ನ ತನವೇ ಇಲ್ಲದೆ ಬದುಕುತ್ತಿದ್ದಾಳೆ. ವೈದೇಹಿಯವರು ಅತಂತ್ರತೆಯ ವಿರೋಧವನ್ನು ವ್ಯಕ್ತಪಡಿಸುತ್ತಾರೆ. ಊರಲ್ಲಿ ಆಧುನಿಕತೆಯ ಪ್ರವೇಶದಿಂದಾಗಿ ಅನೇಕ ಬದಲಾವಣೆಗಳು ಉಂಟಾಯಿತು 'ಗುಲಾಬಿ ಟಾಕೀಸು' ಹೆಸರು ಬದಲಾಗಿ, ಮ್ಯಾನೇಜರು ಬದಲಾದರು. ನರ್ಸಿಂಗ್ ಹೋಂ ಕಟ್ಟಲಾಯಿತು. ಗಂಡಸರು - ಹೆಂಗಸರು ಭೇದವಿಲ್ಲದೆ, ಒಬ್ಬನೇ ಗಂಡಸು ಗೇಟ್‌ಕೀಪರಾಗಿ ನೇಮಕನಾದನು. "ಗಂಡಸಿನ ಮುಂದೆ ಹೆರುವುದೇ?" ಎನ್ನುತ್ತಿದ್ದವರು, ನರ್ಸಿಂಗ್ ಹೋಂಗೆ ಹೋಗಲು ಪ್ರಾರಂಭವಾಯಿತು ಸಂಜೆ ಸಿನಿಮಾಕ್ಕೆ ಹೋಗುವಷ್ಟು ಧೈರ್ಯ ಹೆಂಗಸರಲ್ಲಿ ಮೂಡಿತು ಗಂಡಸರು ಗದರಿದರೆ, " ಅದೇನು ಒಂದು ಸಿನಿಮಾ ನೋಡಲು ನಾಲಾಯಕದವೇ ? ಒಳ್ಳೇಕತೆ ನೀವು ಹೇಳಿದ ಹಾಗೆ ಕೇಳುತ್ತಿದ್ದರೆ ಹೇಗೂ ಕಾಣಿಸೀರಿ " ಎಂದು ಗಂಡಸರ ಮುಂದೆ ನಿಂತು ಮಾತನಾಡುವಷ್ಟು ಧೈರ್ಯ ಬಂದಿದೆ ಹೀಗೆ ನಾಗರಿಕತೆಯ ಪ್ರಭಾವ ಆ ಊರಿನ ಮೇಲಾಗಿ, ಸ್ತ್ರೀಯರು ಶೋಷಣೆಯ ಬದುಕಿನಿಂದ ಮುಕ್ತರಾಗುವಷ್ಟು ಗಾಢವಾದ ಪರಿಣಾಮ ಸ್ತ್ರೀಯರ ಬದುಕಿನ ಮೇಲೆ ಉಂಟಾಯಿತು. ಹೆಣ್ಣು ಸಮಾಜದಲ್ಲಿ ಯಾವುದೇ ತಾರತಮ್ಯವಿಲ್ಲದೆ, ಸಮಾನತೆಯನ್ನು ಕಾಣಬೇಕೆಂಬ ಹಂಬಲವನ್ನು ವ್ಯಕ್ತಪಡಿಸುತ್ತಾರೆ.

ಒಟ್ಟಾರೆ, ನಾಗರಿಕತೆಯ ಪ್ರದೇಶದಿಂದಾಗಿ, ಒಂದು ಸಮಾಜ ಒಗ್ಗಿಕೊಳ್ಳುವ ಸಂದರ್ಭವನ್ನು ಚಿತ್ರಿಸುತ್ತಾರೆ. 'ಕಾಲ', 'ಸಂದರ್ಭ' ವೈದೇಹಿಯವರ ಕಥೆಗಳಲ್ಲಿ ಸಾಮಾನ್ಯ ಅದರಂತೆ ಈ ಕಥೆಯಲ್ಲಿಯೂ ಕಾಣುತ್ತೇವೆ. ಟಾಕೀಸು - ನಾಗರಿಕತೆಯ ಒಂದು ಟಾಕೀಸಿನಿಂದ ಏನೆಲ್ಲಾ ಕ್ರಾಂತಿಯ ಅಲೆಗಳು ಊರಿನಲ್ಲಿ ಎದ್ದಿತು , ಜನ ಆಧುನಿಕತೆಗೆ ಹೇಗೆ ಪ್ರತಿಕ್ರಿಯಿಸಿದರು ಎಂಬುದನ್ನು ಹಿಡಿದಿಡುತ್ತದೆ. ಊರಿನ ಹೆಂಗಸರು ಆಧುನಿಕಗೊಂಡಿದ್ದನ್ನು ಮುಖ್ಯವಾಗಿ ಗಮನಿಸಬೇಕಾದ ಅಂಶ ವೈದೇಹಿಯವರು ತಾವು ಕಂಡಂತಹ ಒಂದು ಸಂದರ್ಭವನ್ನು ವೈಚಾರಿಕ ನೆಲೆಯಲ್ಲಿ ಮಂಡಿಸಿರುವುದು ಗಮನಾರ್ಹ ಸಾಮಾಜಿಕವಾಗಿ ಮಹಿಳೆ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಬೇಕಾಗಿದೆ. ಆಧುನಿಕತೆಯ ಗಾಳಿ ಬೀಸಿದಾಗ, ಊರಿನ ಸ್ತ್ರೀ ಬದುಕಿನಲ್ಲಿ ಎದ್ದ ಕ್ರಾಂತಿಕಾರೀ ಅಲೆಗಳು ಅದರ ಸಾಮಾಜಿಕ, ಕೌಟುಂಬಿಕ ನೆಲೆಯಲ್ಲಿ ಬದಲಾವಣೆಯಾಗಲು ಪ್ರೇರೇಪಿಸಿತು.

ಅವಲಂಬಿತರು

ಈ ಕಥೆಯನ್ನು "ಅಂತರಂಗದ ಪುಟಗಳು" ಎಂಬ ಕಥಾಸಂಕಲನದಿಂದ ಆರಿಸಿಕೊಳ್ಳಲಾಗಿದೆ.

ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಶೋಷಣೆ, ಅತಂತ್ರಕ್ಕೆ ಗುರಿಯಾಗಿದ್ದಾಳೆ. ತನ್ನನ್ನು ಉತ್ತಮ ಸ್ಥಾನದಲ್ಲಿ ಗುರುತಿಸಿಕೊಳ್ಳವುದಕ್ಕಾಗಿ ಹೆಣ್ಣನ್ನು ತುಳಿಯುತ್ತಾ ಬಂದಿದ್ದಾನೆ. ಇದೊಂದು ಸಂಪ್ರದಾಯವೆಂಬಂತೆ ಪಾರಂಪರಿಕವಾಗಿ ನಡೆಯುತ್ತಾ ಬಂದಿದೆ. ಆದರೆ " ಅವಲಂಬಿತರು " ಕಥೆಯಲ್ಲಿ ಹೆಣ್ಣು ಮತ್ತೊಂದು ಹೆಣ್ಣನ್ನು ಶೋಷಿಸುತ್ತಾಳೆ, ಸಮಾಜದ ಇನ್ನೊಂದು ಮುಖದ ಪರಿಚಯವೂ ನಮಗಾಗುತ್ತದೆ.

ಒಂದು ಹೆಣ್ಣಿನ ಬಗ್ಗೆ ಕನಿಕರವಿದ್ದಂತೆ, ಶೋಷಣೆಯೂ ಇದೆ. ಹೆಣ್ಣನ್ನು ದುಡಿಸಿಕೊಳ್ಳುವ ಯಂತ್ರವನ್ನಾಗಿ ಬಳಸದೆ, ಅವಳನ್ನು ಮಾನವೀಯತೆಯಿಂದ ನೋಡಬೇಕು ಅವಳ ಆಸೆ ಆಕಾಂಕ್ಷೆಗಳಿಗೂ ಬೆಲೆಕೊಡಬೇಕು, ಗೌರವಿಸಬೇಕು ಈ ವಿಚಾರವನ್ನೊಳಗೊಂಡ ಕಥೆ "ಅವಲಂಬಿತರು".

ಈ ಕಥೆಯಲ್ಲಿ ಶೋಷಿತಳಾಗಿರುವ ಹುಡುಗಿ ಅಹಲ್ಯೆ ಒಬ್ಬ ಬಡ ಹುಡುಗಿ ಅಹಲ್ಯೆ, ಶಾರದೆಯ ಮಗುವನ್ನು ನೋಡಿಕೊಳ್ಳುವುದಕ್ಕಾಗಿ ಬಂದವಳು. ಶಾರದೆ ಆ ಮುಗ್ಧ ಹುಡುಗಿ ಅಹಲ್ಯಳನ್ನು ಕಾಣುವ ಬಗೆ ಈ ಕಥೆಯಲ್ಲಿ ವ್ಯಕ್ತವಾಗಿದೆ.

ಅಹಲ್ಯ ಜಾಣ ಹುಡುಗಿ, ಮಗುವನ್ನು ಮಲಗಿಸುವುದು, ಮಗುವಿಗೆ ನೀರು ಹಾಕುವುದು; ಸ್ನಾನ ಮಾಡಿಸುವುದು, ಊಟ ಮಾಡಿಸುವುದು ಹೀಗೆ ಮಗುವಿನ ಸಂಪೂರ್ಣ ಜವಾಬ್ದಾರಿ ಅಹಲ್ಯಳದೇ. ಮಗುವನ್ನು ನೋಡಿಕೊಳ್ಳುವುದಷ್ಟೇ ಅಲ್ಲ, ಮನೆಗೆಲಸವನ್ನು ಮಾಡಿಕೊಂಡು ಹೋಗುತ್ತಿದ್ದಂತಹ ಜಾಣ ಹುಡುಗಿ ಅಹಲ್ಯ.

ಅಹಲ್ಯೆಯದು ಮುಗ್ಧ ಪಾತ್ರ. ಶಾರದೆಯಿಂದ ಮಾನಸಿಕವಾಗಿ ಎಷ್ಟೇ ಕಿರುಕುಳಕ್ಕೊಳಗಾದರೂ ಯಾವುದೇ ವಿರೋಧವನ್ನು ವ್ಯಕ್ತಪಡಿಸುವುದಿಲ್ಲ. ಆದರೆ ತನ್ನ ಯಜಮಾನಿ ಶಾರದೆಯ ಬಗ್ಗೆ ಬೇಸರವಿದೆ. ಆಫೀಸಿಗೆ ಹೋಗುವ ಮುನ್ನ ಎಣ್ಣೆ, ತುಪ್ಪ, ಹಾಲು, ಬೆಣ್ಣೆ ಎಲ್ಲ ಬೀಗ ಹಾಕಿ ಹೋಗುತ್ತಿದ್ದಳು ಶಾರದೆ. ಇದರಿಂದ ಆ ಹುಡುಗಿ ಬಹಳ ನೊಂದಿದ್ದಳು. "ಒಂದು ವೇಳೆ ಏನಾಯಿತೀಗ ? ನಾನಿವರ ಮನೆಯಲ್ಲಿ ರಟ್ಟೆ ಜಪ್ಪುವುದಿಲ್ಲವೆ ?' ಎಂಬ ಮನೋಭಾವದವಳಾದರೂ ಪ್ರತಿಭಟನೆ ವ್ಯಕ್ತವಾಗುವುದಿಲ್ಲ.

ಆದರೆ ಅಹಲ್ಯೆಗೆ ತನ್ನ ತಾಯಿಯ ಬಗೆ ಕೋಪವಿದೆ. "ನನ್ನನ್ನು ಇಂಥಲ್ಲಿಗೆ ಕಳಿಸಿದಳಲ್ಲ ಅಮ್ಮ ! ಅವಳನ್ನು ಮೊದಲು ಕಡಿದು ಹುಗಿಯಬೇಕು" ಎಂದು ತನ್ನ ಕೋಪವನ್ನು ವ್ಯಕ್ತಪಡಿಸುತ್ತಾಳೆ ಅಹಲ್ಯ.

ಶಾರದೆಯ ಪಕ್ಕದ ಮನೆಯಲ್ಲಿ ವಾಸವಾಗಿರುವಳು ಸುಶೀಲ. ಕಥೆಯ ವರದಿಗಾರಳಂತೆ ಈ ಪಾತ್ರ ಕಂಡುಬರುತ್ತದೆ. ತನ್ನ ಗೆಳತಿ ಶಾರದೆಯ ಬಗ್ಗೆ ಅವಳಿಗೆ ಬೇಸರವಿದೆ. ಮಗುವನ್ನು ನೋಡಿಕೊಳ್ಳಲು ಕರೆದುಕೊಂಡು ಬಂದು ಆ ಹುಡುಗಿಯನ್ನು ಪ್ರೀತಿಯಿಂದ ಕಾಣದಿರುವ ಶಾರದೆಯನ್ನು ಗಮನಿಸುತ್ತಿರುತ್ತಾಳೆ, "ಮಗುವಾಡಿಸುವುದಕ್ಕೆಂತ ಕರೆದುಕೊಂಡು ಬಂದು ಎಲ್ಲ ಕೆಲಸವನ್ನು ಮಾಡಿಸುತ್ತಿದ್ದಾಳೆ" ಎಂದು ಅಹಲ್ಯೆಯ ಬಗ್ಗೆ ಅನುಕಂಪೆಯನ್ನು ಹೊಂದಿದವಳು.

ಬಡತನದಲ್ಲಿ ಹುಟ್ಟಿ ಬೆಳೆದ ಅಹಲ್ಯೆಯದು ಮುಗ್ಧ ಜೀವಿಯ ಪಾತ್ರ. ನಿಸ್ವಾರ್ಥವಾಗಿ ಸೇವೆಯನ್ನು ಸಲ್ಲಿಸುವ ಹೆಣ್ಣು. ಮಗುವಿನ ಲಾಲನೆ - ಪಾಲನೆ, ಮನೆಗೆಲಸ ಎಲ್ಲವೂ ಅವಳದೇ. ಮನೆಯ ಒಳಿತಿಗಾಗಿ ದುಡಿಯುತ್ತಾಳೆ. ತಾಯಿ ಸೂಚಮ್ಮ "ಸದ್ಯ, ಉಣಿಲಿಕ್ಕೊಂದು ಜನವಾದರೂ ಮನೆಯಲ್ಲಿ ಕಡಿಮೆಯಾಯಿತಲ್ಲ ಎಂತಲೂ ಹೌದು" ಅಜ್ಜಿಯ ಹಾಗೆ, ತನಗೆ ಸಾಕಷ್ಟು ಅನುಭವ ಇರುವಂತೆ ಮಾತು. ಮಗುವನ್ನು ನೋಡಿಕೊಳ್ಳುವ ರೀತಿಯೂ ಹಾಗೆಯೇ.

ಪ್ರತಿಯೊಂದು ಹೆಣ್ಣಿಗೂ ತನ್ನದೇ ಆದ ಆಸೆ, ಆಕಾಂಕ್ಷೆಗಳಿರುತ್ತವೆ. ಅದರಂತೆ ಅಹಲ್ಯ ಎಲ್ಲರ ಹಾಗೆ ಶೋಕು ಜೀವನ ನಡೆಸಬೇಕೆಂದು ಬಯಸುವವಳು. ಆದರೆ ಯಜಮಾನಿ ಒಂದು ಪೈಸೆಯನ್ನೂ ಆಕೆಗೆ ಕೊಟ್ಟಿದ್ದಿಲ್ಲ. ಅವಳ ಭಾವನೆಗಳನ್ನು ಅರ್ಥ ಮಾಡಿಕೊಳ್ಳದೆ ಮನೆಗೆಲಸದವಳನ್ನಾಗಿ ಕಾಣುತ್ತಾಳೆ.

ಒಮ್ಮೆ ಅಹಲ್ಯ "ಸುಸೀಲಕ್ಕ, ನನಗೊಂದು ಒಳ್ಳೆಯ ಹೇರ್‌ಬ್ಯಾಂಡ್ ತೆಗೆಸಿಕೊಡ್ತೀರಾ ?" ಎಂದು ಕೇಳಿದಳು. ಸುಶೀಲೆಗೆ ಶಾರದೆಯ ಭಯ. ಮತ್ತೊಂದು ಕಡೆ "ಈ ಹುಡುಗಿಯ ಒಂದು ಸಣ್ಣ ಆಸೆಗೆ

ನಾನೂ ಸಹ ಅವಳ ದುಡ್ಡಿಗಾಗಿ ಕಾದು ಕುಳಿತಂತೆ ಇದ್ದೇನಲ್ಲ ! ಎಷ್ಟು ಖರ್ಚು ಮಾಡುವುದಿಲ್ಲ ನಾನು ! ಇದೊಂದು ಹೆಚ್ಚಾ ?" ಎಂದು ತನ್ನ ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತಾಳೆ.

ಕೊನೆಗೆ ಸುಶೀಲಳಿಗೆ ಮನಸ್ಸು ತಡೆಯದೆ, ಹೇರ್‌ಬ್ಯಾಂಡನ್ನು ತೆಗೆಸಿಕೊಟ್ಟು "ನಾನು ಕೊಟ್ಟಿದ್ದೆಂತ ಹೇಳಬೇಡ" ಎಂದದ್ದಕ್ಕೆ "ಅದೆಲ್ಲ ಹೇಳಿಕೊಡಬೇಕ ನಂಗೆ ? ಹೆಚ್ಚು ಕೇಳಿದರೆ, ನಿಮ್ಮ ಗಂಡನ ಕಿಸೆಯಿಂದ ಕದ್ದೆ ಎನ್ನುತ್ತೇನೆ. ನನಗೆ ದುಡ್ಡು ಕೊಡದೆ ಇವರು ದುಡಿಸಿಕೊಳ್ಳಬಹುದು, ನಾನು ಕದಿಯಬಾರದಾ ?" ಎನ್ನುತ್ತಾಳೆ. ವಿದ್ಯಾವಂತಳಾದ ಶಾರದೆಯಲ್ಲಿರುವ ಅವಗುಣ, ಮೋಸದ ಬುದ್ಧಿ, ಸ್ವಾರ್ಥ ಏನೂ ತಿಳಿಯದ ಮುಗ್ಧ ಹುಡುಗಿಯಲ್ಲಿರುವ ನ್ಯಾಯ, ಅನ್ಯಾಯದ ಪ್ರಶ್ನೆ ವಿಚಾರ ಮಾಡಬೇಕಾದದ್ದು.

ಭಾರತೀಯ ಸಮಾಜದಲ್ಲಿ, ಹೆಣ್ಣು ಮನೆಯಲ್ಲಿಯೇ ಇದ್ದು, ಸಂಸಾರವನ್ನು ನೋಡಿಕೊಂಡು, ಮಕ್ಕಳ ಪೋಷಣೆಯನ್ನು ಮಾಡುತ್ತಾ ಜೀವನವನ್ನು ಸವೆಸಬೇಕಾದವಳು. ಕ್ರಮೇಣ, ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದಾಗಿ ನಮ್ಮ ಜನಜೀವನದ ಮೇಲೆಯೂ ಪರಿಣಾಮ ಬೀರಿತು. ಹೆಂಗಸರು ವಿದ್ಯಾವಂತರಾಗಿ ಕೆಲಸಕ್ಕೆ ಸೇರುವ, ಬದಲಾವಣೆಯು ನಮ್ಮ ಸಮಾಜದಲ್ಲಿ ಕಾಣಿಸಿಕೊಳ್ಳತೊಡಗಿತು. ಮಕ್ಕಳನ್ನು ಬೇರೆಯವರ ಬಳಿ ಬಿಟ್ಟು ಹೆಂಗಸರು ದುಡಿಮೆಗೆ ಹೋಗುವ ಸಂಸ್ಕೃತಿ ನಮ್ಮಲ್ಲಿ ಬೇರೂರತೊಡಗಿತು. ಈ ಬದಲಾವಣೆಯ ಸಂದರ್ಭವನ್ನು ವೈದೇಹಿಯವರು ಈ ಕಥೆಯಲ್ಲಿ ದಾಖಲಿಸಿದ್ದಾರೆ ಎಂದೆನ್ನಿಸದೆ ಇರದು.

ಅಹಲ್ಯಳಿಗೆ ತನ್ನ ಯಜಮಾನಿ ಶಾರದೆಯ ಮೇಲೆ ಒಂದಿಷ್ಟು ಪ್ರೀತಿಯಾಗಲಿ, ಗೌರವವಾಗಲಿ ಇಲ್ಲ. ತನ್ನ ದುಃಖ, ಸಂಕಟವನ್ನು ಪಕ್ಕದ ಮನೆಯ ಸುಶೀಲಳ ಮುಂದೆ ಹೇಳಿಕೊಳ್ಳುತ್ತಿದ್ದಳು. ಹುಡುಗಿ ದೊಡ್ಡವಳಾದುದರಿಂದ ಮನೆಯಲ್ಲಿಟ್ಟು ಕೊಳ್ಳುವುದು ಸರಿಯಲ್ಲವೆಂದು ಅಹಲ್ಯಳನ್ನು ಊರಿಗೆ ಕಳುಹಿಸಲು ಶಾರದೆ ಆಲೋಚಿಸಿದಳು. ಅಹಲ್ಯ ಹೊರಟು ನಿಂತಳು. ಹೋಗುವ ಸಂದರ್ಭದಲ್ಲಿ ಅಹಲ್ಯ, ಸುಶೀಲಳನ್ನು ಭೇಟಿಯಾಗುತ್ತಾಳೆ. ತನ್ನ ದುಃಖವನ್ನು ಆಕೆಯ ಬಳಿ ಹೇಳಿಕೊಳ್ಳುತ್ತಾಳೆ.... "ಅಲ್ಲ ಸುಸೀಲಕ್ಕ, ಇವರ ಸಣ್ಣ ಬುದ್ಧಿಯವರೆಂತ ಗೊತ್ತಾದರೂ ಇಷ್ಟು ಸಣ್ಣ ಬುದ್ಧಿಯವರು ಎಂತ ತಿಳಿದಿರಲಿಲ್ಲ, ನನ್ನನ್ನು ಕಳಿಸುವುದಾದರೆ ಬೇರೆ ಯಾವ ನೆವ ಇಲ್ಲವ ಇವರಿಗೆ ?.... ಮಗು ದೊಡ್ಡದಾಯಿತು, ಇನ್ನು ಬೇಡ" ಎಂದರೂ ನಾ ಹೊರಡುವವಳೇ. ಬದಲು ಇನ್ನೂ ಇಟ್ಟುಕೊಂಡು ಸಾಕಿದರೆ ಮನೆಯಲ್ಲೇ ಹಾವು ಸಾಕಿದಂತೆ ಆದೀತು ಎಂದರು...."

ನನ್ನ ಚೀಲ ಕೂಡ ಜಪ್ತಿ ಮಾಡಿದರು. ಅಲ್ಲಿ ಸಿಕ್ಕಿತು ಮಣ್ಣು ಹೆಚ್ಚಿಗೆ ಒಂದು ಕಾಸು ನನ್ನ ಕೈ ಮೇಲೆ ! ಎರಡು ಹಳೆ ಹಪ್ಪಟೆ ಸೀರೆ ಕೊಟ್ಟಿದ್ದಾರೆ. .....ಅಮ್ಮನನ್ನು ಕಡಿಯಬೇಕು ಮೊದಲು ಎಂತ" ಎಂದು ತನ್ನ ದುಃಖವನ್ನು ಅಹಲ್ಯ ಹೇಳಿಕೊಂಡಳು. ಶಾರದ, ಅಹಲ್ಯಳನ್ನು ಮನೆಗಾಗಿ ದುಡಿಸಿಕೊಂಡು, ಮಾನವೀಯತೆಯನ್ನು ಆ ಹುಡುಗಿಯ ಮೇಲೆ ತೋರಿಸಲಿಲ್ಲ. ಶೋಷಕ ಪ್ರವೃತ್ತಿ ಗಂಡಿನಲ್ಲಿದ್ದರೇನು, ಹೆಣ್ಣಿನಲ್ಲಿದ್ದರೇನು, ಅದು ಖಂಡನಾರ್ಹವಾಗಿರುತ್ತದೆ.

ಬಡತನ ನಮ್ಮನ್ನೇ ನಾವು ಮಾರಿಕೊಳ್ಳುವ ಸ್ಥಿತಿಯನ್ನು ತಂದೊಡ್ಡುತ್ತದೆ. ಅವಮಾನವನ್ನು

ನುಂಗಿಕೊಂಡು, ಶೋಷಣೆಯಲ್ಲಿಯೇ ಬದುಕನ್ನು ನಡೆಸಬೇಕಾಗುತ್ತದೆ. ಅಹಲ್ಯಳ ಬದುಕು ಅವಮಾನ, ಶೋಷಣೆಗೊಳಗಾದದ್ದು ಬಡತನದಿಂದ. ಅಹಲ್ಯಳೊಂದಿಗೆ ಶಾರದೆ ಒಮ್ಮೆಯೂ ಪ್ರೀತಿ, ಸ್ನೇಹದಿಂದ ವರ್ತಿಸಲಿಲ್ಲ. ಬದಲಾಗಿ ಶೋಷಕ ಪ್ರವೃತ್ತಿಯನ್ನು ಮೆರೆದಳು. ಆದರೆ ಶಾರದೆಯ ಗೆಳತಿ, ಪಕ್ಕದ ಮನೆಯ ಸುಶೀಲ, ಮಾನವೀಯ ವ್ಯಕ್ತಿಯಂತೆ ಕಂಡುಬರುತ್ತಾಳೆ. ಸುಶೀಲಳ ಪಾತ್ರದ ಮೂಲಕ ಕಥೆ ನಿರೂಪಣೆಯಾಗಿದೆಯೇನೋ ಎನ್ನುವಂತೆ ಆ ಪಾತ್ರ ಚಿತ್ರಿತಗೊಂಡಿದೆ.

ತನ್ನದೇ ಆದ ಭಾವನಾ ಪ್ರಪಂಚವನ್ನು ಹತ್ತಿಕ್ಕಿ, ಇನ್ನೊಬ್ಬರ ಆಳಾಗಿ ದುಡಿಯುವ ಹೆಣ್ಣನ್ನು ಸಾಮಾಜಿಕ ನೆಲೆಯಲ್ಲಿ ಬಗೆಬಗೆಯಾಗಿ ಕಾಣುತ್ತೇವೆ. ಕೆಳಸ್ತರದ ಬದುಕು ಬಡತನ ಅಸಹಾಯಕತೆಯನ್ನು ಸೃಷ್ಟಿ ಮಾಡುತ್ತದೆ. ದುಡಿತವೇ ಬದುಕು, ಪ್ರತಿಫಲವಾಗಿ ಶೋಷಣೆಯನ್ನೂ ಅನುಭವಿಸಬೇಕು. ಅಹಲ್ಯಳಿಗೆ ತಾನು ಎಲ್ಲರಂತೆ ಬದುಕಬೇಕು ಎಂಬ ಆಕಾಂಕ್ಷೆ ಇದ್ದರೂ, ಅವಳು ಬಡತನದಿಂದ ಬಂದವಳು ಎಂದ ಮಾತ್ರಕ್ಕೆ ಅದ್ಯಾವುದೂ ಬೇಡವೆ? ಅವಳೂ ಒಂದು ಜೀವಿಯಲ್ಲವೇ? ವೈದೇಹಿಯವರು ವ್ಯಕ್ತಿನಿಷ್ಠ ನೆಲೆಯಲ್ಲಿ ವಿಚಾರವನ್ನು ಮಂಡಿಸುವುದು ಸಾಮಾನ್ಯವಾಗಿರುತ್ತದೆ. ಅದರಂತೆ ಈ ಕಥೆಯಲ್ಲಿಯೂ ಗಮನಿಸಬಹುದು.

ಒಂದು ಹೆಣ್ಣನ್ನು ಆಳಾಗಿ ನೋಡುವ ಮನೋಭಾವ ಪುರುಷನಲ್ಲಷ್ಟೇ ಅಲ್ಲ, ಒಬ್ಬ ಹೆಣ್ಣಿನಲ್ಲೂ ಅಂತಹ ಪ್ರವೃತ್ತಿ ಈ ಸಮಾಜದಲ್ಲಿದೆ, ಎಂಬ ಅಂಶವನ್ನು ಈ ಕಥೆ ವ್ಯಕ್ತಪಡಿಸುತ್ತದೆ. ಸ್ತ್ರೀ ಸಂವೇದನೆಯ ಸೂಕ್ಷ್ಮ ಒಳನೋಟವಿದೆ. ವೈದೇಹಿಯವರಿಗೆ ಸ್ತ್ರೀವಾದವನ್ನು ಸ್ಪಷ್ಟಪಡಿಸುವ ಉದ್ದೇಶ ಇಲ್ಲ. ಸ್ತ್ರೀ ಬಡತನದಿಂದ ಅಸಹಾಯಕತೆಯನ್ನು ಹೊಂದಿ, ತುಳಿತಕ್ಕೆ ಒಳಗಾಗಿರುವ ಸಂಗತಿಯನ್ನು ಈ ಕಥೆ ತೆರೆದಿಡುತ್ತದೆ. ಕಥಾ ನಿರೂಪಣೆ, ಒಂದು ಪಾತ್ರದ ಮೂಲಕವೇ ಅಭಿವ್ಯಕ್ತಗೊಂಡಿರುವುದು, ವೈದೇಹಿ ಯವರ ಇತರ ಕಥೆಗಳಿಗಿಂತ ಈ ಕಥೆ ಭಿನ್ನ ಎನಿಸುತ್ತದೆ.

ಸೌಗಂಧಿಯ ಸ್ವಗತಗಳು :

ಈ ಕಥೆಯನ್ನು "ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ" ಎಂಬ ಕಥಾಸಂಕಲನದಿಂದ ಆರಿಸಿಕೊಳ್ಳಲಾಗಿದೆ.

ಹೆಣ್ಣು ಹುಟ್ಟಿನಿಂದಲೂ ಒಂದಲ್ಲ ಒಂದು ರೀತಿ ಒಬ್ಬರ ಆಶ್ರಯದಲ್ಲಿರ ಬೇಕು ಎಂಬುದನ್ನು ನಮ್ಮ ಸನಾತನ ಧರ್ಮದಲ್ಲಿ ಹೇಳಿದೆ ಎಂಬುದನ್ನು ನಾವು ನಂಬುತ್ತೇವೆ. ಬಾಲ್ಯದಲ್ಲಿ ಮಾತಾಪಿತೃ, ಯೌವ್ವನದಲ್ಲಿ ಪತಿ, ಮುಪ್ಪಿನಲ್ಲಿ ಮಕ್ಕಳು, ಹೀಗೆ ಹೆಣ್ಣು ಒಬ್ಬರ ಅಧೀನದಲ್ಲಿಯೇ ಇದ್ದು ಬಾಳಬೇಕು. ಅವಳಿಗೆ ಯಾವುದೇ ರೀತಿ ಸ್ವಾತಂತ್ರ್ಯವಿಲ್ಲ ಅಂತಹ ಸ್ತ್ರೀಯ ಅತಂತ್ರತೆಯನ್ನು ವಿರೋಧಿಸುವ ರೀತಿ 'ಸೌಂಗಧಿಯ ಸ್ವಗತಗಳು' ಕಥೆಯಲ್ಲಿ ಮೂಡಿ ಬರುತ್ತದೆ. ವೈದೇಹಿಯವರು, ಅತಂತ್ರತೆಯ ಬದುಕಿನಲ್ಲಿ ಸ್ತ್ರೀ ಅನುಭವಿಸುವ ಮಾನಸಿಕ ಯಾತನೆ, ತೊಳಲಾಟವನ್ನು ಅಭಿವ್ಯಕ್ತಿಸಿದ್ದಾರೆ. ಕಥಾನಾಯಕಿಯ ಸ್ವಗತದಲ್ಲಿ ನಿರೂಪಿಸುವ ತಂತ್ರದಲ್ಲಿ ಈ ಕಥೆ ಮೂಡಿಬಂದಿದೆ.

ಕಥಾನಾಯಕಿ ಸೌಗಂಧಿ ತನ್ನ ತಂದೆ - ತಾಯಿಯರನ್ನು ಬಿಟ್ಟು ದೂರವಿದ್ದು ಸ್ವತಂತ್ರವಾಗಿ ಜೀವಿಸಬೇಕೆಂದು ಆಶಿಸುತ್ತಾಳೆ. ಆಕೆ ಹೆಣ್ಣು ಮಗಳು, ಅವಳಿ ಯಾರದ್ದಾದರೂ ರಕ್ಷಣೆ ಬೇಕೆಂದು, ಅವಳು

ಊರಿಗೆ ವರ್ಗವಾಗಿ ಹೋದ ಮೇಲೂ ತಂದೆ, ಮನೆಯ ಯಜಮಾನಿಯನ್ನು ಕಾವಲಿಡುತ್ತಾರೆ. ಮನೆಯ ಯಜಮಾನಿಯಂತೂ ಸೌಗಂಧಿಯ ಪೂರ್ಣ ಜವಾಬ್ದಾರಿ ತನ್ನ ಮೇಲೆಯೇ ಇದೆ ಎನ್ನುವಂತೆ ಸದಾ ಅವಳ ಚಲನ ವಲನಗಳ ಬಗ್ಗೆ ಗಮನವೀಯುತ್ತಾಳೆ, ಸೌಗಂಧಿಗೆ ಬಂಧನಕ್ಕೆ ಸಿಲುಕಿದಂತೆ ಭಾಸವಾಗಿ, ಅದನ್ನು ವಿರೋಧಿಸುವ ಭಾವನೆ ಇದ್ದರೂ ಸಾಧಿಸಲಾಗುವುದಿಲ್ಲ, ಕೊನೆಗೆ ಯಜಮಾನಿಯೂ ಮನೆಯಲ್ಲಿ ಇಲ್ಲದೆ ಹೋದಾಗ ತಂದೆ - ತಾಯಿಗಳೇ ಪ್ರತ್ಯಕ್ಷವಾಗುತ್ತಾರೆ.

ಸೌಗಂಧಿಯ ಇಬ್ಬರು ತಂಗಿಯರಿಗೂ ಈಗಾಗಲೇ ಮದುವೆಯಾಗಿತ್ತು. ಅವಳ ತಂದೆ ಮನೆಯ ಯಜಮಾನಿಯ ಮುಂದೆ ಪ್ರಕಾರ,' ನೋಡಿ, ಕಡೆಗೂ ಮದುವೆ ಮಾಡಲಿಕ್ಕೆ ಆಗಲಿಲ್ಲ, ಇವಳ ತಂಗಿಯರಿಬ್ಬರಿಗೂ ಆಯಿತು .... ಇವಳ ವಿಷಯದಲ್ಲಿ ಒಂದು ಸೋತೆ .... ? "--ಮುಹೂರ್ತ ಬರಲಿಲ್ಲ ಅಷ್ಟೆ ನಾನು ಹೇಳಿದೆ - ಕಡೆಗೆ ನಮ್ಮದೇ ಜಾತಿಗೀತಿ ನೋಡಿಕೊಂಡು ಒಂದು ಒಳ್ಳೆಯ ಕೆಲಸಗಲ್ಲಿದ್ದವನನ್ನು ಲವ್ ಆದರೂ ಮಾಡು ಮಾರಾಯ್ತಿ ನಾನು ಅಡ್ಡಿ ಮಾಡುವುದಿಲ್ಲ, ರಾಜಾರೋಷವಾಗಿ ಮದುವೆ ಮಾಡಿಕೊಡುತ್ತೇನೆ ಅಂತ " ಎಂದು ನಗುತ್ತ ಹೇಳಿದಾಗ, ಸೌಗಂಧಿಯ ಮುಖದಲ್ಲಿ ನಗು ಕಾಣಿಸಲಿಲ್ಲ ಬದಲಾಗಿ ಖೇದಗೊಂಡಳು.

ಸ್ತ್ರೀ ಭಾರತೀಯ ಸಮಾಜದಲ್ಲಿ ಭೋಗದ ವಸ್ತು ಎಂಬಂತೆ ಬಳಕೆಯಾಗುತ್ತಿದ್ದಾಳೆ. ಪುರುಷ ತನ್ನ ಕಾಮನೆಗಳನ್ನು ತೀರಿಸಿಕೊಳ್ಳುವುದಕ್ಕಾಗಿ ಹೆಣ್ಣನ್ನು ಉಪಯೋಗಿಸಿಕೊಳ್ಳುತ್ತಾನೆ. ವೈದೇಹಿಯವರು ಈ ವಿಚಾರವನ್ನು, ಇಲ್ಲಿ ತರುತ್ತಾರೆ. ತಂದೆ - ತಾಯಿಗಳು ಸಾಮಾನ್ಯವಾಗಿ ತಮ್ಮ ಮಗಳು ಚಾರಿತ್ರ್ಯದ ಬಗ್ಗೆ ಯೋಚನೆ ಮಾಡುವುದು ಸಹಜ ಅದರಂತೆ ಸೌಗಂಧಿಯು ತಂದೆ - ತಾಯಿಗಳು ವರ್ತಿಸುತ್ತಾರೆ. ಹೆಣ್ಣಿಗೆ ಮದುವೇಯೇ ಜೀವನ, ಮದುವೆಯಾದರೆ ಅವಳ ಜನ್ಮ ಸಾರ್ಥಕ ಎಂಬ ಸಾಮಾಜಿಕ ನಂಬಿಕೆಯನ್ನು ಅವಳ ತಂದೆಯ ಮನೋಭಾವದಲ್ಲಿ ಕಾಣುತ್ತೇವೆ.

ಸೌಗಂಧಿ ವಾಸವಾಗಿದ್ದ ಮನೆ, ಸುರಕ್ಷಿತ ಎಂದು ಭಾವಿಸಿದರು ತಂದೆ - ತಾಯಿ ತಂದೆಯಂತೂ, "ಮನೆಯಾಕೆ ಬಹಳ ಬಳ್ಳೆಯ ಹೆಂಗಸು ...... ವಿಧವೆ ..." ಎಂದು ತಾಯಿಗೆ ವಿವರಿಸುತ್ತ. ತನ್ನ ಮಗಳ ಬಗ್ಗೆ ನಿಶ್ಚಿಂತೆ ಎಂಬಂತೆ ಸಂತೋಷವನ್ನು ವ್ಯಕ್ತಿಪಡಿಸಿದ್ದರು. ಸೌಗಂಧಿಗಂತೂ ತಂದೆ - ತಾಯಿಗಳ ಬಗ್ಗೆ ಬಹಳ ಬೇಸರವುಂಟಾಯಿತು, 'ಊರಿಗೆ ಊರೇ ಅವಳಿಗೆ ಬಸುರು ಮಾಡಲು ಹೊಂಚುತ್ತಿರುತ್ತದೆ' ಎಂಬಂತೆ ತಂದೆ - ತಾಯಿಯರ ವರ್ತನೆಯನ್ನು ಕಂಡು ಖೇದಗೊಂಡಳು.

ಸೌಗಂಧಿಗೆ ಯಾವುದೇ ಸ್ವಾತಂತ್ರ್ಯವನ್ನು ಕೊಡದೆ, ಅವಳ ಆಸೆ - ಆಕಾಂಕ್ಷೆಗಳನ್ನು ವಿಚಾರಿಸದೆ, ಅವಳೊಂದು 'ಅವಳೆದುರಿಗೇ ಎಲ್ಲ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆ. ತಂದೆ, ಸೌಗಂಧಿಯು ಮನೆಯಲ್ಲೇ ಇದ್ದು ಕೊನೆಯ ಮಗಳ ಬಾಣಂತನಕ್ಕೆ ತಾಯಿಗೆ ಸಹಾಯವಾಗುತ್ತಿತ್ತು ಎಂದು ಆಲೋಚಿಸುತ್ತಾರೆ. ಹೆಣ್ಣಿಗೆ ತನ್ನ ಸಂಸಾರದ ಕನಸು ಇರುವುದಿಲ್ಲವೇ ? ಕೇವಲ ದುಡಿಯುವುದಕ್ಕಾಗಿ ಆಕೆ ಬದುಕಿರಬೇಕೇ ? ಎಂಬಂತೆ ಸೌಗಂಧಿಯಲ್ಲಿ ಅನಿಸಿಕೆಗಳು ಸುಳಿದು ಹೋಗುತ್ತವೆ.

ಸೌಗಂಧಿ ಬೇರೆ ಊರಿಗೆ ಬಂದದ್ದಾಯಿತು, ತಾನು ಯಾರೂ ಇಲ್ಲದ ಮನೆಯಲ್ಲಿ ಜೀವಿಸಲು

ಪ್ರಾರಂಭಿಸಿದಳು, ಆದರೆ ಮನೆಯಾಕೆ ಸೌಗಂಧಿಯ ಮೇಲೆ ಸದಾ ಕಣ್ಣಿಟ್ಟಿದ್ದಳು, 'ನನ್ನಷ್ಟಕ್ಕೆ ನನ್ನನ್ನು ಬಿಟ್ಟಿಬಿಡಿ' ಎಂದು ಹೇಳುವುದು ಈ ಪ್ರಪಂಚದಲ್ಲಿ ಕಷ್ಟ, ಸೌಗಂಧಿ ಅಂಥ ಕಷ್ಟಕ್ಕೆ ಸಿಕ್ಕಿ ಹಾಕಿಕೊಂಡಿದ್ದಳು, ಎಲ್ಲದಕ್ಕೂ ಮನೆಯಾಕೆಯ ಪ್ರವೇಶ ಸೌಗಂಧಿಗೆ ತಂದೆ - ತಾಯಿಯರಿಂದ ದೂರ ಬಂದರೂ ತನ್ನತನದ ಗುರುತು ಕಾಣಲಿಕ್ಕೆ ಸಾಧ್ಯವೇ ಆಗುವುದಿಲ್ಲ, ಸೌಗಂಧಿಯು ಮದುವೆಯಾಗದೆ ಇರುವುದರಿಂದ ತಾಯಿಯು ಹಲುಬುತ್ತಾಳೆ. "ಒಬ್ಬಳೇ ಎಷ್ಟು ದಿನ ಇರುತ್ತೀ ? ನಾವು ಸತ್ತ ಮೇಲೆ ನಿನಗ ಯಾರು ? ಒಬ್ಬಳೇ ಇರಲು ತಾನೇ ಆರಿಸಿಕೊಂಡಿಂತೆ, ಗಂಡನೊಡನೆ ಕೂಡಲು ಮನಸ್ಸಿಲ್ಲದವರಂತೆ.... !" ಎಂದು ಮನದಲ್ಲೇ ಅಂದುಕೊಳ್ಳುತ್ತಾಳೆ. ಹೆಣ್ಣಿಗೂ ಭಾವನೆಗಳಿವೆ, ಮೊದಲು ತನಗೆ ಬೇಡವೆಂದು ಅನಿಸುವುದು, ಇನ್ನೊಂದು ಕ್ಷಣಗಳಲ್ಲಿ ತನಗೆ ಬೇಕೆನಿಸುವುದು ಮನುಷ್ಯನ ಸ್ವಭಾವ ಅದರಂತೆ ಅವಳಲ್ಲಿಯೂ ಆ ರೀತಿಯ ಭಾವನೆಗಳು ಹುಟ್ಟುತ್ತವೆ.

ಸೌಗಂಧಿಯ ಮನಸ್ಸು, ತಂದೆ ಹೇಳುವ "ಯಾರನ್ನಾದರೂ ಪ್ರೀತಿ - ಗೀತಿ ಮಾಡು ಜಾತಿ - ಮನೆತನ - ಕೆಲಸ ನೋಡಿಕೊಂಡು" ಮನಸ್ಸಿನಲ್ಲಿ ಅನುರಣಿಸುತ್ತಿತ್ತು. ಕ್ರಮೇಣ ಅವಳ ಬದುಕಿಗೂ ಒಬ್ಬ ಸಂಗಾತಿ ಬೇಕು ಎನಿಸುತ್ತಿದೆ. "ಆದರೆ ತನಗೆ ಯಾರನ್ನೂ ಪ್ರೀತಿಸಲು ಸಾಧ್ಯವಾಗಿಲ್ಲ ..... ಯಾರೂ ತನ್ನನ್ನು ಪ್ರೀತಿಸಲಿಲ್ಲ, ತನ್ನಲ್ಲಿ ಅಂಥ ಆಕರ್ಷಕ ರೂಪ ಇಲ್ಲವೇ ?" ಎಂದು ತನ್ನಲ್ಲೇ ಆಲೋಚಿಸುತ್ತಾಳೆ.

ಈ ಒಂದು ಭಾಗ ಸಿನಿಮೀಯ ಸಂದರ್ಭವನ್ನು ನೆನಪಿಸುತ್ತದೆ, ಸೌಗಂಧಿಯ ಬದುಕಿನಲ್ಲಿ ಘಟನೆಗಳೇ ಇಲ್ಲ ಬದುಕಿನಲ್ಲಿ ಬದಲಾವಣೆಯೇ ಇಲ್ಲ ಯಾವುದೇ ಘಟನೆಯಿಲ್ಲದೆ ತಾನು ಎಷ್ಟು ದಿನ ಇದ್ದೇನು ? ಎಂದು ಜೀವನದಲ್ಲಿ ಉತ್ಸಾಹದ ಕ್ಷಣಗಳಿಗಾಗಿ ಕಾಯುತ್ತಿರುವಂತೆ ಕಾಣುತ್ತಾಳೆ. ಸೌಗಂಧಿ ಒಬ್ಬಂಟಿಯಾಗಿ ಜೀವಿಸುತ್ತಿದ್ದ ಸೌಗಂಧಿಯ ಮನಸ್ಸು 'ಕಡೆಗೊಂದು ಪಕ್ಷ ಕಳ್ಳನಾದರೂ ಬಂದಿದ್ದರೆ' ಎಂದು ಆಲೋಚಿಸುತ್ತದೆ. ಅಷ್ಟರ ಮಟ್ಟಿಗೆ ಆಕೆಯಲ್ಲಿ ಆಸೆಗಳು ಚಿಗುರುತ್ತವೆ.

ಸೌಗಂಧಿಯ ಆಫೀಸಿನಲ್ಲಿ ಕೆಲಸ ಮಾಡುವ ಅಂಜಲಿ ಸ್ವತಂತ್ರಳಾಗಿ ಬದುಕುತ್ತಿರುವಾಗ ತನಗೇಕೆ ಸಾಧ್ಯವಾಗಿಲ್ಲ ? ಎಂದುಕೊಂಡರೆ, ".... ಮನಸ್ಸು ಜಡ್ಡುಗಟ್ಟಿದೆಯೇ" ಎಂದು ತನ್ನಲ್ಲೇ ಯೋಚಿಸುತ್ತಾಳೆ. ಮದುವೆ ಅನಿವಾರ್ಯವೇ ? ಗಂಡಿಲ್ಲದೆ ಬದುಕಲು ಸಾಧ್ಯವಿಲ್ಲವೇ ? ಎಂದೆಲ್ಲಾ ಮನಸ್ಸಿನಲ್ಲಿ ತಾಕಲಾಟ ಉಂಟಾಗುತ್ತದೆ, ಹೆಣ್ಣು ಬದುಕಿನಲ್ಲಿ ಮದುವೆಯಾಗಲೇಬೇಕೇ ? ಸ್ವತಂತ್ರವಾಗಿ ಬದುಕಲು ಸಾಧ್ಯವಿಲ್ಲವೆ ? ಇವೆಲ್ಲ ಅವರ ಮನೋಮಿತಿಗೊಳಪಟ್ಟ ವಿಚಾರಗಳೇ ಇವೆಲ್ಲ ? ಎಂದು ಮನಸ್ಸಿನಾಳಕ್ಕೆ ಇಳಿದು ವಿಚಾರ ಮಾಡಬೇಕಾದದ್ದು ಸರಿ ಎನಿಸುತ್ತದೆ. ಹೆಣ್ಣೊಬ್ಬಳ ಮನಸ್ಸಿನಲ್ಲಿ ಇಂಥ ಪ್ರಶ್ನೆಗಳು ಏಳುವುದು ಸಹಜ.

ಮನೆಯೊಡತಿ ಒಮ್ಮೆ ಊರಿಗೆ ಹೋಗಬೇಕಾಯಿತು. ಸೌಗಂಧಿಯನ್ನು ಒಬ್ಬಳೇ ಬಿಟ್ಟು ಹೋಗುವುದಕ್ಕೆ ಮನಸ್ಸಿಲ್ಲ, "ಮಗೂ, ಸೌಗಂಧಿ, ಇವತ್ತು ನಾವೆಲ್ಲ ಊರಿಗೆ ಹೋಗಬೇಕಾಗಿದೆ. ಇನ್ನು ನಾಲ್ಕು ದಿನ ಇರುವುದಿಲ್ಲ. ನೀನೊಬ್ಬಳೇ ಹೇಗಿರುತ್ತೀ ? ನೀನೂ ನಾಲ್ಕು ದಿನ ರಜೆ ಹಾಕಿ ಊರಿಗೆ ಹೋಗಿಬಿಡು. ಬಂದಂದಿನಿಂದ ಒಂದೇ ಒಂದು ರಜೆ ಹಾಕಿಲ್ಲವಲ್ಲ" ಎಂದು ಮನೆಯೊಡತಿ ಹೇಳಿದರೆ, "......... ನಂಗೇನೂ ಹೆದರಿಕೆ ಇಲ್ಲ ನೀವು ನಿಶ್ಚಿಂತೆಯಿಂದ ಹೋಗಿಬನ್ನಿ" ಎಂದು ಸೌಗಂಧಿ ನುಡಿದಳು. ಮನೆಯಾಕೆ ತಾನು

ಬರುವುದರೊಳಗೆ ಏನೇನು ಆದೀತೋ ಎಂಬಂತೆ ಮುಖ ಹೊತ್ತು ಹೊರಟು ಹೋದಳು.

ಸೌಗಂಧಿ ಒಬ್ಬಳೇ ಇದ್ದು, "ಇವತ್ತಾದರೂ ಏನಾದರೂ ಸಂಭವಿಸಬಾರದೆ ? ಈ ರಾತ್ರಿಯೇ" ಎಂದು ಆಶಿಸುತ್ತಾಳೆ. ಹೆಣ್ಣಿನ ಬಯಕೆ ಮನೋಭಾವ ಸೌಗಂಧಿ ಪಾತ್ರದಲ್ಲಿ ವ್ಯಕ್ತವಾಗಿದೆ. ಒಂಟಿ ಬದುಕಿನಿಂದ ಬೇಸರಗೊಂಡ ಸೌಗಂಧಿ, ಬದುಕಿನಲ್ಲಿ ತನ್ನದೇ ಸಂಸಾರ, ಗಂಡ, ಮನೆ, ಮಕ್ಕಳು ಇರಬೇಕೆಂದು ಬಯಸುತ್ತಾಳೆ. ಆದರೆ, ಮನೆಯಾಕೆ ಇಲ್ಲದೆ ಸ್ವತಂತ್ರದಿಂದ ವರ್ತಿಸಬಹುದೆಂದು ತಿಳಿದ ಸೌಗಂಧಿಗೆ ತಂದೆ - ತಾಯಿ ಕಾವಲಿಗೆ ಬಂದು ನಿಲ್ಲುವುದು ಸೌಗಂಧಿಯ ಮನಸ್ಸಿಗೆ ಅತಿಯಾದ ವೇದನೆ ಉಂಟು ಮಾಡುತ್ತದೆ.

ಅನೇಕ ಸಂಕೇತಗಳಿಂದ ಈ ಕಥೆ ಸಂದರ್ಭವನ್ನು ಹಿಡಿದಿಡುತ್ತದೆ. ಒಂದು ಹೆಣ್ಣಿನ ಮನಸ್ಸಿನಲ್ಲೇನಿದೆ ? ಎಂಬುದನ್ನು ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ಮನಸ್ಸನ್ನು ಹೊಕ್ಕಿ ನೋಡುವ ಪ್ರಯತ್ನ ಈ ಕಥೆಯಲ್ಲಿದೆ. ಕಥಾನಾಯಕಿ ಸೌಗಂಧಿಯ ಮನಸ್ಸಿನಲ್ಲುಂಟಾಗುವ ತಾಕಲಾಟ, ಕನಸುಗಳು, ಸ್ವತಂತ್ರ ಬದುಕಿನ ಅಭಿಲಾಷೆ, ಯಾವುದೇ ಒಂದು ಹೆಣ್ಣಿನ ಮನಸ್ಸನ್ನು ಹೋಲುತ್ತದೆ. ಸಾಂಕೇತಿಕತೆ, ಕಲಾತ್ಮಕತೆ ಸಂಕೀರ್ಣತೆಯನ್ನು ಈ ಕಥೆಯಲ್ಲಿ ಗಮನಿಸಬಹುದು. ಕಥನ ಕ್ರಮದಲ್ಲಿ ದೀರ್ಘತೆ ಇದೆ. ಮನೋ ತಾಕಲಾಟವನ್ನು ವ್ಯಕ್ತಪಡಿಸುವಲ್ಲಿ ವೈದೇಹಿಯವರು ಭಾಷೆಯಲ್ಲಿ ಸಂಕೀರ್ಣತೆಯನ್ನು ಸಾಧಿಸಿದ್ದಾರೆ.

ಗೂಡಿನೊಳಗೆ ಒಂದು ಹಕ್ಕಿ

ಈ ಕಥೆಯನ್ನು "ಅಂತರಂಗದ ಪುಟಗಳು" ಎಂಬ ಕಥಾಸಂಕಲನದಿಂದ ಆರಿಸಲಾಗಿದೆ.

ಇದೇ ವಸ್ತುವನ್ನೊಳಗೊಂಡಂತೆ ನೋಡಬಹುದಾದ ಮತ್ತೊಂದು ಕಥೆ "ಗೂಡಿನೊಳಗೆ ಒಂದು ಹಕ್ಕಿ"

ಈ ಕಥೆಯ ನಾಯಕಿ ತಾನು ನಿರ್ಭೀಡೆಯಿಂದ ಮುಕ್ತಳಾಗಿ ಜೀವಿಸಬೇಕು ಎಂದು ಆಶಿಸುತ್ತಾಳೆ. ಮನಸ್ಸು ಸ್ವಾತಂತ್ರ್ಯ ಬಯಸಿದರೂ ಅದು ಸಾಧ್ಯವಾಗದೆ, ಒಂದು ಮಿತಿಯಲ್ಲಿ ಜೀವಿಸುವ ಸಾಮಾಜಿಕ ವಾತಾವರಣವಿದೆ, ಎಲ್ಲೋ ಒಂದು ಕಡೆ ತನಗೆ ತಾನೇ ಬಂಧನಕ್ಕೊಳಗಾದಂತೆ ಭಾವಿಸುತ್ತಾಳೆ.

ಈ ಕಥೆ ಯಾವುದೇ ಘಟನೆಗಳ, ಪಾತ್ರಗಳ ವೈರುಧ್ಯವನ್ನು ಹೊಂದದೆ, ಒಂದು ಹೆಣ್ಣಿನ ಬಯಕೆ ಸಾಂಕೇತಿಕವಾಗಿ ಕಲಾತ್ಮಕತೆಯನ್ನು ಪಡೆದುಕೊಂಡು ಕಥೆಯಾಗಿ ರಚನೆಗೊಂಡಿದೆ. ಕಥಾನಾಯಕಿ ಮಾಲತಿ, ತನ್ನ ಗಂಡನಿಗೆ ಮನೆ ಬೀಗ ಹಾಕಿಕೊಂಡು ಹೋಗುವಂತೆ ಹೇಳುತ್ತಾಳೆ.

ಅದರಂತೆ ಅವನು ಬೀಗ ಹಾಕಿಕೊಂಡು ಹೋದಾಗ 'ತಾನೊಬ್ಬಳೇ' ಎಂದು ಖುಷಿಪಡುತ್ತಾಳೆ "ಅನಿರ್ಬಂಧತೆಯಲ್ಲಿ ಎಷ್ಟು ಖುಷಿ ಇದೆ ಎಂಬುದನ್ನು ಸ್ವತಃ ಅನುಭವಿಸಬೇಕು" ಎಂದು ಬಯಸುತ್ತಾಳೆ, ಸ್ವಾತಂತ್ರ್ಯವನ್ನು ಅನುಭವಿಸುವ ಆಸೆ ಅವಳಲ್ಲಿ ವ್ಯಕ್ತವಾಗುತ್ತದೆ,

ಗಂಡನಿಗೆ ಮನೆ ಬೀಗ ಹಾಕಿಕೊಂಡು ಹೋಗಲು ಹೇಳಿ, ತನ್ನ ಪಾಡಿಗೆ ತಾನು ಮನೆಯಲ್ಲಿ ಬೆತ್ತಲಾಗಿಯೇ ಇರಬೇಕೆಂದು ಬಯಸುತ್ತಾಳೆ ಸ್ವತಂತ್ರವಾಗಿ ಇದ್ದು, ಸ್ವಾತಂತ್ರ್ಯದ ಸುಖವನ್ನು ಅನುಭವಿಸುತ್ತಾ

"ಹೀಗೆ ಅವರಿಗೆಲ್ಲ ಹೆದರುತ್ತ ಗುಟ್ಟಿನಲ್ಲಿ ಅನುಭವಿಸಿದ ಭ್ರಾಂತಿಗೊಳಗಾಗುತ್ತ ಹೋದರೆ ಏನು ರುಚಿ ? ಯಾವ ಸುಖ ?" ಎಂದುಕೊಳ್ಳುತ್ತಾಳೆ. ನಿರ್ಭೀತವಾಗಿ, ನಿರ್ಭೀಡೆಯಾಗಿ ಸ್ವಾತಂತ್ರ್ಯದ ಅನುಭವ ಅವಳಿಗೆ ಬೇಕು. ಅದರಿಂದ ನಿಜವಾದ ಸ್ವಾತಂತ್ರ್ಯದ ಅನುಭವ ಪಡೆದಂತೆ.

ಒಂದು ದಿನದಲ್ಲಿ ತಾನು ಏನೆಲ್ಲಾ ಭಾವನೆಗಳನ್ನು ತನ್ನ ಮನಸ್ಸಿನಲ್ಲಿ ಹೊಂದಿದಳೋ, ಅದರಂತೆ ನಡೆಯಲು ಪ್ರಯತ್ನಿಸುತ್ತಾಳೆ, ತನ್ನ ಗಂಡನನ್ನು ಆಫೀಸಿಗೆ ಕಳುಹಿಸಿ, ಬೆಳಗ್ಗಿನಿಂದ ಸಂಜೆಯವರೆಗೆ ತಾನು ಯಾವ ರೀತಿ ಜೀವನದಲ್ಲಿ ಸ್ವಾತಂತ್ರ್ಯದಿಂದ ಇರಬೇಕು ಎಂದು ಪ್ರಾಯೋಗಿಕವಾಗಿ ಮಾಡಿ ನೋಡುತ್ತಾಳೆ. ಈ ರೀತಿ ಭಯದಿಂದ ಅನುಭವಿಸುವ ಸ್ವಾತಂತ್ರ್ಯದಲ್ಲಿ ಮುಕ್ತತೆಯಿಲ್ಲ. ಸ್ವಾತಂತ್ರ್ಯದಲ್ಲಿಯೂ ನಿರ್ಬಂಧತೆಗಳು ಕಾಡುತ್ತವೆ.

"ತನ್ನ ಕಾಲೇಜಿನಲ್ಲಿ ಸಮಾರಂಭಗಳಾಗುವಾಗ ಎಷ್ಟು ಜೋರಾಗಿ ಶಿಳ್ಳು ಹೊಡೆಯುತ್ತಿದೆ ತಾನು ! ತಾನೇನು? ಎಲ್ಲ ಹುಡುಗಿಯರ ಕಾಲೇಜು ಹುಡುಗರಿಲ್ಲದುದೇ ದೊಡ್ಡ ಫ್ರೀಡಂ ತಮಗೆ ಆಗ". ಈ ರೀತಿ ಮಾಲತಿ ನೆನಪಿಸಿಕೊಳ್ಳುತ್ತಾ ಹೆಣ್ಣಾಗಿ ಅನಿರ್ಬಂಧತೆಯಲ್ಲಿದ್ದ ಕಾಲವನ್ನು ನೆನಪಿಸಿಕೊಳ್ಳುತ್ತಾಳೆ. ಈ ಸಮಾಜ ಗಂಡು - ಹೆಣ್ಣು ಎಂದು ತಾರತಮ್ಯ ಭಾವ ಹೊಂದಿರುವ ಬಗ್ಗೆ ಖೇದತೆ ಇದೆ. ಕ್ಲಾಸಿನಲ್ಲಿ ಹುಡುಗರ ಕಾಲೇಜು, ಹುಡುಗಿಯರ ಕಾಲೇಜುಳ ವ್ಯತ್ಯಾಸ ಕುರಿತು ಲೆಕ್ಚರ್ ಕೊಡುತ್ತಿದ್ದುದು ಮಾಲತಿಗೆ ನೆನಪಾಗುತ್ತದೆ. "ನೀನು ಹೆಣ್ಣು ಅದರಲ್ಲಿಯೂ ಭಾರತದಲ್ಲಿ ಹುಟ್ಟಿದವಳು" ಎಂದು ಪುನಃ ಪುನಃ ಹೇಳುತ್ತಿದ್ದುದು ಸ್ತ್ರೀಯ ಅಸಮಾನತೆಯನ್ನು ಎತ್ತಿ ಹಿಡಿಯುತ್ತದೆ. ಹೆಣ್ಣು ಎಂದರೆ ದುರ್ಬಲಳು : ಅವಳಿಗೆ ಗಂಡಿನ ಆಧಾರ ಬೇಕು ಎನ್ನುವಷ್ಟರ ಮಟ್ಟಿಗೆ ಭಾರತೀಯ ಸಮಾಜದ ರಚನೆಯಾಗಿರುವುದು ಕಂಡುಬರುತ್ತದೆ. ಇವೆಲ್ಲವನ್ನೂ ವಿರೋಧಿಸುವಂತೆ ತನಗೆ ಇಚ್ಛೆ ಬಂದಂತೆ ಒಂದು ದಿನದ ಮಟ್ಟಿಗಾದರೂ ತಾನು ಸ್ವಾತಂತ್ರ್ಯದ ಸುಖ ಪಡೆಯಲು ಮಾಲತಿ ಬಯಸುತ್ತಾಳೆ ತಾನು ಒಂಟಿಯಾಗಿ ಇದ್ದು ತನ್ನ ಮನದಾಳ ಬಯಕೆಯನ್ನು ನೆರವೇರಿಸಿಕೊಳ್ಳುತ್ತಾಳೆ.

ಮಾಲತಿಗೆ, ತನ್ನ ತಾಯಿ ಮೈಮೇಲೆ ಬಟ್ಟೆ ಹಾಕದ ಬಚ್ಚಲಿಗೆ ಬಾಗಿಲು ಹಾಕದ ಆ ಮುಗ್ಧ ದಿನಗಳು ನೆನಪಾದವು, ತಾನು ಬೆತ್ತಲಾಗುವುದು, ಇಲ್ಲಿ ಮುಕ್ತವಾಗಿ ಇರುವುದರ ಅರ್ಥವ್ಯಕ್ತಿಯನ್ನು ಪಡೆದುಕೊಳ್ಳುತ್ತಲೇ, ಅವಳು ದಿನಕ್ಕಿಂತ ಹೆಚ್ಚಿನ ಬಂಧನಕ್ಕೆ ಒಳಗಾದಂತೆ ಮುಜುಗರ ಪಡುತ್ತಾಳೆ. ಮನೆಯಲ್ಲಿ ದೀಪಹಾಕಲು, ರೇಡಿಯೋ ಹಾಕಲು, ಜೋರಾಗಿ ನೀರು ಬಿಟ್ಟು ಸ್ನಾನ ಮಾಡಲು, ಮನಸಾರೆ ಸಿಳ್ಳು ಹೊಡೆಯುವುದೂ ಅವಳಿಗೆ ಸಾಧ್ಯವಾಗುವುದಿಲ್ಲ. "ಸುತ್ತಲಿನ ಗೋಡೆಗಳು ಪಂಜರದ ಗೋಡೆಗಳಂತೆ ಕಂಡವು, ಪಂಜರದ ಹುಲಿಯಾದರೂ ತನಗೆ ಬೇಕೆಂಬಷ್ಟು ಕೂಗಿಯಾದರೂ ಕೂಗಬಹುದು, ತನಗೆ ಸಾಧ್ಯವಿಲ್ಲ" ಎಂದು ನೊಂದುಕೊಳ್ಳುತ್ತಾಳೆ ಬಂಧನ ಹೊರಗಿನ ಸಮಾಜದಿಂದ ಹೇರಿದುದು ಎಂದು ಹೇಳಲು ಆತ್ಮವಿಶ್ವಾಸವಿಲ್ಲದೆ ಹೋದಾಗ ಮನಸ್ಸು ತನಗೆ ತಾನೇ ಹೇರಿಕೊಂಡ ಬಂಧನದಲ್ಲಿ ನರಳುತ್ತದೆ. ಅದರಿಂದ ಬೆತ್ತಲಾಗಿ ಮನೆಯಲ್ಲಾ ಓಡಾಡಿದ ಮಾಲತಿಗೆ ಸ್ವಾತಂತ್ರ್ಯದ ಅನುಭವವಾಗುವುದಿಲ್ಲ. ತಾನು ಬೆತ್ತಲೆಯಾಗಿರುವ ಹೊರ ಪ್ರಪಂಚಕ್ಕೆ ತಿಳಿದರೆ ಎಂಬ ಅವ್ಯಕ್ತ ಅಳುಕೇ ಅವಳಿಗೆ ಬಂಧನವಾಗುತ್ತದೆ: ಹಿಂಸೆಯಾಗುತ್ತದೆ.

ಕಥಾನಾಯಕಿ ಕಲ್ಪನೆಯಲ್ಲಿಯೇ ತೇಲಿಹೋಗುತ್ತಾಳೆ. ಒಂದು ರೀತಿ ಭ್ರಮಾತ್ಮಕವಾದ ಬದುಕು ಅವಳದು ಕಥೆ ನಿರೂಪಕರ ಅಭಿವ್ಯಕ್ತಿಯ ತಂತ್ರ, ಮತ್ತು ಸಂಕೇತಗಳು ನಿರೂಪಣೆಯಲ್ಲಿ ವಿಶೇಷವಾಗಿ ಗಮನಸೆಳೆಯುತ್ತದೆ,

ಗುಟ್ಟಿನಲ್ಲಿ ಅನುಭವಿಸಿದ್ದು ಸ್ವಾತಂತ್ರ್ಯವೆನಿಸುವುದಿಲ್ಲ. ತಾನು ಸ್ವಾತಂತ್ರ್ಯವನ್ನು ಅನುಭವಿಸಿದ್ದೇನೇನೋ ಎಂಬ ಭ್ರಾಂತಿಗೆ ಒಳಗಾದರೆ ಅದರ ಅನುಭವ ಸವಿಯಲಿಕ್ಕಾಗುವುದಿಲ್ಲ. ಹೆಣ್ಣು ನಿರ್ಬಂಧಗಳನ್ನು ಕಳಚಿ ತಾನು ಮುಕ್ತಳಾಗಿ ಬದುಕಿದಾಗ ನಿಜವಾದ ಸ್ವಾತಂತ್ರ್ಯದ ಅನುಭವ ಉಂಟಾಗುತ್ತದೆ ಮಾಲತಿ ತನ್ನಲ್ಲೇ "ಬದುಕು ತೀರ ಇಕ್ಕಟ್ಟಾಗಿದೆ. ಎನಿಸಿತು ತಾನು ಯಾರಿಗಾಗಿಯೋ ಬದುಕುತ್ತಿದ್ದೇನೆ. ತನಗಾಗಿಯಲ್ಲ" ಎಂದು ದುಃಖಿಸುತ್ತಾಳೆ. ಗಂಡ - ಹೆಂಡತಿ ಸಂಬಂಧದ ಹಿನ್ನಲೆಯಲ್ಲಿಯೇ ಸ್ತ್ರೀವಾದವನ್ನು ಮಂಡಿಸುವ ಪ್ರಯತ್ನ ಈ ಕಥೆಯಲ್ಲಿದೆ ಮಾಲತಿ ಸಮಾಜದ ಒಂದು ಹೆಣ್ಣನ್ನು ಪ್ರತಿನಿಧಿಸುತ್ತಾಳೆ ಹೆಣ್ಣಿನ ಆಸೆ, ಆಕಾಂಕ್ಷೆಗಳು, ಮನದಾಳದ ಬಯಕೆಗಳು,ಎಲ್ಲವೂ ಆಕೆಯ ಪಾತ್ರದಲ್ಲಿ ಎನ್ನಿಸುತ್ತದೆ. ಸ್ವಾತಂತ್ರ್ಯದ ಕನಸಿನ ಜೊತೆಗೆ ತನ್ನಲ್ಲೇ ಅಂತರಂಗದ ಬೇಲಿಯನ್ನು ನಿರ್ಮಿಸಿಕೊಳ್ಳುತ್ತಾಳೆ.

ಈ ಕಥೆ "ಸ್ತ್ರೀವಿಮೋಚನೆಯ ಪರಿಕಲ್ಪನೆಗೆ ಹಿಡಿದ ಒಂದು ಕನ್ನಡಿಯಾಗಿದೆ" [ಡಾ. ಗಿರಿಜಾಶಾಸ್ತ್ರಿ, ಕಥಾಮಾನಸಿ (ಆಧುನಿಕ ಕನ್ನಡ ಸಣ್ಣಕಥೆಗಳ ಸ್ತ್ರೀವಾದಿ ಅಧ್ಯಯನ) - ಪುಟಸಂಖ್ಯೆ 152] ಸಾಮಾಜಿಕ ನೀತಿ - ನಿಯಮಗಳನ್ನು ಮೀರಿಬರುವಲ್ಲಿ ತನಗೆ ತಾನೇ ಹಾಕಿಕೊಂಡ ಬೇಲಿ, ಸ್ತ್ರೀಯನ್ನು ಎಷ್ಟರ ಮಟ್ಟಿಗೆ ನಿಯಂತ್ರಿಸುತ್ತದೆ ಎಂಬುದನ್ನು ಸ್ತ್ರೀವಿಮೋಚನೆಯ ಹಿನ್ನೆಲೆಯಲ್ಲಿ ಯೋಚಿಸಬೇಕಾಗುತ್ತದೆ. ಪುರುಷ ಲೇಖಕರು ಹೇಳಲಾಗದೆ ಇದ್ದದ್ದನ್ನು, ಸ್ತ್ರೀಯಾಗಿ ವೈದೇಹಿಯವರು ಈ ಕಥೆಯಲ್ಲಿ ಸ್ತ್ರೀ ಸಂವೇದನೆಯನ್ನು ಅಭಿವ್ಯಕ್ತಿಸಿದ್ದಾರೆ. ಇಂತಹ ಸ್ವಾತಂತ್ರ್ಯವನ್ನು ಪಡೆಯವುದರಿಂದ ಸ್ತ್ರೀಯ ಬದುಕಿನಲ್ಲಿ ಅತಂತ್ರವೂ ಉಂಟಾಗಬಹುದು ಎಂಬ ಕಲ್ಪನೆ ಕಥೆಯಲ್ಲಿ ಬಾರದೇ ಇರುವುದು ಒಂದು ನಿರೂಪಣೆಯ ಕೊರತೆ ಎನ್ನಿಸುತ್ತದೆ.

ಶೋಧ

ಈ ಕಥೆಯನ್ನು "ಅಂತರಂಗದ ಪುಟಗಳು" ಎಂಬ ಕಥಾಸಂಕಲನದಿಂದ ಆರಿಸಲಾಗಿದೆ.

ಹೆಣ್ಣು ಕುಟುಂಬ ದುಡಿದು, ಜೀವನವನ್ನೇ ಸವೆಸಿ, ತನ್ನ ಅಸ್ತಿತ್ವವನ್ನು ಕಳೆದು ಕೊಂಡವಳು ಹೆಣ್ಣು ತಾನು ಮನೆಯೊಳಗಿನ ದೈನಂದಿನ ಯಾಂತ್ರಿಕತೆಯಲ್ಲಿ ವೈಯಕ್ತಿಕತೆಯನ್ನು ಕಳೆದುಕೊಂಡವಳು, ತನ್ನತನದ ವೈಶಿಷ್ಟ್ಯತೆಯ ಹುಡುಕಾಟವೇ 'ಶೋಧ' ಕಥೆಯ ವಸ್ತುವಾಗಿದೆ.

ಕಥಾ ನಿರೂಪಕಿ ಕೃಷ್ಣ, ತನ್ನಗೆಳತಿ ಭಾರತಿಯನ್ನು ಮನೆಯಲ್ಲಿ ಹುಡುಕುತ್ತಾ ಹೋಗುತ್ತಾಳೆ. ದೊಡ್ಡಮನೆಯಲ್ಲಿ ಭಾರತಿಯನ್ನು ಹುಡುಕುತ್ತಾ ಹೋಗುವಾಗ ಮನೆಯ ಪ್ರಪಂಚದ ವಿವಿಧ ಮಡಿಕೆಗಳು ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಮನೆಗೆ ಬಂದ ಕೃಷ್ಣಾಳನ್ನು ಕುಳಿತು ಕೊಳ್ಳಲು ಹೇಳಿ ಒಳಗೆ ಹೋದ ಭಾರತಿ ಸಿಕ್ಕಿದಾಗ ಅರೆ ಮರಳು ಮುದುಕಿಯಾಗಿದ್ದಳು. ಸಾಂಕೇತಿಕವಾಗಿ ಈ ಕಥೆಯನ್ನು ನಿರೂಪಿಸಿದ್ದಾರೆ ವೈದೇಹಿ ಯವರು.

ಕೃಷ್ಣ, ಭಾರತಿಯ ಮನೆಯೊಳಗೆ ಹೋದಳು. ಭಾರತಿ, ಕೃಷ್ಣಾಳನ್ನು ಅಲ್ಲಿಯೇ ತೂಗುಮಂಚದ ಮೇಲೆ ಕುಳ್ಳಿರಿಸಿ, 'ಈಗ ಬಂದೆ' ಎಂದು ಭಾರತಿ ಒಳಗೆ ಹೊರಟು ಹೋದಳು. ಆಕೆ ಹೊರಗೆ ಬರದೇ ಹೋದಾಗ, "ಒಮ್ಮೆ ದೊಡ್ಡ ಮನೆ ಹೊಕ್ಕು ಬಾಗಿಲು ಹಾಕಿಕೊಂಡ ಮೇಲೆ ಇದ್ದ ಒಂದು ಪ್ರಪಂಚ ಎಷ್ಟು ಬೇಗ ಮಡಿಕೆ ಮಡಚಿ ಚಿಕ್ಕದಾಗಿ ಹಲವುಗಳಾಗಿ ಬಿಡುತ್ತದೆ! ತನ್ನ ಗೆಳತಿ ಈ ಮಡಿಕೆಗಳಡಿ ಸಿಕ್ಕಿ ಬಿದ್ದಿದು ಉಸಿರುಗಟ್ಟಿಸಿದರೂ ಹೀಗೆ ಉಸಿರುಗಟ್ಟಿಕೊಂಡಿರುವುದೇ ಸುಖವೆಂದು ಮೆತ್ತನೆಯ ಹಾಸಿಗೆಯ ಮೇಲೆ ತಾಂಬೂಲ ಜಗಿಯುತ್ತ ಕುಳಿತಿರಲಿಕ್ಕಿಲ್ಲವಷ್ಟೆ?" ಎಂದು ಆಲೋಚಿಸುವಳು ಭಾರತೀಯ ಸಮಾಜದಲ್ಲಿ ಹೆಣ್ಣು ಕುಟುಂಬ ಎಂಬ ಪ್ರಪಂಚದಲ್ಲಿ ತನ್ನ ಬದುಕನ್ನೇ ಸವೆಸುತ್ತಿರುವಳು. ಸಂಸಾರ ಎಂಬ ಬಂದನಕ್ಕೊಳಗಾಗಿ, ಉಸಿರುಕಟ್ಟಿಸುವ ವಾತಾವರಣದಲ್ಲಿದ್ದರೂ ಅವಳಲ್ಲಿ ಪ್ರತಿರೋಧವಿಲ್ಲ. 'ಕೆರೆಗೆಹಾರ' ಜಾನಪದ ಕಥೆಯಲ್ಲಿನ ಹೆಣ್ಣು ಭಾಗೀರಥಿ ತನ್ನನ್ನು ತನ್ನ ಮಾವ ಕೆರೆಗೆ ಹಾರವಾಗಿ ಕೊಡಬೇಕೆಂದಾಗ ಅವಳಲ್ಲಿ ನಿರಾಕರಣೆ ಇಲ್ಲ. ಊರಿನ ಒಳಿತಿಗಾಗಿ ತನ್ನ ಪ್ರಾಣವನ್ನೇ ಕೊಡಲು ಸಿದ್ದವಾದಳು. ಊರಿಗೆ ಕಷ್ಟ, ಬರ ಬಂದಾಗ, ಊರ ಗೌಡ ಜೋಯಿಸರನ್ನು ಕೇಳಿದಾಗ ಹಿರಿಸೊಸೆಯನ್ನು ಕೆರೆಗೆ ಬಲಿಯಾಗಿ ಕೊಡಬೇಕೆಂದು ಹೇಳುತ್ತಾರೆ, ಆಕೆ ಒಪ್ಪದೆ ಹೋದಾಗ ಕಿರಿಯ ಸೊಸೆ ಭಾಗೀರಥಿಯನ್ನು ಕೆರೆಗೆ ಹಾರವಾಗಿ ಕೊಡಬೇಕೆಂದು ನಿಶ್ಚಯಿಸುತ್ತಾರೆ. ಭಾಗೀರಥಿಗೆ ಅತಿಯಾದ ದುಃಖವಾದರೂ ಯಾರ ಬಳಿಯೂ ಹೇಳಿಕೊಳ್ಳಲಾಗದೆ, ತನ್ನ ಸ್ನೇಹಿತೆಯ ಬಳಿ ಹೇಳಿದಾಗ," ಕೊಟ್ಟಾರೆ ಕೊಡಲೇಳು, ಇಟ್ಟಾಂಗ ಇರಬೇಕು" ಎಂದು ಹೆಣ್ಣಿನ ಕರ್ಮವನ್ನು ಕುರಿತು ಹೇಳುತ್ತಾಳೆ. ಹೆಣ್ಣು ಯಾವುದೇ ಪ್ರತಿರೋಧವನ್ನು ಒಡ್ಡದೆ ಇತರರಿಗೋಸ್ಕರ ಬಾಳ ಬೇಕಾದವಳು ಕೊನೆಗೆ ಭಾಗೀರಥಿ 'ಕೆರೆಗೆಹಾರ' ವಾಗುತ್ತಾಳೆ. ಭಾರತೀಯ ಹೆಣ್ಣು ಗಂಡ, ಮನೆ, ಮಕ್ಕಳು ಎಂದೂ ಮನೆಗಾಗಿ, ದುಡಿದು ದೈಹಿಕವಾಗಿ ಮಾನಸಿಕವಾಗಿ ಜರ್ಝರಿತಳಾಗಿದ್ದಾಳೆ. ಸಂಸಾರದ ಬವಣೆಯಲ್ಲಿ, ತನ್ನ ತನವನ್ನು ಕಳೆದುಕೊಂಡು ನಿರುತ್ಸಾಹಗೊಂಡಿದ್ದಾಳೆ. ವೈಯಕ್ತಿಕತೆಯ ಆಕಾಂಕ್ಷೆಗಳನ್ನು ಬದಿಗೊತ್ತಿ ಕುಟುಂಬದ ಕೆಲಸಗಳಲ್ಲಿ ನಿರತಳಾಗಿ ತನ್ನತನವನ್ನೇ ಕಳೆದುಕೊಂಡಿದ್ದಾಳೆ ಪತಿ, ಮಕ್ಕಳ ಸೇವೆ ಮಾಡುತ್ತಾ ತನ್ನ ಬಗ್ಗೆ ನಿರ್ಲಕ್ಷ್ಯವನ್ನು ತಾಳಿದ್ದಾಳೆ. ಮದುವೆ, ಮಕ್ಕಳ ಲಾಲನೆ - ಪಾಲನೆ ಇವುಗಳಿಗೇ ತನ್ನ ಜೀವನವನ್ನು ಮೀಸಲಾಗಿಟ್ಟಿದ್ದಾಳೆ. ಸಾಂಕೇತಿಕವಾಗಿ ವಿಚಾರಗಳನ್ನು ತಿಳಿಸುತ್ತದೆ. ಮೊದಲ ಭಾಗ ಕಥೆಯ ನಿರೂಪಕಿ ಕೃಷ್ಣಾ ಭಾರತಿಯ ಮನೆಗೆ ಅವಳನ್ನು ಕೂಗಿಕರೆದಾಗ "ದೂರದಿಂದ ಹೆಂಗಸರ ಮೆಲುದನಿ, ಪಗಡೆಯಾಟದ ಗೌಜು ಮತ್ತೆಲ್ಲಿಂದಲೋ ತೊಟ್ಟಿಲು ಕಿರುಗಾಟ ಗೆಜ್ಜೆ ಘಲ್, ಅಡುಗೆಯ ಪರಿಮಳ ಉಪ್ಪರಿಗೆ ಮೇಲಿಂದ ವೀಣೆಯ ಇನಿನಾದ" ಭಾರತಿ ಬರಲಿಲ್ಲ.

ಹೆಣ್ಣು ಒಂದು ಮನೆಯ ಚೌಕಟ್ಟಿನಲ್ಲಿಯೇ ಇದ್ದು ತನ್ನ ಜೀವನವನ್ನು, ಗಂಡನ ಸೇವೆ ಮಾಡುತ್ತಾ ಕಾಲವನ್ನು ಕಳೆಯುತ್ತಾ ಬದುಕಿನಲ್ಲಿ ಹೊಸತನವನ್ನೇ ಕಾಣದಿರುವುದು ಏನಿದ್ದರೂ ಕೇವಲ ಮಕ್ಕಳನ್ನು ಕೋಡಿಕೊಳ್ಳುವುದು, ಅಡಿಗೆ ಮಾಡುವುದು ಗಂಡು ಹೊರೆ ಸುಖ, ಮೋಜಿನ ಬದುಕಿನಲ್ಲಿ ತೇಲಿಹೋಗುತ್ತಾನೆ, ಹೆಣ್ಣಿನ ಈ ಮಾನಸಿಕ ಹೊರೆ ಬಹಳ ಬೇಗ ಹೆಣ್ಣಿನ ದೇಹವನ್ನು ಮುಪ್ಪಾಗಿಸುತ್ತದೆ. ಈ ಕಥೆಯಲ್ಲಿ ಬರುವ ಭಾರತಿ ಕೌಟುಂಬಿಕವಾಗಿ ಮಾನಸಿಕ ತುಯ್ದಾಟದಿಂದ ಗೆಳತಿ ಕೃಷ್ಣಳಿಗಿಂತ ಬಹಳ ಬೇಗ ಮುಪ್ಪಾಗಿ ಭ್ರಮಾಧೀನ ಸ್ಥಿತಿಯನ್ನು ತಲುಪುತ್ತಾಳೆ.

ಭಾರತಿಯನ್ನು ನೋಡಲು ಬಂದ ಕೃಷ್ಣಳಿಗೆ ಎದುರು ಕಂಡಂತಹ ಮುದುಕಿಯೇ ತನ್ನ ಗೆಳತಿ ಭಾರತಿ ಎಂದು ತಿಳಿದಾಗ ಭ್ರಮ ನಿರಸನಗೊಳ್ಳುತ್ತಾಳೆ. ತನ್ನ ಗಳತಿಯಾದ ಭಾರತಿಯನ್ನು ಕಥಾನಿರೂಪಕಿ ನೋಡಲು ಹೋದಾಗ, ತಾನು ಸುಖಿ ಎಂದು ನಾಯಕಿಗೆ ಹೇಳಿಕೊಳ್ಳದ ಭಾರತಿ ಬಳಿಗೆ ಹೋದವಳು ಹೊರಗೆ ಬರುವುದೇ ಇಲ್ಲ ಬದಲಾಗಿ ಅಡುಗೆ ಮನೆಯ ಪಾತ್ರಗಳ ಸದ್ದು., ತೊಟ್ಟಿಲು ತೂಗುದ ಸದ್ದು, ಇವುಗಳು ಮಾತ್ರ ನಿರೂಪಕಿಗೆ ಕೇಳಿ ಬರುತ್ತದೆ, ಗಂಡಸಿನ ಆಕರ್ಷಣೆಯ ಸಾಧನವಾಗಿ ನೃತ್ಯ ಸಂಗೀತ ಇವುಗಳಲ್ಲೇ ತನ್ನ ಅಸ್ತಿತ್ವವನ್ನು ಕಳೆದುಕೊಂಡಿರುವ ವಾಸ್ತವಸಂಗತಿಯನ್ನು ಮೊದಲ ಭಾಗ ಸಾಂಕೇತಿಕವಾಗಿ ಚಿತ್ರಿಸುತ್ತದೆ.

ನಿರೂಪಕಿ, ಮತ್ತೆ ತನ್ನ ಗೆಳತಿಯನ್ನು ಕಾಣಲು ಹೋದಾಗ ಪಾಳು ಬಿದ್ದ ಮನೆ ಕಂಡಿತು. "ಅಲ್ಲೊಂದು ಪಾಚಿಗಟ್ಟಿದ ಬಾವಿ, ರಾಟೆಯಿಲ್ಲದ ಸರಳು .... ಅದರ ಮೇಲೆ ಕೊಡ ಕೂಡಿಸಲು ಇರುವ ಹಲಗೆ ಕೊಡ ಕುಳಿತು ಸವೆದು ಕೊಡದ ಬುಡದ ಆಕಾರ ಮೂಡಿಸಿಕೊಂಡು ಬಾಗಿತ್ತು......" ಈ ರೀತಿ ಪಾಳು ಮನೆಯ ವಿವರದನ್ನು ಕೊಡುತ್ತಾ ಹೋಗುತ್ತಾರೆ.

ಈ ಬಾರಿ 'ಮನೆ ಹೇಗಿದೆ' ? ಎಂದು ಕೇಳಲು ಭಾರತಿ ಇರಲಿಲ್ಲ. ಕೃಷ್ಣಾ ಮೇಲೆ ಹೋಗುತ್ತಿದ್ದಂತೆ "ಗುಸುಗುಸು ಅಳು ಯಾರದೋ ಪಿಸುದನಿ ಬಳೆ ಶಬ್ದ" ಮೇಲೆ ಹೋಗಿ ನೋಡಿದರೆ ಅದು ಭಾರತಿಯದೇ ಅಳುವಾಗಿತ್ತು.

"ನೀನು - ನೀನು ಕೃಷ್ಣಾ ಹೌದಲ್ಲ ? ಇಷ್ಟು ಅಜ್ಜಿಯಾದದ್ದೇ !......"

"ಮರುಳು ಕಿರುಳು ಹುಡುಗಿ, ಆಜ್ಜಿ ಬಜ್ಜಿ : ನೀರು ಒಣಗಿದ ಬಾವಿ, ರಾಟೆಯಲ್ಲದ ಸರಳು, ರಾಗ ಹಾರಿ ಆರಿ ಬರಿಯ ನೆರಳು" - ಕೇತಟ್ಟೆ ನಗ ಹತ್ತಿದ ಅಜ್ಜಿಯನ್ನು ಕಂಡು ಚೀತ್ಕರಿಸಿ ಓಡಲೆತ್ನಿಸಿದಳು ಕೃಷ್ಣಾ.

ಕುಟುಂಬ, ತಾಯ್ತನ ಇವುಗಳಲ್ಲಿ ಹೆಣ್ಣು ಬಂಧಿತಳಾಗಿ ತನ್ನ ಸಂಪೂರ್ಣ ವ್ಯಕ್ತಿತ್ವವನ್ನು ಕಳೆದುಕೊಂಡ ಸ್ಥಿತಿಯಲ್ಲಿ ಬದುಕುತ್ತಿರುವುದು ಇಂದಿನ ಬದುಕಿನ ವಾಸ್ತವ ಚಿತ್ರ. ಭಾರತಿ ಪಾತ್ರದ ಮೂಲಕ ಮನೆ, ಮಕ್ಕಳು, ಗಂಡ ಎಂದು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾಳೆ. ದೈಹಿಕವಾಗಿ, ಮಾನಸಿಕವಾಗಿ ಶಕ್ತಿಗುಂದಿ, ಗಂಡಿಗಿಂತ ಮೊದಲೇ ಮುಪ್ಪಾಗುವ ಅವಳ ದೇಹ ಯಾವುದೇ ಮನೋರಂಜನೆ ಇಲ್ಲದೆ, ನಾಲ್ಕು ಗೋಡೆಗಳ ಮಧ್ಯೆ ಮಾನಸಿಕ ಹೊಯ್ದಾಟ - ತುಯ್ದಾಟಗಳ ಪರಿಣಾಮವಾಗಿ ಉಂಟಾಗುವ ಈ ಸ್ಥಿತಿ, ಅವಳನ್ನು ಮಾನಸಿಕ ವಿಲಕ್ಷಣತೆಗೆ ಗುರಿಮಾಡಿದೆ ಎಂಬುದನ್ನು ಗುರುತಿಸಬೇಕಾಗುತ್ತದೆ. ಕುಟುಂಬ, ತಾಯ್ತನದ ವೈಭವೀಕರಣ ಮುಂತಾದವು ಹೆಣ್ಣಿನ ವಿಕಾಸಕ್ಕೆ ಅಡ್ಡಿಯಾಗಿರುವ ಅಂಶ ಸಾಂಕೇತಿಕವಾದ ಕಲಾತ್ಮಕ ರೂಪವನ್ನು ಪಡೆದುಕೊಳ್ಳುವ ಬಗೆಯನ್ನು ಈ ಕಥೆ ಅನನ್ಯವಾಗಿ ಚಿತ್ರಿಸುತ್ತದೆ.

ಅಮ್ಮಚ್ಚಿಯೆಂಬ ನೆನಪು

ಈ ಕಥೆಯನ್ನು "ಅಮ್ಮಚ್ಚಿಯೆಂಬ ನೆನಪು" ಕಥಾಸಂಕಲನದಿಂದ ಆರಿಸಲಾಗಿದೆ.

ಸಾಂಪ್ರದಾಯಿಕ ಸಮಾಜದಲ್ಲಿ ಹೆಣ್ಣು, ತಾನೇ ಕಟ್ಟಿಕೊಂಡ ತನ್ನದೇ ಆದ ನೀತಿ ನಿಯಮಗಳಲ್ಲಿ ಬಂಧಿತಳಾಗಿದ್ದಾಳೆ. ಪುರುಷ ಪ್ರಧಾನ ಸಮಾಜ ಹೆಣ್ಣಿನ ಜೀವನದ ಮೇಲೆ ಕಟ್ಟುಪಾಡುಗಳನ್ನು ಹೇರಿದೆ. ಇದರಿಂದ ಸ್ತ್ರೀ ಅಸಮಾನತೆಯನ್ನು ಅನುಭವಿಸುತ್ತಿದ್ದಾಳೆ. ಹೀಗಾಗಿ ಸಮಾಜದಲ್ಲಿ ಸ್ತ್ರೀ ಶೋಷಣೆಯೂ ಇದೆ. ಈ ಅಂಶವನ್ನು ವಿರೋಧಿಸುವ ಪಾತ್ರವಾಗಿ, ಅಮ್ಮಚ್ಚಿ ಎಂಬ ಹೆಣ್ಣು ಮಗಳ ಪಾತ್ರ ಈ ಕಥೆಯಲ್ಲಿ ಬರುತ್ತದೆ. ಅಮ್ಮಚ್ಚಿ ಪುರುಷ ಪ್ರಧಾನ ವ್ಯವಸ್ಥೆಯನ್ನು ವಿರೋಧಿಸುವ ಈ ಕಥೆಯ ಉದ್ದಕ್ಕೂ ಅವಳ ಮಾತುಗಳಲ್ಲಿ ಕಂಡು ಬರುತ್ತದೆ. ಈ ಕಥೆಯಲ್ಲಿ ಗಟ್ಟಿಯಾದ ಹಾಸ್ಯಪ್ರಜ್ಞೆಯೂ ಕೆಲಸ ಮಾಡಿದೆ.

ಅಮ್ಮಚ್ಚಿಯ ಗೆಳತಿ ಕಥಾ ನಿರೂಪಕಿಯಾಗಿ ತಾನು ಅಮ್ಮಚ್ಚಿಯನ್ನು ಕಂಡ ಬಗೆಯನ್ನು ವಸ್ತುನಿಷ್ಠವಾಗಿ ಈ ಕಥೆಯಲ್ಲಿ ವ್ಯಕ್ತಗೊಳಿಸಿದ್ದಾಳೆ. ಅಮ್ಮಚ್ಚಿ ಹತ್ತಿರದಿಂದ ಕಂಡಂತಹ, ಅವಳ ಜೊತೆಯಲ್ಲಿದ್ದು ಆದಂತಹ ಅನುಭವಗಳನ್ನು ಇಲ್ಲಿ ದಾಖಲಿಸಿದ್ದಾಳೆ.

ಅಮ್ಮಚ್ಚಿ ಆರು ತಿಂಗಳಾಗಿದ್ದಾಗ ತಂದೆಯನ್ನು ಕಳೆದುಕೊಂಡವಳು. ತಾಯಿ ಸೀತಕ್ಕ ಹನ್ನೊಂದು ವರ್ಷದ ಹುಡುಗ ವೆಂಕಪ್ಪನನ್ನು ಅಲ್ಲಿ - ಇಲ್ಲಿ ಓಡಾಡಲು, ಏನಾದರೂ ತರಲು ಹೇಳುತ್ತಿದ್ದಳು. ಗಂಡು ದಿಕ್ಕಿಲ್ಲದ ಮನೆ ಎಂದು ವೆಂಕಪ್ಪನನ್ನೇ ತನ್ನ ಮನೆಯಲ್ಲಿರಿಸಿಕೊಂಡಳು ವೆಂಕಪ್ಪ ಬೆಳೆದನು. "ಅವಳನ್ನು ಮದುವೆಯಾಪುಗೆ ಇನ್ನು ಯಾವ ಪುಣ್ಯಾತ್ಮ ಬಪ್ಪ ? ಮಗಳ ಚಿಂತೆ ನೀವು ಮಾಡಳೆ ನಾನಿದ್ದೆ" ಎಂದು ವೆಂಕಪ್ಪಯ್ಯ ಅಮ್ಮಚ್ಚಿಯ ಜವಾಬ್ದಾರಿ ತನ್ನದೇ ಎಂಬಂತೆ ವರ್ತಿಸುತ್ತಿದ್ದ.

ಅಮ್ಮಚ್ಚಿಗೆ ಶೋಕು ಬೇಕು ಎಲ್ಲಿಯಾದರೂ ಹೊರಗೆ ಹೊರಡಬೇಕೆಂದರೆ, ಮುಖಕ್ಕೆ ಪೌಡರು ಬಡಿದು ಕೊಂಡು, ಜಡೆ ಬಿಚ್ಚಿ ತಲೆ ಬಾಚಿಕೊಂಡು ಹೆಣೆಯದೆ ಹಾಗೆಯೇ ಕಟ್ಟಿಕೊಳ್ಳುತ್ತಾಳೆ. ಸೀರೆ ಉಟ್ಟು, ಪಿನ್ ಹಾಕಿಕೊಂಡು, ಕನ್ನಡಿಯನ್ನು ನೋಡಿಕೊಳ್ಳುತ್ತಾ ಸಿದ್ದವಾಗುತ್ತಾಳೆ. ಸಿದ್ದವಾಗಿ ಹೊರಟರೆ ವೆಂಕಪ್ಪಯ್ಯ ಅಡ್ಡಿಗೊಳಿಸುತ್ತಾನೆ ' ಏನು ಏನು ಏನು ! ಕೋಲಕಟ್ಟಿಂಡ್ ಹೊರಟದ್ ಎಲ್ಲಿಗೆ ಮೆರವಣಿಗೆ ? ಎಂದು ಧಿಮಾಕಿನಿಂದ ಅವಳನ್ನು ತಡೆದು ಮನೆ ಒಳಗೆ ಹೋಗಲು ಹೇಳುತ್ತಿದ್ದ ಆದರೆ ಅಮ್ಮಚ್ಚಿ ಅದನ್ನು ಒಪ್ಪಿಕೊಳ್ಳುವವಳಲ್ಲ.' ನೀಹೋವುಯೂ ಕೋಮಣ ಬಟ್ಟಿಂಡ್ ಎಲ್ಲಿಗಂ ಬೇಕಾರೂ ನಾ ಕೇಡ್ತ್ನ ? ನಾ ನಂಗೆ ಬೇಕಾದ ಹೆಂಗೆ ಹೊರಟರೆ ನಿಂಗೆ ಯಾಕೆ ಕಿಚ್ಚು ? ಎಂದು ಅಮ್ಮಚ್ಚಿ ಅವನ ಅಧಿಕಾರವನ್ನು ವಿರೋಧಿಸುತ್ತಿದ್ದಳು. ತನ್ನ ಸ್ವಾತಂತ್ರ್ಯವನ್ನು ಕಿತ್ತುಕೊಂಡಿರುವ ವೆಂಕಪ್ಪಯ್ಯನ ವಿರುದ್ಧದ ದನಿ ಇಲ್ಲಿದೆ. ಅದು ಪ್ರತಿಭಟನೆ ಎನ್ನಿಸುವುದಿಲ್ಲ.

ಹೆಂಗಸು ಮನೆಯಲ್ಲಿದ್ದು ಮನೆಗೆಲಸ ನೋಡಿಕೊಂಡಿರಬೇಕು ತಾನು ಪೇಟೆಗೆ ಹೋಗಿ ಸಾಮಾನು ತರುವುದು ನಿಷೇಧ ಎಂಬಂತೆ ಮನೆಯಲ್ಲೇ ಹೆಣ್ಣನ್ನು ಕೂಡಿಹಾಕಿರುವ ಸಮಾಜ, ಪುರುಷ ಪ್ರಧಾನ ಸಮಾಜ ಅಮ್ಮಚ್ಚಿಯ ತಾಯಿ ವೆಂಕಪ್ಪಯ್ಯನನ್ನು ನಂಬಿದವಳು ತಮಗೆ ಗಂಡೊಂದು ದಿಕ್ಕಿದ್ದು, ತಮ್ಮ ಬದುಕು ನಡೆಯುತ್ತಿದೆ ಎಂದು ತಾನು ಹೆಣ್ಣು ಅಸಹಾಯಕಳು ಎಂಬ ಭಾವನೆಯನ್ನು ಹೊಂದಿದವಳು ಆದರೆ ಅಮ್ಮಚ್ಚಿಯಲ್ಲಿ ತಾನು ಹೆಣ್ಣು ಅಸಮರ್ಥಳು, ನಾಲ್ಕು ಗೋಡೆಗಳ ಮಧ್ಯೆ ಬದುಕನ್ನು ನಡೆಸಬೇಕು ಎನ್ನುವ ವಿಚಾರವನ್ನು ತಿರಸ್ಕರಿಸುತ್ತಾಳೆ. ತಾನು ಪೇಟೆಗೆ ಹೊರಟುನಿಂತ ಸಂದರ್ಭದಲ್ಲಿ ವೆಂಕಪ್ಪಯ್ಯ

"ಹಿಂಗೆಲ್ಲ ಮಾಡಿಂಡ್ ಇವಳು ಪೇಟೆಗೆ ಹೊರಡ್ತ್‌ದ್, ಬಾಸಾಯಿಸಿಂತ್‌ದ್, ಯಾಕೆ ಬೇಕಾಯಿ ಈಗ, ಪೇಟೆ ಸಾಮಾನು ಬೇಕಾರೆ ನಾನು ಕೊಣಂದ್ ಕೊಡ್ಡಿಲ್ಲಯ" ಎಂದು ಹೇಳುತ್ತ "ನಿಮಗೆ ಗೊತ್ತಿಲ್ಲ, ಇವಳು ಪೇಟ್ ಅಂದ್ ಹೋತ್‌ದ್ ಆ ಶಂಭಟ್ಟರ ಮನೆಗಲ್ದ ? ಅವರ ಮನೆ ಜಗಲಿ ಕಾಸ್‌ತದ್, ಬಾಯಿಖಲ್ದ್ ನಗಾಡ್‌ತದ್, ಅವು ಇವಳ ಹಲೋಲ್ಲ ಲೆಕ್ಕ ಮಾಡಿಂತೋ" ಎಂದು ಅಮ್ಮಚ್ಚಿಯನ್ನು ಕುರಿತು ನಿಂದಿಸುತ್ತಾನೆ. ಗಂಡಿನ ದರ್ಪಕ್ಕೆ ಅಮ್ಮಚ್ಚಿಯಲ್ಲಿ ಪ್ರತಿಭಟನೆ ಇದೆ. "....ಈ ಬಿರ್ಕನ ಕಟ್ಟೆ ಭೂತನ ಮಾತು ಕೇಂಡ್‌ದ್ ನಂಗೆ ಯಾಕೆ ಬೈತೆ ನೀನು ?" ಎಂದು ವೆಂಕಪ್ಪಯ್ಯನನ್ನು ವಿರೋಧಿಸುವಂತೆ ಮಾತನಾಡುತ್ತಾಳೆ.

ಅಮ್ಮಚ್ಚಿಯ ಬದುಕು, ಭಾವನೆಗಳು ಸ್ತ್ರೀ ಜಗತ್ತನ್ನು ತೋರಿಸಿಕೊಡುತ್ತದೆ. ಯಾವುದೇ ಹೆಣ್ಣಿನ ಮನದಲ್ಲಿರ ಬಹುದಾದ, ಹೊಸದನ್ನು ಕಂಡಾಗ ಆಗುವ ಸಂತೋಷ ಅಮ್ಮಚ್ಚಿಯಲ್ಲಿಯೂ ಇದೆ. ರವಕೆ ಬಟ್ಟೆಯನ್ನು ಹೊಲಿಯುವ ರಮಾ ಟೀಚರ್‌ಗೆ ಹಿಂದು ಗುಂಡಿಯ ರವಕೆ ಹೊಲಿಯಲು ಕೊಡುತ್ತಾಳೆ. ಅದಕ್ಕೆ ಆಕೆ "ಅಲ್ಲವನ ಅಮ್ಮಚ್ಚಿ, ಬ್ಯಾಕ್ ಬಿಟನ್ ಬ್ಲೌಸ್ ಹೊಲಿಯಬಹುದು, ಕಷ್ಟವಲ್ಲ ಆದರೆ ವೆಂಕಪ್ಪಯ್ಯ ಕೊನೆಗೆ ಒಂದು ಗಲಾಟೆ ಮಾಡಿದರೆ ? ಅವನಿಗೆ ಇದೆಲ್ಲ ಖುಷಿ ಇದ್ದ ಹಾಗೆ ಕಾಣುವುದಿಲ್ಲ.........." ಎಂದರು.

ಅದಕ್ಕೆ ಅಮ್ಮಚ್ಚಿ "ಹ್ಞಾಂ ! ಏನಂದಿರಿ ಟೀಚರ್ ? ಅವ ಯಾವ ದೊಡ್ಡ ಗುರಿಕಾರ ನಿಮಗೆ ಗಲಾಟೆ ಮಾಡಲಿಕ್ಕೆ! ಇದು ನನ್ನ ರವಕೆ ನನಗೆ ಬೇಕಾದ ಹಾಗೆ ಹೊಲಿಯಿರಿ" ಎಂದು ಹೇಳುವ ಅಮ್ಮಚ್ಚಿಯ ಮಾತುಗಳಲ್ಲಿ ಸ್ತ್ರೀಗೆ ಸ್ವಾತಂತ್ರ್ಯವಿರಬೇಕು, ಸಿಗಬೇಕು ಎಂಬ ಸ್ತ್ರೀವಾದವಿದೆ.

ಭಾರತೀಯ ಸಮಾಜದಲ್ಲಿ ಲಿಂಗ ತಾರತಮ್ಯ ಪಾರಂಪರಿಕವಾಗಿ ನಡೆದುಕೊಂಡು ಬಂದಿದೆ. ಹೆಣ್ಣು - ಗಂಡುಗಳ ಜೀವನದಲ್ಲಿ ಸ್ಥಾನಗಳ ನಡುವೆ ವ್ಯತ್ಯಾಸ ವಿದೆ ಪುರುಷಪ್ರಧಾನ ಸಮಾಜದಲ್ಲಿ ಪುರುಷನಿಗೆ ಯಾವುದೇ ಕಟ್ಟುಪಾಡುಗಳಿಗೆ ಸ್ವತಂತ್ರವಾಗಿ ಬದುಕಬಲ್ಲನು. ಆದರೆ ಹೆಣ್ಣು ಸಾಂಪ್ರದಾಯಿಕ ಕಟ್ಟುಪಾಡುಗಳಲ್ಲಿ ಬಂಧಿತಳಾಗಿ ಅವಮಾನದ, ಶೋಷಣೆಯ ಬದುಕನ್ನು ನಡೆಸುತ್ತಿದ್ದಾಳೆ. ಹೆಣ್ಣು ಎಂದರೆ ಸಮಾಜದಲ್ಲಿ ಗಂಡಿನ ಅಡಿಯಾಳಾಗಿ, ಯಾವುದೇ ಮುಕ್ತ ಬದುಕಿಲ್ಲದೆ, ನಿರ್ಭಾವುಕತೆಯಿಂದ ಕೊರಡಿನ ಹಾಗೆ ಬದುಕಬೇಕು. ನಮ್ಮ ಭಾರತೀಯ ಸಮಾಜದಲ್ಲಿ ಇಂತಹ ಅನೇಕ ವಿಚಾರಗಳು, ಹೆಣ್ಣನ್ನು ದುರ್ಬಲಳನ್ನಾಗಿ, ಪರತಂತ್ರದಲ್ಲಿ ಜೀವಿಸುವ ಜೀವಿಯಾಗಿ ರೂಪಿಸಿದೆ. ಈ ಕೆಲವು ವಿಚಾರಗಳನ್ನು ಗಮನಿಸಿದಾಗ ಈ ಕಥೆಯಲ್ಲಿನ ಕಥಾನಾಯಕಿ ಅಮ್ಮಚ್ಚಿಯಲ್ಲೂ ಗಂಡಿನ ಶೋಷಕ ಪ್ರವೃತ್ತಿ, ದರ್ಪ, ದಬ್ಬಾಳಿಕೆಗಳ ಬಗ್ಗೆ ಪ್ರತಿರೋಧವಿದೆ. ತಾನು ಹೆಣ್ಣು ಎಂಬ ಮಾತ್ರಕ್ಕೆ ತಾನು ಯಾಕೆ ಗಂಡಿಗೆ ಅಧೀನಳಾಗಿರಬೇಕು ? ಎಂಬ ಆಧುನಿಕ ಸಮಾನತೆಯ ವಿಚಾರ ಅವಳಲ್ಲಿದೆ.

ಅಮ್ಮಚ್ಚಿಯಲ್ಲಿ ಒಂದು ಗಂಡಿನ ದರ್ಪದ ಬಗ್ಗೆ ಎಂಥ ಅಸಹನೀಯ ಕೋಪ, ಪ್ರತಿಭಟನೆ ಇತ್ತೆಂಬುದನ್ನು ಒಂದು ಪ್ರಸಂಗದಿಂದ ತಿಳಿಯಬಹುದು. ಎಂಟು ದಿನ ವೆಂಕಪ್ಪಯ್ಯ ತಿರುಪತಿಗೆ ಹೋಗಿದ್ದನು. ಅಮ್ಮಚ್ಚಿ "ಅವ ಹೆಂಗೂ ಇಲ್ಲೇ ಬಾ ಆ ಕುದ್ರಾಳಿನ ಕೋಣೆಗೆ ಹೋದ ಏನೆಲ್ಲ ಕಾಂಬ..." ಎಂದು ಅವನ ಕೋಣೆಗೆ ಹೋದಳು ಅಮ್ಮಚ್ಚಿ ಗೂಟದ ಮೇಲೆ ನೇತಾಡುತ್ತಾ ಇದ್ದ ಶರ್ಟನ್ನು ಮುಟ್ಟಲೇ

ಅಸಹ್ಯವೆಂಬಂತೆ ಕೈ ನೀಡಿ ತೆಗೆದು, ಕತ್ತರಿಯನ್ನು ತೆಗೆದುಕೊಂಡು ಶರಟಿನ ಹಿಂಭಾಗ ಕೊಯ್ದಳು. ಮುಂಭಾಗ ಹೊಲಿದಳು. ಮುಂಭಾಗದ ಗುಂಡಿಗಳನ್ನು ಹಿಂಭಾಗಕ್ಕೆ ಹೇಗೋ ಇಟ್ಟಳು "ಇದೆ ! ರೆಡಿ! ಕೋಡಂಗಿ ಶರ್ಟ್" ಎಂದು ತನ್ನ ಕೋಪವನ್ನು ಅವನ ಮೇಲೆ ತೀರಿಸಿಕೊಂಡಳು. ಹೆಣ್ಣಿಗೆ ಗಂಡಿನಿಂದಾಗುವ ಅವಮಾನವನ್ನು ಪ್ರತಿಭಟನೆಯ ಮೂಲಕ ವ್ಯಕ್ತಪಡಿಸುವ ಸ್ತ್ರೀ ಮನೋಧರ್ಮವೊಂದು ವ್ಯಕ್ತವಾಗಿದೆ.

ಅಮ್ಮಚ್ಚಿಗೆ ವೆಂಕಪ್ಪಯ್ಯನನ್ನು ಕಂಡರೆ ಆಗದಿದ್ದರೂ ಒತ್ತಾಯ ಪೂರ್ವಕವಾಗಿ ಅಮ್ಮಚ್ಚಿ, ವೆಂಕಪ್ಪಯ್ಯನನ್ನು ಮದುವೆಯಾಗುತ್ತಾಳೆ. ವೆಂಕಪ್ಪಯ್ಯ ತಿರುಪತಿಯಲ್ಲಿ ಹೋಟೆಲ್ ಇಟ್ಟಿದ್ದ. ವೆಂಕಪ್ಪಯ್ಯನೊಂದಿಗೆ ಅಮ್ಮಚ್ಚಿಯೂ ತಿರುಪತಿಗೆ ಹೋಗುತ್ತಾಳೆ. ಕೆಲವು ದಿನಗಳ ನಂತರ ಅಮ್ಮಚ್ಚಿಯೊಬ್ಬಳೇ ವಾಪಸ್ಸು ಬರುತ್ತಾಳೆ. ಕಾರಣ ಕೇಳಿದರೆ ವೆಂಕಪ್ಪಯ್ಯ ನೇಣು ಹಾಕಿಕೊಂಡ ಎಂದು ನೇರವಾಗಿ ಹೇಳುತ್ತಾಳೆ. ಬಹುಶಃ ಅಮ್ಮಚ್ಚಿಯ ಬಂಡಾಯ ಪ್ರವೃತ್ತಿ ವೆಂಕಪ್ಪಯ್ಯನಿಗೆ ಸಹಿಸಲಸಾಧ್ಯವಾಗಿ ಈ ರೀತಿ ಮಾಡಿಕೊಂಡಿರಬಹುದು. ಅಮ್ಮಚ್ಚಿಯ ಪ್ರತಿಭಟನೆ ವೆಂಕಪ್ಪಯ್ಯನಿಗೆ ಜೀವನ ನಡೆಸುವುದೇ ಕಷ್ಟವಾಗಿ ದಾರಿ ಕಾಣದೆ ನೇಣು ಹಾಕಿಕೊಂಡಿರಬಹುದು.

ಈ ಕಥೆಗೆ ಅಮ್ಮಚ್ಚಿಯೇ ಕೇಂದ್ರಬಿಂದು. ಅಮ್ಮಚ್ಚಿ ಬಂಡಾಯದ ವ್ಯಕ್ತಿತ್ವವನ್ನು ಒಳಗೊಂಡಿರುವವಳು. ಅವಳ ಸುತ್ತ ಸ್ತ್ರೀವಾದೀ ಧೋರಣೆ ಎಂಬುದು ಇಲ್ಲಿ ಕಥಾನಕದ ನೇಯ್ಗೆಯಲ್ಲಿಯೇ ಅಂತರ್ಗತವಾಗಿ ಬಂದಿರುವುದನ್ನು ಗುರುತಿಸಬಹುದು. ಈ ಕಥೆಯ ಪೂರ್ತ ಅಮ್ಮಚ್ಚಿಯಲ್ಲಿ, ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣಿನ ಶೋಷಣೆಯನ್ನು ವಿರೋಧಿಸುವ ವ್ಯಕ್ತಿತ್ವ ಕಂಡುಬರುತ್ತದೆ. ಹೆಜ್ಜೆ ಹೆಜ್ಜೆಗೂ ಅಮ್ಮಚ್ಚಿಯನ್ನು ಹೆದರಿಸುವ, ದಂಡಿಸುವ, ಅಧಿಕಾರ ದರ್ಪವನ್ನು ತೋರಿಸುವ ವೆಂಕಪ್ಪಯ್ಯ ಪುರುಷಪ್ರಧಾನ ಸಮಾಜದ ಪ್ರತೀಕವಾಗಿ ಕಂಡುಬರುತ್ತಾನೆ. ಪುರುಷ ಪ್ರಧಾನ ಸಮಾಜದಲ್ಲಿ ಗಂಡು, ಹೆಣ್ಣನ್ನು ಶೋಷಿಸುವ ಸೂಕ್ಷ್ಮ ಒಳನೋಟ ಈ ಕಥೆಯಲ್ಲಿದೆ.

ಈ ಕಥೆಯ ಮತ್ತೊಂದು ವಿಶೇಷವಾಗಿ ಗಮನಿಸುವಂಥದು, ಕುಂದಾಪುರದ ಕನ್ನಡ ಭಾಷೆಯ ಸಂಪತ್ತನ್ನು. ಈ ಕಥೆಯಲ್ಲಿ ವೈದೇಹಿಯವರು ಹೇರಳವಾಗಿ ಬಳಸಿಕೊಂಡಿದ್ದಾರೆ. ಈ ಉಪಭಾಷೆಯಲ್ಲಿ ಬರುವ ಬೈಗುಳಗಳು ಈ ಕಥೆಯಲ್ಲಿ ವ್ಯಕ್ತಗೊಂಡಿದೆ. ಉದಾ. :- "ರಂಡೆ ಏನ್ ಮಾಡ್ರ್" ? "ಆ ಮಾರಿ....... ಹಾಂಕಾರಿ...." ಉಪಭಾಷೆಯ ಬಳಕೆಯಿಂದಲೂ ಈ ಕಥೆ ವಿಶೇಷವಾಗಿ ಗಮನ ಸೆಳೆಯುತ್ತದೆ. ವೈದೇಹಿ ಯವರು ತಾವು ಹೇಳಬೇಕಾದ ವಿಚಾರವನ್ನು ಅಮ್ಮಚ್ಚಿಯ ಪಾತ್ರದ ಮೂಲಕವೇ ಅಭಿವ್ಯಕ್ತಿಸುತ್ತಾರೆ. ವೈದೇಹಿಯವರ ಕಥೆಗಳಲ್ಲಿ ಹೆಚ್ಚಾಗಿ ಕಂಡುಬರದಿದ್ದರೂ "ಅಮ್ಮಚ್ಚಿ ಒಂದು ನೆನಪು" ಕಥೆಯನ್ನು ಸ್ತ್ರೀವಾದದ ನೆಲೆಯಲ್ಲಿ ಇಟ್ಟು ವಿಚಾರ ಮಾಡುವಂಥದು. ಹೆಣ್ಣಿನ ಶೋಷಣೆ, ಅವಮಾನ, ಪುರುಷ ಪ್ರಧಾನ ಸಮಾಜದಲ್ಲಿ ಆಕೆಗಿರುವ ಸ್ಥಾನ ಇವುಗಳನ್ನು ಈ ಕಥೆ ಚಿತ್ರಿಸುತ್ತದೆ. ಒಟ್ಟಾರೆ ವೈದೇಹಿಯವರು ಸ್ತ್ರೀಸಂವೇದನೆಯ ಸೂಕ್ಷ್ಮ ಒಳನೋಟವನ್ನು ಸ್ತ್ರೀವಾದೀ ಧೋರಣೆಯಲ್ಲಿ ನೀಡಿದ್ದಾರೆ.

ಅಕ್ಕು :

ಈ ಕಥೆಯನ್ನು "ಅಂತರಂಗದ ಪುಟಗಳು" ಎಂಬ ಕಥಾಸಂಕಲನದಿಂದ ಆರಿಸಲಾಗಿದೆ.

ವೈದೇಹಿಯವರ ಶ್ರೇಷ್ಠ ಕತೆಗಳಲ್ಲಿ "ಅಕ್ಕು" ವೂ ಒಂದು. ಅಕ್ಕುವಿನ ಹುಚ್ಚು, ದಿಟ್ಟತನ ಸಮಸ್ಯೆ ಇವುಗಳು ಈ ಕಥೆಯಲ್ಲಿ ಬಂದಿದೆ. ಅಕ್ಕು "ಅಕ್ಕು" ಕಥೆಯ ಕೇಂದ್ರಪಾತ್ರ. ಆಕೆ ಸಮಸ್ಯೆಗಳನ್ನು ಒಳಗೊಂಡಂಥವಳು. ಕಥೆಯ ಪ್ರಾರಂಭದಲ್ಲಿಯೇ "ಅಕ್ಕುವಿಗೆ ದೊಡ್ಡ ಕುಂಕುಮವಿದೆ; ಗಂಡನಿಲ್ಲ" ಎಂಬ ವಾಕ್ಯ ಬರುತ್ತದೆ. ಇದೇ ಅಕ್ಕುವಿನ ಸಮಸ್ಯೆಯನ್ನು ಹೇಳುತ್ತದೆ. ವೈಯಕ್ತಿಕ ಸಮಸ್ಯೆಗಳನ್ನು ಮತ್ತು ಅಕ್ಕು ಅನುಭವಿಸುವ ಶೋಷಣೆಯನ್ನು ಯಾವುದೇ ಮನೋವೈಜ್ಞಾನಿಕ ನೆಲೆಯಲ್ಲಿ ವೈದೇಹಿಯವರು ವಿಶ್ಲೇಷಿಸದೆ, ಅಕ್ಕುವಿನ ಯಾತನೆಯ ದುಃಖದ ಜೀವನವನ್ನು ತಮ್ಮ ಪ್ರತಿಭೆಯ ಒಳನೋಟಗಳಿಂದ ವಿವರಿಸುತ್ತಾರೆ. ಅಕ್ಕು ಹುಟ್ಟಿದ ಕುಟುಂಬದಲ್ಲಿ ಅಜ್ಜಯ್ಯ, ವಾಸುಚಿಕ್ಕಪ್ಪಯ್ಯ, ಭಾನುಚಿಕ್ಕಿ, ದೊಡ್ಡತ್ತೆ - ಹೀಗೆ ಕುಟುಂಬದಲ್ಲಿ ಸದಸ್ಯರಿದ್ದಾರೆ. ಅಜ್ಜಯ್ಯನ ಮನೆಯಲ್ಲಿ ಯಾವ ನಿರ್ಬಂಧವೂ ಇಲ್ಲದವಳೆಂದರೆ ಅಕ್ಕು ಮಾತ್ರ. ಹೀಗೆ ನಿರ್ಬಂಧವಿರದ ಅಕ್ಕು ಯಾರ ಮನೆಗಾದರೂ ಊಟ ಇದೆ ಎಂದರೆ ಹೊರಡುತ್ತಾಳೆ. ಅಕ್ಕು ಬಿಡದೆ ಇರುವ ಊಟ ಎಂದರೆ, ಬಸುರಿ ಬಯಕೆಯ ಊಟ ಮತ್ತು ನಾಮಕರಣದ್ದು. ಆ ಮನೆಯವರು "ಅಕ್ಕು, ಬಾ ಈಚೆ ಕೊಕೊ', "ಇದ್ಯಾರ್ ಈ ಬಿಕ್ರಮುಂಡೆ ದ್ಯೇವಮ್ಮ ! ಅಲ್ಲಿಂದ ಏಳ್ಸಿ ಕಾಂಬ" ಎಂದರೂ ಭರಾಟೆಯಿಂದ ತಿಂದುಂಡು ಅಡ್ಡಾಡುತ್ತಾಳೆ.

ಸಿರಿಯತ್ತೆಯ ಖಾಸಾ ಅಕ್ಕ ಅಕ್ಕು, ಅಕ್ಕುವಿಗೆ ಮದುವೆಯಾಗಿ ಗಂಡ ಬಿಟ್ಟು ಹೋದಂದಿನಿಂದ ಅಕ್ಕು ಹುಚ್ಚಿಯಂತಾಗಿದ್ದಳು. ಮೇಲೆ ಮೇಲೆ ಬಸುರಿನ ನಾಟಕ ಆಡುತ್ತಿದ್ದಳು. ಅಕ್ಕುವಿಗೇ ಒಂದು ವಿಶೇಷವಾದ ಕೋಣೆ ಇರುತ್ತಿತ್ತು. "ಬೇಡದ ಸಾಮಾನುಗಳನ್ನು ಇಡುವ ಕೋಣೆ. ಸಾಲು ಬಲೆ ಬೇಕಾದಷ್ಟು ಕಟ್ಟಿ, ಅದು ಒಕ್ಕುಂಟಿಯಂತೆ ಒಂದು ಮೂಲೆಯಲ್ಲಿತ್ತು. ಅದರೊಳಗೆ ಭೂತ, ಪಿಶಾಚಿಗಳೂ ಉಂಟೆಂತ ಹೇಳುತ್ತಿದ್ದರು".

ಅಕ್ಕು ನಾಮಕರಣಕ್ಕೆ ಹೋದರೆ, ಮಗುವಿನ ತೊಟ್ಟಿಲ ಹಗ್ಗ ಹಿಡಿದು ಬೀಸುವುದನ್ನು ಆಕೆ ಬಿಡುವುದು ವಾಸು ಮನೆಗೆ ಬರುವಾಗಲೇ. ಬಂದ ನೆಂಟರೆಲ್ಲ ಹೋದ ಮೇಲೆ ಎರಡು ಲಾಲಿ ಹಾಡಿದರೂ ಹಾಡಿದರೇ, ಈ ಬಸುರಿ ನಾಟಕ, ನಾಮಕರಣ ಸಂದರ್ಭದಲ್ಲಿ ಅವಳು ವರ್ತಿಸುವ ರೀತಿ, ಒಂದು ಹೆಣ್ಣಾಗಿ ಅವಳ ಸುಪ್ತ ಮನಸ್ಸಿನ ಹಂಬಲಗಳನ್ನು ಹೇಳುತ್ತವೆ.

ಅಕ್ಕುವಿನ ಮನೋಭಾವ ವಿಚಿತ್ರವಾದದ್ದು. ಭ್ರಮಾತ್ಮಕತೆ ಮತ್ತು ವಾಸ್ತವದ ಎರಡು ಲೋಕಗಳಲ್ಲಿ ಸಂಚರಿಸುತ್ತಾಳೆ. ತನಗಿರುವ ಹುಚ್ಚನ್ನು, ತನಗಿರುವ ಅನಿರ್ಬಂಧದಿಂದ ತನ್ನದೇ ಆದ ಅನಿಸಿಕೆಗಳನ್ನು ಹೊರಹಾಕುತ್ತಾಳೆ. ಸಿರಿಯತ್ತೆಯ ಮದುವೆಯ ದಿನ, ಸಿರಿಯತ್ತೆ ಮುಡಿದ ಹೂವನ್ನು ಹರಿದು ಹಾಕಿ, "ಸಾಕಷ್ಟು ಚಂದ ! ನಿನ್ ಚಂದ ಕಂಡ್ ಮದ್ವೆ ಆಪಂವ ಖಂಡಿತ ಬಾಳ್ಸುದಿಲ್ಲೆ ಗೋಡೆ ಮೇಲೆ ಬರ್ದಿಟ್ಕೋ" ಎಂದು ಹೇಳುವ ಅಕ್ಕುವಿನ ಮಾತಿನಲ್ಲಿ ಸ್ವಂತ ಅನುಭವದ ಛಾಯೆಯಿದೆ.

ಅಕ್ಕುವೇನೂ ಒಂಟಿಯಾಗಿರಲಿಲ್ಲ. ಅವಳ ಸುತ್ತ ದೊಡ್ಡತ್ತೆ, ಸಿರಿಯತ್ತೆ, ಭಾನುಚಿಕ್ಕಿ ಇವರೆಲ್ಲರೂ ಇದ್ದರು. ಇವರುಗಳೆಲ್ಲ ಅವಳೊಂದಿಗೆ ವ್ಯಂಗ್ಯವಾಗಿ ಮಾತನಾಡುತ್ತಿದ್ದರು. "ಅಕ್ಕೂ, ನಿನ್ ಕೋಗಿಲೆ ಸ್ವರ

ಕೇಂಬುಕೆ ಕಾಕಿ ಹಿಂದೇ ಬಂದ್ ಕಂಡಿಯಾಗ್ ಕುತ್ತಿತ್ತ್ ಕಾಣ್". "ನನ್ನ ಸುದ್ದಿಗ್ ಬತ್ಯಾ ? ನಿನ್ ಹೆಂಡ್ತಿ ಮೊನ್ನೆ ಯಾರೊಟ್ಟಿಗ್ ಚಾಂಚ್ಕಂಡ ಮನ್ಕಂಡಿದ್ಲ್ ಅಂತೇಳಿ ಹೇಳುದಾ ಈಗ ?" ಎಂದು ಅವನ ಬಾಯಿ ಮುಚ್ಚಿಸುತ್ತಾಳೆ. ಇದು ವಾಸ್ತವಕ್ಕೆ ಸಂಬಂಧಿಸಿದಂತೆ ಅಕ್ಕುವಿನ ವರ್ತನೆ.

ಇನ್ನೂ ಭ್ರಮಾಲೋಕದಲ್ಲಿ ಆಕೆ ವರ್ತಿಸುತ್ತಿದ್ದ ರೀತಿಯೇ ಬೇರೆ. ಅವಳಲ್ಲಿದ್ದಂತಹ ಕಠೋರತೆ ಮಾಯವಾಗಿ ದಯನೀಯ ಮೃದುತ್ವ ಕಾಣಿಸಿಕೊಳ್ಳುತ್ತದೆ. ಗಂಡ ಸನ್ಯಾಸಿಯಾಗಿ ಹೋದಂದಿನಿಂದ ಬಸುರಿ ನಾಟಕವಾಡುತ್ತಿದ್ದಳು. ಮಗುವಿನ ತೊಟ್ಟಿಲು ತೂಗುವುದು, ಲಾಲಿ ಹಾಡುವುದು, ಇವೆಲ್ಲ ಅವಳಿಗೆ ಇಷ್ಟವಾದಂಥವು. ಈ ಆಟಗಳು ಅವಳಿಗೆ ಸುಳ್ಳೆನಿಸುವುದೇ ಇಲ್ಲ. "ಹಿತ್ತಾಳೆಯ ತೊಟ್ಟಿಲಲ್ಲಿ ಕುಳಿತು, ಸರಪಳಿ ಹಿಡಿದು ತೊಟ್ಟಿಲು ತೂಗುವಂತೆ ಅಲ್ಲಾಡಿಸುತ್ತಿದ್ದಳು. ಶ್, ಮಾತಾಡ್ಬೇಡಿ. ಮಗು ಈಗಷ್ಟೇ ಮೊಲೆಯುಂಡ್ ಮನ್ಕಂಡಿತ್, ಎಂದು ಎಚ್ಚರಿಕೆ ಕೊಡುತ್ತಾಳೆ. ದೊಡ್ಡತ್ತೆಯ ವಿಡಂಬನೆ ಕೂಡ ಅವಳಿಗೆ ತಟ್ಟುವುದಿಲ್ಲ. ವಾಸ್ತವಲೋಕದಲ್ಲಿ ಅವಳು ಪ್ರತಿಕ್ರಿಯಿಸುವಲ್ಲಿನ ಕಠೋರತೆಗೂ, ಭ್ರಮಾಲೋಕದಲ್ಲಿ ಅವಳು ಪ್ರತಿಕ್ರಿಯಿಸುವ ಮೃದುತ್ವಕ್ಕೂ ಸಂಬಂಧವಿರುವುದಿಲ್ಲ.

ಅಕ್ಕುವನ್ನು ಮನೆಯ ಹೆಂಗಸರೂ ವಿಡಂಬನೆ ಮಾಡುತ್ತಿದ್ದರು. ಅಕ್ಕುವಿನ ಗಂಡ ದೇಶಾಂತರ ಹೋದ ಬಗ್ಗೆ 'ಇದ್ದರೆ ಮಾ ಕಷ್ಟ ಇದ್ದಿತ್, ಹೋದದ್ದೇ ಪರಮ ಸುಖ ಆಯ್ತ್' ಎಂದು ದೊಡ್ಡತ್ತೆ ಅಕ್ಕುವನ್ನು ಕೆಣಕುತ್ತಾರೆ. ಅಕ್ಕುವಿನಲ್ಲಿ ಹುಚ್ಚು ವರ್ತನೆ ಇದ್ದರೂ ಕೆಣಕಿದರೆ ಬಿಡುವವಳಲ್ಲ. "ಆಟ್ಟೆ ಕಾಲಿನ ಸುಬ್ಬೀ, ನಿನ್ ಬೆನ್ನನ್ ಬಿಲ್ ಮಾಡಿ ಕಂಕುಳಿಗೇರ್‍ಸ್‌ಕಂತೆ ಕಾಣೀಗ" ಎನ್ನುತ್ತಾಳೆ.

ಅಕ್ಕುವಿನ ಗಂಡ ದೇಶಾಂತರದಿಂದ ವಾಪಸ್ಸು ಬಂದಿದ್ದನು. ದಾಸು ಚಿಕ್ಕಪ್ಪಯ್ಯ ಹೋಗಿ ಅಕ್ಕುವಿಗೆ ಹೇಳಿದರೆ, "ಬಸ್ ಛಾರ್ಜ್ ಕೊಟ್ ವಾಪಸ್ ಕಳ್ಸ್, ಅವ ಬಂದದ್ ಕಂಡೇ ಇಲ್ಲಿಗೆ ಬಂದದ್ ನಾನ್" ಎಂದು ಜೋರು ಮಾಡಿದಳು. ಹೆಣ್ಣಿನಲ್ಲಿನ ನೋವು, ದುಃಖ, ಈ ರೀತಿ ಕೋಪದ ಮೂಲಕ ವ್ಯಕ್ತಗೊಂಡಿದೆ. ಯಾವ ಹೆಣ್ಣೇ ಆಗಲಿ, ತನ್ನ ಗಂಡ ಬಹಳ ದಿನದ ಮೇಲೆ ಬಂದಿರುವನೆಂದರೆ, ಸಂತೋಷ, ಸಂಭ್ರಮವನ್ನು ಹೊಂದುತ್ತಾಳೆ. ಆದರೆ ಇಲ್ಲಿ ಅಕ್ಕುವಿನ ಸ್ಥಿತಿಯೇ ಬೇರೆ. ತನ್ನ ಗಂಡ, ಹೆಂಡತಿಯನ್ನು ಬಿಟ್ಟು, ದೇಶಾಂತರ ಹೋಗಿ, ಈಗ ಮತ್ತೆ ಹೆಂಡತಿಯ ನೆನಪಾಗಿ, ವಾಪಸ್ಸು ಬಂದಿದ್ದಾನೆ. ಸಂದರ್ಭಕ್ಕೆ ತಕ್ಕಂತೆ ವರ್ತಿಸುವ ಗಂಡಿನ ಬಗ್ಗೆ ಅವಳಿಗೆ ಆಕ್ರೋಶವಿದೆ. ಹಾಗಾಗಿ ಅಕ್ಕು ತನ್ನ ಗಂಡನನ್ನು ವಿರೋಧಿಸುತ್ತಾಳೆ. ಅಕ್ಕುವಿನ ಒಳಮನಸ್ಸಿನ ನೋಟವನ್ನು ಅವಳ ಪ್ರತಿರೋಧದ ಮಾತುಗಳಲ್ಲಿಯೇ ಗುರುತಿಸಬಹುದು.

ಅಕ್ಕುವಿನ ಗಂಡ ಮತ್ತೆ ಬಂದದ್ದನ್ನು ಕಂಡ ದೊಡ್ಡತ್ತೆ, "ಅಂತೂ ಬಂದ್ಯ ! ಊರ್ ಮೇಲಿನ್ ಹೆಣ್ಮಕ್ಕೆಲ್ಲ ಖರ್ಚಾದ್ವ ?" ಎಂದಿದ್ದಕ್ಕೆ, ಅಕ್ಕು "ನಾನೇನ್ ಬಿಟ್ಟಿದ್ನ ? ಈ ಊರೊಳ್ಗೆ ಯಾವ ಗಂಡ್ಸನ್ನ ನಾನ್ ಬಿಟ್ಟಿದ್ದೆ ಅಂಬ್ರ್ ! ಹೇಳೂ ಗಂಡ್ಸ್ ಯೆದ್ರು ಬರ್‍ಲಿಕಾಂಬ ! ಇಂಥಾ ಕಳ್ಳನ್ನ ಕಟ್ಕಂಡ್ರೆ ಹೌದ ಮತ್ತೆ ?" ಎಂದು ಧೈರ್ಯವಾಗಿ ತನ್ನ ನಡವಳಿಕೆಯ ಬಗ್ಗೆ ಹೇಳಿಕೊಳ್ಳುತ್ತಾಳೆ. ಅಜ್ಜಯ್ಯ, ಗಂಡನೊಂದಿಗೆ ಹೋಗಲು ಅಕ್ಕುವಿಗೆ ಹೇಳಿದರೆ, "ಯೆಂತದ್ ? ಇನ್ನ್ ಇವ್ನೊಟ್ಟಿಗೆ ಹೋಪ್ದ ! ನನ್ ಹೆಣ ಸಮೇತ ಹೋಗ !" ಅಕ್ಕು

ಎಂದಳು. ಹಿರಿಯಳಾದ, ಸಂಪ್ರದಾಯ ಪ್ರತೀಕಳಾಗಿ ಕಂಡುಬರುವ ದೊಡ್ಡತ್ತೆ - "ಹೆಣ್ಣೆ, ಗಂಡನ್ನ ಈ ನಮೂನೆ ನಿಕೃಷ್ಟ ಮಾಡಿ ಮಾತಾಡುಕಾಗ, ಅವ ಎಂಥವ್ನೇ ಇರ್‍ಲಿ" ಎಂದು ಗಂಡನನ್ನು ಅನುಸರಿಸುವಂತೆ ಬುದ್ಧಿ ಹೇಳುತ್ತಾಳೆ.

ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣು ಪತಿಭಕ್ತಿಯನ್ನು ಹೊಂದಿ, ಗಂಡನಾದವನು ಏನೇ ತಪ್ಪುಗಳನ್ನು ಮಾಡಿದರೂ, ಹೆಂಡತಿ ಆತನನ್ನು ಅನುಸರಿಸಬೇಕೆಂಬ ನೀತಿಯನ್ನು ಕಾಣುತ್ತೇವೆ. ಗಂಡು, ಅನೈತಿಕ ಸಂಬಂಧಗಳನ್ನು ಹೊಂದಿದರೂ, ಹೆಂಡತಿಯಾದವಳು ಪ್ರಶ್ನಿಸುವಂತಿಲ್ಲ. ಎಲ್ಲ ನೋವು, ದುಃಖ, ಶೋಷಣೆಯನ್ನು ನುಂಗಿಕೊಂಡು 'ಮರದಬೊಂಬೆ' ಯಂತೆ ನಿಶ್ಚಿತವಾದ ಬದುಕನ್ನು ನಡೆಸುವಳು ಹೆಣ್ಣು. ಆದರೆ ಅಕ್ಕುವಿನಲ್ಲಿ ಈ ವಿಷಯದ ಬಗ್ಗೆ ಪ್ರತಿರೋಧವಿದೆ. ಸ್ತ್ರೀವಾದ ಬಂಡಾಯದ ಸ್ವರೂಪವನ್ನು ಅಕ್ಕುವಿನ ಪಾತ್ರದಲ್ಲಿ ಕಾಣಬಹುದು.

ವೈದೇಹಿಯವರು ಪುರುಷಪ್ರಧಾನ ಸಮಾಜದಲ್ಲಿನ ಗಂಡ - ಹೆಣ್ಣಿನ ಅಸಮಾನತೆ, ಗಂಡು ಹೆಣ್ಣನ್ನು ಶೋಷಿಸುವುದರ ವಿರೋಧತೆಯನ್ನು ಸೂಕ್ಷ್ಮವಾಗಿ ನಾವಿಲ್ಲಿ ಗಮನಿಸಬಹುದು.

ಅಕ್ಕು ಹುಚ್ಚಿಯಾದರೂ, ತನ್ನ ಮನೆಯವರೆಲ್ಲರನ್ನೂ ಧೈರ್ಯವಾಗಿ ಎದುರಿಸುತ್ತಳೆ. ಅಕ್ಕು ತನ್ನ ಗಂಡನನ್ನು "ಥೂ ನಾಯಿ ಜಾತಿಯವ್ನೆ, ತೆವ್‌ಡ್ಕೋ ಆಚೆ, ಮುಳ್ಳೇಡ. ನಾ ಬಸ್ರಿ", "ನೀವೆಂತದೇ ಹೇಳಿ ದೊಡ್ಡತ್ತೆ ಇದ್ರ್ಕಿಂತ ಆ ಅಡ್ಡದ್ಮನೆ ತಿಮ್ಮಪ್ಪಯ್ಯ ಅಡ್ಡಿಲ್ಲೆ. ಅವ್ನ್ ಯೆದಿಯೇನ್ ! ತುಟ್ಟಿಯೇನ್ !....." ಎಂದು ತನ್ನ ಬಸುರಿಗೆ 'ಅಡ್ಡದ್ ಮನೆ ತಿಮ್ಮಪ್ಪಯ್ಯ' ಕಾರಣ ಎಂದು ನಿರ್ಭಿಡೆಯಾಗಿ ಹೇಳುತ್ತಾಳೆ. ತನ್ನ ಗಂಡನ ಜೊತೆಗೆ ಮತ್ತೆ ಹೋಗುವುದನ್ನು ನಿರಾಕರಿಸುತ್ತಾಳೆ. ಅಕ್ಕುವಿನಲ್ಲಿ, 'ಕಾಮ' ದ ಗಂಡಿನ ಬಗ್ಗೆ ವಿರೋಧವಿದೆ. ತಾನೂ ಕೂಡ ಸ್ವಾತಂತ್ರ್ಯಕ್ಕೆ ಅರ್ಹಳು ಎಂಬುದನ್ನು ಸಾಬೀತು ಪಡಿಸಿ ತೋರಿಸುತ್ತಾಳೆ.

ಭಾರತೀಯ ಸಂಸ್ಕೃತಿಯಲ್ಲಿ ಹೆಂಡತಿ, ತನ್ನ ಗಂಡನನ್ನು ಅನುಸರಿಸಬೇಕು. ಆತ ಎಷ್ಟೇ ಕ್ರೂರಿಯಾಗಿರಲಿ, ಕೆಟ್ಟವನಾಗಿರಲಿ, ಅವನ ಹೆಂಡತಿಯಾಗಿಯೇ ಬದುಕಬೇಕು. ಗಂಡಿಗೆ ಇರುವಷ್ಟು ನೈತಿಕ ಸ್ವಾತಂತ್ರ್ಯ, ಹೆಣ್ಣಿಗೆ ನಮ್ಮ ಸಂಸ್ಕೃತಿಯಲ್ಲಿ ಇಲ್ಲ. ಪಾಶ್ಚಾತ್ಯ ಸಂಸ್ಕೃತಿಯನ್ನು ಗಮನಿಸಿದರೆ, ಅಲ್ಲಿ ಗಂಡು, ಹೆಣ್ಣು, ಪತಿ - ಪತ್ನಿಯ ಸಂಬಂಧದಲ್ಲಿ ಸಮಾನ ಸ್ವಾತಂತ್ರ್ಯವನ್ನು ಹೊಂದಿರುವುದನ್ನು ನೋಡಬಹುದು. ಅನೈತಿಕತೆಯ ಸಂಬಂಧಗಳು ಪಾಶ್ಚಾತ್ಯ ಸಂಸ್ಕೃತಿಯಲ್ಲಿ ರೂಢಿಯಾಗಿ ಬಂದಿರುವುದನ್ನು ಗಮನಿಸಬಹುದು.

ವೈದೇಹಿಯವರು ಹೆಣ್ಣಿನ ಸ್ಥಾನಮಾನದ ಬಗೆಗಿನ ವಿಚಾರವನ್ನು ಅಕ್ಕುವಿನ ಪಾತ್ರದ ಮೂಲಕವೇ ವಿಶ್ಲೇಷಿಸುತ್ತಾರೆ. ಸ್ತ್ರೀ ಸಮಸ್ಯೆ, ಸ್ತ್ರೀ ಅನುಭವ, ದಿಟ್ಟತನವೆಲ್ಲವೂ ಅಕ್ಕುವಿನಲ್ಲಿ ವ್ಯಕ್ತವಾಗುತ್ತದೆ. ಅಕ್ಕು ತನ್ನ ವೈಯಕ್ತಿಕ ಸಮಸ್ಯೆಯನ್ನು ದಿಟ್ಟತನದಿಂದ ಎದುರಿಸುತ್ತಾಳೆ. ಇದರಲ್ಲೇ ಅವಳ ಅಸ್ತಿತ್ವವೂ ಇದೆ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ಅಸ್ತಿತ್ವವನ್ನು ಹೋರಾಟದ ಮೂಲಕ ಕಂಡುಕೊಳ್ಳಬೇಕಾಗಿದೆ. ಸ್ತ್ರೀ, ಬದುಕಿನ ಯಾತನೆ, ದುಃಖ, ನೋವು, ಶೋಷಣೆಗಳಿಂದ ಮುಕ್ತಳಾಗಿ ತನ್ನ ಬದುಕನ್ನು ರೂಪಿಸಿಕೊಳ್ಳುವ ಆಶಯ ಈ ಕಥೆಯಲ್ಲಿದೆ. ಈ ಕಥೆ ಕೌಟುಂಬಿಕ ಚೌಕಟ್ಟಿನಲ್ಲಿಯೇ ಸ್ತ್ರೀ ಶೋಷಣೆಯನ್ನು ನಿರೂಪಿಸುತ್ತಾ ಸಾಮಾಜಿಕ ಆಯಾಮವನ್ನು ಪಡೆದುಕೊಳ್ಳುತ್ತದೆ. ಭಾಷೆಯ ಮೇಲಿನ ಹಿಡಿತ ಮತ್ತು ತೀಕ್ಷ್ಣ

ಕಲಾಪ್ರಜ್ಞೆ, ಕಥೆಗೆ ಹೊಸ ಆಯಾಮವನ್ನು ಕೊಟ್ಟಿದೆ.

ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣಿನ ಸ್ಥಾನ - ಮಾನವನ್ನು ಕುರಿತಂತೆ ವೈದೇಹಿಯವರು ತಮ್ಮ ಕಥೆಗಳಲ್ಲಿ ವಿಶ್ಲೇಷಿಸಿದ್ದಾರೆ. ಸ್ತ್ರೀ ಸಮಾಜದಲ್ಲಿ ಶೋಷಣೆಗೊಳಗಾಗುವ, ಅಸಮಾನತೆಯನ್ನು ಎದುರಿಸುವ, ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುವ ಬಗೆಯಲ್ಲಿ ವೈದೇಹಿಯವರು ವಿಚಾರವನ್ನು ಹರಿಯಬಿಟ್ಟಿದ್ದಾರೆ ತಮ್ಮ ಕಥೆಗಳ ಮೂಲಕ. ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣು, ಗಂಡಿನ ಶೋಷಣೆಗೊಳಗಾಗುವ ಸಂದರ್ಭದಲ್ಲಿ ತಾನು ಹೇಗೆ ಅದನ್ನು ನೀಗಿಸಿಕೊಳ್ಳಬೇಕು; ಮುಕ್ತಗೊಳ್ಳಬೇಕೆಂಬ ಮಾರ್ಗವನ್ನು ಇವರ ಕಥೆಗಳಲ್ಲಿ ಬರುವ ಹೆಣ್ಣು ಕಂಡುಕೊಳ್ಳುತ್ತಾಳೆ. ಕಷ್ಟ, ತುಳಿತ, ಅವಮಾನ, ಅಸಮಾನತೆ ಎಲ್ಲವನ್ನೂ ದಿಟ್ಟತನದಿಂದ ಎದುರಿಸುತ್ತಾಳೆ.

ಸಾಮಾಜಿಕ ಅನ್ಯಾಯ, ಸ್ತ್ರೀಯ ಬಗ್ಗೆ ಪುರುಷನ ಧೋರಣೆ ಸಾಮಾಜಿಕ ಕಥೆಗಳಲ್ಲಿ ವ್ಯಕ್ತಗೊಂಡಿರುವುದನ್ನು ಗುರುತಿಸಬಹುದು. ಹೆಣ್ಣು, ಗಂಡಿಗಿಂತ ಕನಿಷ್ಠಳು, ಅವಳಿಗೆ ಯಾವುದೇ ರೀತಿಯ ಅವಕಾಶಗಳು ಸಮಾಜದಲ್ಲಿ ಇಲ್ಲ. ಸ್ತ್ರೀ ಶೋಷಣೆಗೊಳಪಟ್ಟವಳು, ಯಾವುದೇ ರೀತಿಯ ಸ್ವಾತಂತ್ರ್ಯವನ್ನು ಅನುಭವಿಸದೆ, ಮುಕ್ತತೆಗಾಗಿ ಹಂಬಲಿಸುತ್ತಿರುವವಳು. ನಿರ್ಬಂಧತೆಯಿಂದ ಮುಕ್ತಳಾಗಿ ಬದುಕಬೇಕೆಂಬ ಆಕಾಂಕ್ಷೆಯನ್ನು ಹೊಂದಿದವಳು. ವೈದೇಹಿಯವರ ಸಾಮಾಜಿಕ ಆಯಾಮದಲ್ಲಿ ಕಂಡುಬರುವ ಹೆಣ್ಣನ್ನು ಈ ಬಗೆಯಲ್ಲಿ ಚಿತ್ರಿಸಿದ್ದಾರೆ.

ಹೆಣ್ಣು - ಗಂಡಿನ ಸಂಬಂಧದ ಮೂಲಕ ಸಾಮಾಜಿಕ ಸ್ತರದಲ್ಲಿ ಹೆಣ್ಣಿನ ಸ್ಥಾನ - ಮಾನವನ್ನು ಬಿಡಿಸಿಡುತ್ತಾರೆ ವೈದೇಹಿಯವರು. ಹೆಣ್ಣು, ಶೋಷಣೆಗೊಳಪಟ್ಟರೂ ಯಾವುದೇ ರೀತಿ ಪ್ರತಿಭಟನೆ ವ್ಯಕ್ತವಾಗುವುದಿಲ್ಲ. ವೈದೇಹಿಯವರು ಸ್ತ್ರೀವಾದಿಗಳೆಂದು ಗುರುತಿಸಲ್ಪಟ್ಟವರಲ್ಲ. ಆದರೂ ಅವರ ಕಥೆಗಳಲ್ಲಿ ಬುದ್ಧಿ ಪೂರ್ವಕವಾಗಿಯಲ್ಲದಿದ್ದರೂ ಕಥೆಯೊಂದಿಗೆ ಮಿಳಿತವಾಗಿ ಸ್ತ್ರೀಧೋರಣೆ ವ್ಯಕ್ತವಾಗುತ್ತದೆ.

ಸಾಮಾಜಿಕ ಸಂದರ್ಭದಲ್ಲಿ ಹೆಣ್ಣು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬೇಕು ಎಂಬುದು ವೈದೇಹಿಯವರ ಸಾಮಾಜಿಕ ಕಥೆಗಳಲ್ಲಿ ಕಾಣುವ ಕಾಳಜಿ. ವೈಯಕ್ತಿಕ ಸಮಸ್ಯೆಗಳು, ಅದು ಸಾಮಾಜಿಕ ಸಮಸ್ಯೆಗಳಾಗಿರುವುದನ್ನು ವಿವಿಧ ನೆಲೆಗಳನ್ನು ಗುರುತಿಸಬಹುದು. ಇವರ ಸಾಮಾಜಿಕ ನೆಲೆಯಲ್ಲಿನ ಕಥೆಗಳು ಸಮಾಜದಲ್ಲಿನ ಅನ್ಯಾಯ, ಶೋಷಣೆ ಮತ್ತು ಅವುಗಳಿಗೆ ಹೆಣ್ಣು ಕಂಡುಕೊಳ್ಳಬೇಕಾದ ಮಾರ್ಗವನ್ನು ಸೂಚಿಸುತ್ತವೆ.

* * * * *

ಅಧ್ಯಾಯ - ೬

ಕೌಟುಂಬಿಕ ನೆಲೆಯಲ್ಲಿ ಸ್ತ್ರೀಯ ಚಿತ್ರಣ

ಅಧ್ಯಾಯ - 6

ಕೌಟುಂಬಿಕ ನೆಲೆಯಲ್ಲಿ ಸ್ತ್ರೀಯ ಚಿತ್ರಣ

ಸ್ತ್ರೀಸಂವೇದನೆ

ಈ ಕಥೆಯನ್ನು "ಮರಗಿಡ ಬಳ್ಳಿ" ಎಂಬ ಕಥಾಸಂಕಲನದಿಂದ ಆರಿಸಿಕೊಳ್ಳಲಾಗಿದೆ.

ಪಾರಿಭಾಷಿಕವಾಗಿ "ಅನುಭವವೊಂದಕ್ಕೆ ಭಾವನಾತ್ಮಕ ಹಾಗೂ ಬೌದ್ಧಿಕ ಪಾತಳಿಯ ವ್ಯಕ್ತಿ ವಿಶಿಷ್ಟವಾದ ಪ್ರತಿಕ್ರಿಯೆ" ಯನ್ನು "ಸಂವೇದನೆ" ಎಂದು ಕರೆಯುತ್ತಾರೆ. 'ಸಂವೇದನೆ' ಎನ್ನುವುದು ವ್ಯಕ್ತಿ ವಿಶಿಷ್ಟವೆನ್ನುವುದನ್ನು ಒಪ್ಪುವುದಾದರೆ "ಸ್ತ್ರೀ ಸಮುದಾಯಕ್ಕೆ ವಿಶಿಷ್ಟವಾಗಿರುವ ಸಂವೇದನೆಗಳು ಎನ್ನುವ ಉಲ್ಲೇಖವೇ ಅಸಂಗತವಾಗುತ್ತದೆ. "ಸ್ತ್ರೀಸಂವೇದನೆ ಎಂದಾಗ ಬರಿಯ ಸ್ತ್ರೀಯರ ಸಂವೇದನೆ" ಎನ್ನುವ ಅರ್ಥವಷ್ಟೇ ಸ್ಫುರಿಸುವುದಿಲ್ಲ. ಒಬ್ಬ ಸಾಹಿತಿಯು 'ಹೆಣ್ಣಾಗಿ ಅವಳ ಅನುಭವ ಲೋಕವನ್ನು ಪ್ರವೇಶಿಸಿ ಬರೆದಾಗ ಮಾತ್ರವೇ ಸ್ತ್ರೀಸಂವೇದನೆಯು ಪ್ರಕಟವಾಗುತ್ತದೆ.

"ಶತಮಾನಗಳಿಂದ ಗಂಡು - ಹೆಣ್ಣು ಕೂಡಿ ಬದುಕಿದುದು. ಅವರಿಬ್ಬರಿಗೂ ಪರಿಚಿತವಾದ ಒಂದು ಸಾಮಾನ್ಯ ಪ್ರಪಂಚವಿದ್ದಂತೆ. ಹೆಣ್ಣಿಗೆ ಅವಳದೇ ಆದ ಭೌತಿಕ, ಮಾನಸಿಕ, ಭಾವುಕ ಪ್ರಪಂಚವು ಉಳಿಯಿತು. ಆದುದರಿಂದ ಮಹಿಳೆಯ ಸ್ಪಂದನೆಯ ಗ್ರಹಿಕೆಯ ಸ್ವೀಕಾರದ ಲಯ - ಗತಿ ತೀವ್ರತೆಗಳು ಭಿನ್ನವಾದವು. ಈ ಭಿನ್ನತೆ ಬದುಕನ್ನು ನೋಡುವ ಅವಳ ದೃಷ್ಟಿಕೋನಕ್ಕೂ ಒಂದು ವಿಶಿಷ್ಟತೆಯನ್ನು ತಂದುಕೊಟ್ಟಿದೆ" ಎನ್ನುವ ವಿಜಯಾದಬ್ಬೆಯವರ ಅಭಿಪ್ರಾಯವನ್ನು ಗ್ರಹಿಸಬಹುದು. ಈ ವೈಶಿಷ್ಟ್ಯಪೂರ್ಣವಾದ ಅನುಭವದ ಅಭಿವ್ಯಕ್ತಿಯನ್ನು ಸ್ತ್ರೀಸಂವೇದನೆ ಎಂದು ಕರೆಯಬಹುದು.

ಸ್ತ್ರೀಮನೋಧರ್ಮವನ್ನು ವಿವಿಧ ದೃಷ್ಟಿಕೋನಗಳಲ್ಲಿ ಸೆರೆಹಿಡಿಯುವುದು, ಸ್ತ್ರೀಮೌಲ್ಯಗಳನ್ನು ಹೇಳುವುದು, ಹೆಣ್ಣಿನ ಸ್ಥಾನಮಾನ, ಅವಳ ತುಡಿತ, ದುಃಖ ಸಂತೋಷ ಹೀಗೆ ಅವಳ ಭಾವನೆಗಳಿಗೆ ಸಂಬಂಧಿಸಿದಂತೆ ಸ್ತ್ರೀ ಸಂವೇದನೆಯನ್ನು ವಿವಿಧ ಸ್ವರೂಪಗಳಲ್ಲಿ ಗುರುತಿಸಬಹುದು.

ಸಮಾಜದಲ್ಲಿ ಸ್ತ್ರೀಗಿರುವ ಸ್ಥಾನಮಾನಗಳನ್ನು ಅವಲೋಕಿಸಿದಾಗ ಸ್ತ್ರೀಸಂವೇದನೆಯ ಸ್ವರೂಪವೇನೆಂಬುದನ್ನು ತಿಳಿಯಲು ಸಾಧ್ಯವಾಗುತ್ತದೆ. ಪ್ರಾಚೀನಕಾಲದಿಂದಲೂ ಸ್ತ್ರೀ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಹೆಣಗಾಡುತ್ತಿದ್ದಾಳೆ. ಪ್ರಾಚೀನ ಸಾಹಿತ್ಯದಲ್ಲಿ ಒಂದಲ್ಲ ಒಂದು ರೀತಿ ಹೆಣ್ಣು ಶೋಷಣೆಗೊಳಗಾಗುವ ಚಿತ್ರವನ್ನು ಕಾಣುತ್ತೇವೆ.

"ಹೆಣ್ಣು ನಡೆದುಬಂದ ದಾರಿಯನ್ನು ಗಮನಿಸಿದರೆ, ವೇದಕಾಲೀನ ಮಹಿಳೆಯ ಸ್ಥಾನಮಾನ ಸ್ವಲ್ಪ ಉನ್ನತ ಮಟ್ಟದಲ್ಲಿಯೇ ಇದ್ದಿತೆಂದು ಹೇಳಬಹುದು. ಆದರೆ ಪುರಾಣ - ಇತಿಹಾಸಗಳ ಕಾಲದಲ್ಲಿ ಹೆಣ್ಣು ಅಲಕ್ಷಿಸಲ್ಪಟ್ಟಳು. ಮಹಾಕಾವ್ಯಗಳ ಕಾಲಕ್ಕೆ ಅವಳ ಸ್ಥಿತಿ ಇನ್ನೂ ಹದಗೆಟ್ಟಿತು. ಮುಂದೆ ಜೈನ ಹಾಗೂ ಬೌದ್ಧ ಧರ್ಮಗಳ ಕಾಲದಲ್ಲಿ ದೀನಸ್ಥಿತಿಯಿಂದ ಸ್ವಲ್ಪ ಚೇತರಿಸಿಕೊಂಡಳು. ಆದರೆ ಮುಂದೆ ಬಂದ ಸ್ಮೃತಿಕಾರರು ಮತ್ತೆ ಈ ಪರಿಸರವನ್ನು ಬಿಗಿಗೊಳಿಸಿ, ಸ್ತ್ರೀಪುರುಷರೆಂಬ ತಾರತಮ್ಯವನ್ನು ಹೆಚ್ಚಿಸಿ

ಸ್ತ್ರೀಸಮಾಜವನ್ನು ಅದಃಪತನಗೊಳಿಸಿದರು" (ಡಾ|| ಚೆನ್ನಕ್ಕ ಎಲಿಗಾರ, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ - ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ).

ಸಮಾಜ ಮತ್ತು ಕುಟುಂಬದಲ್ಲಿ ಹೆಣ್ಣಿನ ಪಾತ್ರ, ಆಕೆಯ ಭಾವನೆಗಳು, ಅದರ ಅಭಿವ್ಯಕ್ತಿ ಒಟ್ಟಾರೆ ಸ್ತ್ರೀಸಂವೇದನೆಯ ಸ್ವರೂಪವನ್ನು ಒಳಗೊಂಡಂತಹುದು.

ಪ್ರಾಚೀನ ಸಾಹಿತ್ಯ ಹೆಣ್ಣನ್ನು 'ಭೋಗವಸ್ತು' ವನ್ನಾಗಿ ಚಿತ್ರಿಸಿದೆಯೇ ಹೊರತು ಅವಳ ಭಾವನೆಗಳಿಗೆ ಒತ್ತುಕೊಟ್ಟಿಲ್ಲ. ಆಧುನಿಕ ಸಾಹಿತ್ಯದಲ್ಲಿ ಪ್ರಾರಂಭದಲ್ಲಿ ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಹೆಣ್ಣನ್ನು ಚಿತ್ರಿಸುತ್ತಾ ಬಂದರೂ, ನಂತರದ ಸಾಹಿತ್ಯದಲ್ಲಿ ಸ್ತ್ರೀಯನ್ನು ದಿಟ್ಟ, ಸಾಮರ್ಥ್ಯವುಳ್ಳ ಪಾತ್ರಗಳಾಗಿ ಚಿತ್ರಿಸುತ್ತಾ ಬಂದಿದೆ.

ನವೋದಯ ಪೂರ್ವದಲ್ಲಿ ಮೊದಲಾದ ಮಹಿಳಾ ಲೇಖಕಿಯರು ತಮ್ಮ ನೋವು, ಸಾಮಾಜಿಕವಾದ ಸಮಸ್ಯೆಗಳಿಂದ ಬಿಡುಗಡೆಗೊಳ್ಳಲು ಸೂಕ್ಷ್ಮ ಸಂವೇದನ ಶೀಲರಾಗಿ ಬರೆದರು. ಪುರುಷ ಲೇಖಕರು ಹೆಣ್ಣನ್ನು ಪಾರಂಪರಿಕ ಮೌಲ್ಯಗಳಿಗೆ ಅಂಟಿಕೊಂಡಂತೆ ಸಾಂಪ್ರದಾಯಿಕ ಮೌಲ್ಯಗಳಿಗೆ ಅಂಟಿಕೊಂಡು ನರಳುವಂತೆ ಹಾಗೂ ಅದಕ್ಕಿಂತಲೂ ವ್ಯಕ್ತಿಗತ ನೆಲೆಯಲ್ಲಿ ಸ್ತ್ರೀಪಾತ್ರಗಳ ವಿಶ್ಲೇಷಣೆ ಇದೆ.

ನವೋದಯಪೂರ್ವದಲ್ಲಿ ಮಹಿಳೆಯರೂ ಬರವಣಿಗೆಯಲ್ಲಿ ತೊಡಗಿದ್ದರು. ಅದರಲ್ಲಿ ಮುಖ್ಯವಾಗಿ ಸ್ತ್ರೀ ವಿದ್ಯಾಭ್ಯಾಸ, ಸ್ತ್ರೀಶಿಕ್ಷಣ ಈ ವಿಚಾರಗಳಿಗೆ ಒತ್ತು ಕೊಟ್ಟರು. ಸಾಂಪ್ರದಾಯಿಕ ನೆಲೆಯಲ್ಲಿ ಸ್ತ್ರೀಯ ಚಿತ್ರಣವಿದ್ದರೂ ಅದನ್ನು ವಿರೋಧಿಸುವ ರೀತಿಯಲ್ಲಿ ಬರೆದರು.

ಸ್ವಾತಂತ್ರ್ಯೋತ್ತರ ಕಥಾಸಾಹಿತ್ಯದಲ್ಲಿ ಅವಳ ಮನಸ್ಸು ಹೊಕ್ಕಿ ನೋಡುವ ಪ್ರಯತ್ನ ಕಂಡುಬರುತ್ತದೆ. ಆ ಕಾಲದಲ್ಲಿ ನಾಟಕಗಳೂ ಹೆಚ್ಚು ರಚನೆಯಾಗುತ್ತಿದ್ದು, ಸ್ತ್ರೀ ಪಾತ್ರಗಳು ಇದ್ದವು. ಟಿ. ಪಿ. ಕೈಲಾಸಂರವರ 'ಸೂಳೆ' ನಾಟಕ ಮಹಿಳೆಯ ಭಾವನೆಗಳು, ಸ್ತ್ರೀತನದ ಬಗ್ಗೆ ಪ್ರಾಮುಖ್ಯತೆ ನೀಡಿ ಬರೆದಿದ್ದಾರೆ. 'ಅಮ್ಮಾವ್ರ ಗಂಡ', 'ತಾಳಿಕಟ್ಟೋಕ್ಕೂಲೀನೇ' ನಾಟಕಗಳಲ್ಲೂ, 'ತಾವರೆಕೆರೆ' ನಾಟಕದಲ್ಲಿ ಕೈಲಾಸಂ ಸ್ತ್ರೀಸಂವೇದನೆಗಳ ಬಗೆಗೆ ವಿಚಾರಗಳನ್ನು ಹರಿಸಿದ್ದಾರೆ.

ಸ್ತ್ರೀಯರೇ ಬರೆದಿರುವ ಸಾಹಿತ್ಯವನ್ನು ನೋಡಿದಾಗ ಕುಟುಂಬ, ಸಮಾಜದ ನೆಲೆಯಲ್ಲಿ ಹೆಣ್ಣು ತನ್ನತನವನ್ನು ಕಂಡುಕೊಳ್ಳುತ್ತಾ ಹೋಗುತ್ತಾಳೆ. ಸ್ತ್ರೀಯ ವ್ಯಕ್ತಿತ್ವಕ್ಕೆ ಬೆಲೆಯಿದೆ. ಈ ಹಿನ್ನೆಲೆಯಲ್ಲಿ ಸ್ತ್ರೀಸಂವೇದನೆಯನ್ನು ವೈದೇಹಿಯವರ ಕಥೆಗಳಲ್ಲಿ ಗಮನಿಸುತ್ತಾ ಹೋಗಬಹುದು.

ಸಾಮಾಜಿಕ ಹಾಗೂ ಕೌಟುಂಬಿಕ ನೆಲೆಯಲ್ಲಿನ ಸ್ತ್ರೀಯ ಚಿತ್ರಣ ಒಟ್ಟಾರೆಯಾಗಿ ಗಮನಿಸಬೇಕಾಗುತ್ತದೆ. ವೈದೇಹಿಯವರ ಕಥೆಗಳಲ್ಲಿ ಮುಖ್ಯವಾಗಿ ಕಂಡುಬರುವುದೇ ಸ್ತ್ರೀಯ ಪಾತ್ರಗಳು. ವ್ಯಕ್ತಿನಿಷ್ಠ ನೆಲೆಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಸ್ತ್ರೀಸಂವೇದನೆ ಯನ್ನೊಳಗೊಂಡಂತೆ ಅವರ ಕಥೆಗಳನ್ನು ಅಧ್ಯಯನ ಮಾಡಬಹುದು.

ಕುಟುಂಬ :

ಕುಟುಂಬವು ಸಾಮಾಜಿಕ ಸಂಸ್ಥೆಯಾಗಿದೆ. ಕುಟುಂಬದಿಂದಲೇ ಮಾನವನ ಸಮೂಹ ಜೀವನದ ಆರಂಭ. ಜೀವನದ ಸಾಧನೆ ಮತ್ತು ಸಾರ್ಥಕತೆಗಳ ನಿರ್ಣಾಯಕ ಸಾಧನ; ಮತ್ತು ಸುಖ - ಸಂತೋಷಗಳ ಹಾಗೂ ದುಃಖ, ದುಮ್ಮಾನಗಳ ಅನುಭವದ ತಾಣ.

ಕುಟುಂಬವಿಲ್ಲದೆ ಸಮಾಜವಿಲ್ಲ, ಮಾನವ ಸಾಮಾಜಿಕ ಜೀವನದ ತಳಹದಿಯಾಗಿದೆ. ಕುಟುಂಬ ನಮ್ಮ ಸಾಮಾಜಿಕ ಜೀವನಕ್ಕೆ ಒಂದು ನೆಲೆಯನ್ನು ಮತ್ತು ಸ್ಥಿರತೆಯನ್ನು ಕೊಡುವುದು. ಕುಟುಂಬದ ಬೇರುಗಳು ಸಾಮಾಜಿಕ ವ್ಯವಸ್ಥೆಯಲ್ಲಿ ಆಳವಾಗಿ ಸೇರಿಹೋಗಿವೆ.

'ಕುಟುಂಬ' ಎಂಬರ್ಥದ ಇಂಗ್ಲಿಷ್ ಶಬ್ದ 'ಫ್ಯಾಮಿಲಿ' (Family) ಎಂಬುದು ಲ್ಯಾಟಿನ್ ಭಾಷೆಯ ಫ್ಯಾಮ್ಯುಲಸ್ (Famulus) ಎಂಬ ಮೂಲ ಶಬ್ದದಿಂದ ವ್ಯುತ್ಪತ್ತಿ ಹೊಂದಿದೆ.

ವಿವಿಧ ಸಮಾಜಶಾಸ್ತ್ರಜ್ಞರು 'ಕುಟುಂಬ' ದ ಬಗ್ಗೆ ವಿವಿಧ ರೀತಿಯ ವ್ಯಾಖ್ಯಾನಗಳನ್ನು ನೀಡಿದ್ದಾರೆ.

ಈಲಿಯಟ್ ಮತ್ತು ಮೆರಿಲ್ "ಗಂಡ, ಹೆಂಡತಿ ಮತ್ತು ಮಕ್ಕಳನ್ನೊಳಗೊಂಡಿರುವ ಜೈವಿಕ ಸಾಮಾಜಿಕ ಘಟಕವೇ ಕುಟುಂಬ".

ಸ್ರಮ್ನರ್ ಮತ್ತು ಕೆಲ್ಲರ್ : "ರಕ್ತ ಸಂಬಂಧಗಳಿಂದ ಕೂಡಿದ ಮತ್ತು ಕನಿಷ್ಠ ಎರಡು ತಲೆಮಾರುಗಳನ್ನು ಒಳಗೊಂಡಿರುವ ಅತಿ ಸೂಕ್ಷ್ಮ ಸಾಮಾಜಿಕ ಸಂಘಟನೆಯೇ ಕುಟುಂಬ".

ಅಂದರೆ, ಕುಟುಂಬದಲ್ಲಿ ಎರಡು ಪಂಗಡಗಳನ್ನು ನೋಡಬಹುದು. ವಿಭಕ್ತ ಮತ್ತು ಅವಿಭಕ್ತ ಕುಟುಂಬ ಎಂಬುದಾಗಿ ವಿಭಾಗಿಸಬಹುದು.

ಅವಿಭಕ್ತ ಕುಟುಂಬ ಭಾರತದ ಸಾಮಾಜಿಕ ವ್ಯವಸ್ಥೆಯ ಅವಿಭಜನೀಯವಾದ ಅಂಗವಾಗಿದೆ. ಭಾರತೀಯ ಸಾಮಾಜಿಕ ಬೆಳವಣಿಗೆಯಲ್ಲಿ ಕುಟುಂಬವೆಂದರೆ ಅವಿಭಕ್ತ (ಜಂಟಿ) ಕುಟುಂಬವೇ. ಈ ಕುಟುಂಬ ವ್ಯವಸ್ಥೆಗೆ ತನ್ನದೇ ಆದ ಸುದೀರ್ಘವಾದ ಇತಿಹಾಸವಿದೆ.

ಸಾಮಾನ್ಯ ಅರ್ಥದಲ್ಲಿ ಅವಿಭಕ್ತ ಕುಟುಂಬದ ಬಗ್ಗೆ ಹೇಳುವುದಾದರೆ, ಕನಿಷ್ಟ ಮೂರು ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆಯ ತಲೆಮಾರುಗಳಿಗೆ ಸೇರಿದ ರಕ್ತಸಂಬಂಧಿಗಳು ಒಬ್ಬ ವ್ಯಕ್ತಿಯ (ಪುರುಷ ಅಥವಾ ಸ್ತ್ರೀ) ನೇತೃತ್ವದಲ್ಲಿ ದುಡಿಯುತ್ತಾ ಒಂದೇ ನಿವಾಸದಲ್ಲಿ ಒಂದೇ ಕುಟುಂಬದವರಂತೆ ಒಟ್ಟಿಗೇ ನೆಲೆಸಿರುವುದನ್ನು ಅವಿಭಕ್ತ ಕುಟುಂಬವೆನ್ನಬಹುದು.

ವಿಭಕ್ತ ಅಥವಾ ಕೇಂದ್ರ ಅಣು ಕುಟುಂಬದಲ್ಲಿ ವಿವಾಹಿತ ಮಕ್ಕಳು ತಮ್ಮ ತಂದೆ ತಾಯಿಯರನ್ನು ತೊರೆದು ತಮ್ಮದೇ ಆದ ಪ್ರತ್ಯೇಕ ಕುಟುಂಬವನ್ನು ಅರ್ಥಾತ್ ಕೇಂದ್ರ ಕುಟುಂಬವನ್ನು ಸ್ಥಾಪಿಸಿಕೊಳ್ಳುವರು. ಕುಟುಂಬದ ಗಾತ್ರ ಚಿಕ್ಕದಾಗಿರುವುದರಿಂದ ಸದಸ್ಯರು ಹೆಚ್ಚು ಸ್ವತಂತ್ರವಾಗಿ ವ್ಯವಹರಿಸುವರು.

ಮರ್ಡಕ್ ಎಂಬ ಸಮಾಜಶಾಸ್ತ್ರಜ್ಞರ ಪ್ರಕಾರ "ಗಂಡ - ಹೆಂಡತಿಯರು ತಮ್ಮ ಅವಿವಾಹಿತ

ಮಕ್ಕಳೊಂದಿಗೆ ವಾಸಿಸುವ ಕುಟುಂಬವನ್ನು ಅಣುಕುಟುಂಬ ಅಥವಾ ಕೇಂದ್ರಕುಟುಂಬ" ಎಂದು ಕರೆದಿರುವರು.

ಇಂದಿನ ಆಧುನಿಕ ನಾಗರೀಕ, ಅದರಲ್ಲೂ ಔದ್ಯೋಗಿಕ ಸಮಾಜಗಳಲ್ಲಿ ನಾವು ಕೇಂದ್ರ ಕುಟುಂಬಗಳ ಪ್ರಭುತ್ವವನ್ನು ಕಾಣಬಹುದು. ಪಾಶ್ಚಾತ್ಯ ಜಗತ್ತಿನ ಕುಟುಂಬಗಳೆಲ್ಲವೂ ಹೆಚ್ಚುಕಡಿಮೆ ಕೇಂದ್ರ ಕುಟುಂಬಗಳೇ ಆಗಿವೆ.

ವೈದೇಹಿಯವರ ಕೌಟುಂಬಿಕ ನೆಲೆಯಲ್ಲಿ ಕಂಡುಬರುವ ಕಥೆಗಳಲ್ಲಿ, ನಗರೀಕರಣ, ಕೈಗಾರಿಕೀಕರಣ ಪ್ರಭಾವದಲ್ಲಿ ಅವಿಭಕ್ತ ಕುಟುಂಬಗಳು, ಅಣುಕುಟುಂಬಗಳಾಗಿ ಪರಿವರ್ತಿತವಾಗುತ್ತಿರುವುದನ್ನು ಸೂಕ್ಷ್ಮವಾಗಿ ಗಮನಿಸಬಹುದು.

ವೈದೇಹಿಯವರ ಕಥೆಗಳಲ್ಲಿ ಕಂಡುಬರುವ ಕುಟುಂಬ ದೊಡ್ಡದಾಗಿರುವಂಥದು. ಅದರಲ್ಲಿ ಸ್ತ್ರೀಯರದೇ ಪ್ರಮುಖ ಪಾತ್ರ. ತಾಯಿ, ಗೃಹಿಣಿ, ಒಂದು ಹುಡುಗಿ ಯಾವುದೇ ಪಾತ್ರವಾದರೂ ವಿವಿಧ ರೀತಿಯಲ್ಲಿ ಚಿತ್ರಿತವಾಗಿದ್ದಾಳೆ. ವಿವಿಧ ನೆಲೆಯಲ್ಲಿ ಹೆಣ್ಣಿನ ಯಾತನೆಯ ಮುಖಗಳನ್ನು ನೋಡಬಹುದು.

ಮರಗಿಡ ಬಳ್ಳಿ

ಈ ಕಥೆಯನ್ನು "ಮರಗಿಡ ಬಳ್ಳಿ" ಎಂಬ ಕಥಾಸಂಕಲನದಿಂದ ಆರಿಸಿಕೊಳ್ಳಲಾಗಿದೆ.

ವೈದೇಹಿಯವರ ಪ್ರಥಮ ಕಥಾಸಂಕಲನ 'ಮರಗಿಡ ಬಳ್ಳಿ' ಯಿಂದ 'ಮರಗಿಡ ಬಳ್ಳಿ' ಕಥೆಯನ್ನು ಗಮನಿಸಬಹುದು. ತಾಯಿಯ ಪ್ರೀತಿ - ವಾತ್ಸಲ್ಯ, ಮಕ್ಕಳಿಂದ ತಿರಸ್ಕೃತಗೊಂಡ ತಾಯಿ ಅನುಭವಿಸುವ ವೇದನೆ ಈ ಕಥೆಯ ಪೂರಾ ಕಂಡುಬರುತ್ತದೆ.

ಸಂಸಾರಕ್ಕೆ ಮುಖ್ಯಳಾದ ತಾಯಿ ಹಾಸಿಗೆ ಹಿಡಿದಿದ್ದಾಳೆ; ನಿಶ್ಚೇಷ್ಟಿತಳಾಗಿದ್ದಾಳೆ. ಆಕೆಗೆ ಮೂರುಜನ ಮಕ್ಕಳು. ಒಬ್ಬ ಡಾಕ್ಟರಾಗಿ ದೂರದಲ್ಲಿದ್ದಾನೆ. ಮತ್ತೊಬ್ಬ ತಾಯಿಯ ಆರೈಕೆಯಲ್ಲಿದ್ದಾನೆ. ಮಗಳಿಗೆ ತನ್ನದೇ ಆದ ಸಂಸಾರವಿದೆ. ತಾಯಿ ಇಂಥಾ ಸ್ಥಿತಿಯಲ್ಲಿರುವುದನ್ನು ನೋಡುವುದಕ್ಕಾಗಿ ಬಂದು ವಿಭಿನ್ನ ರೀತಿಯಲ್ಲಿ ವರ್ತಿಸುತ್ತಾರೆ. ಅವರ ನಿರ್ಲಕ್ಷ್ಯಕ್ಕೆ ಗುರಿಯಾಗುತ್ತಾಳೆ. ಈ ವರ್ತನೆಯಿಂದ ತಾಯಿ ಅತಿಯಾದ ಮಾನಸಿಕ ಹಿಂಸೆ ಅನುಭವಿಸುತ್ತಾಳೆ. ಆ ಮಕ್ಕಳಿಗಾಗಿ ತಾನು ಪಟ್ಟಪಾಡನ್ನು ನೆನೆದು ಅಳು ಉಕ್ಕಿ ಬರುತ್ತದೆ. ಆದರೆ ಬೆಳೆದು ದೊಡ್ಡವರಾಗಿ ಸಂಪಾದನೆ ಮಾಡುವ ಸಂದರ್ಭದಲ್ಲಿ ಅಮ್ಮನನ್ನು ಕಡೆಗಣಿಸುತ್ತಾರೆ. 'ಅಮ್ಮ' ನನ್ನು ನೋಡಿಕೊಳ್ಳಲೂ ಪುರುಸೊತ್ತಿಲ್ಲದೆ, ಪರರನ್ನು ನೇಮಿಸುತ್ತಾರೆ. ತಾಯಿ ಇದರಿಂದ ಹೆಚ್ಚು ನೋವನ್ನು ಅನುಭವಿಸುತ್ತಾಳೆ.

ಮಂದಕ್ಕ ಪ್ರೀತಿಯಿಂದ ಮಕ್ಕಳನ್ನು ಪೋಷಿಸಿದಾಕೆ, ಪ್ರೀತಿ ವಾತ್ಸಲ್ಯವನ್ನು ಧಾರೆ ಎರೆದು ಜೀವನವನ್ನು ಕಳೆದವಳು. ಇಂಥ ಹೆತ್ತ ತಾಯನ್ನು ಮಕ್ಕಳು ನಿಕೃಷ್ಟವಾಗಿ ಕಾಣುತ್ತಾರೆ. ಆಕೆ ಅಸಹಾಯಕಳು. ಒಂದು ಕಡೆ ಜಡವಾಗಿ ಮಲಗಿದ್ದಾಳೆ.

ಮಂದಕ್ಕನ ಪಾತ್ರದ ಮೂಲಕ ತಾಯಿಯ ನಿರೀಕ್ಷೆ, ಪ್ರತೀಕ್ಷೆಗಳನ್ನು ಎಳೆಎಳೆಯಾಗಿ ಬಿಡಿಸುತ್ತಾ ಹೋಗುತ್ತಾರೆ ಲೇಖಕಿ ವೈದೇಹಿಯವರು. ಮಕ್ಕಳಿದ್ದೂ ಇಲ್ಲದ ಹಾಗೇ ತಾನು ನಿಶ್ಚೇಷ್ಟಿತಳಾಗಿ ಬಿದ್ದಿದ್ದಾಳೆ. ಮಕ್ಕಳನ್ನು ಬೆಳೆಸಲು ಕಷ್ಟಪಟ್ಟಿದ್ದ ಜೀವ, ಇಂದು ತಾನು ಯಾರಿಗೂ ಬೇಡವಾದ ವಸ್ತುವಾದೆನಲ್ಲಾ ಎಂಬ ದುಃಖ ಆಕೆಯಲ್ಲಿ ಉಂಟಾಗುತ್ತದೆ. ಹಿಂದಿನ ಮಕ್ಕಳೊಂದಿಗಿನ ಘಟನೆಗಳನ್ನು ಮೆಲುಕು ಹಾಕುತ್ತಾಳೆ.

ಮಗಳು ತನ್ನನ್ನು ಕಾಣಲು ಬರುವಳೆಂದು ತಿಳಿದು ಮಲಗಿದ್ದಲ್ಲೇ ಹರ್ಷಿಸುತ್ತಾಳೆ. ಅವಳನ್ನು ಹೆರುವುದಕ್ಕಾಗಿ ಕಷ್ಟಪಟ್ಟಿದ್ದು, ನಾಲ್ಕು ಮಂದಿ ಇರುವ ಮನೆಯಲ್ಲಿ ಕಷ್ಟಪಟ್ಟು ಬೆಳೆಸಿದ್ದು, ಒಂದೊಂದೇ ನೆನಪಾಯಿತು. "ಬೆಳಿಗ್ಗೆ ಎದ್ದು ಗೊರಟು ಉಜ್ಜುತ್ತಾ ಕುಳಿತರೆ, ಇವಳು ಗಂಡನಿಗೆ ಅಡಿಗೆ ಮಾಡಿ ಹಾಕಿದ ಹಾಗೆ, ಅವನು ಉಂಡು ಆಫೀಸಿಗೆ ಹೋದ ಹಾಗೆ" ಎಂದು ಪುಟ್ಟಜ್ಜಿ ಹೇಳುತ್ತಿದ್ದು, 'ಇಂದು ತನ್ನ ಗಂಡನಿಗೆ ಅಡಿಗೆ ಮಾಡಿ ಹಾಕಿಕೊಂಡು ಚೆಂದದ ಮನೆವಾರ್ತೆ ನಡೆಸುತ್ತಿಲ್ಲವೆ ?' ಎಂದು ಆಕೆ ನೆನಪಿಸಿಕೊಳ್ಳುತ್ತಾಳೆ. ಸ್ತ್ರೀ ಸಂಸಾರ ಮಾಡಿಕೊಂಡು ಇರಬೇಕಾದವಳು. ಅದಕ್ಕೆ ತಕ್ಕಂತೆ ತಯಾರು ಮಾಡಿಕೊಳ್ಳಬೇಕು. ಸಂಪ್ರದಾಯದ ನಿಯಮ ಕುಟುಂಬದಲ್ಲಿ ಹೇರಿದೆ. ವೈದೇಹಿಯವರು ಸೂಕ್ಷ್ಮವಾಗಿ ಅದನ್ನು ಮನಗಾಣಿಸುತ್ತಾರೆ.

ತಾಯಿ - ಮಕ್ಕಳ ಸಂಬಂಧ ಅನ್ಯೋನ್ಯವಾದದ್ದು. ತಾಯಿ ಕಷ್ಟದಿಂದ ಮಕ್ಕಳನ್ನು ಸಾಕಿ ಸಲಹುತ್ತಾಳೆ. ಅದಕ್ಕಾಗಿ ತ್ಯಾಗವನ್ನೂ ಮಾಡುತ್ತಾಳೆ. ಬೆಳೆದು ದೊಡ್ಡವರಾದ ಮಕ್ಕಳಿಂದ ತಾಯಿ ಪ್ರೀತಿಯನ್ನು ಅಪೇಕ್ಷಿಸುವುದು ಸಹಜ. ಅದು ದೊರಕದೆ ಹೋದಾಗ ನಿರಾಸೆ ಉಂಟಾಗುತ್ತದೆ. ಮನೋವೇದನೆಯಿಂದ ನರಳಬೇಕಾಗುತ್ತದೆ.

ತಾಯಿ ದೂರದಲ್ಲಿರುವ ತನ್ನ ಮಗ ಸೂರ್ಯಮಣಿಯನ್ನು ನೆನಪಿಸಿಕೊಳ್ಳುತ್ತಾಳೆ. ಅವನಿಗಾಗಿ ತಾನು ಪಟ್ಟ ಪಾಡು - "ನೀನು ಓದುತ್ತಿರುವಾಗ ನಾನು ನಿನ್ನ ಪ್ಯಾಂಟಿಗಿಂತ ಷರ್ಟಿಗಿಂತ, ಪುಸ್ತಕಕ್ಕೆಂತ ಧುಮಕಿ ಹೊಡೆದಾಗ ಮತ್ತೆ ಪರೀಕ್ಷೆಗೆ ಕಟ್ಟುವುದಕ್ಕೆಂತ, ಅಪ್ಪ ಕೊಡಲಾರೆ ಎಂದಾಗಲೆಲ್ಲ ಮುಚ್ಚಿ ಮುಚ್ಚಿ ಕೊಟ್ಟಿದ್ದು ನೆನಪು ಹೋಯಿತೆ ?...." ಹೀಗೆ ಹೇಳಿದರೆ ಬಡ್ಡಿ ಸಮೇತ ವಸೂಲು ಮಾಡಹೊರಟಿರುವಳಂತೆ ಕಾಣಬಹುದು ನಿಂಗೆ. ಇಷ್ಟರವರೆಗೆ ಸತ್ಯವೆಂದೇ ಗಟ್ಟಿಯಾಗಿ ನಂಬಿದವುಗಳೆಲ್ಲ ಮಿಥ್ಯೆ. ಈ ಮಿಥ್ಯೆಗಾಗಿ ಜೀವನವಿಡೀ ಸವೆಸಿ ಹೀಗೆ ಮರುಕಾದೆನಲ್ಲ ಎಂಬ ವ್ಯಥೆಯಾಗುತ್ತದೆ....".

ಜೀವನದ ಸತ್ಯತೆಯನ್ನು ಕಾಣಿಸುವ ಪ್ರಯತ್ನ. ಮನುಷ್ಯ ಬದುಕು ಭ್ರಮಾತ್ಮಕನಾದುದು, ಎಲ್ಲರೂ ನನ್ನವರು ಎಂಬ ಭಾವನೆ ಸುಳ್ಳು, ಸತ್ಯ - ಮಿಥ್ಯೆಗಳ ನಡುವೆ ನಮ್ಮ ಬದುಕು, ಭ್ರಮಾತ್ಮಕ ಬದುಕಿನ ನೋಟ, ಬದುಕಿನ ವಾಸ್ತವತೆಯನ್ನು ಲೇಖಕಿ ಮನಗಾಣಿಸುತ್ತಾರೆ.

ಭಾರತೀಯ ಸಂಸ್ಕೃತಿಯ ನೆಲೆಯಲ್ಲಿ ಹೆಣ್ಣು ಸಂಸಾರದ ಜವಾಬ್ದಾರಿಯನ್ನು ಹೊತ್ತಿರುವಳು. ಸಂಸಾರದ ಭಾರವನ್ನು ಹೆಣ್ಣು ಹೊರುತ್ತಾಳೆ. ಪಾಶ್ಚಾತ್ಯರಲ್ಲಿನ ವಿಚಾರ ನಮ್ಮ ಭಾರತೀಯ ಸಂಸ್ಕೃತಿಯನ್ನು ಪ್ರವೇಶಿಸಿ, ಜೀವನದಲ್ಲಿ, ಕುಟುಂಬದಲ್ಲಿ ಛಿದ್ರೀಕರಣಗೊಳ್ಳುತ್ತಾ ಹೋಯಿತು. ಪಾಶ್ಚಾತ್ಯರಲ್ಲಿ ಹೆಚ್ಚು ವಿಭಜಿತ ಕುಟುಂಬಗಳೇ ಕಂಡುಬರುತ್ತದೆ. ವೈದೇಹಿಯವರು ಬರೆಯುವ ಕಾಲಕ್ಕೆ ಆಧುನೀಕರಣದ ಪ್ರಭಾವಕ್ಕೆ ಒಳಗಾಗುತ್ತಿದ್ದ ಕಾಲ. ಆದರೆ ಪಾಶ್ಚಾತ್ಯರ ವಿಚಾರ ನಮ್ಮ ಸಂಸ್ಕೃತಿಯಲ್ಲಿ ಪ್ರವೇಶಿಸುತ್ತಿರುವುದರ

ಸುಳಿವನ್ನು ವೈದೇಹಿಯವರು ಸೂಕ್ಷ್ಮವಾಗಿ ಮನಗಾಣಿಸುತ್ತಾರೆ.

ಆಧುನೀಕರಣದ ಪ್ರಭಾವದ ಹಿನ್ನೆಲೆಯಲ್ಲಿ ಕುಟುಂಬಗಳ ಛಿದ್ರೀಕರಣ ವಾಗುತ್ತಿರುವುದು ವಾಸ್ತವವಾಗಿದೆ. ಈ ಕಥೆಯಲ್ಲಿ ಕೌಟುಂಬಿಕ ಶಿಥಿಲವನ್ನು ಮನಗಾಣಿಸುತ್ತಾರೆ. ತಾಯಿ ಪಾತ್ರದ ಮೂಲಕ ವೈದೇಹಿಯವರು ಮಾತೃಸ್ಥಾನದ ಹಿರಿಮೆ, ಆಕೆಗಿರುವ ಮಹತ್ವವನ್ನು ಕಾಣಿಸುತ್ತಾರೆ. ಮಾತೃವಾತ್ಸಲ್ಯ, ಪ್ರೀತಿಯ ಆರೈಕೆಯಿಂದ ಮಕ್ಕಳನ್ನು ಬೆಳೆಸಿದ ತಾಯಿಗೆ ಕೊನೆಗೆ ದೊರಕುವುದಾದರೂ ಏನು ? ಮಕ್ಕಳಿಂದ ನೋವು, ದುಃಖ, ತ್ಯಾಗಕ್ಕೆ ಬೆಲೆಯಿಲ್ಲ. ಆಧುನೀಕರಣದ ಪ್ರಭಾವ ಸಮಾಜದ ಮೇಲೆ ಉಂಟುಮಾಡಿದ ಪರಿಣಾಮದ ಸೂಕ್ಷ್ಮ ಒಳನೋಟವನ್ನು ಲೇಖಕಿ ನೀಡಿದ್ದಾರೆ.

ಒಟ್ಟಾರೆ ಈ ಕಥೆ ಸಹಜವಾಗಿ ಮೂಡಿಬಂದಿದೆ. ವಿಶೇಷವಾಗಿ ವೈದೇಹಿಯವರು ಬಳಸುವ ಕಥನತಂತ್ರ ಆಕರ್ಷಣೀಯ; ನಾಟಕೀಯತೆ ಇದೆ. ವ್ಯಕ್ತಿಕೇಂದ್ರಿತ ನೆಲೆಯಲ್ಲಿ ವಿಚಾರಗಳನ್ನು ಸ್ಪಷ್ಟಪಡಿಸುತ್ತಾರೆ. ಇಲ್ಲಿಯ ಕಥೆಯ ಮುಖ್ಯಪಾತ್ರವಾದ ತಾಯಿ ಮಾನಸಿಕ ಸಂಘರ್ಷಕ್ಕೊಳಗಾಗಿ, ಕೊನೆಗೆ ಮಕ್ಕಳ ತೀರ್ಮಾನಕ್ಕೆ ಬದ್ಧಳಾಗಿ ನಡೆದುಕೊಳ್ಳುವ ರೀತಿ. ಆಧುನಿಕ ಸಮಾಜಕ್ಕೆ ಹೊಂದಿಕೊಂಡು ಹೋಗುವಂತಿದೆ. ತಂದೆ - ತಾಯಿ ವಾರಕ್ಕೊಮ್ಮೆ ಮಕ್ಕಳ ಮುಖ ನೋಡುವುದೇ ಅಪರೂಪವಾಗಿರುವ ಆಧುನಿಕ ಕಾಲದಲ್ಲಿ ತಾಯಿ ಮಕ್ಕಳ ಸಂಬಂಧಗಳೇ ಕಡಿದುಹೋಗುತ್ತಿರುವ ಸಂದರ್ಭದಲ್ಲಿ ಈ ಕಥೆ ಇಂದಿನ ಸಮಾಜಕ್ಕೆ ಹಿಡಿದ ಕನ್ನಡಿಯಾಗಿದೆ

ಗುಲಾಬಿ ಮೃದು ಪಾದಗಳು

ಈ ಕಥೆಯನ್ನು "ಮರಗಿಡ ಬಳ್ಳಿ" ಎಂಬ ಕಥಾಸಂಕಲನದಿಂದ ಆರಿಸಿಕೊಳ್ಳಲಾಗಿದೆ.

ಕುಟುಂಬದಲ್ಲಿ ಪ್ರಮುಖಳಾಗಿ, ತಾಯಿಯಾಗಿ ವಿವಿಧ ಬವಣೆ, ಯಾತನೆ, ಇವುಗಳಿಗೆ ಒಳಗಾದರೂ ಹೆಣ್ಣು ತಾನು ತಾಯ್ತನದ ನಿರೀಕ್ಷೆಯಲ್ಲಿರುತ್ತಾಳೆ. ವೈದೇಹಿಯವರ ಎರಡನೆಯ ಸಂಕಲನ "ಅಂತರಂಗದ ಪುಟಗಳು". ಇದರಲ್ಲಿ "ಗುಲಾಬಿ ಮೃದು ಪಾದಗಳು" ಎಂಬ ಕಥೆ. ಇದರಲ್ಲಿ ಬರುವ ಕಥಾನಾಯಕಿ ಸರಿತಾ ತಾಯ್ತನಕ್ಕಾಗಿ ಹಂಬಲಿಸುತ್ತಿರುವ ಹೆಣ್ಣು.

ಕಥಾನಾಯಕಿ ಸರಿಯಾಗಿ ಒಂಟಿಯಾಗಿ ಜೀವಿಸುತ್ತಿರುತ್ತಾಳೆ. ಅವಳ ಪಕ್ಕದ ಮನೆಗೆ ಬಂದ ಹೆಂಗಸಿಗೆ ಒಂದು ಮಗು. ಅವಳಿಗೆ ಮಗುವಿನ ಗುಲಾಬಿ ಮೃದುಪಾದಗಳ ದರ್ಶನವಾಗಿ ಮಗುವಿನ ಬಯಕೆ ಅವಳಲ್ಲಿ ಉಂಟಾಗುತ್ತದೆ. ಮಗು ಆ ಮನೆಯಲ್ಲಿರುವವರೆಗೂ ಭ್ರಮಾತ್ಮಕವಾಗಿ ಬದುಕುತ್ತಿರುತ್ತಾಳೆ.

ಕಥಾನಾಯಕಿ ಸರಿತಾ ಕಛೇರಿಗೆ ಹೋಗುವಾಗ ರಿಕ್ಷಾವೊಂದು ಅವಳ ಬದಿಯಿಂದಲೇ ಹೊರಟಿತು. ರಿಕ್ಷಾದಿಂದ ಎಳೆಯ ಮಗುವನ್ನು ಎತ್ತಿಕೊಂಡು ಹಿರಿಯ ಹೆಂಗಸೊಬ್ಬಳು ಇಳಿದಳು. ಸುತ್ತಿದ ಬಟ್ಟೆಯೊಳಗಿನಿಂದ ಮಗುವಿನ ಗುಲಾಬಿ ಮೃದು ಪಾದಗಳಷ್ಟೇ ಕಾಣಿಸಿತು. ಅಂದಿನಿಂದ ಆ ದಾರಿಯಲ್ಲಿ ಹೋಗುವಾಗ ಅವಳ ದೃಷ್ಟಿ ಆ ಕಡೆಗೆ ಹೊರಳುತ್ತಿತ್ತು. ಅಂದಿನಿಂದ ಕರುಳಿನವರೆಗೆ ಕತ್ತಿ ಹಾಯಿಸಿದಂತಹ ಸಂಕಟದಿಂದ ನಲುಗುತ್ತಿದ್ದಳು. ಮೃದುಪಾದಗಳಿಗಾಗಿ ಹುಡುಕುತ್ತಿದ್ದಳು.

ನೈಸರ್ಗಿಕವಾದ ಹಂಬಲ ತಾಯ್ತನದ ತುಡಿಕೆ, ತಲ್ಲಣಗಳು ಸರಿತಾಳಲ್ಲಿಯೂ ಇದೆ. ಒಂದು ಕಡೆ ಆರ್ಥಿಕ ಸ್ವಾವಲಂಬನೆ ಮತ್ತೊಂದು ನೈಸರ್ಗಿಕ ಹಂಬಲ ಇವೆರೆಡರ ನಡುವೆ ಸಮತೋಲನ ಸಾಧಿಸುವುದು ಸಮಸ್ಯೆಯಾಗಿದೆ. ಇದು ಭಾರತೀಯ ಸಂದರ್ಭಕ್ಕೆ ಸೂಕ್ತವಾಗುವುದಿಲ್ಲ. ಭಾರತೀಯ ಸಂಸ್ಕೃತಿಯ ನೆಲೆಯಲ್ಲಿ ಹೆಣ್ಣಿಗೆ ಸಂಸಾರದ ನಿರ್ವಹಣೆ ಮುಖ್ಯವಾಗುತ್ತದೆ. ಹಾಗಾಗಿ ಭಾರತೀಯ ಸ್ತ್ರೀವಾದಿಗಳು ಕುಟುಂಬ ಹಾಗೂ ತಾಯ್ತನವನ್ನು ನಿರಾಕರಿಸುವುದಿಲ್ಲ. ಆದರೆ ಸ್ತ್ರೀ ವಿಕಾಸಕ್ಕೆ ಅಡ್ಡಿಯುಂಟು ಮಾಡುವಂತಾದರೆ ಹೆಣ್ಣು ಇವುಗಳ ನಡುವಿನ ಆಯ್ಕೆಯನ್ನು ಎದುರಿಸಲೇಬೇಕಾಗುತ್ತದೆ. ಆದರೆ ಆಯ್ಕೆಯ ಮುನ್ನಿನ ತೊಳಲಾಟವನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಇದನ್ನು ಹೊಸದೃಷ್ಟಿಯಿಂದ ನೋಡಬೇಕಾಗುತ್ತದೆ.

ನಾಯಕಿ ಎದುರು ಮನೆಯ ಮಗುವಿನಿಂದ ಆಕರ್ಷಿತಳಾಗುತ್ತಾಳೆ. ಮಗು ಅವಳ ಕಣ್ಣಿಗೆ ಕಾಣಿಸುವುದಿಲ್ಲ. ಆಸ್ಪತ್ರೆಯಿಂದ ಬಂದ ಬಟ್ಟೆಯೊಳಗೆ ಹುದುಗಿದ ಅದರ ಗುಲಾಬಿ ಮೃದುಪಾದಗಳು, ಅದನ್ನು ಬೆಚ್ಚಗಿಟ್ಟ ಚೈತನ್ಯದ ಸಂಕೇತವಾಗಿ ಅಂಗಳದ ತಂತಿಯ ಮೇಲೆ ಜೋಗುಳಗಳು ಹಾಡುತ್ತಿರುವಂತೆ, ತೂಗುವ ಮಗುವಿನ ಪುಟ್ಟ ಪುಟ್ಟ ಅಂಗಿಗಳು, ಹಾಸುಹೊದಿಕೆಗಳು, ಅವಳಿಗೆ ಆಕರ್ಷಿತವಾಗುತ್ತವೆ. ಯಾವುದೋ ಒಂದು ರೀತಿಯ ಅವ್ಯಕ್ತ ಆಕರ್ಷಣೆ ಅವಳಲ್ಲಿ ಉಂಟಾಗುತ್ತದೆ. ನಾಮಕರಣದ ಓಡಾಟದ ಸಂಭ್ರಮ ಅದರಿಂದ ತಾನು ವಂಚಿತಳಾದ ಬಗ್ಗೆ ನಾಯಕಿ ಸರಿತಾಳಲ್ಲಿರುವ ಬೇಸರವನ್ನು ಈ ಕಥೆ ಯಶಸ್ವಿಯಾಗಿ ಹಿಡಿದಿಡುತ್ತದೆ.

ಸರಿತಾಳಲ್ಲಿ ಮಗುವಿನ ಹಂಬಲ ಎಷ್ಟು ಗಾಢವಾಗಿ ಇತ್ತು ಎಂಬುದಕ್ಕೆ ಅವಳಲ್ಲಿ ಉಂಟಾಗುತ್ತಿದ್ದ ಭಾವನೆಗಳಿಂದಲೇ ತಿಳಿಯಬಹುದು.

"ರಾತ್ರಿ ಕನಸಿನಲ್ಲಿ ಮಗು ಬಂದಿತ್ತು. ಗರ್ಭದಲ್ಲಿ ಎರಡೇ ಎರಡು ತಿಂಗಳು ಕಳೆದಂತಿತ್ತು. ಕೈಕಾಲು ಮುಖ ಒಂದೂ ಸ್ಪಷ್ಟವಾಗಿರಲಿಲ್ಲ. ಆದರೂ ಕವುಚಿಕೊಂಡು ಸುತ್ತು ಹೊಡೆಯುತ್ತಿತ್ತು. ಕೇಕೆ ಹಾಕುತ್ತಿತ್ತು, ಕೈ ಚಾಚಿದಳು, ಹೊಟ್ಟೆ ಎಳೆಯುತ್ತ ಗೆಜ್ಜೆ ಬಡಿಯುತ್ತ ಮುಂದೆ ಹೋಯಿತು. ಹಿಂಬಾಲಿಸಿದಳು, ಮಾಯವಾಯಿತು, ಅಷ್ಟೇ ಬರೀ ಅಷ್ಟೇ".

ಮಗುವನ್ನು ಒಮ್ಮೆ ಹೋಗಿ ನೋಡಬೇಕೆಂದುಕೊಂಡರೂ, ಸಂಕೋಚ ಅವಳನ್ನು ಓಗೊಡಲಿಲ್ಲ. "ಇಷ್ಟರವರೆಗೆ ಮಕ್ಕಳನ್ನು ನೋಡಿಲ್ಲವೆ ?" ಆ ಮನೆಯವರು 'ಯಾರೋ ಗೊತ್ತಿಲ್ಲದವರು ಬಂದು ನೋಡಿ ಮಗುವಿಗೆ ದೃಷ್ಟಿಯಾಯಿತು' ಎನ್ನವರೆಂಬ ಅಳುಕು. ಸಾಮಾಜಿಕ ಅನಿಷ್ಟಗಳಿಂದ ಸ್ತ್ರೀ ಮಾನಸಿಕ ಯಾತನೆಗೆ ಒಳಗಾಗುತ್ತಾಳೆ. ವೈದೇಹಿಯವರು ಸಾಂಕೇತಿಕವಾದ ರೀತಿಯಲ್ಲಿ ಸೂಕ್ಷ್ಮವಾಗಿ ಸಾಮಾಜಿಕ ಪದ್ಧತಿ, ನಂಬಿಕೆಗಳನ್ನು ಅಲ್ಲಗಳೆಯುತ್ತಾರೆ.

ಹೆಣ್ಣಿನ ಸಹಜವಾದ ಬಯಕೆ ತಾಯ್ತನ, ಅದು ಸರಿತಾಳಲ್ಲಿಯೂ ಇದೆ. ಭಾರತೀಯ ಸಮಾಜದಲ್ಲಿ ಹೆಣ್ಣು, ಆಧುನಿಕ ಕಾಲದ ಗಾಢ ಪ್ರಭಾವಕ್ಕೆ ಸಿಲುಕಿದರೂ ಈ ಬಯಕೆಯಿಂದ ಅವಳು ಮುಕ್ತಳಾಗಲು ಬಯಸುವುದಿಲ್ಲ. ಮಗುವನ್ನು ಪಡೆಯುವ ತುಡಿತ, ಆಕಾಂಕ್ಷೆ ಪ್ರತಿಯೊಬ್ಬ ಭಾರತೀಯ ನಾರಿಯಲ್ಲೂ

ಇರಬಹುದಾದ ಸಾಮಾನ್ಯವಾದ ಸಹಜವಾದ ಬಯಕೆ. ಈ ಕಥೆಯಲ್ಲಿ ವೈದೇಹಿಯವರು ನಮ್ಮ ಸಂಸ್ಕೃತಿಯಲ್ಲಿ ಎದ್ದುಕಾಣುವ ತಾಯ್ತನಕ್ಕೆ ಪ್ರಾಮುಖ್ಯತೆ ಕೊಟ್ಟಿದ್ದಾರೆ. ಮತ್ತೊಂದು ವಿಶೇಷವಾಗಿ ಈ ಕಥೆಯಲ್ಲಿ ಗುರುತಿಸಬಹುದಾದದ್ದು ಕಾವ್ಯಾತ್ಮಕವಾದ ಭಾಷೆ. ಸಂಕೇತ, ಧ್ವನಿ ವಿಶೇಷವಾಗಿ ವೈದೇಹಿಯವರ ಕಥೆಗಳಲ್ಲಿ ಕಂಡುಬರುತ್ತದೆ. ಕಥೆಯ ಶೀರ್ಷಿಕೆಯೇ 'ಮಗು' ವೆಂಬ ಸಂಕೇತವನ್ನು ಹೊಂದಿದೆ. ಹೆಣ್ಣಿನ ಮನಸ್ಸಿನ ಒಂದು ಅಂಶವನ್ನು ಒಳಹೊಕ್ಕು ನೋಡುವ ಪ್ರಯತ್ನ ಈ ಕಥೆಯಲ್ಲಿದೆ.

ಸಂ-ಸಾರ

ಈ ಕಥೆಯನ್ನು "ಮರಗಿಡ ಬಳ್ಳಿ" ಎಂಬ ಕಥಾಸಂಕಲನದಿಂದ ಆರಿಸಿಕೊಳ್ಳಲಾಗಿದೆ.

ತಾಯಿಯ ಪಾತ್ರಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಂತಹ ಮತ್ತೊಂದು ಕಥೆ 'ಸಂ-ಸಾರ'. ತಾಯಿಯಾದವಳು ತನ್ನ ಮಕ್ಕಳು ಎಷ್ಟೇ ದೊಡ್ಡವರಾದರೂ, ಅವರ ಬಗ್ಗೆ ಗಮನ ಕೊಡುತ್ತಾಳೆ. ಕಥೆಯಲ್ಲಿ ಬರುವ ಮುಖ್ಯ ಪಾತ್ರ ತಾಯಿ ರಂಗೂ, ತನ್ನ ಮೂವರು ಮಕ್ಕಳ ಬಗ್ಗೆಯೂ ಲಕ್ಷ್ಯ ಕೊಡುತ್ತಾಳೆ. ಒಬ್ಬ ಹೆಣ್ಣುಮಗಳ ಮನೆಯ ಒಪ್ಪ ಓರಣ ಮಾಡುವ ಬಗ್ಗೆ, ಇನ್ನೊಬ್ಬ ಮಗಳ ಬಾಣಂತನದ ಬಗ್ಗೆ ಹಾಗೂ ತನ್ನ ಸೊಸೆಯ ಆರೋಗ್ಯ ಬಗ್ಗೆ - ಹೀಗೆ ತನ್ನನ್ನು ತನ್ನ ಸಂ-ಸಾರಕ್ಕಾಗಿ ಅರ್ಪಿಸಿಕೊಂಡ ತಾಯಿ ನಮಗೆ ಕಂಡುಬರುತ್ತಾಳೆ.

ಮಗಳು ಸುಜಯಾ ಮನೆ ಮಾಡುವ ಸಂದರ್ಭದಲ್ಲಿ ಅಳಿಯ ಹರ್ಷ ತನ್ನ ಅತ್ತೆ ಬರಬೇಕು ಎಂದು ಬಯಸುತ್ತಾನೆ, ಸುಜಯಾಳಿಗೆ ಇದೆಲ್ಲಾ ತಿಳಿಯುವುದಿಲ್ಲವೆಂದು ಪಾತ್ರೆಗಳನ್ನು ತೆಗೆದುಕೊಳ್ಳುವಾಗಲೂ ತನ್ನ ಅತ್ತೆಯನ್ನೇ ಕರೆದೊಯ್ದಿದ್ದ ಹರ್ಷ, ಅದಕ್ಕೆ ತಾಯಿ ರಂಗೂವಿನ ಮಾತಿನಲ್ಲೇ ಹೇಳುವುದಾದರೆ "ಏನು ಸುಜೀ ನೀನು ಹೇಳುವುದು ! ನಿನ್ನ ವಯಸ್ಸಿನಲ್ಲಿ ನನಗೆ ಮದುವೆಯಾಗಿ ವಿಜಯ ಹುಟ್ಟಿದ್ದಳು. ಒಂದು ಸಂಸಾರದ ಜವಾಬ್ದಾರಿಯನ್ನು ಹೊತ್ತುಕೊಂಡಾಗಿತ್ತು. ನೀನು ನೋಡಿದರೆ ಸಣ್ಣ ಮಗುವಿನಂತಾಡುತ್ತೀಯಲ್ಲ ! ಈಗಿನ ಹುಡುಗಿಯರು - ಅದರಲ್ಲೂ ನಮ್ಮಂತಲ್ಲ ನಾಲ್ಕು ಅಕ್ಷರ ಕಲಿತವರು. ನಿಮಗೆಲ್ಲ ಒಪ್ಪ - ಓರಣ ಹೇಳಿಕೊಡಬೇಕಾ ? ನಾಲ್ಕು ದಿನ ತಪ್ಪು - ಕುಂದು, ಐದನೇ ದಿನ..... ?"

ಹೀಗೆ ತನ್ನ ಚಿಕ್ಕವಯಸ್ಸಿನಲ್ಲಿಯೇ ಸಂಸಾರದ ಜವಾಬ್ದಾರಿಯನ್ನು ಹೊತ್ತು ನಿಭಾಯಿಸಿದ ಬಗ್ಗೆ ಹೇಳುವುದರೊಂದಿಗೆ, ಕುಟುಂಬವನ್ನು ಸಲಹುವ ಶಿಕ್ಷಣ ತಾಯಿಗೆ ಇದೆ ಎಂದು ತಿಳಿಯುತ್ತದೆ. ಆದರೆ ಈಗಿನ ಕಾಲದ ಹುಡುಗಿಯರು ಎಲ್ಲ ರೀತಿಯಲ್ಲೂ ಆಧುನಿಕವಾದರೂ, ಜೀವನ ಶಿಕ್ಷಣದ ಕೊರತೆ ಇದೆ.

ಆಕೆ ಸುಜಯಾಳಿಗೆ ಬರಲಾಗುವುದಿಲ್ಲವೆಂದು ಹೇಳಿದ್ದಾಯಿತು. ಆದರೆ ಅವಳ ಮನಸ್ಸೆಲ್ಲ ಅವಳ ಬಗ್ಗೆಯೇ ಯೋಚಿಸುತ್ತಿತ್ತು. "ನಾನು ಹೋಗಬಹುದಿತ್ತು, ಹೋಗಬೇಕಿತ್ತು" ಎಂದು ಸದಾ ಅಂದುಕೊಳ್ಳುತ್ತಿದ್ದಳು. ಮನೆಗೆಲಸದ ಬಗ್ಗೆ ಉತ್ಸಾಹವೇ ಇಲ್ಲ. "ನಿಜಕ್ಕೂ ಇದಕ್ಕೆಲ್ಲ ಒತ್ತಾಯ ಅಗತ್ಯವೆ ? ಹೊಸತಾಗಿ ಮನೆ ಮಾಡುವಾಗ ತಾಯಿಯೋ ಮತ್ತೆ ಯಾರಾದರೂ ಹಿರಿಯರೋ ಹೋಗಿ ಮನೆಯನ್ನು ಒಗ್ಗಿಸಿಕೊಟ್ಟು ಬರುವುದು ಸ್ವಾಭಾವಿಕ..... ನನಗೆ ಮೊದಲಿನಿಂದಲೂ ಇಂತಹ ಕೆಲಸವೆಂದರೆ ಪ್ರೀತಿ...." ತಾನು ತಾಯಿಯಾಗಿ ವಂಚಿಸುತ್ತಿದ್ದೇನೋ ಎಂಬ ಅಳುಕು ಆ ತಾಯಿಯಲ್ಲಿ ಉಂಟಾಗುತ್ತದೆ. ಅದೇ ಗುಂಗಿನಲ್ಲಿ ಮನೆಗೆಲಸವನ್ನೂ ಮರೆಯುತ್ತಾಳೆ ಆಕೆ.

ತಾಯಿಯ ಕಳವಳಕ್ಕೆ ಮತ್ತೊಂದು ಘಟನೆ ಬಂದು ಕೂಡಿಕೊಳ್ಳುವಂತೆ ತನ್ನ ದೊಡ್ಡ ಮಗಳು ವಿಜಯ ಪತ್ರ ಬರೆದಿದ್ದಳು. "ನೀವೆಲ್ಲ ಬರೆದಂತೆ ನಾನು ಈ ಸಲ ಬಾಣಂತನಕ್ಕೆ ಅಲ್ಲಿಗೆ ಬರುವುದಿಲ್ಲ.... ಅಮ್ಮ, ನೀನೇ ಇಲ್ಲಿಗೆ ಬಂದುಬಿಡು..... ಆದರೆ ಇಂತಹ ತೊಂದರೆಯನ್ನು ನಾನು ನಿನಗಲ್ಲದೆ ಬೇರೆ ಯಾರಿಗೆ ಕೊಡಲಿ ?....."

ತಾಯಿಯ ಮನಸ್ಸು ಕಳವಳಗೊಂಡಿತು. ಸುಜಯಾಳನ್ನೋ, ವಿಜಯಾಳನ್ನೋ, ಯಾರನ್ನು ನೋಡುವುದು ? ಎಂಬ ಚಿಂತೆ ಆವರಿಸಿತು. ಇಲ್ಲಿಯ ಸನ್ನಿವೇಶ ತಾಯಿಯ ಆವಶ್ಯಕತೆ, ಆಕೆಯ ಸ್ಥಾನ - ಮಾನ ಅರಿತುಕೊಳ್ಳುವುದು ಅವಶ್ಯಕ ಎಂಬಂತೆ ಚಿತ್ರಿತವಾಗಿದೆ.

ಸೊಸೆ ವತ್ಸಲಳ ಆರೋಗ್ಯ ಸರಿಯಾಗಿಲ್ಲದ ಕಾರಣ ಆಕೆಯನ್ನೂ ಬಿಟ್ಟುಹೋಗಲು ಮನಸ್ಸಿಲ್ಲ. ಒಂದು ಮಗುವು ಹುಟ್ಟಿದ ನಂತರ ಆಪರೇಷನ್ನಾಗಿ ಶಕ್ತಿ ಕಡಿಮೆಯಾಗಿ ನಿಶ್ಯಕ್ತಳಾಗಿದ್ದಳು. ಮಗುವನ್ನು ನೋಡಿಕೊಂಡು ಕೆಲಸವನ್ನು ಹೇಗೆ ಮಾಡಿಕೊಳ್ಳುತ್ತಾಳೆ ಎಂದು ಸೊಸೆಯ ಬಗ್ಗೆಯೂ ಗಮನ ಕೊಡುವ ತಾಯಿಯಾಗಿ ಕಾಣುತ್ತಾಳೆ.

ಆಕೆ ತಮ್ಮ ಕಾಲ ಮತ್ತು ಈಗಿನ ಕಾಲದ ಹುಡುಗಿಯರು ಇದರ ಬಗ್ಗೆ ವ್ಯತ್ಯಾಸವನ್ನು ಗುರುತಿಸುತ್ತಾಳೆ. ಆಧುನಿಕ ಕಾಲದಲ್ಲಿ ಒಂದು ಹೆತ್ತದ್ದಕ್ಕೆ ನಿಶ್ಯಕ್ತರಾಗುವ ನಾಜೂಕು ಹುಡುಗಿಯರು. ಹಿಂದೆ ಎಂಟ್ಹತ್ತು ಹೆತ್ತರೂ ಗಟ್ಟಿಮುಟ್ಟಾಗಿರುತ್ತಿದ್ದ ಗಟ್ಟಿ ಹೆಂಗಸರು ಎಂಬ ವ್ಯತ್ಯಯವನ್ನು ಗುರುತಿಸಬಹುದು. ಇಂದಿನ ಕಾಲದ ಹುಡುಗಿಯರ ಸೂಕ್ಷ್ಮತೆ, ನಾಜೂಕುತನವನ್ನು ಸೂಕ್ಷ್ಮವಾಗಿ ಹೇಳಹೊರಟಿದ್ದಾರೆ ವೈದೇಹಿ ಯವರು.

ಒಬ್ಬ ತಾಯಿಯಾಗಿ, ಅತ್ತೆಯಾಗಿ ಆ ಸ್ಥಾನವನ್ನು, ಜವಾಬ್ದಾರಿಯುತವಾಗಿ ನಡೆಸಬೇಕಾಗಿದೆ. ಹಾಗೇ ರಂಗೂ ತನಗೆ ಕೊನೆಗೆ ಬೇಕಾಗುವವರು ಮಗ ಸೊಸೆಯಲ್ಲವೇ ? ಅತ್ತೆಯಾಗಿ ತಾನು ಜವಾಬ್ದಾರಿಯಿಂದ ವರ್ತಿಸಬೇಕಾಗುವುದು ಸೂಕ್ತ ಎಂದು ಭಾವಿಸುತ್ತಾಳೆ.

ಅತ್ತ ಹೆಣ್ಣುಮಕ್ಕಳನ್ನೂ ಬಿಡಲಾಗದೆ, ಮಗ - ಸೊಸೆಯನ್ನೂ ಬಿಟ್ಟುಕೊಡಲಾರದೆ ಸಂಕಟ ಪಡುವ ಆಕೆಯನ್ನು ಕಂಡ ಗಂಡ, ಎಲ್ಲದಕ್ಕೂ ಸಮಾಧಾನವಾಗುವ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಿ, ಕೊನೆಗೆ ತನಗೂ ಆಕೆ ಬೇಕು ಎಂಬುದನ್ನು ಸ್ಪಷ್ಟಪಡಿಸುತ್ತಾರೆ.

ಆಧುನೀಕರಣಕ್ಕೆ ಕಾಲಿಡುವ ಸಂದರ್ಭದಲ್ಲಿ ಹೆಂಗಸರಿಗೆ ಸಂಸಾರದ ಅರಿವಿನ ಬಗ್ಗೆ ಕೊರತೆ ಇದೆ ಎಂಬುದನ್ನು ಸೂಕ್ಷ್ಮವಾಗಿ ಈ ಕಥೆಯ ಮೂಲಕ ತಿಳಿಯಪಡಿಸುತ್ತಾರೆ ವೈದೇಹಿಯವರು. ಒಂದು ಹೆಣ್ಣು ತಾಯಿಯಾಗಿ, ಅತ್ತೆಯಾಗಿ, ಹೆಂಡತಿಯಾಗಿ, ಆಯಾ ಸ್ಥಾನದ ಜವಾಬ್ದಾರಿಯನ್ನು ಅರಿತುಕೊಂಡು ನಡೆಯಬೇಕಾಗಿದೆ. ಸಂಸಾರವೊಂದರಲ್ಲಿ ತಾಯಿಯ ಪ್ರಾಮುಖ್ಯತೆಯನ್ನು ಈ ಕಥೆ ಚಿತ್ರಿಸುತ್ತದೆ.

ತಾಯಿಯ ಇಬ್ಬಂದಿತನ, ಆಕೆಯ ಡೋಲಾಯಮಾನ ಸ್ಥಿತಿ, ತೊಳಲಾಟ ಸಹಜವಾಗಿ ಮೂಡಿಬಂದಿದೆ. ತಾಯಿ ಮಕ್ಕಳಿಗಷ್ಟೇ ಅಲ್ಲ, ಪತಿಗೂ ಅವಶ್ಯವಿರುವವಳು ಎಂದು ತನ್ನ ಸ್ಥಾನದ ಪ್ರಾಮುಖ್ಯತೆಯನ್ನು, ವಸ್ತುನಿಷ್ಠತೆಯನ್ನು ಸಾರುತ್ತದೆ ಈ ಕಥೆ.

ಬೆದಕಾಟ ಬದುಕೆಲ್ಲ :

ಈ ಕಥೆಯನ್ನು "ಮರಗಿಡ ಬಳ್ಳಿ" ಎಂಬ ಕಥಾಸಂಕಲನದಿಂದ ಆರಿಸಿಕೊಳ್ಳಲಾಗಿದೆ.

ನವದಂಪತಿಗಳು ಹನಿಮೂನ್‌ಗೆ ಕೊಡೈಕೆನಾಲ್‌ಗೆ ಹೋದ ಸಂದರ್ಭದಲ್ಲಿ ಗುಜರಾತಿನಿಂದ ಬಂದ ವೃದ್ಧ ದಂಪತಿಗಳ ಪರಿಚಯವಾಗುತ್ತದೆ. ಅವರ ಮಗಳು ಅಂಜುವಿನ ಪತಿಯನ್ನು ಕಳೆದುಕೊಂಡ ದಾರುಣ ಕಥೆಗೆ ಸ್ಪಂದಿಸುತ್ತಾರೆ. ವಿಜು ಮತ್ತು ಅವಳ ಪತಿ ಅಂಜುವಿನೊಂದಿಗೆ ಗೆಳೆತನ ಬೆಳೆಯುತ್ತದೆ. ಅಂಜುವಿನ ಚಡಪಡಿಕೆ, ದುಃಖ ಈ ಕಥೆ ಪೂರ್ತಿ ಕಂಡುಬರುತ್ತದೆ. ಬದುಕಿನ ಅರ್ಥವನ್ನು ಹುಡುಕುತ್ತಾ ಹೋಗುವ ಪ್ರಯತ್ನ ಈ ಕಥೆಯಲ್ಲಿದೆ. ಕೊನೆಗೆ ಅಂಜು ತನ್ನ ಪತಿಯ ಸೇರುವ ತವಕವನ್ನು ತಾನು ಸಾವನ್ನು ಹೊಂದುವುದರೊಂದಿಗೆ ತೋರಿಸುತ್ತಾಳೆ. ಇದು ಕಥಾ ಸಾರಾಂಶ.

ಪತಿ - ಪತ್ನಿಗೆ ಸಂಬಂಧಿಸಿದಂತೆ, ದಾಂಪತ್ಯದ ನೆಲೆಯಲ್ಲಿ ವಿಚಾರಗಳನ್ನು ಗ್ರಹಿಸಬಹುದು. "ಬೆದಕಾಟ ಬದುಕೆಲ್ಲ" ಕಥೆಯಲ್ಲಿ ಪತಿ - ಪತ್ನಿಯರ ಸಂಬಂಧದ ಗಾಢತೆ ವ್ಯಕ್ತವಾಗಿದೆ. ಪತ್ನಿ, ಪತಿ ತನ್ನವನೆಂದೂ, ಆತನಿಲ್ಲವಾದರೆ ತನಗೆ ಬದುಕೇ ಇಲ್ಲವೆಂದು ಚಿಂತಿಸುತ್ತಾಳೆ; ದುಃಖಿಸುತ್ತಾಳೆ. ಹುಟ್ಟು -ಸಾವಿನ ಮಧ್ಯದ ಸಂಕೀರ್ಣ ಬದುಕಿನ ವಿಶ್ಲೇಷಣೆ ಈ ಕಥೆಯಲ್ಲಿದೆ.

ನವದಂಪತಿಗಳು ಮಧುಚಂದ್ರಕ್ಕಾಗಿ ಕೊಡೈಕೆನಾಲ್‌ಗೆ ಹೋದ ಸಂದರ್ಭದಲ್ಲಿ, ಅವರು ಕಂಡು ಕೇಳುವ ಒಂದು ಘಟನೆ, ಅದರ ಸುತ್ತ ಹೆಣೆದಿರುವ ಕಥೆ ಇದು. ವಿಜಯಾ ಮತ್ತು ಆಕೆಯ ಗಂಡ ಕೊಡೈಕೆನಾಲ್‌ನ ಸುಂದರ ಪ್ರಕೃತಿಯನ್ನು ನೋಡುತ್ತಾ ಬರುತ್ತಿರುವಾಗ ಗುಜರಾತಿನಿಂದ ಬಂದ ವಸಂತಶರ್ಮ ದಂಪತಿಗಳ ಪರಿಚಯವಾಗುತ್ತದೆ. ವಸಂತಶರ್ಮಾ ದಂಪತಿಗಳ ಮಗಳು ಅಂಜು ಪತಿಯನ್ನು ಕಳೆದುಕೊಂಡವಳು. ಆ ದುಃಖವನ್ನು ಮರೆಸುವುದಕ್ಕಾಗಿ ಸುಂದರವಾದ ಪ್ರಕೃತಿಗೆ ಕರೆತಂದಿರುತ್ತಾರೆ ಶರ್ಮ ದಂಪತಿಗಳು. ಅಂಜುವಿಗೆ ವಿಜುವಿನ ಪರಿಚಯ. ಪರಿಚಯ ಸ್ನೇಹಕ್ಕೆ ತಿರುಗುತ್ತದೆ. ಅಂಜು ತನ್ನ ಕಥೆಯೆಲ್ಲವನ್ನೂ ವಿಜೂ ಬಳಿ ಹೇಳುತ್ತಾಳೆ. ಪತಿ ಇಲ್ಲದೆ ಬದುಕುವ ಪತ್ನಿಯ ಬಾಳು ನೀರಸ ಎಂಬ ಆಕೆಯ ನಿಲುವು ವೈಯಕ್ತಿಕವಾದುದು.

ಗಂಡನಿದ್ದಾಗ ಪ್ರೀತಿ - ಪ್ರೇಮ ಅಗಾಧವಾಗಿರುವಂತೆ ವರ್ತಿಸಿ, ಇಲ್ಲದಿದ್ದಾಗ ಸುಖ-ಸಂತೋಷದಿಂದ ಬದುಕುವುದರಲ್ಲಿ ಮೋಸವಿದೆ ಎಂದು ತಿಳಿಯುತ್ತಾಳೆ ಅಂಜು. "ನಾನೇಕೆ ಸಾಯಲಿಲ್ಲ ? ಒಂದು ಕ್ಷಣ ಬಿಟ್ಟಿರಲಾರೆ ಎಂದವಳು - ಕಳೆಯುತ್ತಿರುವೆನಲ್ಲ ? ಒಂದಲ್ಲ, ಎಷ್ಟೋ ಕ್ಷಣಗಳನ್ನು - ನಾನು ವಂಚಕಿಯಲ್ಲವೇನು ?" ಅಂದು ತನ್ನ ಸಮಸ್ಯೆಯನ್ನು ವಿಜಯಳ ಮುಂದೆ ಹೇಳಿದಾಗ "ಇದು ಮುಗ್ಧತೆಯೇ ? ಇದು ಪ್ರೇಮ ವಂಚನೆಯೇ ? ಅಸಹಾಯಕತೆಯೇ ? ಪಾಪ - ಪುಣ್ಯದಲ್ಲಿ ಇರುವ ನಂಬಿಕೆಯೆ ? ಅಥವಾ ಧರ್ಮಕರ್ಮದ ಪರಿಜ್ಞಾನವೆ ? ಏನೇ ಇದ್ದರೂ ಅದು ಇಬ್ಬರಿಗೂ ಅನ್ವಯಿಸಬೇಕಲ್ಲವೆ ?" ಎಂದು ಯೋಚಿಸುತ್ತಾಳೆ.

ಪತಿ - ಪತ್ನಿಯರಿಬ್ಬರಿಗೂ ಧಮ-ಕರ್ಮಗಳು ಅನ್ವಯವಾಗುವಂಥದು. ಕೇವಲ ಹೆಣ್ಣು, ಅಂದರೆ ಪತ್ನಿಯಾದವಳು ಮಾತ್ರ ಪತಿಯ ದುಃಖ, ಕಷ್ಟಗಳಿಗೆ ಸಹಭಾಗಿ ಯಾಗಬೇಕು ಎನ್ನುವ ನಿಯಮ

ಸಮಂಜಸವಲ್ಲ. ಹೆಣ್ಣಿನ ಮೇಲೆ ಸಾಂಪ್ರದಾಯಿಕ ನಿಯಮ ಹೇರಿರುವುದರ ಪ್ರಶ್ನೆ ಇಲ್ಲಿದೆ. ಆದರೆ ವೈದೇಹಿ ಅದಕ್ಕೆ ಪರಿಹಾರವನ್ನು ಕಾಣುವ ಯತ್ನ ಮಾಡುವುದಿಲ್ಲ.

ಪ್ರಾಚೀನ ಭಾರತ ಹಾಗೂ ಕರ್ನಾಟಕದ ಬದುಕಿನಲ್ಲಿ ಸತಿಯಾಗುವುದು ಒಂದು ಐಚ್ಛಿಕ ಆಚರಣೆಯಾಗಿತ್ತು. ಪತಿಯ ಸಾವು ಅದು ಹೇಗಾದರೂ ಆಗಿರಲಿ, ಸತಿಯಾದವರು ಇಚ್ಛಿಸಿದರೆ, (ಕೆಲವು ಸಂದರ್ಭದಲ್ಲಿ ಒತ್ತಾಯ ಬಂದಿದ್ದರೂ ಬಂದಿರಬಹುದು) ಪತಿಯ ಕಳೇಬರದೊಡನೆ ತನ್ನನ್ನು ಸುಡಿಸಿಕೊಳ್ಳುವ ಆಚರಣೆಯನ್ನು ಜನ ಸಂಭ್ರಮದಿಂದ ಕಾಣುತ್ತಿದ್ದರು. ಅಂತಹ ಸತಿಯರನ್ನು 'ಮಹಾಸತಿ' ಎಂದು ಕರೆಯುತ್ತಿದ್ದರು. ಅಂತಹವರ ಸ್ಮಾರಕವಾಗಿ ಕಲ್ಲುಗಳನ್ನು ನೆಡಿಸಿ, ಶಾಸನಗಳನ್ನು ಹಾಕಿಸಿ ದಾನದತ್ತಿಗಳನ್ನು ನೀಡುತ್ತಿದ್ದರು.

ಅಂತಹ ಮನೋಧರ್ಮದ ಅಂಜುವಿನ ಕಥೆ ಇದು ಎನ್ನಬಹುದು. ಈ ಕಥೆಯಲ್ಲಿ ಪತಿಯನ್ನು ಕಳೆದುಕೊಂಡ ಅಂಜು, "ನನ್ನವರನ್ನು ಬಲು ಬೇಗ ಕೂಡುವಾಸೆ. ನನ್ನ ಜೀವನವಿಡೀ ಈ ಆಸೆಗಳ ವ್ಯರ್ಥ ಘರ್ಷಣೆ ಎಂದಾದರೆ ಯಾವುದರಲ್ಲಿ ನನಗೆ ಆಸಕ್ತಿ ಉಳಿದೀತು' ಎಂಬ ಭಾವನೆಯನ್ನು ವ್ಯಕ್ತಪಡಿಸುತ್ತಾಳೆ. ಪತಿಯೇ ತನ್ನ ಸರ್ವಸ್ವ, ಪತಿಯಿಲ್ಲದೆ ಬಾಳೇ ಇಲ್ಲ ಎಂದು ನಿರುತ್ಸಾಹಗೊಂಡಿರುವ ಅಂಜುವಿಗೆ, ವಿಜು ಎಷ್ಟೇ ಸಮಾಧಾನ ಹೇಳಿದರೂ ತಾನು ತನ್ನ ಪತಿಯ ಹಿಂಬಾಲಕಿ, ನಾನು ತನ್ನ ಪತಿಯನ್ನು ವಂಚಿಸಲು ಇಷ್ಟಪಡುವುದಿಲ್ಲ ಎಂದೇ ಹೇಳುತ್ತಾಳೆ.

ಬದುಕಿನ ಅರ್ಥವನ್ನು ತಿಳಿಯುತ್ತಾ ಹೋದಂತೆ ವಾಸ್ತವ ಜಗತ್ತಿನ ಅರಿವಾಗುತ್ತದೆ. 'ಇಂದು' ಮುಗಿಯುವುದಿಲ್ಲ. 'ನಾಳೆ' ಯೂ ಇದೆ ಎಂಬುದನ್ನು ತಿಳಿಯಬೇಕು. 'ಸೂರ್ಯ ದಿನಾ ಮುಳುಗುತ್ತಾನೆ. ಆತ ನಾಳೆ ಮರಳಿ ಬರುವನೆಂಬ ಭರವಸೆಯಿಂದ ಜಗತ್ತು ಜೀವ ಹಿಡಿದಿದೆ. ಆದರೆ ನನ್ನ ಬದುಕಿನ ಸೂರ್ಯ ಎಂದೋ ಮುಳುಗಿಬಿಟ್ಟ. ನನಗಿನ್ನೂ ಎಂದೆಂದಿಗೂ ಕತ್ತಲೆಯೇ.....' ಎಂದು ಅಂಜು ಜೀವನದ ಬಗ್ಗೆ ಜಿಗುಪ್ಸೆಗೊಂಡಿದ್ದಾಳೆ. ಪತಿಯೇ ಬದುಕು, ಪತಿಯೇ ಉಸಿರು ಎನ್ನುವಷ್ಟರ ಮಟ್ಟಿಗೆ ಗಾಢವಾದ ನಿಲುವು ಅಂಜುವಿನದು. ಹೆಣ್ಣು ಒಮ್ಮೆ ಮನಸ್ಸನ್ನು ಒಂದು ಜೀವಕ್ಕೆ ಅರ್ಪಿಸಿದ ಮೇಲೆ ಎಂದೂ ತನ್ನ ನಿಲುವನ್ನು ಬದಲಾಯಿಸಳು. ಸಂವೇದನಾಶೀಲಳು, ಬಹಳ ಬೇಗ ಸಂವೇದನೆಗೊಳಗಾಗುತ್ತಾಳೆ. ಈ ಅಂಶವನ್ನು ಅಂಜುವಿನ ಪಾತ್ರದ ಮೂಲಕ ವಿಶ್ಲೇಷಣೆ ಮಾಡುವ ಪ್ರಯತ್ನವನ್ನು ಇಲ್ಲಿ ನೋಡಬಹುದು.

ಬದುಕಿನಲ್ಲಿ ಸತಿ - ಪತಿಯರು ಒಂದಾಗಿರಬೇಕೆಂದು ಬಯಸುವುದು ಸಹಜ. ಆದರೆ ಬದುಕಿನ ವಾಸ್ತವವೇ ಬೇರೆ, ಬದುಕು ಭ್ರಮೆ ಎಂಬುದು ಮರೆತು ಹೋಗುತ್ತದೆ. 'ಹೆಣ್ಣು ಒಮ್ಮೆ ಮನಸ್ಸನ್ನು ನೀಡಿದರೆ, ಆತ ತನ್ನವನು, ಅವನೇ ಸರ್ವಸ್ವ' ಎಂದು ಭಾವಿಸುತ್ತಾಳೆ. ಹಾಗೆಯೇ 'ಗಂಡಸರು' ? ಎಂದು ಪ್ರಶ್ನಿಸುತ್ತಾ 'ಸಮಾಜದಲ್ಲಿ ಗಂಡಸರಿಗೆ ಇರುವ ನೀತಿ - ನಿಯಮ ಮತ್ತು ಹೆಂಗಸರಿಗೇ ಒಂದು ನಿಯಮ' ಕುರಿತಂತೆ ವಿಚಾರವನ್ನು ಮಾಡಲು ಹೊರಟಂತೆ ಕಾಣುತ್ತದೆ. ಈ ಕಥೆಯಲ್ಲಿ ಬರುವ ಮುಖ್ಯಪಾತ್ರಗಳು ಇಬ್ಬರೂ ಹೆಂಗಸರೇ ಆದರೂ ಬದುಕನ್ನು ಸ್ವೀಕರಿಸಿರುವ ರೀತಿ, ಬದುಕನ್ನು ಅರ್ಥ ಮಾಡಿಕೊಂಡಿರುವ ಬಗೆ ಭಿನ್ನವಾಗಿದೆ. ವೈದೇಹಿಯವರು ದಾಂಪತ್ಯದ ನೆಲೆಯಲ್ಲಿ ಬದುಕಿನ ಅರ್ಥವನ್ನು, ಸತಿ - ಪತಿಯರ ಸಂಬಂಧದ ಮಿತಿಯನ್ನು ತಿಳಿಸಹೊರಟಿದ್ದಾರೆ ಎಂದೆನಿಸುತ್ತದೆ.

ಅಂತರಂಗದ ಪುಟಗಳು :

ಈ ಕಥೆಯನ್ನು "ಅಂತರಂಗದ ಪುಟಗಳು" ಎಂಬ ಕಥಾಸಂಕಲನದಿಂದ ಆರಿಸಿಕೊಳ್ಳಲಾಗಿದೆ.

ವೈದೇಹಿಯವರ ಅಂತರಂಗದ ಪುಟಗಳು ಸ್ತ್ರೀಸಂವೇದನೆಗೆ ಸಂಬಂಧಿಸಿದಂತೆ ಗಮನಿಸಬಹುದಾದ ಮತ್ತೊಂದು ಕಥೆ. ಈ ಕಥೆ ನಾಲ್ಕು ಸ್ತ್ರೀಪಾತ್ರಗಳ ಮೂಲಕ ಸ್ತ್ರೀ ಜಗತ್ತನ್ನು ತೆರೆದು ತೋರಿಸುತ್ತದೆ. ಸರಿತಾ, ಅಚಲ, ವಿಜಯ, ಮಂಜು - ಒಬ್ಬೊಬ್ಬರ ಬದುಕು ಒಂದೊಂದು ರೀತಿಯದ್ದು. ಅಚಲ ತನ್ನ ಗೆಳತಿಯರ ಬದುಕನ್ನು ಅವಲೋಕಿಸಿ, ವಿಶ್ಲೇಷಣೆ ಮಾಡುತ್ತಾಳೆ. ಹೆಣ್ಣಿನ ಬದುಕು ಗಂಡ, ಮನೆ, ಮಕ್ಕಳು, ಸಂಸಾರ - ಇದಕ್ಕೆ ಮಾತ್ರ ಸೀಮಿತವಾದಂತೆ ಕಂಡುಬರುವ ವಿಚಾರ ಈ ಕಥೆಯಲ್ಲಿದೆ.

ಸರಿತಾ, ವಿಜಯಾ, ಮಂಜು ಎಲ್ಲರಿಗೂ ಮದುವೆಯಾಗಿ ಅವರದೇ ಆದ ಪ್ರಪಂಚದಲ್ಲಿ ಜೀವಿಸುತ್ತಿರುತ್ತಾರೆ. ಅಚಲಾ ಮಾತ್ರ ಮದುವೆಯಾಗದೆ ಸ್ವತಂತ್ರವಾಗಿ ಬದುಕಬೇಕೆಂದು ಇಚ್ಛಿಸುತ್ತಾಳೆ. ತಾನು ಯಾವುದೇ ಗಂಡಿನ ಅಧಿಕಾರದಲ್ಲಿರಲು ಬಯಸದೆ ಮುಕ್ತವಾದ ಬದುಕನ್ನು ಆಶಿಸುತ್ತಾಳೆ ಅಚಲ.

ಸರಿತಾಗೆ ಮದುವೆಯಾಗಿ ಎರಡು ಮಕ್ಕಳ ತಾಯಿ, ಮೂರನೆಯ ಮಗುವಿನ ಬಸುರಿಯಾಗಿ, ಅದು ಗಂಡುಮಗುವೇ ಆಗಬೇಕಂತ ಪತಿ ನಾಗಪ್ರತಿಷ್ಠೆಯನ್ನು ಮಾಡಿ ಅಮೆರಿಕೆಗೆ ಹೋಗಿದ್ದಾನೆ.

ವಿಜಯಾ ಕೂಡ ತನಗೆ ಬೇಕಾದವರೊಂದಿಗೆ ಮದುವೆಯಾಗಿದ್ದಳು. ಒಬ್ಬ ಮಗನೂ ಇದ್ದಾನೆ. 'ಮದುವೆಯೊಂದು ಸರಿಯಾದ ವಯಸ್ಸಿಗೆ ಆಗಬೇಕು' ಎಂದು ಮಂಜು ಕೂಡ ಮದುವೆಯಾಗಿ ಸೂಳೆಗಾರಿಕೆಯ ಹಾದಿಯನ್ನು ಹಿಡಿದಿದ್ದಾಳೆ.

'ಒರಗಿದರೆ ಆಹ ! ಎನಿಸುವಂತಹ ಗಂಡು ಸಿಗದೆ' ಅಚಲ ಅವಿವಾಹಿತ ಳಾಗಿಯೇ ಉಳಿದಿದ್ದಾಳೆ.

ಕುಟುಂಬದಲ್ಲಿ ಹೆಣ್ಣಿಗೆ ಇರುವ ಸ್ಥಾನದ ಬಗ್ಗೆ ಲೇಖಕಿ ಈ ಕಥೆಯಲ್ಲಿ ಬರುವ ಹೆಣ್ಣಿನ ಪಾತ್ರಗಳ ಮೂಲಕ ತಿಳಿಸುವಂತೆ ಕಂಡುಬರುತ್ತದೆ.

ಹೆಣ್ಣು ಎಂದರೆ, ಮದುವೆಯಾಗಿ ಸಂಸಾರದ ಜವಾಬ್ದಾರಿಯನ್ನು ಹೊರಬೇಕಾದವಳು. ಅದೂ ಸರಿಯಾದ ವಯಸ್ಸಿನಲ್ಲಿ ಮದುವೆಯಾಗಿ, ಮಕ್ಕಳನ್ನು ಹೆರುತ್ತಾ ತನ್ನ ಜೀವವನ್ನು ಸವೆಸಬೇಕು. ಅದೇ ಹೆಣ್ಣಿನ ಬದುಕು. ಅದಕ್ಕಿಂತ ಭಿನ್ನವಾದದ್ದು ಇಲ್ಲ. ಈ ಕಥೆಯಲ್ಲಿ ಬರುವ ಒಂದು ಸಂಭಾಷಣೆ ಇದನ್ನು ಸ್ಪಷ್ಟಪಡಿಸುತ್ತದೆ.

ಅಚಲಾ, ಮಂಜುವನ್ನು ಕೇಳುತ್ತಾಳೆ - "ವಿಜಯ, ಎಲ್ಲರಂತೆ ಬದುಕಿನ ಗಿರಿಗಿಟ್ಲೆಯಲ್ಲಿ ನಿಂತಲ್ಲೇ ಗರಗರ ತಿರುಗುತ್ತ ಮುದುಕಿಯಾಗುತ್ತ ಬದುಕೆಂದರೆ ಇದೇ ಎಂದು ಬೋಧಿಸಲಿಕ್ಕಿಲ್ಲವಲ್ಲವೆ ?"

ಸಮಾಜದಲ್ಲಿ ಗಂಡಿಗೆ ಪ್ರಮುಖ ಸ್ಥಾನ, ಗಂಡು ಮಗು ಎಂದರೆ ಶ್ರೇಷ್ಠ ಎಂದು ಭಾವಿಸುವುದು ಬಹಳ ಕಾಲದ ಆಚರಣೆ. ಪುರುಷಪ್ರಧಾನ ಸಮಾಜದಲ್ಲಿ ಲಿಂಗತಾರತಮ್ಯ ಪಾರಂಪರಿಕವಾಗಿ ಬಂದಿರುವುದನ್ನು ಗುರುತಿಸಬಹುದು. ಸರಿತಾಳ ಗಂಡ ಅಮೇರಿಕೆಗೆ ಹೋಗುವಾಗ ಮೂರನೆಯದು ಗಂಡು ಮಗುವಾಗಲೆಂದು

ನಾಗಪ್ರತಿಷ್ಠೆ ಮಾಡಿಸಿ ಹೋಗುತ್ತಾನೆ. ಗಂಡುಮಗುವಿಗೆ ಇರುವ ಪ್ರಾಶಸ್ತ್ಯ, ಹೆಣ್ಣನ್ನು ಕನಿಷ್ಠವಾಗಿ ಕಾಣುವ ಸಮಾಜದೃಷ್ಟಿ ಇಲ್ಲಿದೆ.

ಪುರುಷಪ್ರಧಾನ ಸಮಾಜದಲ್ಲಿ ಗಂಡು, ಹೆಣ್ಣನ್ನು ಕೇವಲ ಉಪಭೋಗದ ವಸ್ತುವನ್ನಾಗಿ ಕಾಣುತ್ತಾನೆ. ತನಗೆ ಸುಂದರವಾಗಿ ಕಾಣುವುದನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ತನಗೆ ಸುಂದರವಾಗಿ ಕಾಣುವುದನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಹೆಣ್ಣು, ಗಂಡಿನ ಮುಂದೆ ಮಾರಾಟದ ವಸ್ತುವಿನ ಹಾಗೆ ತಲೆತಗ್ಗಿಸಿ ಕುಳಿತುಕೊಳ್ಳಬೇಕು. ಇದು ಸಹಿಸಲು ಸಾಧ್ಯವಾದುದು.

ಅಚಲಳ ಪರಿಸ್ಥಿತಿ ಹೀಗೇ ಆಗಿದೆ. ಅಚಲಳನ್ನು ನೋಡಲು ಬಂದ ಹುಡುಗ ಅಚಲಳನ್ನಷ್ಟೇ ಅಲ್ಲದೆ, ಮಂಜು - ಐದಾರು ಹುಡುಗಿಯರನ್ನು ನೋಡಿದ್ದ. ಕೊನೆಗೆ ಮಂಜುಳಳ ಕೈಹಿಡಿದನು. ವೈದೇಹಿಯವರು 'ಗಂಡು' ಎಂಬ ದರ್ಪದ ಮನೋಭಾವವನ್ನು ಇಂಥ ಕೆಲವು ಸನ್ನಿವೇಶಗಳಿಂದ ಮನಗಾಣಿಸುತ್ತಾರೆ.

ಹೆಣ್ಣು, ಅದರಲ್ಲೂ ಸತಿಯಾದವಳು ಗಂಡನನ್ನು ಅರಿತುಕೊಂಡು ನಡೆಯಬೇಕು. ಇದು ನಮ್ಮ ಸಮಾಜದಲ್ಲಿನ ಹೆಣ್ಣಿನ ಮೇಲೆ ಅಯಾಚಿತವಾಗಿ ನಮ್ಮ ಸಮಾಜ ಹೇರಿರುವ ನಿಯಮ. ಇದನ್ನು ಒಪ್ಪಿಕೊಂಡು ಹೋಗುವಂತೆ ಸರಿತಾಳ ಪಾತ್ರವನ್ನು ಗುರುತಿಸುತ್ತೇವೆ. ಆದರೆ ಇದನ್ನು ಮೀರಿ ತಮ್ಮದೇ ಆದ ವ್ಯಕ್ತಿತ್ವದಲ್ಲಿ ಜೀವಿಸುವ ಮಂಜು, ಸುಬ್ಬಿ ಪಾತ್ರಗಳನ್ನೂ ಈ ಕಥೆಯಲ್ಲಿ ಗಮನಿಸಬಹುದು. ಪತಿಯನ್ನು ಎದುರಿಸಿ ಬದುಕುವ ದಿಟ್ಟತನವನ್ನು ಸುಬ್ಬಿ ತೋರುತ್ತಾಳೆ. ಧೈರ್ಯದಿಂದ ಸಮಾಜವನ್ನು ಎದುರಿಸಿ, ತಮ್ಮ ಬದುಕಿನ ದಾರಿಯನ್ನು ಕಾಣುವ ಸಾಮರ್ಥ್ಯ ಹೆಣ್ಣಿನಲ್ಲಿದೆ ಎಂಬ ಅಂಶವನ್ನು ಗುರುತಿಸುವುದು ಮುಖ್ಯವಾಗುತ್ತದೆ.

ಹೆಣ್ಣಿಗೆ ಮದುವೆಯಾಯಿತು ಎಂದರೆ ಅವಳ ಜನ್ಮ ಸಾರ್ಥಕ. ಮದುವೆಯೇ ಅವಳ ಬದುಕಿಗೆ ಮುಖ್ಯ ಎಂಬ ವಿಚಾರ ಸಮಾಜದಲ್ಲಿ ಆಳವಾಗಿ ಬೇರೂರಿರುವಂಥದು. ಅಚಲಾ ತನ್ನ ಮನೆಯಲ್ಲಿ ಇಂಥ ವಾತಾವರಣವನ್ನೇ ಎದುರಿಸುತ್ತಾಳೆ. ಅಚಲಳ ಅಮ್ಮ ಗೆಳತಿ ವಿಜಯಳ ಮುಂದೆ 'ಅಚಲನಿಗೆ ಮದುವೆಯಿಲ್ಲ. ಎಲ್ಲಿಯಾದರೂ ಇದ್ದರೆ ಹೇಳು' ಎಂದು ತನ್ನ ಮಗನ ಉಪನಯನಕ್ಕೆ ಕರೆಯಲು ಬಂದ ವಿಜಯಳ ಮುಂದೆ ಹೇಳುತ್ತಾಳೆ. 'ನನ್ನ ಬದುಕಲ್ಲಿ ಮಾತಾಡುವ ವಿಷಯ ಇಲ್ಲವೆಂತದೆ ? ಘಟನೆಗಳಿಲ್ಲದ ಬಿಳಿಚು ಬದುಕೆಂತಲೆ ?' ಎಂದು ಅಚಲಾ ಆಲೋಚಿಸುತ್ತಾಳೆ. ಮದುವೆಯೇ ಹೆಣ್ಣಿನ ಬದುಕಿಗೆ ಅರ್ಥವನ್ನು ಕೊಡುವುದೇ ?

ವೆಂಕಟು ಎಂಬ ಒಂದು ಪುರುಷಪಾತ್ರ ಈ ಕಥೆಯಲ್ಲಿ ಕಾಣಿಸಿಕೊಳ್ಳುತ್ತದೆ. ಅಚಲಾಳನ್ನು ತಾನು ಮದುವೆಯಾಗಲು ಬಯಸಿದಾಗ "ಅಂತೂ, ನಿನಗೊಂದು ಹುಡುಗಿ ಬೇಕು. ಫ್ಯಾನ್, ಫ್ರಿಜ್, ಟೇಬಲ್, ಪಾತ್ರೆಪರಡಿ, ಸೈಟು - ಇತ್ಯಾದಿಗಳಂತೆ ಅಲ್ಲ ?" ಎಂದು ಅಚಲಾ ವಿರೋಧಿಸುತ್ತಾಳೆ. ಪುರುಷನ ದರ್ಪ, ಸ್ವಾರ್ಥ ಇವುಗಳನ್ನು ವಿರೋಧಿಸುವ ನಿಲುವು ಅಚಲಾಳ ಪಾತ್ರದಲ್ಲಿ ಕಂಡುಬರುತ್ತದೆ.

'ಬೆದಕಾಟ ಬದುಕೆಲ್ಲ' ಕಥೆಯ ಅಂಜುವಿಗೂ, ಈ ಕಥೆಯಲ್ಲಿ ಬರುವ ಅಚಲಾಳಿಗೂ ವ್ಯತ್ಯಾಸವಿದೆ.

ಪತಿಯ ಸಾನ್ನಿಧ್ಯವನ್ನು ಬಯಸುವ ಅಂಜು, ಗಂಡಸರ ಮನೋಧರ್ಮವನ್ನೇ ಇಷ್ಟಪಡದ ಅಚಲಾ ಪರಸ್ಪರ ವಿರುದ್ಧ ದಿಕ್ಕಿನಲ್ಲಿರುವವರು.

ಹೆಣ್ಣಿನ ಅಂತರಂಗವನ್ನು ಇಣುಕಿ ನೋಡುವ ಪ್ರಯತ್ನ ಈ ಕಥೆಯಲ್ಲಿದೆ. ವೈದೇಹಿಯವರು ವಿಚಾರದ ಸ್ಪಷ್ಟನೆಗೆ ಘಟನೆಗಳನ್ನು ಸನ್ನಿವೇಶಗಳನ್ನು ತುರುಕುವುದಿಲ್ಲ. ಅದು ಸಹಜವಾಗಿಯೇ ಕಥಾಸಂರಚನೆಯಲ್ಲಿ ಮೂಡಿಬಂದಿದೆ ಈ ಕಥೆಯಲ್ಲಿ. ಕಥೆ ದೀರ್ಘತೆಯನ್ನು ಪಡೆದುಕೊಂಡರೂ ಸ್ತ್ರೀಯ ಅಂತರಂಗದ ಪದರಗಳ ಒಳಹೊಕ್ಕು ನೋಡಿ ಎಳೆಎಳೆಯಾಗಿ ಬಿಡಿಸಿಡುತ್ತಾರೆ ವೈದೇಹಿಯವರು.

ಒಂದು ಅಪರಾಧ ತನಿಖೆ :

ಈ ಕಥೆಯನ್ನು "ಅಂತರಂಗದ ಪುಟಗಳು" ಎಂಬ ಕಥಾಸಂಕಲನದಿಂದ ಆರಿಸಿಕೊಳ್ಳಲಾಗಿದೆ.

"ಬೆದಕಾಟ ಬದುಕೆಲ್ಲ", "ಅಂತರಂಗದ ಪುಟಗಳು" ಕಥೆಯಲ್ಲಿ ಬರುವ ಸ್ತ್ರೀಪಾತ್ರಗಳನ್ನು ಗಮನಿಸಿದಾಗ ಎರಡು ವಿರುದ್ಧ ಮನೋಭಾವ ಕಂಡುಬರುತ್ತದೆ. ಗಂಡನ ಪ್ರೀತಿ ಸಾಮೀಪ್ಯವನ್ನು ಬಯಸುವ ಹೆಣ್ಣು ಅಂಜು, ಪುರುಷರ ಸ್ವಾರ್ಥದಿಂದ ಅದರೊಂದಿಗಿನ ಬದುಕನ್ನೇ ವಿರೋಧಿಸುವ ಅಚಲಾ, ಹಾಗೆಯೇ ಪತಿಯ ದರ್ಪವನ್ನು ಸಹಿಸದೆ, ಗಂಡನನ್ನೇ ಬಿಟ್ಟುಬಂದ ಕುಸುಮಾ "ಒಂದು ಅಪರಾಧ ತನಿಖೆ" ಯಲ್ಲಿ ಪುರುಷ ವಿರೋಧಿ ನಿಲುವನ್ನು ಹೊಂದಿರುವ ಪಾತ್ರ.

ಈ ಕಥೆಯಲ್ಲಿ ಕುಸುಮ ಮತ್ತು ಬಾಬಿ ಎರಡು ವಿಭಿನ್ನ ಸ್ತ್ರೀಪಾತ್ರಗಳಿವೆ. ಒಬ್ಬಳು ಗಂಡನನ್ನು ಬಿಟ್ಟುಬಂದವಳು ಕುಸುಮ. ಗಂಡನ ನಡತೆ ಸರಿಯಿಲ್ಲದಿದ್ದರೂ, ಆತನನ್ನು ಸರಿಪಡಿಸಿ ತನ್ನ ತೆಕ್ಕೆಯಲ್ಲಿರಿಸಿಕೊಂಡವಳು ಬಾಬಿ.

ಬಡತನ, ಕೌಟುಂಬಿಕ ಕಲಹಗಳು, ಬದುಕೇ ಅವ್ಯವಸ್ಥೆಯಿಂದ ಕೂಡಿದ್ದರೂ ಧೈರ್ಯದಿಂದ ಸಂಸಾರವನ್ನು ನಿಭಾಯಿಸುವ ಬಾಬಿ, ಮತ್ತೊಂದು; ಏನೂ ಆಗದೆ ತನಗೆ ಘೋರವಾದ ಅನ್ಯಾಯ ಆಗಿದೆ ಎನ್ನುವಂತೆ ಗಂಡನನ್ನು ಬಿಟ್ಟುಬಂದ ಕುಸುಮ - ಈ ಎರಡು ಭಿನ್ನ ಮುಖಗಳನ್ನು ವೈದೇಹಿಯವರು ತಮ್ಮ "ಒಂದು ಅಪರಾಧ ತನಿಖೆ" ಕಥೆಯಲ್ಲಿ ಚಿತ್ರಿಸಿದ್ದಾರೆ.

ಬಾಬಿ ಮತ್ತು ಕುಸುಮ ಎರಡು ಸ್ತ್ರೀಪಾತ್ರಗಳಿಂದ ಸ್ತ್ರೀಲೋಕದ ಪರಿಚಯ ನಮಗಾಗುತ್ತದೆ. ಬಾಬಿ ಗಂಡನನ್ನು ಹತೋಟಿಯಲ್ಲಿಟ್ಟುಕೊಂಡು ನೆಟ್ಟಗೆ ಸಂಸಾರ ಮಾಡುತ್ತಿದ್ದಳು. ಮಗಳಿಗೆ ಮದುವೆಯೂ ನಿಶ್ಚಯವಾಗಿದೆ. ಬಡತನವಿದ್ದರೂ ಅದರಲ್ಲೇ ಅಚ್ಚುಕಟ್ಟಾಗಿ ಜೀವನ ನಡೆಸುತ್ತಿರುವಳು. ಗಂಡನಿಗೆ ಯಾವುದೇ ಆರ್ಥಿಕ ವಿಷಯ ತಿಳಿಯದಂತೆ ತನ್ನ ದುಡ್ಡು, ತನ್ನ ಸಂಪಾದನೆ, ಒಡವೆಗಳನ್ನು ಮಾಡಿಸಿಕೊಂಡಿರುವಳು. ಜಾಣ ಹೆಂಗಸು ಬಾಬಿ. ಒರಟಾದ ಹೆಣ್ಣು, ಗುರುಟು ದೇಹ, ಒಂದರ ಮೇಲೊಂದು ಹೇರಿ ಕುಳಿತು ಕಂಗೆಟ್ಟಿಸಿಕೊಂಡ ಗೊಗ್ಗರು ಹಲ್ಲು, ಗೊರಟು ಮುಖ, ಇಲಿಬಾಲದ ಜಡೆಗೆ ಬಿಗಿಯಾಗಿ ಹೆಣೆದ ರಣಬಣ್ಣದ ರಿಬ್ಬನು. ಹಬ್ಬ ಹಾಡಿಗಳಲ್ಲಿ ಆಕೆ ತೆಗೆದುಕೊಳ್ಳುತ್ತಿದ್ದುದೆಂದರೆ ರಿಬ್ಬನು ಪೌಡರು 'ಕಿಲಿಪು' - ಬಾಬಿ ಹೆಂಗಸಿನ ಚಿತ್ರವನ್ನೇ ನಮ್ಮ ಮುಂದೆ ಕಟ್ಟಿಕೊಡುತ್ತದೆ.

ಕುಸುಮಾಳ ತಾಯಿಯ ಮನೆಯಲ್ಲಿ ಅಡಿಗೆ ಕೆಲಸ ಮಾಡಿಕೊಂಡಿದ್ದಳು ನಾಗಮ್ಮ. ಆಕೆಗೆ ಐದು ಜನ ಹೆಣ್ಣುಮಕ್ಕಳು. ನಾಗಮ್ಮನ ಕೊನೆಯ ಮಗಳು ಬಾಬಿ. ಐದು ಜನರಿಗೂ ಮದುವೆ ಮಾಡಿ ಗಂಡನ ಮನೆಗೆ ಸೇರಿಸಿದ್ದಳು. ಮದುವೆಯಾದ ಎಂಟು ದಿವಸಕ್ಕೇ ಮನೆಗೆ ವಾಪಸ್ಸಾಗಿದ್ದಳು ಬಾಬಿ. ಗಂಡನೊಂದಿಗಿನ ಬದುಕು ಚೆನ್ನಾಗಿರಲಿಲ್ಲ. "ಎಂತಹವನಿಗೆ ಮದುವೆ ಮಾಡಿಬಿಟ್ಟರು ನನ್ನನ್ನು ಕಂಡಿರ ಗೌರಕ್ಕ. ಚಳಿಧರ್ಮವಿದ್ದರಾಯಿತೆ ? ಅವನಿಗೆ ಮೊದಲನೇ ಹೆಂಡತಿ ಇದೆಯಂತೆ; ಅದಕ್ಕೆ ಮಕ್ಕಳಿಲ್ಲವಂತೆ, ಅದನ್ನು ಬಿಟ್ಟು ನನ್ನನ್ನು ಮದುವೆ ಮಾಡಿಕೊಂಡನಂತೆ, ಪಿರ್ಕಿಯಂತೆ.... ಅದನ್ನು ಬಿಟ್ಟು ಮದುವೆಯಾದನಂತೆ. ಊರು ತುಂಬ ಮೇವು ಬೇರೆ..." ಹೀಗೆ ತನ್ನ ದುಃಖವನ್ನು ಬಾಬಿ ಹೇಳಿದ್ದಳು. ಬಾಬಿಯು ತಾಯಿ ನಾಗಮ್ಮ "ಅವ ಇವ ಅನ್ನಬೇಡ, ಎಷ್ಟಾದರೂ ಗಂಡನಲ್ಲವೆ' ಎಂದು ಸಮಾಧಾನ ಹೇಳಿದ್ದಳು. ಗಂಡ ಎಂದರೆ, ಗೌರವ ತೋರಬೇಕು, ಅವನನ್ನೇ ಅನುಸರಿಸಬೇಕು, ಅವನ ಹಿಂಸೆಯನ್ನು ಸಹಿಸಿಕೊಳ್ಳಬೇಕು ಎಂಬ ನೀತಿ ಪ್ರಾಚೀನ ಕಾಲದಿಂದಲೂ ಭಾರತೀಯ ಮಹಿಳೆಯ ಪಾಲಿಗೆ ಬಂದದ್ದು. ಹಳೆಯ ಪರಂಪರೆಯನ್ನು ಪ್ರತಿನಿಧಿಸುವಂತೆ ಇರುವ ಬಾಬಿಯ ತಾಯಿ ನಾಗಮ್ಮ ಮಗಳಿಗೆ ಗಂಡನಿಗೆ ವಿಧೇಯಳಾಗಿರುವಂತೆ ಸೂಚಿಸುತ್ತಾಳೆ. ಅದರಂತೆ ಬಾಬಿ ತನಗೆ ಕಷ್ಟವಾದರೂ, ಗಂಡನೊಟ್ಟಿಗೇ ಇದ್ದು, ಸರಿ ದಾರಿಗೆ ತರುತ್ತಾಳೆ. ಮಂತ್ರವಾದಿಯ ಹತ್ತಿರ ಗಂಡ ಸೂಳೆಮನೆಗೆ ಹೋಗದಂತೆ ಮಾಟ ಮಾಡಿಸಿದ್ದು, ಅವತ್ತಿನಿಂದ ತಾನು ಕೂತುಕೋ ಎಂದರೆ ಕೂತು, ನಿಲ್ಲು ಎಂದರೆ ನಿಲ್ಲುವಂತೆ ತನ್ನ ಗಂಡನನ್ನು ಪರಿವರ್ತಿಸಿದ್ದಳು ಬಾಬಿ. ಬಡತನ, ಕಷ್ಟ, ಗಂಡನ ದುರ್ನಡತೆ, ಎಲ್ಲವನ್ನೂ ಸಹಿಸಿ ಗೆದ್ದಂತಹ ದಿಟ್ಟ ಮಹಿಳೆಯಾಗಿ ಬಾಬಿ ಕಂಡುಬರುತ್ತಾಳೆ. ಹಳೆಯ ಮೌಲ್ಯವನ್ನೇ ರೂಢಿಸಿಕೊಂಡ ಬಾಬಿ ತನ್ನ ಸಂಸಾರವನ್ನು ಸರಿಪಡಿಸಿಕೊಂಡ ಜಾಣೆ. ವೈದೇಹಿಯವರು ಬಾಬಿ ಪಾತ್ರದ ಮೂಲಕ ಇಂದಿನ ಕಾಲದ ಹುಡುಗಿಯರಿಗೆ ಸಂಸಾರವನ್ನು ಸಣ್ಣಪುಟ್ಟ ವಿಷಯಗಳಿಗೆ ಛಿದ್ರಗೊಳಿಸಿಕೊಳ್ಳದೆ ಗಟ್ಟಿಯಾಗಿ ನಿಲ್ಲುವಂತೆ ಸಂಸಾರವನ್ನು ಕಾಪಾಡಿಕೊಂಡು ಹೋಗುವ ಬಗೆಗಿನ ನೀತಿಯನ್ನು ಹೇಳುತ್ತಿದ್ದಾರೆಂದು ಭಾಸವಾಗುತ್ತದೆ.

ಗಂಡನನ್ನು ಬಿಟ್ಟುಬಂದ ಕುಸುಮಾ ಆಲೋಚಿಸುತ್ತ ಕುಳಿತಾಗ ತಂದೆ, ".....ನಿಂಗೇನು ವಿದ್ಯೆ ಇಲ್ಲವ, ಬುದ್ಧಿ ಇಲ್ಲವ ಅಥವಾ ಮುದುಕಿಯಾಗಿ ಬಿಟ್ಟೆಯಾ ? ಇನ್ನೂ ಬೇಕಾದಷ್ಟು ಸ್ಕೋಪ್ ಇದೆ. ಒಂದು ದಾರಿ ಮಾಡಿಸಿದರಾಯಿತು...." ಹೀಗೆ ಹೆಣ್ಣಿನ ಬಗೆಗಿನ ಆಧುನಿಕ ಮನೋಧರ್ಮವೊಂದು ಗಂಡಿನ ಮಾತುಗಳಲ್ಲಿ ಪ್ರಕಟಗೊಂಡಿರುವುದು ವಿಶೇಷವಾಗಿ ಗಮನಿಸಬೇಕು.

ಆಧುನಿಕ ಕಾಲದಲ್ಲಿ ಸ್ತ್ರೀಗೆ ತನ್ನದೇ ಆದ ಬದುಕನ್ನು ರೂಪಿಸಿಕೊಳ್ಳುವ ಸಾಮರ್ಥ್ಯವಿದೆ. ವಿದ್ಯಾವಂತಳೂ ಆಗಿರುವ ಆಕೆ ಸ್ವತಂತ್ರವಾಗಿ ಜೀವಿಸಬಲ್ಲಳು. ಹಿಂದಿನ ಕಾಲದಂತೆ ತನ್ನ ಪತಿಯನ್ನೇ ಆಶ್ರಯಿಸಬೇಕಾಗಿಲ್ಲ.

ಬಾಬಿ ತನ್ನ ಸಂಸಾರ ಕೆಟ್ಟಿದ್ದನ್ನು ಸರಿಪಡಿಸಿಕೊಂಡಳು. ಕುಸುಮಾ ತನ್ನ ಗಂಡನ್ನ ಬಿಟ್ಟು ಬಂದು ತವರುಮನೆ ಸೇರಿದ್ದಳು. ಕುಸುಮಳ ತಾಯಿ, ಬಾಬಿಯ ತಾಯಿ ನಾಗಮ್ಮನ ಬಗ್ಗೆ ಹೀಗೆ ಹೇಳುತ್ತಾಳೆ, "ದಿಕ್ಕುಗೆಟ್ಟು ಅದು ಅಜ್ಜಿಮನೆ ಸೇರಲಿಲ್ಲ. ಈಗಿನವರಾಗಿದ್ದರೆ ಮರಳುತ್ತ, ಹಗಲುರಾತ್ರಿ ಒಂದು ಮಾಡುತ್ತಿದ್ದರು. ನೀ ಏನೇ ಹೇಳು, ವಿದ್ಯೆ ಕಲಿಯದಿದ್ದಾಗ ಧೈರ್ಯ ಬಂದಿತ್ತು, ಈಗ ಅದೂ ಇಲ್ಲ...."

ಬಾಬಿಯ ತಾಯಿ ನಾಗಮ್ಮ ತನ್ನ ಗಂಡನನ್ನು ಕಳೆದುಕೊಂಡು ಸಾಂಪ್ರದಾಯಿಕ ಮಡಿ ಅಜ್ಜಿ ವೇಷವನ್ನು ತೊಟ್ಟಳು. ಕುಸುಮಳ ತಾಯಿಯ ಮನೆಯಲ್ಲಿ ಅಡಿಗೆ ಕೆಲಸಕ್ಕೆ ಸೇರಿದಳು. ಧೈರ್ಯದಿಂದ ಜೀವನವನ್ನು ಎದುರಿಸಿದಳು. ಕಷ್ಟಪಟ್ಟು ದುಡಿದು ತನ್ನ ಐದು ಹೆಣ್ಣು ಮಕ್ಕಳಿಗೂ ಮದುವೆ ಮಾಡಿ, ಅವರಿಗೆ ಬದುಕಿನ ದಾರಿಯನ್ನು ತೋರಿಸಿಕೊಟ್ಟಿದ್ದಳು. ಪತಿಯ ಶೋಷಣೆಗೆ ಒಳಗಾಗಿದ್ದರೂ ಅದನ್ನೆಲ್ಲವನ್ನೂ ಸಹಿಸಿ, ತನ್ನ ಜೀವನದ ದಾರಿಯನ್ನು ಕಂಡುಕೊಂಡಳು. ಈಗಿನ ಕಾಲದ ವಿದ್ಯಾವಂತ ಹುಡುಗಿಯರಲ್ಲಿ ಕಾಣದ ಛಾತಿ ಆಕೆಯಲ್ಲಿತ್ತು. ವೈದೇಹಿಯವರು ಇಂದಿನ ಕಾಲದ ಹುಡುಗಿಯರು ವಿದ್ಯೆ ಕಲಿತು ಸ್ವತಂತ್ರವಾಗಿ ಬದುಕಬಲ್ಲೆವು ಎಂಬ ಸ್ವಾಭಿಮಾನದಿಂದ ತಮ್ಮ ಬದುಕನ್ನು ಹಾಳು ಮಾಡಿಕೊಳ್ಳುತ್ತಿರುವ ಸಂದರ್ಭದ ಚಿತ್ರವನ್ನು ಗುರುತಿಸಬಹುದು.

"ನೀರಿಲ್ಲದಲ್ಲಿ ನೀರು ಹುಟ್ಟಿಸಿಕೊಳ್ಳುವ ಛಾತಿಯಿತ್ತು ನಾಗಮ್ಮನಿಗೆ. ಸಾಧಾರಣ ದವರಾಗಿದ್ದರೆ ಚಂಯ್ಯೋ ಎಂತ ಅಪ್ಪನ ನೆರಳ ಹಿಂದೆ ಅಡಗಿಬಿಡುತ್ತಿರಲಿಲ್ಲವೇ ?" ಈ ಮಾತಿನಲ್ಲಿ ನಾಗಮ್ಮನ ಪಾತ್ರದ ಮೂಲಕ ಸ್ತ್ರೀ ಸ್ವತಂತ್ರ ಮನೋಧರ್ಮ ಜೀವನ ದಾರಿಯಲ್ಲಿ ಪ್ರಗತಿಗೆ ಪೂರಕವಾಗಿ ಕಾಣಿಸಿಕೊಳ್ಳಬೇಕೇ ಹೊರತು, ಬದುಕಿಗೆ ಮುಳ್ಳಾಗಬಾರದು ಎಂಬ ಅಂಶ ಪ್ರಕಟಗೊಳ್ಳುತ್ತದೆ.

ಕುಸುಮಾ ತನ್ನ ಗಂಡನನ್ನು ಬಿಟ್ಟು ಬಂದದ್ದಕ್ಕಾಗಿ ಎಲ್ಲ 'ಸತಿ' ಗಳ ಮುಂದೆ ಅಪರಾಧಿ ಸ್ಥಾನದಲ್ಲಿ ನಿಂತಂತೆ ಭಾಸವಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕೊನೆಯ ದೃಶ್ಯ ನಾಟಕೀಯವಾಗಿದೆ. ಈ ಭಾಗದಲ್ಲಿ ಕುಸುಮಾಳ 'ಪಾಪಪ್ರಜ್ಞೆ', ತಾಕಲಾಟ, ಘರ್ಷಣೆ ವ್ಯಕ್ತವಾಗುತ್ತದೆ. ವೈದೇಹಿಯವರ ಸಂಕೀರ್ಣವಾದ ಭಾಷೆ ಹಾಗೂ ಸಾಂಪ್ರದಾಯಿಕ ವಿರೋಧಿಯಾದ ಒಂದು ಪಾತ್ರದಲ್ಲಿ ಕಂಡುಬರುವ ಮಾನಸಿಕ ಘರ್ಷಣೆ ಇಲ್ಲಿ ವ್ಯಕ್ತಗೊಂಡಿದೆ.

'..........ಅಲ್ಲ, ಗಂಡನನ್ನು ಬಿಟ್ಟು ಬಂದದ್ದು ಯಾಕೆ ಎಂತ? ಕುಡುಕನ, ಸೂಳೆಗಾರನ ಅಥವಾ ನಿಮಗೆ ಹೊಡೆಯುತ್ತಿದ್ದನ.....'

'..........'

'ಕೇವಲ ಗಂಡನ್ನ ಬಿಟ್ಟು ಬಂದದ್ದಕ್ಕೆ ಇಷ್ಟು ಮಂಕಾದದ್ದ ?..... ಗಂಡನ ಮನೆಯವರೆಲ್ಲ ಹೇಗೆ ?....... ನಾವು ಒಳ್ಳೆಯವರಾದರೆ ಅವರೂ ಒಳ್ಳೆಯವರೇ, ಏನೆನ್ನುತ್ತೀರಾ ?'

....

'ಕೊನೆಯ ಪ್ರಶ್ನೆ, ನೀವೇ ಬಿಟ್ಟು ಬಂದಿರ..... ಅಥವಾ ನಿಮ್ಮ ಗಂಡನೇ ನಿಮ್ಮನ್ನ ಬಿಟ್ಟನ ?...... ಅಥವಾ ಅವರೆಲ್ಲ ಸೇರಿ ಓಡಿಸಿದರ......'

ಸಾಂಪ್ರದಾಯಿಕ ಪರಂಪರೆಯ ಹಿನ್ನೆಲೆಯಲ್ಲಿ ನೋಡುವುದಾದರೆ ಕುಸುಮ ಮತ್ತು ಬಾಬಿ ವಿರುದ್ಧ ಪಾತ್ರಗಳ ಮೂಲಕ ಎರಡು ವಿಭಿನ್ನ ಅನುಭವಗಳ ವಿಚಾರಗಳನ್ನು ಹಿಡಿದಿಡುತ್ತದೆ ಈ ಕಥೆ. ವೈದೇಹಿ

ಯವರು ಧ್ವನಿ, ಭಾಷಾ ಸಂಕೀರ್ಣತೆಯನ್ನು ಈ ಕಥೆಯಲ್ಲಿ ಸಾಧಿಸಿದ್ದಾರೆ. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಇಲ್ಲಿನ ಜನಜೀವನದ ಮೇಲೆ ಎಷ್ಟರ ಮಟ್ಟಿಗೆ ಪ್ರಭಾವ ಬೀರುತ್ತಿದೆ ಎಂಬುದನ್ನೂ ಗಮನಿಸಬಹುದು. ಪರಂಪರಾಗತ ಸಂಕೋಚ, ಅಸಹಾಯಕತೆ, ಕಟ್ಟುಪಾಡುಗಳನ್ನು ದಾಟಿ ಬರಲಾಗದ ಹೆಣ್ಣಿನ ಪ್ರತೀಕವಾಗಿ ಕುಸುಮಾ ಕಂಡುಬರುತ್ತಾಳೆ. ಕುಸುಮಾಳ ಸಾಮಾಜಿಕ ಪ್ರತಿಕ್ರಿಯೆ, ವೈಯಕ್ತಿಕ ತರ್ಕಗಳನ್ನು ಒಳಗೊಂಡಿರುವಂಥದು. ಕುಸುಮಳಂತಹ ಸಮಸ್ಯೆಯನ್ನೇ ಎದುರಿಸುತ್ತಿರುವ ಕೆಲಸದ ಹೆಣ್ಣು ಬಾಬಿ ಬಡವಳಾದರೂ ಸಮಸ್ಯೆಗಳನ್ನು ತನ್ನದೇ ಆದ ರೀತಿಯಲ್ಲಿ ಪರಿಹರಿಸಿಕೊಳ್ಳುತ್ತಾ ಮುನ್ನುಗ್ಗುವ ಹೆಣ್ಣಾಗಿ ಕಂಡುಬರುತ್ತಾಳೆ. ಕುಸುಮ ಮತ್ತು ಬಾಬಿ ಇವರನ್ನು ಮುಖಾಮುಖಿಯಾಗಿಸುವ ಮೂಲಕ ಸ್ತ್ರೀಯ ಬದುಕಿನ ಸುಖ, ಅವರ ಧೈರ್ಯ ನಿರ್ಧಾರಗಳನ್ನೇ ಅವಲಂಬಿಸಿರುತ್ತದೆ ಎಂಬುದನ್ನು ಸೂಚಿಸುತ್ತಾರೆ.

ಭೂತ :

ಈ ಕಥೆಯನ್ನು "ಅಂತರಂಗದ ಪುಟಗಳು" ಎಂಬ ಕಥಾಸಂಕಲನದಿಂದ ಆರಿಸಲಾಗಿದೆ.

ಸ್ತ್ರೀಯ ವೈಯಕ್ತಿಕ ಸಮಸ್ಯೆ, ಕೌಟುಂಬಿಕ ನೆಲೆಯಲ್ಲಿ ಆಕೆ ಪಡುವ ಯಾತನೆ, ನೋವು ಹಾಗೂ ಅದನ್ನು ಎದುರಿಸುವ ದಿಟ್ಟತನವನ್ನೊಳಗೊಂಡ ಕಥೆ "ಭೂತ". ಹಿಂದಿನ ಘಟನೆಗಳನ್ನು ನೆನಪಿಸಿಕೊಳ್ಳುವ Flashback ತಂತ್ರದಲ್ಲಿ ಈ ಕಥೆ ರೂಪಿತವಾಗಿದೆ.

ಪಾರ್ವತಿ ಎಂಬ ಹೆಣ್ಣಿನ ಸುತ್ತ ಹೆಣೆದ ಕಥೆ ಇದು. ಮೀರಾಳ ದೊಡ್ಡಮ್ಮನ ಮಗಳು ಪಾರ್ವತಿ. ಮೀರಾ ಪಾತ್ರದ ಮೂಲಕ ಪಾರ್ವತಿಯ ಜೀವನದ ಪುಟಗಳನ್ನು ತಿರುವಿ ಹಾಕಲಾಗಿದೆ. ಮೀರಾ ಈ ಕಥೆಯ ನಿರೂಪಕಿ. ನಿರೂಪಕಿ ರಜೆಗೆ ತನ್ನ ದೊಡ್ಡಮ್ಮನ ಊರಾದ ಬಾಡೂರಿನ ಮನೆಗೆ ಹೋದಾಗ, ಅಲ್ಲಿ ನಡೆದ ಘಟನೆ, ಸಂದರ್ಭಗಳನ್ನು ವಿವರಿಸುತ್ತ, ವಿಶಿಷ್ಟ ವ್ಯಕ್ತಿತ್ವದ ತನ್ನ ದೊಡ್ಡಮ್ಮನ ಮಗಳು ಪಾರ್ವತಿಯ ಕಥೆಯನ್ನು ವಿವರಿಸುತ್ತಾಳೆ.

ಪಾರ್ವತಿ ಏಳನೇ ಕ್ಲಾಸು ಕಲಿತು, ಶಾಲೆ ಬಿಟ್ಟಿದ್ದಳು. "ನನಗೆ ಮೆಚ್ಚಲಿಲ್ಲ ಶಾಲೆ, ಅಲ್ಲಿ ಯಾರು ಹೋಯಿ ಕುಳ್ಕಂತ್ರಿಯ !" ಎಂದು ಶಾಲೆಯ ಬಗ್ಗೆ ತನ್ನ ಭಾವನೆಯನ್ನು ವ್ಯಕ್ತಪಡಿಸುತ್ತಾಳೆ, ಪಾರ್ವತಿ. ಸಪುರ ದೇಹವನ್ನು ಹೊಂದಿದ್ದ ಪಾರ್ವತಿ, ಮನೆಗೊಬ್ಬ ಪ್ರಾಯ ಬಂದ ಮಗನಂತಿದ್ದಳು. ಪಾರ್ವತಿ, ಏತದಿಂದ ನೀರು ಮೊಗೆಮೊಗೆದು ತೋಟಕ್ಕೆ ನೀರುಬಿಡುತ್ತಿದ್ದಳು. ಕೆಲಸದವರು ದೊಡ್ಡಪ್ಪಯ್ಯನ ಮಾತಿಗಿಂತ ಪಾರ್ವತಿಯ ಮಾತಿಗೇ ಹೆಚ್ಚು ಬೆಲೆ ಕೊಡುತ್ತಿದ್ದರು.

ಭಾರತೀಯ ಸಮಾಜದಲ್ಲಿ ಹೆಣ್ಣು ನಯ, ನಾಜೂಕು, ವಿನಯ, ಗಂಭೀರ, ನಾಚಿಕೆ ಉಳ್ಳವಳಾಗಿರಬೇಕು, ಎಂದು ಹೆಣ್ಣಿಗೇ ಪ್ರತ್ಯೇಕವಾದ ಗುಣಗಳನ್ನು, ನಿಯಮಗಳನ್ನು ಹೇರಿದೆ. ಆದರೆ ಪಾರ್ವತಿ ಹೆಣ್ಣಾಗಿದ್ದರೂ, ಮರ ಹತ್ತುವುದು, ಈಜುವುದು, ಹೊಲದ ಕೆಲಸ ನೋಡಿಕೊಳ್ಳುವುದು - ಹೀಗೆ ಅನನ್ಯವಾದ ರೀತಿಯಲ್ಲಿ ಬೆಳೆದವಳು ಪಾರ್ವತಿ. ಇಂತಹ ಅನೇಕ ಕಥೆಗಳನ್ನು ಬಂಗಾಳೀ ಸಾಹಿತ್ಯದಲ್ಲಿ ಕಾಣಬಹುದು.

ಪಾರ್ವತಿ ಕೆಲಸದಲ್ಲಿ ಒರಟಾದ ಹೆಂಗಸಂತೆ ಕಂಡುಬಂದರೂ, ಮನಸ್ಸು 'ಸ್ತ್ರೀತನ' ದ್ದು. ಮೊಣಕಾಲ

ಮೇಲೆ ತಲೆಯಿಟ್ಟು ಎಷ್ಟೋ ಸಲ ಯೋಚಿಸುತ್ತ, "ಬಡವರಾದ ಮೇಲೆ ಇಪ್ಪಗಾಗ" ಎಂದು ತಗ್ಗಿದ ದನಿಯಲ್ಲಿ ನೊಂದು ಹೇಳುತ್ತಿದ್ದಳು. ದೊಡ್ಡಮ್ಮನಿಗೆ ಪಾರ್ವತಿಯ ಮದುವೆಯ ಚಿಂತೆ, ಬಡತನದಲ್ಲಿ ಮದುವೆ ಮಾಡುವುದು ಹೇಗೆ ? ಎಂಬುದು. ದೊಡ್ಡಮ್ಮನ ಅಜ್ಜಯ್ಯ, ದೊಡ್ಡಪ್ಪಯ್ಯನ ಮನೆಯಲ್ಲಿ ಏಳು ಚಿನ್ನದ ಕೊಪ್ಪರಿಗೆ ಇದ್ದುದರಿಂದ, ದೊಡ್ಡಮ್ಮನನ್ನು ಅವರಿಗೆ ಮದುವೆ ಮಾಡಿಸಿದ್ದರು. ಏಳು ಚಿನ್ನದ ಕೊಪ್ಪರಿಗೆಯನ್ನು ಕಾಯುವುದಕ್ಕಾಗಿ ಭೂತದ ಕಾವಲು ಇದ್ದಿತ್ತು. ಆದರೆ ಕ್ರಮೇಣ ದೊಡ್ಡಮ್ಮನ ಬದುಕು, 'ಹಂಚಿನ ಮನೆ ಕೈತಪ್ಪಿ.... ಮಣ್ಣಿನ ನೆಲದ ಮೇಲೆ ಬದುಕು ನಡೆಸುವಂತಾಯಿತ್ತು'.

ದೊಡ್ಡಮ್ಮ ಪಾರ್ವತಿಗೊಂದು ಗಂಡನ್ನು ಹುಡುಕಿ ಮದುವೆ ಮಾಡಿದಳು. ಆದರೆ ಗಂಡ, ಪಾರ್ವತಿಯನ್ನು ಬಿಟ್ಟುಹೋದನು. ಅವನಿಗೆ ಮೊದಲೇ ಒಂದು ಮದುವೆ ಆಗಿತ್ತು. ಪಾರ್ವತಿಗೆ ಎರಡು ಹೆಣ್ಣುಮಕ್ಕಳು. ನಾಲ್ಕು ದಿನಕ್ಕೊಂದು ಕಳಿಸಿದ್ದವನು ನಾಪತ್ತೆಯಾಗಿದ್ದನು. ದೊಡ್ಡಮ್ಮ, "ಮತ್ತೊಂದು ಮದುವೆಯಾಗಲು ಹೋಗಿರಬೇಕು" ಎಂದು ಕೋಪದಿಂದ ಹೇಳುತ್ತಿದ್ದಳು.

ಕಥಾನಿರೂಪಕಿ ಮೀರಾ ತನ್ನ ತಾಯಿಯ ಜೊತೆ ತನ್ನ ಮಕ್ಕಳನ್ನು ಕರೆದುಕೊಂಡು ದೊಡ್ಡಮ್ಮನ ಊರು ತೋರಿಸಬೇಕೆಂದು ಅಲ್ಲಿಗೆ ಹೋದಾಗ ಈ ಎಲ್ಲ ವಿಷಯಗಳು ತಿಳಿದುಬಂದವು.

ಪಾರ್ವತಿಯ ಬದುಕು ಅಸ್ತವ್ಯಸ್ತಗೊಂಡರೂ, ಅದನ್ನು ಧೈರ್ಯದಿಂದ ಎದುರಿಸುತ್ತಾಳೆ. ಯಾವುದೇ ಒಂದು ಹೆಣ್ಣಿನ ಜೀವನದಲ್ಲಿ ಬಂದೊದಗುವ ನೋವು, ದುಃಖ ಅವುಗಳನ್ನು ಮೀರಿ ನಿಲ್ಲುವ ಧಾಷ್ಟ್ಯವನ್ನು ಹೆಣ್ಣು ಹೊಂದಿರಬೇಕು. ಇದು ಪಾರ್ವತಿಯ ವ್ಯಕ್ತಿತ್ವದಿಂದ ತಿಳಿದುಬರುತ್ತದೆ. ತನ್ನ ಎರಡು ಹೆಣ್ಣುಮಕ್ಕಳೊಂದಿಗೆ ದಿಟ್ಟವಾಗಿ ಬದುಕುವ ಪಾರ್ವತಿ, "ಒಂದು ಅಪರಾಧ ತನಿಖೆ" ಕಥೆಯಲ್ಲಿ ಕಂಡುಬರುವ ಬಾಬಿ ಪಾತ್ರವನ್ನು ನೆನಪಿಸುತ್ತಾಳೆ.

ಬಾಡೂರಿಗೆ ಅಮ್ಮನೊಂದಿಗೆ, ತನ್ನ ಮಕ್ಕಳನ್ನು ಕರೆದುಕೊಂಡು ಬಂದಾಗ ಕಥಾನಿರೂಪಕಿ, ಪಾರ್ವತಿಯ ಜೀವನದ ದುರಂತವನ್ನು ಕಂಡಳು. ಕಥಾನಿರೂಪಕಿಯ ಅಮ್ಮ "ಬರ್ತಾನ ಅಳಿಯ ?" ಎಂದು ಕೇಳಿದ್ದಕ್ಕೆ "ಬರ್ತ, ಬಸಿರು ಮಾಡಿ ಹೋಪುಗೆ. ನಾನು ಒಳಗೆ ಹೊಗ್ಗಿಸಿಕೊಂಡರಲ್ಲ ?" ಎಂದು ಹೇಳುತ್ತಾ "ಧೈರ್ಯಸ್ಥೆ. ಮಹಾಧೈರ್ಯಸ್ಥೆ" ತನ್ನ ಮಗಳು ಪಾರ್ವತಿಯ ಬಗ್ಗೆ ಹೇಳುತ್ತಾಳೆ. "ಅವಳು ಮದುವೆ ಆಯಿಂಡು ಹೋದ ಮೇಲೆ ಗದ್ದೆ ತೋಟ ಕೇಳ್ತವರಿಲ್ಲದ ಹಂಗಿತ್ತು. ಈಗ ಗಂಡು ಗಂಡಸು ಮನೆಯಲ್ಲಿದ್ದ ಹಂಗೆ ಆಯಿತಲ್ಲ. ಒಬ್ಬ ಮಗ ಇದ್ದಿಪ್ಪರೆ ಇರ್ತಿರಲ್ಲಯ ?" ಎಂದು ಪಾರ್ವತಿಯ ತಾಯಿ ಹೇಳುವ ಮಾತು ಗಮನಾರ್ಹವಾದುದು.

ಮದುವೆಯಾದ ಹೆಣ್ಣುಮಗಳು, ಗಂಡನ ಮನೆ ಬಿಟ್ಟು, ಗಂಡನನ್ನು ಬಿಟ್ಟು, ತೌರುಮನೆಯಲ್ಲಿದ್ದಾಳೆ ಎಂದರೆ, ನಮ್ಮ ಭಾರತೀಯ ಸಮಾಜದಲ್ಲಿ ಆಕೆಗೆ ಗೌರವವಿಲ್ಲ. ಸಮಾಜದಲ್ಲೇಕೆ, ಕುಟುಂಬದಲ್ಲಿಯೇ ಆಕೆಯನ್ನು ತುಚ್ಛವಾಗಿ ಕಾಣುವ ಸಂಸ್ಕೃತಿ ನಮ್ಮದು. ಹೆಣ್ಣಿನ ಬಾಳು ಅರ್ಥಪೂರ್ಣವಾಗಬೇಕಾದರೆ, ತನ್ನ ಗಂಡ ಅವನು ದುಷ್ಟನೇ ಆದರೂ ಅವನೊಂದಿಗೆ ಬದುಕನ್ನು ನಡೆಸಿದಾಗ ಮಾತ್ರ ಎಂಬುದು ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಎದ್ದು ಕಾಣುವ ವಿಚಾರ.

ಪಾರ್ವತಿಯ ತಾಯಿಯ ಮನೋಭಾವ, ತನ್ನ ಮಗಳನ್ನು ಮಗನೆಂದು ಸಾಕುವ ಹಾಗೂ ಸಮಾಜಕ್ಕೆ ಸವಾಲೊಡ್ಡುವ ಬಗೆಯಲ್ಲಿ ಮಾತನಾಡುತ್ತಾಳೆ. ದೊಡ್ಡಮ್ಮಳಿಗೆ ಪಾರ್ವತಿಯ ಜೀವನದ ಬಗ್ಗೆ ದುಃಖವಿದೆ. ಮಧ್ಯರಾತ್ರಿಯಲ್ಲಿ ಬಾವಿಯ ಹತ್ತಿರ ಕುಳಿತು ಅಳುತ್ತಾ ದುಃಖವನ್ನು ಹೊರಗೆಡಹುತ್ತಾಳೆ. ಒಬ್ಬ ತಾಯಿಗೆ ಮಗಳ ಜೀವನ ಹಾಳಾದ ಬಗ್ಗೆ ಇರುವ ಅತೀವ ದುಃಖ ಅದು. ವೈದೇಹಿಯವರು ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ವಿಚಾರ ಮಾಡಿರುವುದನ್ನು ಗಮನಿಸಬೇಕಾದುದು.

ವೈದೇಹಿಯವರು ಸಾಮಾನ್ಯವಾಗಿ ತಮ್ಮ ಕಥೆಗಳಲ್ಲಿ ಗ್ರಾಮ್ಯ ಪರಿಸರ, ಅಲ್ಲಿನ ಹೆಂಗಸರ ಬದುಕು - ಇವುಗಳನ್ನು ಚಿತ್ರಿಸುತ್ತಾರೆ. ಸ್ತ್ರೀಯರ ಯಾತನಾಮಯ ಬದುಕು, ಅದನ್ನು ಅವರು ಧೈರ್ಯದಿಂದ ಎದುರಿಸಿ, ಜೀವನ ವಿಮುಖತೆಯನ್ನು ಹೊಂದದೆ, ಸೆಣಸಿ ತಮ್ಮ ಬದುಕನ್ನು ನಡೆಸುವಂತಹ ದಿಟ್ಟ ಹೆಂಗಸರ ಚಿತ್ರಣ ಕಂಡುಬರುತ್ತದೆ. ಅದರಂತೆ ಈ ಕಥೆಯಲ್ಲಿಯೂ ಪಾರ್ವತಿಯಂತಹ ದಿಟ್ಟ ಹೆಂಗಸು, ತನ್ನ ಬದುಕನ್ನು ರೂಪಿಸಿಕೊಳ್ಳುತ್ತಾಳೆ. ತನ್ನ ಛಲದ ಬದುಕಿನೊಂದಿಗೆ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುತ್ತಾಳೆ. ಎಲ್ಲ ಹೆಣ್ಣುಮಕ್ಕಳೂ ಹೀಗೆ ನಡೆದುಕೊಂಡರೆ ಚೆನ್ನ ಎನ್ನುವುದು ವೈದೇಹಿಯವರ ಆಶಯ ಇದ್ದ ಹಾಗೆ ಕಾಣುತ್ತದೆ.

ವರ್ತುಲ :

ಈ ಕಥೆಯನ್ನು "ಮರಗಿಡ ಬಳ್ಳಿ" ಎಂಬ ಕಥಾಸಂಕಲನದಿಂದ ಆರಿಸಲಾಗಿದೆ.

ಆಧುನಿಕತೆಯ ಸಮಾಜದಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಗಾಢವಾಗಿರುವುದನ್ನು ಗಮನಿಸಬಹುದು. ಕುಟುಂಬ ಛಿದ್ರೀಕರಣ, ತಾಯಿ - ಮಕ್ಕಳ ಸಂಬಂಧ ಕತ್ತರಿಸಿಹೋಗುವುದು, ಕೌಟುಂಬಿಕ ನೆಲೆಯಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗುರುತಿಸಬಹುದು.

ಅವಿಭಕ್ತ ಕುಟುಂಬವನ್ನು ಭಾರತೀಯ ಸಂಸ್ಕೃತಿಯಲ್ಲಿ ಕಾಣುತ್ತೇವೆ. ಕ್ರಮೇಣ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದಾಗಿ ವಿಭಕ್ತ ಕುಟುಂಬಗಳಾಗಿ ಒಡೆದು, ಛಿದ್ರವಾಗುತ್ತಿರುವ ಸನ್ನಿವೇಶವನ್ನು ಇಂದು ನೋಡುತ್ತೇವೆ.

ಈ "ವರ್ತುಲ" ಕಥೆಯಲ್ಲಿ ಛಿದ್ರವಾಗುತ್ತಿರುವ ಕುಟುಂಬವನ್ನು ಒಂದು ಮಾಡುವ ಅಪರೂಪದ ಸಂಗತಿಯನ್ನು ಕಾಣುತ್ತೇವೆ. ಕಥಾನಾಯಕಿ ಕುಸುಮಾ ತನ್ನ ಗಂಡ, ತಾಯಿ - ತಂಗಿಯರನ್ನು ಬಿಟ್ಟುಬಂದು ಉದ್ಯೋಗವನ್ನು ಕಂಡುಕೊಂಡು, ಸ್ವತಂತ್ರವಾಗಿ ಹೆಂಡತಿ - ಮಕ್ಕಳೊಂದಿಗೆ ಬದುಕುತ್ತಿರುವುದನ್ನು ಖಂಡಿಸುತ್ತಾಳೆ.

ಕುಸುಮಳಿಗೆ ಅವಿಭಕ್ತ ಕುಟುಂಬದಲ್ಲಿ ಜೀವಿಸಬೇಕು, ಬೆಳೆದ ಮಗ ತಾಯಿಗೆ ಸಹಾಯಕನಾಗಿ ನಿಲ್ಲಬೇಕು ಎಂಬ ಆಶಯ. ಇಂದು ಒಡೆಯುತ್ತಿರುವ ಕುಟುಂಬಗಳಿಗೆ ಸೊಸೆಯೇ ಕಾರಣ ಎಂದು ದೂರುವುದಕ್ಕೆ ಕುಸುಮಾ ಅಪವಾದವಾಗಿ ಕಾಣುತ್ತಾಳೆ.

ಕುಸುಮಾಳ ಗಂಡ ಮದುವೆಯಾದ ವರ್ಷವೇ ಮನೆ, ವ್ಯವಸಾಯ ಅಂತ ನೆಪ ಮಾತ್ರಕ್ಕೆ ಊರಲ್ಲಿಯೇ ಇದ್ದು, ಕೆಲಸಕ್ಕೆ ಸೇರಲು ತುದಿಗಾಲಲ್ಲಿ ನಿಂತಿದ್ದು, ಕೆಲಸ ಸಿಕ್ಕಿದ ತಕ್ಷಣ ಮನೆಯಿಂದ ಹೊರಗೆ ಬಂದಿದ್ದರು.

ಇದೆಲ್ಲದಕ್ಕೂ ಮನೆಯ ಸೊಸೆ ಕುಸುಮಾಳೇ ಕಾರಣ ಎಂಬಂತೆ ಮನೆಯವರ ಕೋಪಕ್ಕೆ ಗುರಿಯಾಗಿದ್ದಳು ಕುಸುಮಾ. ಕುಸುಮಾಳ ಅತ್ತೆ ಪದೇ ಪದೇ ಬೇರೆಯವರೊಂದಿಗೆ ಹೇಳಿದ ಮಾತನ್ನು ಕುಸುಮಾ ಕೇಳಿಸಿಕೊಂಡಿದ್ದಳು. "ಅವನಿಗೇನು ಅಗತ್ಯವಿದೆ ಹೊರಗೆ ಹೋಗಿ ಕೆಲಸ ಮಾಡಬೇಕೆಂದು ? ತೋಟವಿದೆ, ಗದ್ದೆಯಿದೆ. ನೋಡಿಕೊಂಡು ಇಲ್ಲೇ ಇರಬಾರದಾ ? ನಮಗೂ ಆಸರೆಯಾಗುತ್ತಿತ್ತು. ಆ ಕಾಲವೆಲ್ಲ ಹೊರಟುಹೋಯಿತು ಬಿಡಿ. ಬೆಳೆದು ದೊಡ್ಡವರಾಗುವವರೆಗೆ ಮಾತ್ರ ಅಪ್ಪ - ಅಮ್ಮ ಬೇಕು. ಆಮೇಲೆ ಯಾರಿಗೆ ಯಾಕೆ ? ತಾನಾಯಿತು, ತನ್ನ ಹೆಂಡತಿ ಮಕ್ಕಳಾಯಿತು. ಅದೊಂದು ಬದುಕೆ ? ಹುಟ್ಟಿದ್ದಕ್ಕೊಂದು ಫಲವೆ ? ನಾಲ್ಕು ಮಂದಿಯೊಂದಿಗೆ ಇದ್ದು ಜೈಸಬೇಕು. ಅದು ಬಾಳು...., ಹೆಣ್ಣು ಹೆತ್ತೆ, ಅಳಿಯನಿಗೆ ಕೊಟ್ಟೆ, ಗಂಡು ಹೆತ್ತೆ, ಸೊಸೆಗೆ ಕೊಟ್ಟೆ ಎನ್ನುತ್ತಾರಲ್ಲ, ಅದೇನು ಸುಳ್ಳೆ ?....'

ಗಂಡು ಮಕ್ಕಳು ಸ್ವಾರ್ಥದ ಬದುಕಿನ ಕಡೆಗೆ ವಾಲುತ್ತಿರುವುದರ ಸೂಚನೆಯಿದೆ. ಮದುವೆಯಾದ ನಂತರ ತನ್ನ ಹೆಂಡತಿ, ಮಕ್ಕಳು - ತನ್ನ ಸಂಸಾರ ಬಗ್ಗೆ ಯೋಚಿಸುತ್ತಾರೆ. ಹೆತ್ತ ತಾಯಿ - ತಂದೆಯರನ್ನು ಮರೆತು ಸ್ವಾರ್ಥವಾಗಿ ಬದುಕುವುದು ಬದುಕೇ ? ಬದುಕಿನ ಅರ್ಥ ಒಟ್ಟಾಗಿ ಬಾಳುವುದರಲ್ಲಿದೆ.

ಒಮ್ಮೊಮ್ಮೆ ಕುಸುಮಾಳಿಗೂ ಅನಿಸಿದ್ದುಂಟು. "ಎಂತಹ ಮನುಷ್ಯರಪ್ಪ ನೀವು. ಇಷ್ಟು ಆಸ್ತಿ ಮನೆ ಇದ್ದರೂ ತಿಂಗಳಿಗೆ ಸರಕಾರ ಕೊಡುವ ಸಂಬಳಕ್ಕೆ ಕೈಯೊಡ್ಡಿ ಕುಳಿತಿರುವವರು ? ಯಾರಾದರೂ ಊಟ ಕಸಿದ ಪಾಪ ನಿಮ್ಮದು ! ಒಂದು ದೃಷ್ಟಿಯಿಂದ ದ್ರೋಹವೇ ...." ಎಂದು ತನ್ನ ಗಂಡನಿಗೆ ಬೋಧಿಸಿದರೂ, ".....ಆಸ್ತಿ ನಂಬಿಕೊಂಡು ಕುಳಿತರೆ ತಲೆಯ ಮೇಲೆ ತಣ್ಣೀರು ಬಟ್ಟೆ ಬಂದೀತು. ಇಷ್ಟು ನೆನಪಿಟ್ಟುಕೋ" ಎಂದು ವಾಸ್ತವ ಸತ್ಯವನ್ನು ಕುಸುಮಾಳ ಗಂಡ ಹೇಳುತ್ತಾನೆ.

ಕುಸುಮಾಳ ನಾದಿನಿ ರೇಖಾಳಿಗೆ ಮದುವೆ ನಿಶ್ಚಯವಾಯಿತು. ಕುಸುಮಾಳಿಗೆ ಅದರಿಂದ ಸ್ವಲ್ಪ ಸಮಾಧಾನವೂ ಆಯಿತು. ಇನ್ನಾದರೂ ಅತ್ತೆಗೆ ಮಗನ ಮೇಲೆ ಸ್ವಲ್ಪ ಸಮಾಧಾನವಾಗಬಹುದೆಂದು ಆಶಿಸುತ್ತಾಳೆ. ಕುಸುಮಾಳ ಮನಸ್ಸಿನಲ್ಲಿ ಸಫಲ ಬದುಕಿನ ಆಲೋಚನೆ ಇದೆ. ತುಂಬಿದ ಸಂಸಾರದಲ್ಲಿ, ಅತ್ತೆ - ಮಾವಂದಿರನ್ನು ನೋಡಿಕೊಳ್ಳುತ್ತಾ ಜೀವನ ನಡೆಸುವುದರಲ್ಲಿ ಸಾರ್ಥಕತೆ ಇದೆ ಎಂದು ನಂಬಿದವಳು ಕುಸುಮಾ. ಸಾರ್ಥಕತೆಯಲ್ಲಿ ಸಂತೋಷವಿದೆ. ಆದರೆ ಎಲ್ಲ ಸಂತೋಷಗಳಲ್ಲಿಯೂ ಸಾರ್ಥಕತೆ ಕಾಣಲು ಸಾಧ್ಯವೆ ? ಎಂದು ವಿಚಾರ ಮಾಡುತ್ತಾಳೆ ಕುಸುಮಾ.

ಸಂಪ್ರದಾಯದ ಪ್ರತೀಕವಾಗಿ ಕಾಣುವ ಅತ್ತೆ ತನ್ನ ಮಗಳನ್ನು ಕೊಡುವ ಮನೆಯ ಬಗ್ಗೆ ಮಾತ್ರ ಆಧುನಿಕವಾಗಿ ಆಲೋಚಿಸುತ್ತಾಳೆ. "..... ? ಹೂ ಮುಡಿಸಿ ಹೋಗಲು ಬಂದಿದ್ದರು ಅವಳ ಅತ್ತೆಯಾಗುವವರು. ಮತ್ತೆ, ಹುಡುಗನ ಸೋದರತ್ತೆಯಂತೆ, ಅವರೂ ಬಂದಿದ್ದರು. ನಾನು ಮೆಲ್ಲನೆ ಒಂದೊಂದೇ ಪ್ರಶ್ನೆ ಹಾಕಿ ತಿಳಿದುಕೊಂಡೆ. ಸುಮಾರು ಹತ್ತು ಹದಿನೈದು ಜನ ಇರಬೇಕು ಆ ಲೆಖ್ಖದಲ್ಲಿ. ಮಡಿಗಿಡಿಯೂ ಸ್ವಲ್ಪ ಜೋರೆ ಇರಬೇಕು (.....) ಅಷ್ಟು ಜನರ ಮಧ್ಯೆ, ಆ ಮಡಿ ಮೈಲಿಗೆ ಗಲಾಟೆಯಲ್ಲಿ ನಮ್ಮ ರೇಖ ಇರುವುದು ಹೌದೆ ? ನಾಲ್ಕು ದಿನಕ್ಕೆ ಓಡಿಬಂದಾಳು".

ಮನುಷ್ಯ ಕೆಲವು ಸಂದರ್ಭಗಳಲ್ಲಿ ಸ್ವಾರ್ಥನಾಗುತ್ತಾನೆ. ತನ್ನ ವಸ್ತು ಮತ್ತೊಬ್ಬರ ಬಳಿಗೆ ಹೋಗುವಾಗ

ಜೋಪಾನ ಮಾಡುವ ಬಗ್ಗೆ, ಕಾಳಜಿ ವಹಿಸುತ್ತಾರೆ. ಕುಸುಮಾ ತನ್ನ ಮನದಲ್ಲೇ ಈ ರೀತಿ ಆಲೋಚಿಸುತ್ತಾಳೆ. "ನನ್ನ ಅಪ್ಪ ಅಮ್ಮನೇನೋ ಮನೆಯನ್ನು ನೋಡಿಯೂ ಮನೆಯಲ್ಲಿನ ಜನಗಳನ್ನು ನೋಡಿಯೂ ನನ್ನನ್ನು ಕೊಟ್ಟರು. ಇಂತಹ ಮನೆಗೆ ಇವರಾದರೆ ರೇಖಳನ್ನು ಕೊಡುತ್ತಿರಲಿಲ್ಲ. ಹಾಗಾದರೆ ?".

ಕುಸುಮಾಳ ಅತ್ತೆ, ಮಗಳ ಮದುವೆಗೆ ಮುಂಚೆಯೇ ಬರುವಂತೆ ಕೇಳಿದಾಗ, ಕುಸುಮಾಳಿಗೆ 'ಆಗುವುದಿಲ್ಲ' ಎಂದು ನಯವಾಗಿ ಹೇಳುವುದಕ್ಕೂ ಅಂಜಿಕೆ. ಕುಸುಮಾಳಿಗೆ, ಅತ್ತೆಗೆ ಗೌರವ ಕೊಡುವುದರೊಂದಿಗೆ ಮಗನನ್ನು ತಾಯಿಯಿಂದ ಕಸಿದುಕೊಂಡೆ ಎಂಬ ಭಾವ ಅತ್ತೆಗೆ ಬರದಿರಲಿ, ನೋವಾಗದಿರಲಿ ಎಂಬ ಒಳ್ಳೆಯ ಸೌಜನ್ಯದ ನಡತೆಯಿದೆ. ಆದಷ್ಟು ತನ್ನ ಕಡೆಯಿಂದ ಯಾರ ಮನಸ್ಸಿಗೂ ನೋವಾಗದಂತೆ ವರ್ತಿಸಬೇಕೆಂಬ ಆದರ್ಶ ಕುಸುಮಾಳದು.

ಈ ಕಥೆ, ಮನುಷ್ಯ ತನ್ನ ಬದುಕನ್ನು ಬೆಳಗಿಸುವುದಕ್ಕೆ ಸ್ವಾರ್ಥದ ವರ್ತುಲದಲ್ಲಿಯೇ ಸುತ್ತುವುದರ ಬಗ್ಗೆ ಮೂಡಿಬಂದಿದೆ. ಹೆಂಡತಿ, ತನ್ನ ಗಂಡನಿಗೆ ತಾಯಿ, ತಂಗಿಯರನ್ನು ಬಿಡದೆ, ಬದುಕಿನ ಸಫಲತೆಯ ಬಗ್ಗೆ ಹೇಳುವ ರೀತಿ ಅಪರೂಪವಾದ ಪ್ರಸಂಗ. ವೈದೇಹಿಯವರು ಇಂದಿನ ಸಮಾಜದಲ್ಲಿ, ಕಾಣುವ, ತಂದೆ - ತಾಯಂದಿರಿಂದ ಮಕ್ಕಳನ್ನು ಬೇರೆ ಮಾಡುವ ಸೊಸೆಯಂದಿರಷ್ಟೇ ಅಲ್ಲ, ಒಂದುಗೂಡಿಸಲು ಪ್ರಯತ್ನಿಸುವ ಸೊಸೆಯರೂ ಇದ್ದಾರೆ ಎಂಬುದನ್ನು ಮನಗಾಣಿಸುತ್ತಾರೆ. 'ತುಂಬಿದ ಮನೆ' ಯಲ್ಲಿ ಬದುಕನ್ನು ನಡೆಸುವುದೇ ಜೀವನ; ಅದರಲ್ಲಿಯೇ ಯಶಸ್ಸು ಇದೆ ಎಂಬುದನ್ನು ಚಿತ್ರಿಸುತ್ತಾರೆ.

ಕುಟುಂಬದಲ್ಲಿ ಹೆಣ್ಣು ಮಹತ್ವದ ಪಾತ್ರ ವಹಿಸುತ್ತಾಳೆ. ತಾಯಿ, ಮಗಳು, ಸೊಸೆ, ಪತ್ನಿ, ಅಜ್ಜಿ, ವಿಧವೆ ಹೀಗೆ ಮೊದಲಾದ ಪಾತ್ರಗಳಲ್ಲಿ ಕುಟುಂಬದಲ್ಲಿ ಕಾಣಿಸಿಕೊಳ್ಳುತ್ತಾಳೆ. ಕೌಟುಂಬಿಕ ನೆಲೆಯಲ್ಲಿ ಹೆಣ್ಣು ಈ ರೀತಿ ಪಾತ್ರಗಳನ್ನು ಹೊಂದಿರುವುದರಿಂದ ವಿವಿಧ ರೀತಿಯ ಅನುಭವಗಳಿಗೆ ಒಳಗಾಗುತ್ತಾಳೆ. ಅದಕ್ಕೆ ಅವಳ ಪ್ರತಿಕ್ರಿಯೆ, ಸ್ವೀಕರಿಸುವ ರೀತಿ, ಎದುರಿಸಬೇಕಾದ ಸಮಸ್ಯೆಗಳು ಮತ್ತು ಅವಳು ಕಂಡುಕೊಳ್ಳುವ ಪರಿಹಾರ ಬೇರೆ ಬೇರೆ ರೀತಿಯಲ್ಲಿ ವೈದೇಹಿಯವರ ಕಥೆಗಳಲ್ಲಿ ವ್ಯಕ್ತಗೊಂಡಿದೆ.

ವೈದೇಹಿಯವರ ಕೌಟುಂಬಿಕ ನೆಲೆಯಲ್ಲಿನ ಕಥೆಗಳಲ್ಲಿ ಹೆಣ್ಣು ಕೇಂದ್ರಬಿಂದು. ಆಕೆ ಇಡೀ ಕುಟುಂಬದ ಜವಾಬ್ದಾರಿ ಹೊತ್ತವಳು. ತಾಯಿಯಾಗಿ ತನ್ನ ಸಂಸಾರಕ್ಕಾಗಿ ದುಡಿದ ಹೆಣ್ಣು. ವೈದೇಹಿಯವರು ಹೆಣ್ಣು ಅನುಭವಿಸುವ ಯಾತನೆಗಳು, ವೈಯಕ್ತಿಕ ಸಮಸ್ಯೆಗಳು, ಅವಮಾನ, ದುಃಖ ಇವುಗಳನ್ನು ತಮ್ಮ ಕಥೆಗಳ ಸ್ತ್ರೀಪಾತ್ರಗಳಲ್ಲಿ ಚಿತ್ರಿಸಿದ್ದಾರೆ. ಹೆಣ್ಣಿನ ಅಂತರಂಗದ ಪುಟಗಳನ್ನು ತಿರುವಿ ಹಾಕುವ ಪ್ರಯತ್ನ ಇವರ ಕಥೆಗಳಲ್ಲಿ ಗಮನಿಸುತ್ತೇವೆ. ತಲ್ಲಣಗಳು ಮನಸ್ಸಿನ ತಾಕಲಾಟ, ಘರ್ಷಣೆ, ಡೋಲಾಯಮಾನ ಸ್ಥಿತಿ ಇವು ಸ್ತ್ರೀಪಾತ್ರಗಳಲ್ಲಿ ಮುಖ್ಯವಾಗಿ ಕಂಡುಬರುತ್ತವೆ. ಸ್ತ್ರೀಪಾತ್ರಗಳ ಮನಸ್ಸನ್ನು ಹೊಕ್ಕಿ ನೋಡಿ, ಅದರ ಮೂಲಕ ಹೆಣ್ಣು ಕೌಟುಂಬಿಕ ನೆಲೆಯಲ್ಲಿ ಅನುಭವಿಸುತ್ತಿರುವ ವಿವಿಧ ಮುಖಗಳನ್ನು ಮುಂದಿಡುತ್ತಾರೆ. ವೈದೇಹಿ ಯವರ ಕೆಲವು ಕಥೆಗಳಲ್ಲಿ ಹೆಣ್ಣು-ಗಂಡಿನ ಸಂಬಂಧದ ಮೂಲಕ ಸ್ತ್ರೀ ಕೇಂದ್ರಿತ ವಿಚಾರಗಳನ್ನು ಸ್ಪಷ್ಟ ಪಡಿಸುವುದನ್ನು ಗುರುತಿಸಬಹುದು.

ವೈದೇಹಿಯವರು ಕುಟುಂಬದ ನೆಲೆಯಲ್ಲಿ ಹೆಣ್ಣು ಅನುಭವಿಸುವ ವಿವಿಧ ರೀತಿಯ ಯಾತನಾಮಯದ ಸನ್ನಿವೇಶವನ್ನು ಚಿತ್ರಿಸಿದ್ದಾರೆ. ಯಾತನೆ, ಶೋಷಣೆ, ಘರ್ಷಣೆ ಈ ರೀತಿ ಅವರ ಪಾತ್ರಗಳಲ್ಲಿ ಕಂಡುಬರುವ ಯಾವುದೇ ಅಂಶವಿದ್ದರೂ, ಅದರ ಮೂಲಕ ವೈಚಾರಿಕ ಅಂಶವೊಂದನ್ನು ಪ್ರಕಟಿಸುತ್ತಿದ್ದಾರೆ ಎಂದೆನ್ನಿಸದೆ ಇರದು. ಕುಟುಂಬದಲ್ಲಿ ಹೆಣ್ಣು ಎದುರಿಸುವ ಸಮಸ್ಯೆಗಳು ಅವಳಲ್ಲಿ ಉಂಟಾಗುವ ಭಾವನೆಗಳು, ಎಲ್ಲ ಸಮಸ್ಯೆಗಳನ್ನು ಎದುರಿಸುವ ದಿಟ್ಟತನ ಈ ಎಲ್ಲ ಅಂಶಗಳನ್ನು ಆವರ ಕುಟುಂಬದ ನೆಲೆಯಲ್ಲಿ ಬರುವ ಕಥೆಗಳಲ್ಲಿ ಗುರುತಿಸಬಹುದು.

ವೈದೇಹಿಯವರ ಕುಟುಂಬದ ನೆಲೆಯಲ್ಲಿ ಕಂಡುಬರುವ ಕಥೆಗಳಲ್ಲಿ ಮುಖ್ಯವಾಗಿ ತಾಯಿ, ಪತ್ನಿ, ಅಜ್ಜಿ, ಸೊಸೆ, ಮಗಳು, ಈ ಪಾತ್ರಗಳ ನಿರೂಪಣೆ ಹಿನ್ನೆಲೆಯಲ್ಲಿ ವಿಚಾರ ಕೇಂದ್ರವಾಗಿರುವುದನ್ನು ನೋಡುತ್ತೇವೆ. ವೈದೇಹಿಯವರು ಕುಟುಂಬದಲ್ಲಿ ಹೆಣ್ಣಿಗಿರುವ ಸ್ಥಾನ, ಅವಳ ನೆಲೆ, ಸ್ತ್ರೀಯ ಬಗ್ಗೆ ಇರುವ ಪುರುಷ ಧೋರಣೆ, ಧನಾತ್ಮಕವಾಗಿಯೂ ಮತ್ತು ಋಣಾತ್ಮಕವಾಗಿಯೂ ವ್ಯಕ್ತಪಡಿಸಿದ್ದಾರೆ.

ವೈದೇಹಿಯವರ ಕುಟುಂಬ ನೆಲೆಯಲ್ಲಿನ ಕಥೆಗಳಲ್ಲಿ, ವಿವಿಧ ಸ್ತರದ ಸ್ತ್ರೀವರ್ಗ ಕಂಡುಬರುತ್ತದೆ. ಬದುಕನ್ನು ಸಹಜವಾಗಿ ಸ್ವೀಕರಿಸಿ, ದಿಟ್ಟತನದಿಂದ ಸಮಸ್ಯೆಗಳನ್ನು ನಿವಾರಿಸಿಕೊಳ್ಳುವ ಹೆಣ್ಣನ್ನು ಚಿತ್ರಿಸಿದ್ದಾರೆ. ಇದರ ಮೂಲಕ ಹೆಣ್ಣು ತನ್ನ ಸಾಮರ್ಥ್ಯವನ್ನು ಎತ್ತಿ ತೋರುತ್ತಾಳೆ. ವೈದೇಹಿಯವರು ತಮ್ಮ ಪರಿಸರದಲ್ಲಿ ಕಂಡು ಕೇಳಿದ ಕಥೆಗಳನ್ನೇ ತಮ್ಮ ಕಥೆಗಳಲ್ಲಿ ಅಭಿವ್ಯಕ್ತಿಸಿರುವುದರಿಂದ ಕಥೆಗಳಲ್ಲಿ ವಸ್ತುನಿಷ್ಠತೆ ಇದೆ ಮತ್ತು ಭ್ರಮಾತ್ಮಕತೆಗಾಗಲಿ, ಕಲ್ಪನೆಗಾಗಲಿ ಅವಕಾಶವೇ ಇಲ್ಲ.

*****

ಅಧ್ಯಾಯ - ೭

ಉಪಸಂಹಾರ

ಅಧ್ಯಾಯ - 7

ಉಪಸಂಹಾರ

ಕಥೆಗಳಲ್ಲಿ ಸಾಮಾನ್ಯವಾಗಿ ಬದುಕಿನ ಚಿತ್ರಣವನ್ನು ಕಾಣುತ್ತೇವೆ. ಬದುಕಿನ ಸಂಘರ್ಷ, ಸಾಮಾಜಿಕ ಸಮಸ್ಯೆಗಳು, ಕೌಟುಂಬಿಕ ಬದುಕು, ಹೆಣ್ಣು ಗಂಡುಗಳ ಸಂಬಂಧದ ತಾಕಲಾಟಗಳು, ಹೀಗೆ ಅನೇಕ ವಿಷಯಗಳನ್ನು ತೆಗೆದುಕೊಂಡು ಸಮರ್ಥವಾಗಿ ಕಥೆಯನ್ನು ಹೆಣೆದಿರುವುದನ್ನು ಗಮನಿಸಬಹುದು. ಮಹಿಳೆಯರು ಬರೆದ ಕಥೆಗಳೆಂದರೆ, ಸಾಮಾನ್ಯವಾಗಿ ಸ್ತ್ರೀಸಮಸ್ಯೆಗಳು, ಆಕೆಯ ಮಾನಸಿಕ ತಲ್ಲಣಗಳು, ಕುಟುಂಬ, ಬದುಕು ಹೀಗೆ ಈ ವಿಚಾರಗಳಿಗೆ ಸಂಬಂಧಿಸಿದಂತೆ ವಸ್ತುವಿನ ಆಯ್ಕೆ ಇರುತ್ತದೆ. ಪುರುಷ ಕೇಂದ್ರಿತ ವ್ಯವಸ್ಥೆಯಲ್ಲಿ ಸ್ತ್ರೀ ಬದುಕನ್ನು ಚಿತ್ರಿಸಿರುವುದನ್ನು ಮತ್ತೊಂದು ನೆಲೆಯಲ್ಲಿಯೂ ಗುರುತಿಸಬಹುದು.

ವೈದೇಹಿಯವರ ಸಾಮಾಜಿಕ ಹಾಗೂ ಕೌಟುಂಬಿಕ ನೆಲೆಯಲ್ಲಿ ನಿಲ್ಲುವ ಕೆಲವು ಕಥೆಗಳನ್ನು ಗಮನಿಸುವುದಾದರೆ, ವ್ಯಕ್ತಿನಿಷ್ಠ ನೆಲೆಯಲ್ಲಿ ನಿಲ್ಲುವ ಕಥೆಗಳೇ ಕಂಡುಬರುತ್ತದೆ. ವೈದೇಹಿಯವರ ಕಥಾಪ್ರಪಂಚದಲ್ಲಿ ಸಮಾಜದಲ್ಲಿನ ವಿವಿಧ ಸ್ತರದ ಹೆಂಗಸರು ಕಥಾನಾಯಕಿಯಾಗಿ ಅಥವಾ ಕಥೆಯ ಪ್ರಧಾನ ಪಾತ್ರಗಳಾಗಿ ಮೂಡಿಬಂದಿದ್ದಾರೆ.

ವೈದೇಹಿಯವರ ಕಥೆಗಳಲ್ಲಿ ಬರುವ ಸ್ತ್ರೀಪಾತ್ರಗಳಲ್ಲಿ, ಪರಂಪರೆಯನ್ನು ನಂಬಿಕೊಂಡು ಬಂದಿರುವ ಸ್ತ್ರೀಯರೂ ಇದ್ದಾರೆ. ಆಧುನಿಕತೆಯನ್ನು ಮೈಗೂಡಿಸಿಕೊಂಡಿರುವ ಹೆಂಗಸರೂ ಇದ್ದಾರೆ. ಈ ಎರಡು ವೈರುಧ್ಯಗಳ ಸಂಘರ್ಷವನ್ನು ಇವರ ಕಥೆಗಳು ಹಿಡಿದಿಟ್ಟಿದೆ. ಜೀವನದಲ್ಲಿನ ನಂಬಿಕೆ, ಶ್ರದ್ಧೆ, ಆಸಕ್ತಿ ವೈದೇಹಿ ಯವರ ಕಥೆಗಳ ಪ್ರಮುಖ ಪಾತ್ರಗಳಲ್ಲಿ ನೋಡಬಹುದು. ಇದರೊಂದಿಗೆ ಸಾಮಾಜಿಕ ಬದುಕಿನ ಸ್ಥಿತ್ಯಂತರವನ್ನು ತಿಳಿಸುತ್ತಾ ಹೋಗುತ್ತಾರೆ. ಬದುಕಿನ ಚಲನಶೀಲತೆಯನ್ನು ತಮ್ಮ ಕಥೆಗಳಲ್ಲಿ ಬರುವ ಪಾತ್ರಗಳ ಮನೋಭಾವದಲ್ಲಿ ಚಿತ್ರಿಸಿದ್ದಾರೆ.

ಗಂಡು - ಹೆಣ್ಣಿನ ಸಂಬಂಧವನ್ನಾಗಿ, ಬದುಕಿನ ಇತರ ಸಂಬಂಧಗಳಾಗಲೀ, ಘಟನೆಗಳನ್ನಾಗಲೀ ವ್ಯಕ್ತಿ ಕೇಂದ್ರಿತ ನೆಲೆಯಲ್ಲಿ ನೋಡುತ್ತಾರೆ ವೈದೇಹಿಯವರು. ಗಂಡು - ಹೆಣ್ಣುಗಳನ್ನು ಮುಖಾಮುಖಿ ಯಾಗಿಸುವುದಕ್ಕಿಂತ, ವಿವಿಧ ವರ್ಗ, ಸ್ತರಗಳ ಹೆಂಗಸರ ಅಂತರಂಗದ ಬದುಕುನ್ನು ಸಾಮಾಜಿಕ ಹಾಗೂ ಕೌಟುಂಬಿಕ ನೆಲೆಯಲ್ಲಿ ಸ್ತ್ರೀ ಶೋಷಣೆಯತ್ತ ಗಮನ ಹರಿಸುತ್ತಾರೆ. ಈ ದೃಷ್ಟಿಯಿಂದ ಅವರ "ಅಕ್ಕು", "ಶೋಧ", "ಒಂದು ಅಪರಾಧ ತನಿಖೆ" ಮೊದಲಾದವು ಮಹತ್ವದ ಕಥೆಗಳಾಗಿದೆ.

1970 ರ ನಂತರದ ಬರೆಯತೊಡಗಿದ ಲೇಖಕಿಯರು ಒಂದಿಲ್ಲೊಂದು ರೀತಿಯಿಂದ ಜಾಗತಿಕ ಸ್ವರೂಪದ ಸ್ತ್ರೀಮುಕ್ತಿ ಚಳುವಳಿಗಳಿಂದ ಪ್ರಭಾವಿತರಾದವರು, ಇವರು ಬರೆಯುತ್ತಿರುವ ವೇಳೆಗೆ ಸಮಾಜದಲ್ಲಿಯೂ ಸಾಕಷ್ಟು ಸ್ಥಿತ್ಯಂತರಗಳಾಗಿದ್ದವು, ಗಂಡು - ಹೆಣ್ಣಿನ ಸಂಬಂಧಗಳಲ್ಲಿಯೂ ಬಿಕ್ಕಟ್ಟು ತಲೆದೋರಿವೆ. ಪುರುಷಕೇಂದ್ರಿತ ವ್ಯವಸ್ಥೆಯ ಅಂಗಗಳಾದ ಅವಿಭಕ್ತ ಕುಟುಂಬ ಹಾಗೂ ವಿವಾಹಗಳಂಥ ಸಂಸ್ಥೆಗಳು ತಮ್ಮ ಶಕ್ತಿಯನ್ನು ಕಳೆದುಕೊಳ್ಳುತ್ತಿವೆ. ಆದರೆ, ಸಾಮಾಜಿಕ ಧೋರಣೆಗಳಲ್ಲಿ ಬದಲಾವಣೆಯಾಗಿದ್ದರೂ

ಮನೋಧರ್ಮಗಳಲ್ಲಿ ಸಾಂಪ್ರದಾಯಕ ಜಾಡ್ಯ ಇನ್ನೂ ಉಳಿದು ಕೊಂಡು ಬಂದಿರುವುದರಿಂದ ಘರ್ಷಣೆಗಳು ನಡೆಯುತ್ತಲೇ ಇವೆ.

ಈ ಮೇಲೆ ಹೇಳಿದಂತೆ ವಿಚಾರಗಳು ವೈದೇಹಿಯವರ ಕಥೆಗಳಿಗೂ ಅನ್ವಯಿಸುತ್ತದೆ. ಈ ಕಾಲದಲ್ಲೇ ಕಥೆಗಳ ರಚನೆ ಮಾಡುತ್ತಿದ್ದ ವೈದೇಹಿಯವರ ಮೇಲೂ ವಿಚಾರಗಳು ಪ್ರಭಾವ ಬೀರಿವೆ. ಕುಟುಂಬದ ಛಿದ್ರೀಕರಣ, ವಿವಾಹ ಸಂಸ್ಥೆಗಳು ಮುರಿದು ಬೀಳುತ್ತಿರುವ ಬಗ್ಗೆ ಹೀಗೆ ಅನೇಕ ವಿಷಯಗಳನ್ನೊಳಗೊಂಡಂತೆ ವೈದೇಹಿಯವರ ಕಥೆಗಳಲ್ಲೂ ಗಮನಿಸಬಹುದು ಉದಾಹರಣೆಗೆ, ವೈದೇಹಿಯವರ "ಮರಗಿಡ ಬಳ್ಳಿ" ಕಥಾಸಂಕಲನದ, "ಮರಗಿಡ ಬಳ್ಳಿ" ಕಥೆ ಅವಿಭಕ್ತ ಕುಟುಂಬದ ಅವನತಿಯನ್ನು ಕುರಿತು ಹೇಳುತ್ತದೆ. ಆಧುನಿಕತೆಯ ಪ್ರಭಾವ, ನಮ್ಮ ಸಮಾಜದ ಮೇಲೆ ಉಂಟು ಮಾಡಿದ ಪರಿಣಾಮವನ್ನು ತಾಯಿ - ಮಕ್ಕಳ ಸಂಬಂಧವೇ ಕಡಿದು ಹೋಗುತ್ತಿರು ಹಿನ್ನಲೆಯಲ್ಲಿ ಸ್ಪಷ್ಟಪಡಿಸುತ್ತಾರೆ. ಅದೇರೀತಿ, "ಅಂತರಂಗದ ಪುಟಗಳು" ಕಥಾಸಂಕಲನದ "ಒಂದು ಅಪರಾಧ ತನಿಖೆ" ಕಥೆ ಪತಿ - ಪತ್ನಿಯರ ಸಂಬಂಧ ಮುರಿದು ಬೀಳುತ್ತಿರುವ ಸಂದರ್ಭವನ್ನು ಚಿತ್ರಿಸುತ್ತದೆ. ಅಂದರೆ, ವೈದೇಹಿಯವರು ಆಧುನಿಕತೆಯ ಗಾಳಿ ನಮ್ಮ ಭಾರತೀಯ ಸಮಾಜದ ಮೇಲೆ ಬೀಸಿದಾಗ ಉಂಟಾಗುವ ಗಾಢ ಪರಿಣಾಮವನ್ನು ನಿರೂಪಿಸುತ್ತಾ, ಸ್ತ್ರೀಲೋಕವನ್ನು ತೆರೆದಿಡುತ್ತಾರೆ.

ವೈದೇಹಿಯವರು ಮತ್ತೊಂದು ಕಡೆ, ಪಾರಂಪರಿಕ ಮೌಲ್ಯಗಳನ್ನು ಬಿಗಿ ಹಿಡಿದಿಟ್ಟಿರುವ ಪಾತ್ರಗಳ ಚಿತ್ರಣದೊಂದಿಗೆ ನಮ್ಮ ಸಂಸ್ಕೃತಿಯನ್ನು ಹಿಡಿದಿಡುವ ಪ್ರಯತ್ನವನ್ನೂ ಮಾಡಿದ್ದಾರೆ. ಉದಾಹರಣೆಗೆ, "ಸಮಾಜ ಶಾಸ್ತ್ರಜ್ಞೆಯ ಟಿಪ್ಪಣಿಗೆ" ಕಥಾ ಸಂಕಲನದ "ಒಂದು ಕಳ್ಳ ವೃತ್ತಾಂತ" ದ ಬಚ್ಚಮ್ಮ, "ಅಂತರಂಗದ ಪುಟಗಳು" ಕಥಾಸಂಕಲನದ "ಒಂದು ಅಪರಾಧ ತನಿಖೆ" ಯ ಬಾಬಿ ಪಾತ್ರ ಇವುಗಳ ಮೂಲಕ ನಮ್ಮ ಸಂಸ್ಕೃತಿಯ ಸತ್ವವನ್ನು ಮನಗಾಣಿಸುತ್ತಾರೆ.

ವೈದೇಹಿಯವರ ಕಥೆ ಗ್ರಾಮ್ಯ ಪರಿಸರದ ಸ್ತ್ರೀ ಬದುಕಿನ ಜಗತ್ತನ್ನು ತೆರೆದಿಡುತ್ತವೆ. ಜೀವನದಲ್ಲಿನ ನಂಬಿಕೆ, ಶ್ರದ್ಧೆ, ಆ ಹೆಂಗಸರಿಗೆ ಧೈರ್ಯದಿಂದ ಜೀವನವನ್ನು ಎದುರಿಸುವ ತಾಕತ್ತನ್ನು ನೀಡಿವೆ ಎಂಬುದನ್ನು ಗ್ರಾಮ್ಯ ಬದುಕಿನ ಚಿತ್ರಣವನ್ನು ನೀಡುತ್ತಾ ಮನಗಾಣಿಸುತ್ತಾರೆ. ಹಾಳಾಗುತ್ತಿರುವ ಸಂಸಾರವನ್ನು ಸರಿಪಡಿಸಿಕೊಳ್ಳುವ, ಬಡತನವನ್ನು ನೀಗಿಸಿಕೊಳ್ಳುವ, ಸಾಮಾಜಿಕವಾಗಿ ಮುಂದುವರೆಯುವ ಆಲೋಚನೆಗಳನ್ನು, ವಿಚಾರಗಳನ್ನು ತಮ್ಮ ಕಥೆಗಳ ಮೂಲಕ ಸ್ಪಷ್ಟಪಡಿಸುತ್ತಾರೆ.

ಲೇಖಕಿಯರು ಬರೆದ ಕಥೆಗಳು ಎಂದರೆ, ಸ್ತ್ರೀವಾದವನ್ನು ಹುಡುಕುತ್ತಾರೆ. ವೈದೇಹಿಯವರು ಕಥೆಗಳಲ್ಲಿ ಸ್ತ್ರೀವಾದವನ್ನು ಮಂಡಿಸುತ್ತಾರೆಯೇ ಎಂಬ ವಿಷಯವಾಗಿ ನೋಡುವುದಾದರೆ, ವೈದೇಹಿಯವರು ಪ್ರಜ್ಞಾಪೂರ್ವಕವಾಗಿ ಕಥೆಗಳಲ್ಲಿ ಸ್ತ್ರೀವಾದವನ್ನು ತರದೆ ಹೋದರೂ, ಕೆಲವು ಕಥೆಗಳಲ್ಲಿ ಅದರ ಛಾಯೆಯಿರುವುದನ್ನು ಗುರುತಿಸಬಹುದು. "ಅಮ್ಮಚ್ಚಿಯೆಂಬ ನೆನಪು" ಕಥಾಸಂಕಲನದ ಅಮ್ಮಚ್ಚಿ, "ಅಂತರಂಗದ ಪುಟಗಳು" ಕಥೆಯಲ್ಲಿನ ಅಚಲಾ, "ಒಂದು ಅಪರಾಧ ತನಿಖೆ" ಯ ಕುಸುಮಾ ಇವರೆಲ್ಲರೂ ಪುರುಷ ಕೇಂದ್ರಿತ ವ್ಯವಸ್ಥೆಯನ್ನು ವಿರೋಧಿಸುವ, ಶೋಷಣೆಯ ವಿರುದ್ಧದ ಬಂಡಾಯದ

ಮನೋಭಾವವನ್ನು ಹೊಂದಿರುವ ಪಾತ್ರಗಳು. ವೈದೇಹಿಯವರು ಈ ಪಾತ್ರಗಳ ಮೂಲಕ ಸ್ತ್ರೀ ಧೋರಣೆಯನ್ನು ವ್ಯಕ್ತಪಡಿಸುವ ಅಂಶವನ್ನು ಗಮನಿಸಬಹುದು.

ಸಮಾಜದ ಎಲ್ಲ ಸ್ತರಗಳಿಂದಲೂ ಲೇಖಕಿಯರು ಎದ್ದು ಬರುವುದರಿಂದ ಸಂಸ್ಕೃತಿಯ ಬೇರೆ ಬೇರೆ ಮುಖಗಳು ಭಾಷೆಯಲ್ಲಿ ಒಡಮೂಡುತ್ತವೆ. ವೈದೇಹಿಯವರ ಕಥೆಗಳಲ್ಲಿ ಪ್ರಾದೇಶಿಕತೆ ಇದೆ. ಅದರಲ್ಲೂ ವಿಶೇಷವಾಗಿ ಅವರು ಕಥೆಗಳ ಅಭಿವ್ಯಕ್ತಿಗೆ ಬಳಸಿರುವ ಕುಂದಾಪುರದ ಕನ್ನಡದ ಉಪಭಾಷೆ. ಎಲ್ಲ ಕಥೆಗಳಲ್ಲಿ ಈ ಉಪಭಾಷೆಯ ಬಳಕೆ ಆಗದಿದ್ದರೂ, ಗ್ರಾಮ್ಯ ಪರಿಸರದಲ್ಲಿ ಬರುವ ಕಥೆಗಳಲ್ಲಿ ಈ ಉಪಭಾಷೆಯನ್ನು ಬಳಸಿದ್ದಾರೆ. ಆಯಾ ವರ್ಗದವರು ಮಾತನಾಡುವಾಗ ಅದರಂತೆ ಉಪಭಾಷೆಯಲ್ಲಿಯೂ ವ್ಯತ್ಯಾಸವನ್ನು ಗಮನಿಸಬಹುದು. ಈ ರೀತಿ ತಮ್ಮ ಕಥೆಗಳ ಅಭಿವ್ಯಕ್ತಿಗೆ ಉಪಭಾಷೆಯನ್ನು ಪ್ರಯೋಗಿಸಿರುವುದರಿಂದ ಅವರ ಕಥೆಗಳು ವಿಶಿಷ್ಟತೆಯನ್ನು ಪಡೆದುಕೊಂಡಿವೆ.

ವೈದೇಹಿಯವರು ಕಥೆಗಳಿಗೆ ಬಳಸುವ ವಸ್ತು ಮಾನವೀಯ ಸಂಬಂಧ, ಸ್ವಭಾವ, ಮನಸ್ಸಿನ ತಾಕಲಾಟ, ತಲ್ಲಣಗಳೇ ಆಗಿದ್ದರೂ, ಗತಿಶೀಲವಾದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಪರಿಸರದಲ್ಲಿಯೇ ಶೋಧಿಸುತ್ತಾರೆ. ಹಾಗಾಗಿ ಜಿ. ಎಸ್. ಆಮೂರರು ವೈದೇಹಿಯವರ ಕಥೆಗಳ ನಿಲುವನ್ನು "ದೇಶೀ" ನಿಲುವು ಎಂದು ಅಭಿಪ್ರಾಯ ಪಡುತ್ತಾರೆ. ಸಾಮಾಜಿಕ, ಸಾಂಸ್ಕೃತಿಕ ಸಂಗತಿಗಳನ್ನು ವಿಶ್ಲೇಷಿಸುತ್ತಾ ವಿಚಾರವನ್ನು ಮಂಡಿಸುತ್ತಾರೆ.

ಮುಖ್ಯವಾಗಿ ಇವರ ಕಥೆಗಳಲ್ಲಿ ಹೆಣ್ಣು ಕೇಂದ್ರವಸ್ತು. ಕೌಟುಂಬಿಕ ನೆಲೆ ಹಾಗೂ ಸಾಮಾಜಿಕ ನೆಲೆಗಳಲ್ಲಿ ಸ್ತ್ರೀಸಂವೇದನೆ ವ್ಯಕ್ತಗೊಳ್ಳುತ್ತದೆ. ಸಂಸಾರಕ್ಕೆ ಬದ್ಧಳಾದ ಹೆಣ್ಣು, ಪ್ರೀತಿಯಿಂದ ವಂಚಿತಳಾದ ಹೆಣ್ಣು, ತಾಯ್ತನದ ಹಂಬಲದ ಹೆಣ್ಣು ಹೀಗೆ ಸಮಾಜದಲ್ಲಿ ಕಾಣುವ ವೈವಿಧ್ಯಮಯ ಪಾತ್ರಗಳನ್ನು ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ. ಸ್ತ್ರೀ ಸಂವೇದನೆಗೆ ಒತ್ತು ಕೊಡುವರಾದರೂ ಪ್ರಾಸಂಗಿಕವಾಗಿ ಸ್ತ್ರೀಶೋಷಣೆಯನ್ನು ಪ್ರತಿಭಟಿಸುವ ಅಂಶವೂ ವ್ಯಕ್ತವಾಗುವುದನ್ನು ಗಮನಿಸಬಹುದು.

ವೈದೇಹಿಯವರ ನಿರೂಪಣಾಶೈಲಿ, ಬಳಸುವ ತಂತ್ರ ಆಕರ್ಷಣೀಯ. ನಿರೂಪಕಿ ಮಧ್ಯ ಪ್ರವೇಶಿಸುವುದಿಲ್ಲ. ಸರಾಗವಾಗಿ ಕಥೆ ಓದಿಸಿಕೊಂಡು ಹೋಗುತ್ತದೆ. ಮೂರನೆಯ ವ್ಯಕ್ತಿಯಾಗಿ ಕಥೆ ಹೇಳುತ್ತಾ ಹೋಗುತ್ತಾರೆ. ನವ್ಯತೆಯ ಪ್ರಭಾವ ಇವರ ಕಥೆಗಳಲ್ಲಿಯೂ ಗುರುತಿಸಬಹುದು. ಸಂಕೇತ ಮತ್ತು ಧ್ವನಿ ಈ ಮಾದರಿಯಲ್ಲಿ ಕಥೆಗಳು ರಚಿತವಾಗಿವೆ. "ಸೌಗಂಧಿಯ ಸ್ವಗತಗಳು", "ಶೋಧ", "ಗೂಡಿನೊಳಗೆ ಒಂದು ಹಕ್ಕಿ" ಈ ಮಾದರಿಗೆ ನಿದರ್ಶನಗಳು. ಸಾಂಕೇತಿಕತೆ, ಕಲಾತ್ಮಕತೆಗಳಿಂದ ಕಥೆಗಳು ರಚಿತವಾಗಿ ಜೀವನವನ್ನು ಕಲೆಯಾಗಿಸುವ ಬಗೆಯನ್ನು ಲೇಖಕಿ ವ್ಯಕ್ತಗೊಳಿಸಿದ್ದಾರೆ ಎಂದೆನಿಸುತ್ತದೆ. "ವಸ್ತು ಮತ್ತು ಕಲೆಗಾರಿಕೆ ಎರಡೂ ದೃಷ್ಟಿಯಿಂದ ವೈದೇಹಿಯವರ ಸಾಧನೆ ಅಪೂರ್ವ" **(ಸಂ. ಡಾ|| ಎಚ್. ಎಸ್. ಶ್ರೀಮತಿ, ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ - ಪು 408)** ಎಂದು ಹೇಳಬಹುದು.

ವೈದೇಹಿಯವರ ಕೆಲವು ಕಥೆಗಳು ದೀರ್ಘತೆಯನ್ನು ಪಡೆದುಕೊಂಡಿದ್ದು, ಹೇಳುವ ವಿಚಾರಗಳು ಸ್ಪಷ್ಟಗೊಳ್ಳದೆ ಗೊಂದಲ ಉಂಟಾಗುತ್ತದೆ. ಕಥೆಯೊಳಗೆ ಅನೇಕ ಘಟನೆಗಳು, ಸಂದರ್ಭಗಳೂ ಬೆರೆತುಹೋಗಿ,

ಅನುಸರಣಿಕೆಗೆ ಕಷ್ಟವೆನಿಸುತ್ತದೆ. ವೈದೇಹಿಯವರ ಕಥೆಗಳಲ್ಲಿ ಇದು ನ್ಯೂನತೆ ಎಂದು ಗುರುತಿಸುವುದಾದರೂ, ಅದು ಆದರ ಕಥೆಗಳ ಅಭಿವ್ಯಕ್ತಿಯ ಶೈಲಿಯ ಮುಂದೆ ಗೌಣ ಎನಿಸುತ್ತದೆ.

ಒಟ್ಟಾರೆ ವೈದೇಹಿಯವರ ಕಥೆಗಳು ಹೆಣ್ಣು ಜಗತ್ತಿನ ವಿವಿಧ ಮುಖಗಳನ್ನು ತೆರೆದು ತೋರಿಸುತ್ತವೆ. ಸಾಮಾಜಿಕ ಹಾಗೂ ಕೌಟುಂಬಿಕ ನೆಲೆಯಲ್ಲಿ ಸ್ತ್ರೀಸಂವೇದನೆ ವ್ಯಕ್ತಗೊಂಡಿರುವ ರೀತಿ, ವೈದೇಹಿಯವರು ಬಳಸಿರುವ ಉಪಭಾಷೆ, ಅಭಿವ್ಯಕ್ತಿಯ ಶೈಲಿ, ಕಥನಕ್ರಮದ ತಂತ್ರ ಕಾವ್ಯಾತ್ಮಕವಾದ ಬರವಣಿಗೆ, ಸಂಕೇತ, ಧ್ವನಿ ಎಲ್ಲದರಿಂದ ಮಿಳಿತಗೊಂಡಿರುವ ಇವರ ಕಥೆಗಳು ವಿಶಿಷ್ಟವಾಗಿದೆ. ಬದುಕಿನ ಸಂಘರ್ಷವನ್ನು ಸ್ತ್ರೀ ಜಗತ್ತಿನ ಹಿನ್ನೆಲೆಯಲ್ಲಿ ಚಿತ್ರಿಸುತ್ತಾ ವಿಚಾರಗಳನ್ನು ಓದುಗರ ಮುಂದಿಡುವುದು ಗಮನಾರ್ಹವಾದುದು.

*****

ಅಧ್ಯಾಯ - ೮

ಅನುಬಂಧಗಳು

ಅನುಬಂಧ - 1

ಆಕರ ಸಣ್ಣಕಥೆಗಳು

1)	ಮರಗಿಡ ಬಳ್ಳಿ (1979)	-	ಕಥಾ ಸಂಕಲನ - ಅಕ್ಷರ ಪ್ರಕಾಶನ, ಹೆಗ್ಗೋಡು
2)	ಅಂತರಂಗದ ಪುಟಗಳು (1984)	-	ಕಥಾ ಸಂಕಲನ - ಅಕ್ಷರ ಪ್ರಕಾಶನ, ಹೆಗ್ಗೋಡು
3)	ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ (1991)	-	ಕಥಾ ಸಂಕಲನ - ಅಕ್ಷರ ಪ್ರಕಾಶನ, ಹೆಗ್ಗೋಡು
4)	ಅಮ್ಮಚ್ಚಿಯೆಂಬ ನೆನಪು (2000)	-	ಕಥಾ ಸಂಕಲನ - ಅಕ್ಷರ ಪ್ರಕಾಶನ, ಹೆಗ್ಗೋಡು

ಅನುಬಂಧ - 2

ಆಕರಗ್ರಂಥ ಸೂಚಿ

01) ಜಿ. ಎಸ್. ಆಮೂರ (2003) - ಕನ್ನಡ ಕಥನ ಸಾಹಿತ್ಯ : ಸಣ್ಣಕತೆ - ಸ್ನೇಹಾ ಪ್ರಿಂಟರ್ಸ್ - ಬೆಂಗಳೂರು

02) ಉಷಾ ಪಿ. ರೈ (ಪ್ರ. ಸಂ) (2004) - ಲೇಖಕಿ - ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು

03) ಡಾ|| ಕರೀಗೌಡ ಬೀಚನಹಳ್ಳಿ (2003) - ಶತಮಾನದ ಸಣ್ಣಕಥೆಗಳ ಸಮೀಕ್ಷೆ - ಕರ್ನಾಟಕ ಸಾಹಿತ್ಯ ಅಕಾಡೆಮಿ - ಬೆಂಗಳೂರು

04) ಕೀರ್ತಿನಾಥ ಕುರ್ತುಕೋಟಿ (1962) - ಯುಗಧರ್ಮ ಮತ್ತು ಸಾಹಿತ್ಯದರ್ಶನ - ಮನೋಹರ ಗ್ರಂಥಮಾಲಾ - ಧಾರವಾಡ

05) ಡಾ|| ಕೆ. ಕೇಶವಶರ್ಮಾ (ಸಂ) (1997) - ಸಾಹಿತ್ಯ ವಿಮರ್ಶೆ 1993 - ಕರ್ನಾಟಕ ಸಾಹಿತ್ಯ ಅಕಾಡೆಮಿ

06) ಡಾ|| ಗಾಯಿತ್ರೀ ನಾವಡ (2003) - ಮಹಿಳಾ ಸಂಕಥನ - ಕನ್ನಡ ಪುಸ್ತಕ ಪ್ರಾಧಿಕಾರ - ಬೆಂಗಳೂರು

07) ಡಾ|| ಗಿರಡ್ಡಿ ಗೋವಿಂದರಾಜ (1965) - ಸಣ್ಣಕಥೆಯ ಹೊಸ ಒಲವುಗಳು - ರವೀಂದ್ರ ಘಾಣೇಕರ, ಪ್ರತಿಭಾ ಮುದ್ರಣ, ಧಾರವಾಡ

08) ಡಾ|| ಗಿರಿಜಾಶಾಸ್ತ್ರಿ (2000) - ಕಥಾ ಮಾನಸಿ - ಸಾಹಿತ್ಯ ಪ್ರಕಾಶನ - ಮುಂಬಯಿ

09) ಡಾ|| ಚಿದಾನಂದ ಮೂರ್ತಿ (1965) - ಭಾಷಾ ವಿಜ್ಞಾನದ ಮೂಲತತ್ವಗಳು - ಡಿ. ವಿ. ಕೆ. ಮೂರ್ತಿ - ಮೈಸೂರು

10) ನಾಗಮಣಿ ಎಸ್. ರಾವ್ (1999) - ಲೇಖ - ಲೋಕ - 3 (ಮಹಿಳಾ ಸಾಹಿತ್ಯ ಒಂದು ಆತ್ಮ ಕಥಾನಕ) ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು

11) ಡಾ|| ಜಿ. ಪ್ರಶಾಂತನಾಯಕ್ (ಸಂ) (2006) - ಸಾಹಿತ್ಯ ವಿಮರ್ಶೆ - ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

12) ಡಾ|| ಬಸವರಾಜ ಕಲ್ಗುಡಿ - ಕನ್ನಡ ವಾರ್ಷಿಕ 1991 - ಕನ್ನಡ ವಿಶ್ವವಿದ್ಯಾಲಯ, ಹಂಪಿ

13) ಬರಗೂರು ರಾಮಚಂದ್ರಪ್ಪ (ಪ್ರ. ಸಂ) (2006) - ವಿವಿಧ ಲೇಖಕರು - ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ - ಕರ್ನಾಟಕ ಸಾಹಿತ್ಯ ಅಕಾಡೆಮಿ - ಬೆಂಗಳೂರು

14) ಬರಗೂರು ರಾಮಚಂದ್ರಪ್ಪ (ಸಂ) (2006) - ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದೀ ಚಿಂತನೆ ಕರ್ನಾಟಕ ಸಾಹಿತ್ಯ ಅಕಾಡೆಮಿ - ಬೆಂಗಳೂರು

15) ಡಾ|| ಸಾ. ಶಿ. ಮರುಳಯ್ಯ
ಡಾ|| ರಾಜೇಶ್ವರಿ ಮಹೇಶ್ವರಯ್ಯ (2005) - ಕನ್ನಡ ಭಾಷಾ ಪ್ರವೇಶ - ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
ಡಾ|| ಸಬಿಹಾ ಭೂಮಿಗೌಡ

16) ಮಾಸ್ತಿ ಕಥಾ ಸಮೀಕ್ಷೆ (1993) - ಮೂರು ದತ್ತಿ ಉಪನ್ಯಾಸಗಳು - ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ - ಬೆಂಗಳೂರು

17) ಡಾ|| ರಹಮತ್ ತರೀಕೆರೆ (ಸಂ) (1993) - ಸಾಹಿತ್ಯ ವಿಮರ್ಶೆ 1992 - ಕರ್ನಾಟಕ ಸಾಹಿತ್ಯ ಅಕಾಡೆಮಿ - ಬೆಂಗಳೂರು

18) ಬಿ. ಎಸ್. ವೆಂಕಟಲಕ್ಷ್ಮಿ (1991) - ಕನ್ನಡ ಲೇಖಕಿಯರ ನೆಲೆ ಬೆಲೆ - ಎನ್. ಟಿ. ಶ್ಯಾಂ ಪ್ರಕಾಶನ - ಬೆಂಗಳೂರು

19) ಡಾ|| ಎಚ್. ಎಸ್. ಶ್ರೀಮತಿ (ಸಂ) (2006) - ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಹಂಪಿ ವಿಶ್ವವಿದ್ಯಾಲಯ, ಹಂಪಿ

20) ಶ್ರೀನಿವಾಸ (1972) - ಸಂಭಾವನಾ ಗ್ರಂಥ, ಮಣಿಪಾಲ

21) ಎಲ್. ಎಸ್. ಶೇಷಗಿರಿರಾವ್ (1993) - ಹೊಸಗನ್ನಡ ಸಾಹಿತ್ಯ ಚರಿತ್ರೆ - ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

22) ಡಾ|| ಸಬಿಹಾ ಭೂಮೀಗೌಡ (2006) - ಮಹಿಳಾ ಸಾಹಿತ್ಯ (ಮೂಡುಬಿದರೆಯಲ್ಲಿ ನಡೆದ ಕಮ್ಮಟದಲ್ಲಿ ಮಂಡಿಸಿದ ಪ್ರಬಂಧಗಳು) - ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

23) ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ (1973) - ರಾಜ್ಯ ಸಾಹಿತ್ಯ ಅಕಾಡೆಮಿ, ಬೆಂಗಳೂರು

24) ಡಾ॥ ಸಬಿಹಾ ಭೂಮೀಗೌಡ (ಸಂ),
ಡಾ॥ ಮಲ್ಲಿಕಾ ಘಂಟಿ (ಸಂ) (2006) - ಕನ್ನಡ ಸಾಹಿತ್ಯ ಮತ್ತು ಮಹಿಳೆ - ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

24) ಡಾ॥ ಬಿ. ಎನ್. ಸುಮಿತ್ರಾಬಾಯಿ (2006) - ಸ್ತ್ರೀವಾದ - ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

25) ಡಾ॥ ಜಿ. ಎಂ. ಹೆಗಡೆ (1999) - 1998 ಸಾಹಿತ್ಯ ವಿಮರ್ಶೆ - ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಅನುಬಂಧ - 3

ವೈದೇಹಿಯವರೊಂದಿಗಿನ ಪ್ರಶ್ನಾವಳಿ

ವೈದೇಹಿಯವರಿಗೆ ಕೆಲವು ಪ್ರಶ್ನೆಗಳನ್ನು ಕೇಳಿ ಪತ್ರ ಬರೆದಾಗ, ಅವರೇ ನೀಡಿದ್ದ ಉತ್ತರಗಳನ್ನು ಇಲ್ಲಿ ಕೊಡಲಾಗಿದೆ.

ಪ್ರಶ್ನೆ - ಉತ್ತರ

1) **ಕಥೆಗಳ ಬರವಣಿಗೆಗೆ ಬೇರೆ ಯಾವುದಾದರೂ ಪ್ರಭಾವ ನಿಮಗಾಗಿದೆಯೇ ?**

ಉತ್ತರ :- ಖಂಡಿತ. ನಮ್ಮ ಮನೆಯ ವಾತಾವರಣ, ನನ್ನೂರು, ಅಲ್ಲಿನ ಜನ - ಜೀವನ, ಸಾಹಿತ್ಯ ಪ್ರೀತಿಯ ಮನೆಮಂದಿ, ಎಲ್ಲವೂ.

2) **'ಕಂಡಿದ್ದು, ಕೇಳಿದ್ದು' ನಿಮ್ಮ ಕಥೆಗಳಿಗೆ ವಸ್ತು ಎಂದು ಹೇಳಿಕೊಂಡಿದ್ದೀರಿ. ಎಲ್ಲ ಕಥೆಗಳಿಗೂ ಇದು ಅನ್ವಯಿಸುತ್ತದೆಯೇ ?**

ಉತ್ತರ :- ಹೌದು. ಕಂಡಿದ್ದು, ಕೇಳಿದ್ದು, ಅನುಭವಿಸಿದ್ದು ಮತ್ತು ಕಲ್ಪನೆಯ ನೇಯ್ಗೆ ಎಲ್ಲ.

3) **'ಮರಗಿಡ ಬಳ್ಳಿ' ಕಥೆಯಲ್ಲಿನ ತಾಯಿಯ ತಳಮಳ, ವೇದನೆ, ನೋವು ಹೆಚ್ಚು ವಾಸ್ತವವಾಗಿದೆ. ಇದೊಂದೇ ಕಥೆಯಲ್ಲ. ಅನೇಕ ಕಥೆಗಳಲ್ಲಿ ಈ ರೀತಿ ಸಹಜವಾಗಿ ಮೂಡಿಬಂದಿದೆ. ಇದು ಹೇಗೆ ಸಾಧ್ಯವಾಯಿತು ?**

ಉತ್ತರ :- ಕಂಡು, ಕೇಳಿದ, ಅನುಭವಿಸಿದ ಸಂಗತಿಗಳೆಲ್ಲ ಸೇರಿ ಕಥೆಯಾಗಿ ನೇಯ್ದುಕೊಂಡ ಪರಿ ಅದು.

4) **"ಗೂಡಿನೊಳಗೆ ಒಂದು ಹಕ್ಕಿ" ಕಥೆಯಲ್ಲಿ ಹೆಣ್ಣೊಬ್ಬಳು ತಾನು ಸ್ವತಂತ್ರವಾಗಿ ಜೀವಿಸಬೇಕು ಎಂದು ಆಕಾಂಕ್ಷೆಯನ್ನು ಹೊಂದಿದವಳು. ನಿಮ್ಮ ಅಭಿವ್ಯಕ್ತಿಗೆ ಸಂಕೇತಗಳನ್ನು ಬಳಸಿದ್ದೀರಿ. ವಾಸ್ತವವಾಗಿ ಈ ರೀತಿ ಆಲೋಚಿಸಲು ಸಾಧ್ಯವೇ ?**

ಉತ್ತರ :- ಯಾಕಿಲ್ಲ ? ಖಂಡಿತಾ ಸಾಧ್ಯವಿದೆ. ಒಂದು ವೇಳೆ ಸಾಧ್ಯವಿಲ್ಲವೆನ್ನಿ - ಕಥಾನಕದಲ್ಲಿ 'ವಾಸ್ತವದ ಸಾಧ್ಯತೆ' ಗೂ ಆಚೆಯದೊಂದು ಲೋಕದಲ್ಲಿ

5) **ಸಂಕೇತಗಳನ್ನು ನಿಮ್ಮ ಕಥೆಗಳಲ್ಲಿ ಬಳಸಲು ನವ್ಯದ ಪ್ರಭಾವ ಕಾರಣವೇನು ?**

ಉತ್ತರ :- ನಮ್ಮ ನಮ್ಮ ಬರವಣಿಗೆಯ ಘಟ್ಟದಲ್ಲಿ ಆಯಾ ಪ್ರಭಾವ ಆಗಬಹುದು, ಗೋಚರವಾಗಿ, ಅಗೋಚರವಾಗಿಯೂ.

6) **ನಿಮ್ಮ ಕಥೆಗಳಲ್ಲಿ ಸ್ತ್ರೀ ಪಾತ್ರಗಳೇ ಹೆಚ್ಚಾಗಿ ಕಂಡುಬರುತ್ತವೆ. ಕಾರಣ ?**

ಉತ್ತರ :- ನಾನಿರುವುದು ಹೆಚ್ಚು ಸ್ತ್ರೀಲೋಕದಲ್ಲಿ. ಒಳಮನೆಯಲ್ಲಿ, ಮನೆ ಒಳಗೆ, ಅದೇ ಕಾರಣವಿರಬಹುದು. ನಮ್ಮ ಪ್ರಪಂಚವೇ ನಮ್ಮ ಸಾಹಿತ್ಯದಲ್ಲಿ ಪ್ರತಿಬಿಂಬಿಸುವುದು.

7) **ನೀವು ಬರೆಯುತ್ತಿದ್ದ ಕಾಲದಲ್ಲಿ ಸ್ತ್ರೀವಾದವಿತ್ತು. ಆದರೆ ನೀವು ಸ್ತ್ರೀವಾದ ಲೇಖಕಿಯಾಗಲು ಬಯಸಲಿಲ್ಲ. ಕಾರಣವೇನು ?**

ಉತ್ತರ :- ಬಯಸಲಿಲ್ಲ ಅಂತೇನಿಲ್ಲ. ನಾ ಬರೆಯುತ್ತ ಹೋದೆ ಅಷ್ಟೆ. ಬಯಸಿದೆ ಅಥವಾ ಬಯಸಲಿಲ್ಲ, ಎರಡೂ ಅಲ್ಲ.

8) **ನಿಮ್ಮ ಕಥೆಗಳ ಬರವಣಿಗೆಗೆ ಪ್ರೇರಣೆ ಏನು ?**

ಉತ್ತರ :- ನಾ ಕಂಡ ಅನೇಕ ಬಗೆಯ ಬದುಕುಗಳು.

9) **ನೀವು ಎಷ್ಟನೇ ವಯಸ್ಸಿನಿಂದ ಬರೆಯಲು ಪ್ರಾರಂಭಿಸಿದಿರಿ ?**

ಉತ್ತರ :- ಚಿಕ್ಕಂದಿನಿಂದಲೂ ಬರೆವ ಗೀಳು, ಗಂಭೀರವಾಗಿ ತೊಡಗಿದ್ದು 1975 ರ ನಂತರ.

10) **ಕುಂದಾಪುರದ ಕನ್ನಡವನ್ನೇ ನಿಮ್ಮ ಕಥೆ ಬರೆಯುವುದಕ್ಕೆ ಏಕೆ ಆರಿಸಿಕೊಂಡಿರಿ ?**

ಉತ್ತರ :- ಎಲ್ಲ ಕಥೆಗಳಲ್ಲಿಯೂ ಅದೇ ಕನ್ನಡವಿಲ್ಲ. ಬೇಕಾದಲ್ಲಿ ಮಾತ್ರ ಬಳಸಿದ್ದೇನೆ. ಕಾರಣ, ನಾ ಆ ಊರಿಗೆ ಸೇರಿದವಳು. ನಾನು ಮಾತಾಡುವ ಕನ್ನಡ ಅದು, ನನ್ನೂರಿನ ಕನ್ನಡ.

11) **ನಿಮ್ಮ ಒಟ್ಟಾರೆ ಕಥಾಸಾಹಿತ್ಯದ ಬಗ್ಗೆ ನಿಮ್ಮ ನಿಲುವೇನು ?**

ಉತ್ತರ :- ನಿಲುವು ನನ್ನ ಒಟ್ಟಾರೆ ಕಥಾಸಾಹಿತ್ಯವೇ ಹೇಳುತ್ತದೆ. ನನ್ನದು ಮಾನವರ ನಿಲುವು.

12) **ಓದುಗರ ಮೆಚ್ಚುಗೆಯನ್ನು ಗಳಿಸಿರುವ ನಿಮಗೆ ಏನನ್ನಿಸುತ್ತದೆ ?**

ಉತ್ತರ :- ಸಮಾಧಾನವಾಗುತ್ತದೆ.

13) **ಕೌಟುಂಬಿಕ ನೆಲೆಯಲ್ಲಿಯೇ ಸ್ತ್ರೀಪಾತ್ರಗಳ ಚಿತ್ರಣ ಕಂಡುಬರುತ್ತದೆ, ಏಕೆ ?**

ಉತ್ತರ :- ನಾನು ಕೌಟುಂಬಿಕ ನೆಲೆಯಿಂದಲೇ ಬಂದ, ಕೌಟುಂಬಿಕ ನೆಲೆಯಲ್ಲಿಯೇ ಬದುಕುವ ಲೇಖಕಿ ಆದ್ದರಿಂದ.

14) **ಸಮಕಾಲೀನ ಮಹಿಳಾ ಸಮಸ್ಯೆಗಳಿಗೆ ಸ್ಪಂದಿಸಿ ಏನಾದರೂ ಬರವಣಿಗೆ ಆಗಿದೆಯೇ ?**

ಉತ್ತರ :- ನಾನು ಏನು ಬರೆದೆನೋ, ಅವಿಲ್ಲ ಇಂದಿಗೂ ಸಮಕಾಲೀನ. ಮಹಿಳೆಯರ ವಿವಿಧ ಸಂಕಟಗಳು, ಸಮಸ್ಯೆಗಳು - ಸಮಕಾಲೀನ ಅಲ್ಲ ಎನ್ನುತ್ತೀರ ?

ಅನುಬಂಧ - 4



ವೈದೇಹಿಯವರ ಬದುಕು - ಕೃತಿ ಪರಿಚಯ

ಹೆಸರು	:	ಜಾನಕಿ ಶ್ರೀನಿವಾಸಮೂರ್ತಿ
ಕಾವ್ಯನಾಮ	:	ವೈದೇಹಿ
ಊರು	:	ಕುಂದಾಪುರ
ಸೇರಿದೂರು	:	ಶಿವಮೊಗ್ಗ
ಜನನ	:	12-02-1945
ವಿಳಾಸ	:	'ಇರುವಂತಿಗೆ', ಅನಂತ ನಗರ, 2ನೇ ಹಂತ, ಮಣಿಪಾಲ - 576 104 ದೂರವಾಣಿ : (0820) 2572395
ಪತಿ	:	ಕೆ. ಎಲ್. ಶ್ರೀನಿವಾಸಮೂರ್ತಿ
ಮಕ್ಕಳು	:	ಇಬ್ಬರು ಹೆಣ್ಣು ಮಕ್ಕಳು - ನಯನಾ ಕಾಶ್ಯಪ್, ಪಲ್ಲವಿರಾವ್

ಪ್ರಕಟಿತ ಕೃತಿಗಳು :

01)	ಮರಗಿಡ ಬಳ್ಳಿ (1979)	:	ಕಥಾ ಸಂಕಲನ
02)	ಅಂತರಂಗದ ಪುಟಗಳು (1984)	:	ಕಥಾ ಸಂಕಲನ
03)	ಭಾರತೀಯ ಮಹಿಳೆಯರ ಸ್ವಾತಂತ್ರ್ಯ ಹೋರಾಟ (1984)	:	ಕಮಲಾದೇವಿ ಚಟ್ಟೋಪಾಧ್ಯಾಯ ಬರೆದ Indian Women's Struggles for Freedom ನ ಅನುವಾದ
04)	ನೆನಪಿನಂಗಳದಲ್ಲಿ ಮುಸ್ಸಂಜೆ ಹೊತ್ತು (1984)	:	ಶ್ರೀ ಕೋ. ಲ. ಕಾರಂತರ ಬದುಕಿನ ನೆನಪುಗಳ ಸಂಗ್ರಹ
05)	ಗೋಲ (1986)	:	ಕಥಾ ಸಂಕಲನ
06)	ಒಂದು ಬಿಂದಿಗೆ (1990)	:	ಕವನ ಸಂಕಲನ
07)	ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗಳು (1991)	:	ಕಥಾ ಸಂಕಲನ
08)	ಅಸ್ಪೃಶ್ಯರು (1992)	:	ಕಾದಂಬರಿ
09)	ಧಾಂಧೂಂ ಸುಂಟರಗಾಳಿ (1992)	:	ಮಕ್ಕಳ ನಾಟಕ
10)	ಮೂಕನ ಮಕ್ಕಳು (1992)	:	ಮಕ್ಕಳ ನಾಟಕ
11)	ಗೊಂಬೆ ಮ್ಯಾಕ್ಬೆತ್ (1992)	:	ಮಕ್ಕಳ ನಾಟಕ

12) ಧಾಣಾ ಡಂಗುರ (1992) : ಮಕ್ಕಳ ನಾಟಕ

13) ನಾಯಿಮರಿ ನಾಟಕ (1992) : ಮಕ್ಕಳ ನಾಟಕ

14) ಸೂರ್ಯ ಕಿನ್ನರಿಯರು (1996) : ಸ್ವಪ್ನಾ ದತ್ತ ಅವರ The Sun Faries ನ ಅನುವಾದ

15) ಸೇಡಿಯಾಪು ನೆನಪುಗಳು (1996) : ಪಂಡಿತ ಸೇಡಿಯಾಪು ಕೃಷ್ಣಭಟ್ಟರ ನೆನಪುಗಳ ಸಂಗ್ರಹ

16) ಮಲ್ಲಿನಾಥನ ಧ್ಯಾನ (1996) : ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳ ಸಂಗ್ರಹ

17) ಸೂರ್ಯ ಬಂದ (1997) : ಮಕ್ಕಳ ನಾಟಕ

18) ಝುಂ ಝಾಂ ಆನೆ ಮತ್ತು ಪುಟ್ಟ (1997) : ಮಕ್ಕಳ ನಾಟಕ

19) ಕೋಟು ಗುಮ್ಮ (1997) : ಮಕ್ಕಳ ನಾಟಕ

20) ಜಾತ್ರೆ (1998) : ಸ್ಮೃತಿ ಕಥನ

21) ಪಾರಿಜಾತ : ಕವನ ಸಂಕಲನ

22) ಸಂಗೀತ ಸಂವಾದ : ಸಂಗೀತ ವಿದ್ವಾಂಸ ಡಾ|| ಭಾಸ್ಕರ್ ಚಂದಾವರ್ಕರ್ ಅವರ ಉಪನ್ಯಾಸಗಳ ಭಾಷಾಂತರ

23) ಅಮ್ಮಚ್ಚಿ ಎಂಬ ನೆನಪು (2000) : ಕಥಾ ಸಂಕಲನ

24) ಹಕ್ಕಿ ಹಾಡು (2002) : ಮಕ್ಕಳ ನಾಟಕ

25) ಅರ್ಧಚಂದ್ರ ಮಿಠಾಯಿ (2002) : ಮಕ್ಕಳ ನಾಟಕ

26) ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ (2003) : ದಿ. ಬಿ. ವಿ. ಕಾರಂತರ ಬದುಕಿನ ನೆನಪು ಅನುಭವಗಳ ಕಥನ

27) ಸೋಮಾರಿ ಓಲ್ಯಾ (2004) : ಮಕ್ಕಳ ನಾಟಕ

28) ಕ್ರೌಂಚ ಪಕ್ಷಿಗಳು (2005) : ಕಥಾ ಸಂಕಲನ

29) ಅಲೆಗಳಲ್ಲಿ ಅಂತರಂಗ (2006) : 1979 ರಿಂದ 2004 ರ ವರೆಗಿನ ಕಥೆಗಳ ಸಂಗ್ರಹ

❖ ಆಯ್ದ ಕಥೆಗಳು : ಕರ್ನಾಟಕ ಸರ್ಕಾರದ ಕನ್ನಡ ಸಂಸ್ಕೃತಿ ಇಲಾಖೆಯಿಂದ ಪ್ರಕಟಿತ

❖ ಅಂತರೀಚಿ ಪಾನೇ : ಮರಾಠಿಗೆ ಅನುವಾದಿತ ಕಥೆಗಳ ಸಂಗ್ರಹ ಅನುವಾದಕಿ, ಉಮಾ ಕುಲಕರ್ಣಿ

❖ ಆಯ್ದ ಒಂಭತ್ತು ಕಥೆಗಳು / ಅಸ್ಪೃಶ್ಯರು : ಮಂಗಳೂರು ವಿ. ವಿ. ಯಲ್ಲಿ ಪಠ್ಯ (2000 - 2005 ರ ವರೆಗೆ)

❖ ಹಲವು ಕಥೆಗಳು ಮರಾಠಿ, ಮಲೆಯಾಳಿ, ತಮಿಳು, ತೆಲುಗು, ಹಿಂದಿ, ಗುಜರಾತಿ, ಇಂಗ್ಲಿಷ್ ಭಾಷೆಗಳಿಗೆ ಅನುವಾದಗೊಂಡಿವೆ.

❖ ಮೈಸೂರು ವಿ. ವಿ. ಮತ್ತು ಕರ್ನಾಟಕ ಪದವಿಪೂರ್ವ ಮಂಡಳಿಯ ಪಠ್ಯಗಳಲ್ಲಿ ಆಯ್ದ ಕವನಗಳು ಪ್ರಕಟಿತ.

❖ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಂಗ್ರಹದಲ್ಲಿ ಕಥೆ ಕವನಗಳು ಪ್ರಕಟಿತ.

❖ 'The Inner Courtyart' (Editor Smt. Lakshmi Holmstorm, published by Virag Press, London)

❖ 'From Kaveri to Godavari' (Editor Dr. Ramachandra Sharma, published by Penguin)

❖ 'Women Writing in India' (Editors Ms. Susie Tharu and K. Lalitha, published by The Feminist Press, Newyork)

❖ 'The Southern Harvest' (Editor Smt. Githa Hariharan, published by KATHA)

❖ 'In their own Voice' (Editor Ariene R. K. Zide, The Penguin Anthology of Contemporary Indian Women Ports)

❖ ವೈದೇಹಿಯವರ ಕಥೆಗಳು - ಶ್ರೀ ಕೆ. ವಿ. ಸುಬ್ಬಣ್ಣ ನೆನಪಿನ ಪುಸ್ತಕಮಾಲೆಯಲ್ಲಿ ಪ್ರಕಟಿತ ಮುಂತಾದ ಆಂಥಾಲಜಿಗಳಲ್ಲಿ ಕಥೆ ಕವನ ಪ್ರಕಟಿತ.

❖ Vaidehi's stories - published by Penguin India Ltd. - 2006

ಪ್ರಶಸ್ತಿಗಳು :

01)	'ಅಸ್ಪೃಶ್ಯರು'	-	ಸುಧಾ ಯುಗಾದಿ ಸ್ಪರ್ಧೆ 1982 - ವಿಶೇಷ ಬಹುಮಾನ
02)	ಗೀತಾದೇಸಾಯಿ ದತ್ತಿನಿಧಿ ಪ್ರಶಸ್ತಿ	-	'ಒಂದು ಬಿಂದಿಗೆ' - 1985
03)	ಗೀತಾ ದೇಸಾಯಿ ದತ್ತಿನಿಧಿ ಪ್ರಶಸ್ತಿ	-	ಅಂತರಂಗದ ಪುಟಗಳು - 1992
04)	ವರ್ಧಮಾನ ಉದಯೋನ್ಮುಖ ಪ್ರಶಸ್ತಿ	-	ಗೋಲ - 1992
05)	'ಕಥಾ' ಪ್ರಶಸ್ತಿ	-	ಹಗಲು ಗೀಚಿದ ನೆಂಟ - 1994
06)	ಅನುಪಮಾ ಪ್ರಶಸ್ತಿ	-	ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ - 1994
07)	ಎಂ. ಕೆ. ಇಂದಿರಾ ಪ್ರಶಸ್ತಿ	-	ಅಸ್ಪೃಶ್ಯರು - 1994
08)	ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ	-	ಐದು ಮಕ್ಕಳ ನಾಟಕಗಳು - 1994
09)	'ಕಥಾ' ಪ್ರಶಸ್ತಿ	-	ಅಮ್ಮಚ್ಚಿಯೆಂಬ ನೆನಪು - 1997
10)	ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ	-	ಮಲ್ಲಿನಾಥನ ಧ್ಯಾನ - 1997
11)	ಅತ್ತಿಮಬ್ಬೆ ಪ್ರಶಸ್ತಿ	-	ಅತ್ತಿಮಬ್ಬೆ ಪ್ರತಿಷ್ಠಾನ, ಬೆಂಗಳೂರು - 1998